ಸಂಚಿಕೆ : ಮೊದಲು

೧೯೯೬

ಜೀವನ ಶಿಕ್ಷಣ ಪತ್ರಿಕೆಯು

ಶತಮಾನೋತ್ತರ ಬೆಳ್ಳಿ ಮಹೋತ್ಸವ

ಸ್ಮರಣ ಸಂಪುಟ ೧೯೯೬



ಶತಮಾನೋತ್ತರ ಬೆಳ್ಳಿ ಹಬ್ಬ

(೧೯೨೦-೧೯೯೬ ರವರೆಗೆ)

ವರ್ಷ 1996

ಶ್ರೀ ಚೆನ್ನಬಸಪ್ಪನವರು

ಗುರುಕುಲ

ದೇವರ ಸಂಪಿಗೆ

ಕನ್ನಡ ಶಾಲಾ ಪತ್ರಿಕೆ



ಶಿಕ್ಷಣ ಸಂಪುಟ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯೂಟಿ ಚೆನ್ನಬಸಪ್ಪ ಟೈಪ್ಸ್, ರೊದ್ದಪೆಸ್, ಧಾರವಾಡ

Reg 364

ಧಾರವಾಡ ವೃತ್ತ

381

1895

1895

ಸಿದ್ಧೇಶ್ವರ ಪಾಚನ ಮಂದಿರ.
ಜಿ. ಧಾರವಾಡ.

ಕನ್ನಡ ಶಾಲಾಪತ್ರಿಕೆ.

KANARESE SCHOOL PAPER.

ಪುಸ್ತಕ ೫೦.] ಜ್ಯಾನುಆರಿ ೧೮೯೫ ಶ. [ಸಂಚಿಕೆ ೧.

ಅನುಕ್ರಮಣಿಕೆ.

		ಪುಟ.
೧.	ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ...	೧
೨.	ಕರ್ನಾಟಕ ಗೆಜೆಟಿಯರದಿಂದ ಆಯ್ದ ಪ್ರಕರಣಗಳು ...	೧೦
೩.	ಶಿಕ್ಷೆ ನೀತಿ ಶಿಕ್ಷಣಗಳ ಸಂಬಂಧವಾಗಿ ಶಿಕ್ಷಕರಿಗೆ ಸೂಚನೆಗಳು	೧೫
೪.	ಸೂಚನೆಗಳು	೨೧
೫.	ಕಾಲೇಜದ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು ...	೨೩

CONTENTS.

1.	Educational Intelligence and Useful Notes ...	1
2.	Selections from the Karnatak Gazetteer ...	10
3.	Hints to School Masters about Punishment and Moral Training.	15
4.	Departmental Notices.	21
5.	Dharwar Training College Certificate Examination—1894.	23

DHARWAR:

PRINTED AT THE KARNATIC BOOK DEPOT PRESS.

1895.

ಸಿದ್ಧನಾಥ ವಾಚನ ಮಂದಿರ
ಮೊರಬ. ಜಿ. ಧಾರವಾಡ

ಕನ್ನಡ ಶಾಲಾಪತ್ರಿಕದ ವರ್ಗಣಿ ವರ್ಷಕ್ಕೆ ಮುಂಗಡ ...೧೫ ಆಣೆ
ಬಂದು ಸಂಚಿಕೆಗೆ ... ... ೨ ಆಣೆ

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ.	೪	ಪಂಕ್ತಿಗಳವರೆಗೆ	೧ ರೂ
ಮೂರುಸಾರೆ ಇಟ್ಟರೆ	೧೦	,,	
ಆರುಸಾರೆ ಇಟ್ಟರೆ	೧೬	,,	

ಸೂಚನೆಗಳು.

೧. ಶಾಲಾಪತ್ರಿಕಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.

೨. ಶಿರೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರಾ ಪಂಕ್ತಿಯ ಹಾಸಲು ಬೀಳುವದು.

೩. ಭಾಷಾಂತರ ಮಾಡಿ ಛಾಪಿಸುವದಾದರೆ ಮೇಲಿನ ದರದ ಮ್ಯಾಡಿ ಫೀ ಬೀಳುವದು.

೪. ಪ್ರಕಟನೆಯು ಕೂಡ ಹಣ ಕಳುಹಲಿಕ್ಕೆ ಬೇಕು.

೫. ಟಿಕೀಟು ಇಟ್ಟ ಹೊರ್ತು ಉತ್ತರ ಶಿಗಲಾರದು.

RAOJI b. NARANDIKAR.
ವ್ಯವಸ್ಥಾಪಕ, ಕನ್ನಡ ಶಾಲಾಪತ್ರಿಕ.

ಲೀಲಾವತಿ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ।
ಜಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ಸಯದಿಂದಿತ್ತವೆಪ್ಪೋದುವರ್ಗೆನುಗುಣಂ ತೋರಲ್ಕೆ ಕೈಕೊಂಬುದೈ ।
ಸಯಮಿಂದೋಷವತಿದ್ದ ವೇಳ್ವುದುಬುಧರ್ ಜ್ಞಾನಾಭಿವೃದ್ಧಿ ಪ್ರಿಯರ್ ॥೧॥

ಪುಸ್ತಕ ೩ನೆಂ.] ಜನವರಿ ೧೮೫೫ನೇ ಇ. [ಸಂಚಿಕೆ ೧.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಕಳೆದ ತಿಂಗಳ ಆರಂಭದಲ್ಲಿ ಮುಂಬೈ ವಿದ್ಯಾ ಪೀಠದ ಕಿಚ್ಚಿನ ಪರೀಕ್ಷೆಗಳಲ್ಲಿ ನವ್ಯ ದೇಶ್ಯ ಭಾಷೆಗಳನ್ನು ಬಂದು ವಿಷಯವಾಗಿ ಶೇರಿಸಬೇಕೆಂಬ ಮಾತಿನ ಚರ್ಚೆಯು ನಡಿಯಿತು. ಮೊದಲಿಗೆ ಈ ಭಾಷೆಗಳು ಹೆಚ್ಚಿನ ಪರೀಕ್ಷೆಗಳ ವಿಷಯಗಳಾಗಿದ್ದವು; ಆದರೆ ಇವು ನಿಸ್ಸಾರವಾದಂಥವೂ, ತಕ್ಕಷ್ಟು ಗ್ರಂಥ ಸಂಗ್ರಹವು ಇಲ್ಲದಂಥವೂ ಆದ್ದರಿಂದ ಇವುಗಳನ್ನು ತೆಗೆದು ಸಂಸ್ಕೃತ, ಫಾರ್ಸಿ, ಲ್ಯಾಟಿನ್ ಮುಂತಾದ ಪ್ರಾಚೀನ ಭಾಷೆಗಳನ್ನಷ್ಟೇ ಇಟ್ಟರು. ಈ ಮಾತಿಗೆ ಸುಮಾರು ೨೫ ವರ್ಷಗಳಾದವು. ಈ ಅವಧಿಯಲ್ಲಿ ವಿದ್ಯಾಪೀಠದ ಬಹು ಮಾನದ ಪದವಿಗಳನ್ನು ಪಡಿದಂಥ ಜನರಿಂದ ದೇಶದ ಉನ್ನತಿಗೆ ಆಗತಕ್ಕಷ್ಟು ಸಹಾಯವಾಗಲಿಲ್ಲ. ಅವರ ವ್ಯವಸಾಯಗಳೆಲ್ಲ ಇಂಗ್ಲಿಷ ಭಾಷೆಯ ಮುಖಾಂತರ ನಡೆದದ್ದರಿಂದ ಅವರಿಗೆ ಜನ್ಮ ಭಾಷೆಯ ಜ್ಞಾನವು ಕಡಿಮೆಯಾಗಿ ಉನ್ನತ ವಿಚಾರಗಳನ್ನು ತಮ್ಮ ಜನರಿಗೆ ತಿಳಿ

ಸಿ ಅವರನ್ನು ಸುಧಾರಿಸುವ ಸಾಮರ್ಥ್ಯವು ಅವರಲ್ಲಿ ಪುಟ್ಟಲಿಲ್ಲ. ಇಂಗ್ಲಿಷ ಕಲಿತ ಜನರಿಗೂ, ಕಲಿಯದ ಜನರಿಗೂ ಪುಟ್ಟಬೇಕಾದ ಐಕ್ಯಭಾವವು ಪುಟ್ಟದೆ ಇವೆರಡು ವರ್ಗಗಳು ಸ್ವತಂತ್ರವಾದವು. ಈ ಕೊರತೆಯನ್ನು ಕಂಡು ಕೆಲವು ದಿವಸಗಳ ಕೆಳಗೆ ಎಲ್ಫಿನ್‌ಸ್ಟನ್ ಹಾಯಸ್ಕೂಲಿನ ಪ್ರಿನ್ಸಿಪಾಲರೂ, ಮುಂಬೈ ವಿದ್ಯಾಪೀಠದ ಫೆಲೋಗಳೂ ಆದ ರಾ. ಮೋಡಕ ಇವರು ಅದನ್ನು ದೂರ ಮಾಡುವ ಉದ್ದೇಶದಿಂದ ತಮ್ಮ ಸ್ನೇಹಿತರೊಡನೆ ಆಲೋಚಿಸಿ ಬಂದು ಸೂಚನೆಯನ್ನು ವಿದ್ಯಾಪೀಠದ ಮುಂದೆ ತಂದರು. ಅವರಿಗೆ ಆ ಕಾಲಕ್ಕೆ ಯಶವು ಬರಲಿಲ್ಲ. ಬಂದೆರಡು ವರುಷಗಳ ಕೆಳಗೆ ನೇಟಿವ್ ಪ್ರೆಸಿದ ರಿಪೋರ್ಟರರಾದ ರಾ. ಸಾತೆಯವರು ತಮ್ಮ ರಿಪೋರ್ಟಿನಲ್ಲಿ ದೇಶ ಭಾಷೆಗಳಲ್ಲಿಯ ಪುಸ್ತಕಗಳೂ, ವರ್ತಮಾನ ಪತ್ರಗಳೂ ಕಡಿಮೆ ಇರುತ್ತವೆಂತಲೂ ಇದ್ದಂಥವು ಸಹ ವಿಶೇಷ ಮಹತ್ವದವು ಇಲ್ಲೆಂತಲೂ ತಿಳಿಸಿ, ಈ ಶೋಚನೀಯ ಸ್ಥಿತಿಗೆ ಪದವಿಗಳನ್ನು ಧರಿಸಿದಂಥ ಜನರ ದೇಶ ಭಾಷೆಗಳ ಅಜ್ಞಾನವೇ ಕಾರಣವೆಂತಲೂ, ಹೆಚ್ಚಿನ ಪರೀಕ್ಷೆಗಳಲ್ಲಿ ದೇಶ ಭಾಷೆಗಳನ್ನು ಕೇರಿಸಿದರೆ ಈ ಸ್ಥಿತಿಯು ಸುಧಾರಿಸುವದೆಂತಲೂ ಸೂಚಿಸಿದರು. ಈ ಸೂಚನೆಯನ್ನು ಸ್ಟೇಟ ಸೆಕ್ರೆಟರಿಯವರು ಎತ್ತಿ, ವಿದ್ಯಾಪೀಠದವರ ಕಡಿಗೆ ವಿಚಾರಕ್ಕಾಗಿ ಕಳುಹಿಸಿ ಕೊಟ್ಟರು. ಸ್ವಲ್ಪ ದಿವಸಗಳ ಕೆಳಗೆ ಈ ಮಾತಿನ ಚರ್ಚೆ ನಡೆದಾಗ ವಿದ್ಯಾಪೀಠದ ಸಭಾಸದರು ತೋರಿಸಿದ ಅಡಚಣೆಗಳನ್ನೆಲ್ಲ ವಿಚಾರಿಸಿ ಮತ್ತು "ಅಲ್ಪಾರಂಭಃಕ್ಷೇಮಕರಃ" ಎಂಬ ನ್ಯಾಯವನ್ನು ಮನಸ್ಸಿನಲ್ಲಿ ತಂದು ರಾ. ರಾನಡೆಯವರು ಹೆಚ್ಚಿನ ಪರೀಕ್ಷೆಗಳಲ್ಲಿ ದೇಶ ಭಾಷೆಯಲ್ಲಿ ೫೦ ಸಾಲಿನ

ನಿಬಂಧವನ್ನು ಬರೆಸುವ ನಿಯಮ ಮಾಡಬೇಕೆಂದು ಸೂಚಿಸಿದರು. ಈ ಸೂಚನೆಯಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ತೊಂದರೆಯಾಗುವದೆಂದು ಕೆಲವರು, ದೇಶ ಭಾಷೆಗಳನ್ನು ಸೇರಿಸುವದೇ ಅನಾವಶ್ಯಕವಾದದ್ದೆಂದು ಕೆಲವರು, ಅಭಿಪ್ರಾಯ ಪಟ್ಟದ್ದರಿಂದ ಈ ಮಾತು ಅಷ್ಟಕ್ಕೇ ಉಳಿಯಿತು.

ದೇಶ ಭಾಷೆಗಳನ್ನು ವಿದ್ಯಾ ಪೀಠದ ಅಭ್ಯಾಸ ಕ್ರಮದಲ್ಲಿ ಸೇರಿಸುವದರಿಂದ ಅನೇಕ ಲಾಭಗಳಿರುತ್ತವೆಂಬದಕ್ಕೆ ಏನೂ ಸಂಶಯವಿಲ್ಲ. ಅದರಲ್ಲಿ ಎರಡು ಮುಖ್ಯವಾದಂಥವು. ಇಡೀ ಅಭ್ಯಾಸವನ್ನು ಇಂಗ್ಲಿಷ ಭಾಷೆಯಲ್ಲಿ ಮಾಡುವದರಿಂದ ವಿದ್ಯಾರ್ಥಿಗಳ ಕಾಲವೂ, ಶ್ರಮವೂ ವ್ಯರ್ಥ ಹೋಗುತ್ತದೆ ಅದು ತಪ್ಪುವದೆಂಬದೊಂದು, ಮತ್ತು ಕಲಿತ ಜನರು ಪಾಶ್ಚಾತ್ಯಜ್ಞಾನ ಭಾಂಡಾರದ ಗೌರವವನ್ನು ಸಾಮಾನ್ಯ ಜನರಿಗೆ ತಿಳಿಸುವಂಥ ಭಾಷಾ ಸಾಧನವೇ ಲುಪ್ತವಾಗಿ ಅವರ ಪ್ರಯೋಜಕತ್ವಕ್ಕೆ ಕೊರತೆ ಬರುತ್ತದೆ ಅದು ದೂರಾಗುವದೆಂಬದು ಮತ್ತೊಂದು. ಈ ಮಾತು ನಮ್ಮ ಪ್ರಮುಖ ಜನರ ಮನಸ್ಸಿನಲ್ಲಿ ಬಂದಿರುವದರಿಂದ ಅವರು ಇದನ್ನು ಕುರಿತು ಅದಷ್ಟು ಶ್ರಮ ಬಡುವರೆಂದು ನಮಗೆ ನಂಬಿಗೆಯುಂಟು. ಆ ಕಾರಣ ದೇವರ ದಯದಿಂದ ಈ ಸ್ಥಿತಿಯು ತೀವ್ರ ದೂರಾಗುವದೆಂದು ಕೋರುತ್ತೇವೆ.

ಲಾರ್ಡ ಎಲ್‌ಜಿನ ಧೊರೆಗಳು ಈ ದೇಶದ ಮುಖ್ಯಾಧಿಕಾರಿಗಳ ಕೆಲಸವನ್ನು ವಹಿಸಿದಂದಿನಿಂದ ನಾನಾ ವಿಷಯಗಳ ಸಂಬಂಧವಾಗಿ ಅವರ ಅಭಿಪ್ರಾಯಗಳನ್ನು ತಿಳುಕೊಳ್ಳುವ ಆತುರವು ಎಲ್ಲರಿಗೂ ಇರುವದಷ್ಟೇ? ಈ ಪ್ರಭುಗಳು ಲಾಹೋರದಲ್ಲಿ ಮಾಡಿದ ಸಂಭಾಷಣೆಯಿಂದ ಇವರ ವಿದ್ಯಾಪಕ್ಷಪಾತವನ್ನು ಅರಿತು ಎಲ್ಲ ಜನರಿಗೆ ಸಮಾಧಾನ

ವಾಗುವದು. ಮನುಷ್ಯನೆಂಬ ಹೆಸರಿಗೆ ತಕ್ಕವನಾಗ ಬೇಕಾದರೆ ಅವನ ಬುದ್ಧಿಗೆ ಸಂಸ್ಕಾರವಾಗಲೇ ಬೇಕು ಎಂದು ಈ ಧೊರೆಗಳ ಅಭಿಪ್ರಾಯವಿರುತ್ತದೆ. ಜನರಿಗೆ ವರಿಷ್ಠ ಶಿಕ್ಷಣವು ಬೇಕು; ಅದನ್ನು ಕೊಡುವ ಯತ್ನಗಳು ಸಾಗಲೇಬೇಕೆಂದು ಇವರು ಸ್ಪಷ್ಟವಾಗಿ ಹೇಳಿದರು. ಇದರಿಂದ ವರಿಷ್ಠ ಶಿಕ್ಷಣಕ್ಕೆ ತಕ್ಕಷ್ಟು ಉತ್ತೇಜನ ದೊರೆಯುವದೆಂಬದು ಸಹಜವಾಗಿರುವದು.

ಔದ್ಯೋಗಿಕ ಶಿಕ್ಷಣವನ್ನು ವೃದ್ಧಿಗೊಳಿಸುವ ಅತುರವು ಇವರ ಭಾಷಣದಿಂದ ವ್ಯಕ್ತವಾಗಲಿಲ್ಲ. ಈ ಸಂಬಂಧದಿಂದ ಇವರ ಅಭಿಪ್ರಾಯವು ಸ್ಪಷ್ಟವಾಗಿ ಹೊರಬೀಳುವವರೆಗೆ ಆ ಸಂಬಂಧದ ಕಲ್ಪನೆ ಮಾಡುವದು ನಮಗೆ ಸರಿ ತೋರುವದಿಲ್ಲ. ಔದ್ಯೋಗಿಕ ಶಿಕ್ಷಣದ ಅವಶ್ಯಕತೆಯು ಸ್ಪಷ್ಟವದೆ; ಆದರೆ ಇದನ್ನು ಬೆಳಸಲಿಕ್ಕೆ ಸರಕಾರದವರೂ ಪ್ರಜೆಗಳೂ ಯಾವ ಯಾವ ಬಗೆಯಿಂದ ಪ್ರಯತ್ನ ನಡಿಸಬೇಕೆಂಬ ಮಾತಿನ ನಿಷ್ಕರ್ಷವಾಗಿಲ್ಲ. ಅದು ತೀವ್ರವೇ ಆಗಿ ಜಪಾನ*ದಂತೆ ನಮ್ಮ ದೇಶದ ಸ್ಥಿತಿಯು ವರೂ ಬೇಗ ಸುಧಾರಿಸುವದೆಂದು ನಾವು ನಂಬುತ್ತೇವೆ.

---

* ಜಪಾನದವರ ಹಜ್ಜೆಯು ದಿನದಿನಕ್ಕೆ ಎಲ್ಲ ಮಾತಿನಲ್ಲಿ ಮುಂದೆ ಬೀಳುತ್ತಲಿದೆ. ಇವರು ಸೇನಾಸುಧಾರಣೆಯಿಂದ ಚೀನದಂಥ ಪ್ರಬಲ ರಾಷ್ಟ್ರವನ್ನು ಜೇರಿಗೆ ತಂದಿರುವರು; ಔದ್ಯೋಗಿಕ ಸಹಾಸದಿಂದ ನಾವೆ ಸ್ವೀಡನಗಳ ಕಡ್ಡಿ ಪೆಟ್ಟಿಗೆಗಳ ವ್ಯಾಪಾರವನ್ನು ಹಿಂದುಸ್ಥಾನದಿಂದ ಹಿಮ್ಮೆಟ್ಟಿಸಿರುವರು. ಒಟ್ಟಿಗೆ ಈ ದೇಶವು ಏಸಿಯದ ಗ್ರೇಟ ಬ್ರಿಟನವೆನಿಸುವ ಸಂಭವವು ತೋರುತ್ತದೆ. ಈ ದೇಶವು ೫೦ ವರ್ಷಗಳ ಕೆಳಗ ಹೀನ ಸ್ಥಿತಿಯಲ್ಲಿತ್ತು. ಆದರೆ ಇತ್ತಲಾಗಿ ಜನರ ನಿಷ್ಠೆಯದಿಂದಲೂ ಉದ್ಯೋಗ ಪ್ರೀತಿಯಿಂದಲೂ ಮೇಲಾದ ರಾಷ್ಟ್ರಗಳಲ್ಲಿ ಬಂದಾಗಲಿಕ್ಕೆ ಹನಿಸೆ ಹತ್ತಿರುವದು. ಈ ಮಾದರಿಯನ್ನು

ಚಿನ್ನಸನದಿ ನೌಕರ ಜನರಿಗೆ ೫೦೦ ರೂಪಾಯಿಗ* ವರೆಗೆ ಪೇನಶನ್ ಕೊಡಬಹುದೆಂದು ಕಟ್ಟಳೆ ಇರುತ್ತದೆ; ಮತ್ತು ಸರಕಾರಿ ನೌಕರಿಯನ್ನು ಉತ್ತಮ ರೀತಿಯಾಗಿ ಮಾಡಿದವರಿಗೆ ಸೆಕ್ರೆಟರಿ ಆಫ ಸ್ಟೇಟರವರು ವರ್ಷಕ್ಕೆ ೬೦೦ ರೂಪಾಯಿಗಳವರೆಗೆ ಪೆನಶನ್ ಕೊಡಬಹುದೆಂ ಬೂ ನಿಯಮವಿರುತ್ತದೆ. ಆ ಮೇರೆಗೆ ಈ ಮೊದಲು ವರ್ಡಸ್ವರ್ಥ ಸಾಹೇಬರವರಿಗೆ ಈ ಹೆಚ್ಚಿನ ಪೇನಶನ್ನು ಕೊಡಲ್ಪಟ್ಟಿರುತ್ತದೆಂಬದು ನಮ್ಮ ವಾಚಕರಿಗೆ ಗೊತ್ತಿರಬ ಹುದು. ಸಾಯನ್ಸ ಕಾಲೇಜಿನ ಪ್ರಿನ್ಸಿಪಾಲರಾದ ಥಿಬಿಡರ ಹುಕ್ ಸಾಹೇಬರಿಗೂ ಈ ಪೆನಶನ್ ಸಿಗುವದು ಗೊತ್ತಾಗಿ ರುತ್ತದೆಂಬದನ್ನು ತಿಳಿಸುವದಕ್ಕೆ ನಮಗೆ ಬಹಳ ಸಂತೋಷ ವಾಗುತ್ತದೆ. ವರ್ಹಾಡದ ಮೂಚಿ ಡಾಯರೆಕ್ಟರರಾದ ರಾವ ಬಹಾದೂರ ಶ್ರೀರಾಮ ಭಿಕಾಜಿ ಜಠಾರ ಇವರಿಗೂ ಈ ಹೆಚ್ಚಿನ ಪೆನಶನ್ ಕೊಡಬೇಕೆಂದು ಸ್ಟೇಟ ಸೆಕ್ರೆಟರಿಯವ ರ ಕಡಿಗೆ ಶಿಫಾರಸು ಆಗಿರುತ್ತದೆಂತಲೂ, ಅದಕ್ಕೆ ಅವರ ಅನುಮತಿಯಾದರೂ ಸಿಗಬಹುದೆಂತಲೂ ಕೇಳುತ್ತೇವೆ.

ಲಾರ್ಡ ಹ್ಯಾರಿಸ ಇವರ ತರುವಾಯ ಲಾರ್ಡ ಸ್ಯಾಂಡ ಹರ್ಸ್ಟ ಪ್ರಭುಗಳು ನಮ್ಮ ಇಲಾಖೆಯ ಗವ್ಹರನರರಾಗಿ ನೇಮಿಸಲ್ಪಟ್ಟಿರುತ್ತಾರೆ. ಇವರ ಹಿರಿಯರು ಹಿಂದುಸ್ಥಾನ ದಲ್ಲಿ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಿದವರಾದ್ದರಿಂದ ಲಾರ್ಡ ಸ್ಯಾಂಡಹರ್ಸ್ಟರವರಿಗೆ ಹಿಂದುಸ್ಥಾನದ ಮಾಹಿತಿ ಯು ತಕ್ಕಮಟ್ಟಿಗಿರುವದೆಂದು ಹೇಳಬಹುದು. ಇವರ ತಾ ಯಿಯವರು ಲಿಬರಲ್ ಪಕ್ಷಾಭಿಮಾನಿಗಳೂ ವಿದ್ಯಾಸಂಪನ್ನ

---

*ಮುಂದಿಟ್ಟು ಬಮ್ಮನನ್ನಿನಿಂದ ನಮ್ಮ ಜನರು ಪ್ರಯತ್ನ ಪಟ್ಟರೆ ಏ ನಾಗಲಿಕ್ಕಿಲ್ಲ?

ರೂ ಇರುವದರಿಂದ ಇವರ ಕಾಲಕೆರ್ದಿಯು ಪ್ರಜಗಳಿ
ಸುಖಾವಹವಾಗುವದೆಂದು ತೋರುತ್ತದೆ.

ಅಲಾಹಾಬಾದ ವಿದ್ಯಾ ಪೀಠದವರು ವಾರ್ಷಿಕ ಪದವಿ
ದಾನ ಸಮಾರಂಭದ ಕಾಲಕ್ಕೆ ಬೇರೆ ಬೇರೆ ಕಾಲೇಜಗಳ
ವಿದ್ಯಾರ್ಥಿಗಳಿಂದ ನಾನಾ ತರದ ಗರಡಿ ಸಾಧಕಗಳನ್ನೂ
ಚಂಡಿನ ಆಟಗಳನ್ನೂ ಆಡಿಸುವರೆಂತಲೂ ಅದಕ್ಕಾಗಿ ೧೦೦
ರೂಪಾಯಿಗಳ ವರೆಗೆ ಖರ್ಚು ಮಂಜೂರ ಮಾಡಿರುತ್ತಾ
ರೆಂತಲೂ ತಿಳಿದದೆ.

ಸಾಲೆ ಮನೆಗಳಲ್ಲಿ ಹವೆಯು ಪ್ರಶಸ್ತವಾಗಿ ಆಡು ವಂತೆ ಮಾಡುವ ಬಗ್ಗೆ.

(ಎಕ್ಷನೇ ಪುಟದಿಂದ ಮುಂದೆ ಸಾಗಿದ್ದು.)

೪. ಬೆಳಕಿನ ವ್ಯವಸ್ಥೆಯು ಎರಡು ಸಂಗತಿಗಳನ್ನು ಅವಲಂಬಿಸಿರುವಂತೆಯೇ ಹವೆಯ ಪೂರೈಕೆಯಾದರೂ ಎರ ಡು ಸಂಗತಿಗಳನ್ನು ಅವಲಂಬಿಸಿರುವದು. (೧) ಬೇಕಾಬ ಷ್ಟೇ ಹವೆಯನ್ನು ಪೂರೈಸುವದು, ಅಥವಾ ಎಷ್ಟು ಹುಡು ಗರಿಗೆ ಅನುಕೂಲ ಮಾಡತಕ್ಕದ್ದಿರುವದೋ ಅಷ್ಟು ಹುಡು ಗರ ಮಾನದಿಂದ ಆ ಶಾಲೆಯ ಅವಕಾಶವು ಅಂದರೆ ಘನಫೀ ತ್ರವು ಇರತಕ್ಕದ್ದು. (೨) ಉಪಯೋಗ ಮಾಡಲ್ಪಟ್ಟದ್ದ ರಿಂದ ಕೆಟ್ಟಂಥ ಹವೆಯು ಕೂಡಲೆ ಬದಲಾಗುವಂತೆ ತಕ್ಕ ವ್ಯವಸ್ಥೆ ಮಾಡುವದು.

೫. ಹವೆಯ ಪೂರೈಕೆಯ ಸಂಬಂಧದಿಂದ ಆರೋಗ್ಯರ ಕ್ಷಣಕ್ಕಾಗಿ ನೇಮಿಸಲ್ಪಟ್ಟ ಅಧಿಕಾರಿಗಳ ಅಭಿಪ್ರಾಯವು ಹ್ಯಾಗಂದರೆ:—ಪ್ರತಿಯೊಬ್ಬ ವಿದ್ಯಾರ್ಥಿಗೆ ೩೦೦ ಅಥವಾ ಅದಕ್ಕೂ ಹೆಚ್ಚು ಘನಫೂಟು ಹವೆಯು ಬೇಕೇ ಬೇಕು.

ಆದರೆ ಈ ದೇಶದಲ್ಲಿ ಮನೆಯ ಬಾಗಿಲು ಖಿಡಿಕೆ ಮುಂತಾದ ವುಗಳನ್ನು ಯಾವಾಗಲೂ ತೆರದಿಡುವ ನಡತೆ ಇದ್ದದರಿಂದ ಬರೀ ನೆಲದ ಕ್ಷೇತ್ರವನ್ನು ಅನುಲಕ್ಷಿಸಿದರೆ ಸಾಗುವಂತಿದೆ; ಕೋಣೆಗಳ ಎತ್ತರವು ಹತ್ತು ಇಲ್ಲವೆ ಹನ್ನೆರಡು* ಘೂಟು ಅದೆಂದು ಕಲ್ಪಿಸಿದರೆ ಕನಿಷ್ಠ ಪಕ್ಷಕ್ಕೆ ೧೦ ಚೌರಸಘೂಟು ಸ್ಥಳವು ಪ್ರಾಥಮಿಕ ಶಿಕ್ಷಣದ ಶಾಲೆಯೊಳಗಿನ ಪ್ರತಿಯೊಬ್ಬ ವಿದ್ಯಾರ್ಥಿಯ ಪಾಲಿಗೆ ಬರಲಿಕ್ಕೇ ಬೇಕು. ಉಚ್ಚ ಪ್ರತಿಯ ಶಿಕ್ಷಣದ ಶಾಲೆಯೊಳಗಿನ ಪ್ರತಿಯೊಬ್ಬ ವಿದ್ಯಾರ್ಥಿಗೆ ಐದಿನ್ನೂರು ಅಥವಾ ಅದಕ್ಕೂ ಹೆಚ್ಚು ಚೌರಸಘೂಟು ಸ್ಥಳ ಬರುವಂತೆ ವ್ಯವಸ್ಥೆಯನ್ನು ಇಡತಕ್ಕದ್ದು. ತರುಣ ಅಥವಾ ಪ್ರಾಢ ವಿದ್ಯಾರ್ಥಿಗಳು ಇರುವ ಶಾಲೆಗಳೊಳಗಿನ ಪ್ರತಿಯೊಬ್ಬ ವಿದ್ಯಾರ್ಥಿಗೆ ಇಪ್ಪತ್ತು ಅಥವಾ ಇಪ್ಪತ್ತೈದು ಚೌರಸ ಘೂಟು ಸ್ಥಳವು ದೊರೆಯುವಂತೆ ಮಾಡಿಕೊಡಿಸಲಿಕ್ಕಿದೆ.

೬. ಚೆಟ್ಟಿ ಹಾಕಿಯು ಬಿದ್ದಾಗುವ ಸಂಬಂಧದಿಂದ ಲಕ್ಷ ವಲ್ಲಿಡತಕ್ಕ ಸಂಗತಿ ಏನೆಂದರೆ:—ಹಾಕಿಯು ಇಡತಕ್ಕದ್ದು ಸರಿ; ಆದರೆ ಗಾಳಿಯು ಭರ್ರೆಂದು ಒಳಗೆ ಬರಬಾರದು. ಗಾಳಿಯು ಬೇಕಾದ ದಿಕ್ಕಿನಿಂದ ಪರಿಯುತ್ತಿದ್ದರೂ ಹೊರಗಿನ ಗಾಳಿಯು ಒಳಗೆ ಬರುವಂತೆಯೂ ಒಳಗಿನ ಕೆಟ್ಟ ಜಾಡೆಯು ಹೊರಗೆ ಹೋಗುವಂತೆಯೂ ವ್ಯವಸ್ಥೆಯನ್ನು ಮಾಡತಕ್ಕದ್ದು ಸಾರಾಂಶ, ಇದರಲ್ಲಿ ಲಕ್ಷವಲ್ಲಿಡತಕ್ಕ ವುತೇನೆಂದರೆ, ಗಾಳಿಯು ಕೋಣೆಯಲ್ಲಿ ಆಡಬೇಕು. ಆದರೆ ಅದು ಪ್ರತ್ಯಕ್ಷ ಹುಡುಗರ ಮೈಗ ತಾಕಬಾರದು.

* ಕೋಣೆಗಳ ಎತ್ತರವು ಹನ್ನೆರಡು ಘೂಟು ಇದ್ದರೆ ಬಹಳ ಉತ್ತಮ.

೩. **ಮೇಲೆ ಹೇಳಿದ** ಸಂಗತಿಗಳಿಂದ ಸ್ಪಷ್ಟವಾಗಿ ಕಂ
ಬರುವದೇನಂದರೆ:—ಪಾಲಾಗೃಹದಲ್ಲಿ ಇಲ್ಲವೆ ವರ್ಗವು ಕ
ಪುಕೊಳ್ಳುವ ಕೋಣೆಗಳಲ್ಲಿ ಪೂರ್ಣವಾಗಿ ಬೆಳಕು ಬೀ
ವಂತೆಯೂ, ಹವೆಯು ಪ್ರಶಸ್ತವಾಗಿ ಆಡುವಂತೆಯೂ ವ್ಯ
ಸ್ಥೆಯನ್ನು ಮಾಡುವದಕ್ಕಾಗಿ ಖಿಡಿಕೆಗಳು ಕೆಳಗೆ ಹೇಳಿದಂ
ಇರಬೇಕು. ಖಿಡಿಕೆಗಳ ಬುಡದ ಕಲ್ಲು (ಚೌಕಟ್ಟಿನ ಕೆ
ಹಾಸಿಗೆ) ಮುಟ್ಟು ಅದಕ್ಕೆ ಹತ್ತಿರುವ ಗೋಡೆಗಳ ಭೂ
ಇವು ಅಗಲಾಗಿರಬೇಕು. ಖಿಡಿಕೆಗಳು ನೆಲದ ಸಪಾಟಿಯಿಂ
೪॥ ಫೂಟು ಎತ್ತರದ ಮೇಲೆ ಇರಬೇಕು, ಮುಟ್ಟು ಅವು
ರಿಂದ ೭ ಫೂಟಿನವರೆಗೆ ಎತ್ತರವಿರಬೇಕು. ಈ ಮೇರೆ
ಖಿಡಿಕೆಗಳಿದ್ದರೆ ಬೆಳಕು ಎತ್ತರದಿಂದ ಬರುತ್ತದೆ, ಮತ್ತು
ಗಾಳಿಯ ಪ್ರವಾಹವು ಹುಡುಗರಿಗೆ ಬಾಧಿಸುವ ಭಯವು ಆ
ಳಿಯುವದಿಲ್ಲ. ಖಿಡಿಕೆಗಳಿಗೆ ಸಣ್ಣ ಸಣ್ಣ ಕನ್ನಡಿಗಳ ಬೂ
ಲಗಳನ್ನು ಜಡಿಯುವದಕ್ಕೆ ಬದಲಾಗಿ ಕಬ್ಬಿಣದ ಗಜಗಳ
ಮರಡುಗಳ ಮೇಲೆ ಕೂಡಿಸಿದ ಫಡಕುಗಳೂ ಹಚ್ಚಿದ
ನಾಕು. ಸಾಲೆಗಳ ಸುತ್ತಲೂ ಬಯಲು ಪಡಸಾಲೆ ಇಲ್ಲ
ದ್ದರೆ ಖಿಡಿಕೆಗಳ ಮೇಲೆ ಬಿಸಿಲು ಬೀಳದಂತೆ ಅವಕ್ಕೆ ರಾಡ
ಮುಂತಾದ್ದನ್ನು ಹಚ್ಚಿ ತಾಪನಿವಾರಣ ಮಾಡಲಿಕ್ಕೆ ಬೇಕು
ಹೀಗೆ ಮಾಡುವದರಿಂದ ಚಕೆ ಮಳೆಗಳ ನಿವಾರಣಾರ್ಥವಾಗಿ
ಫಡಕುಗಳನ್ನು ಮುಚ್ಚಿ ಖಿಡಿಕೆಗಳು ಇದ್ದರೂ ಇಲ್ಲದ
ಹಾಗೆ ಮಾಡುವ ಕಾರಣ ಬೀಳಲಿಕ್ಕಿಲ್ಲ. ತೂತುಗಳನ್ನು
ಸರಿವ ಸತುವಿನ ತಗಡುಗಳನ್ನು ಖಿಡಿಕೆಗಳಿಗೆ ಹಚ್ಚಿದರೆ
ಹವೆಯ ಅವಲು ಬದಲಿಗೆ ಅಡ್ಡಿಯಾಗುತ್ತದೆ. ಆದದರಿಂದ
ಇಂಥ ತಗಡನ್ನು ಉಪಯೋಗಿಸಬೇಕಾದರೆ ಲಕ್ಷಪೂರ್ವ
ಕವಾಗಿ ಅನುಭವ ತೆಗೆದುಕೊಂಡು ಉಪಯೋಗಿಸಬೇಕು.

ಸೂಚಿಯು ವೇಳೆಯಲ್ಲಿ ಇಲ್ಲವೆ ಅಭ್ಯಾಸ ನಡಿಯುವ ವೇಳೆಯಲ್ಲಿ ಅನುಕೂಲವಿದ್ದಾಗ ವರ್ಗಗಳು ಕೂತುಕೊಳ್ಳುವ ಕೋಣೆಗಳ ಖಿಡಿಕೆ ಬಾಗಿಲುಗಳನ್ನು ತೆರೆದು ಸ್ವಚ್ಛ ಹವೆಯ ಪೂರೈಕೆಯನ್ನು ಮಾಡಬೇಕೆಂದು ಪ್ರತ್ಯೇಕವಾಗಿ ಹೇಳುವ ಕಾರಣವಿಲ್ಲ. ಗೋಡೆಗಳ ಮೇಲ್ಭಾಗದಲ್ಲಿ ಪವಾದಾನಗಳಿದ್ದರೆ ಬಳ್ಳೀದು; ಎಲ್ಲ ಹೊಸ ಇಮಾರತುಗಳಲ್ಲಿಯೂ ಈ ಪ್ರಕಾರದ ವ್ಯವಸ್ಥೆಯನ್ನು ಮಾಡಲಿಕ್ಕೆ ಅಸ್ಪದವಿದ್ದಷ್ಟಳೇ ಇಮಾರತುಗಳಲ್ಲಿಯೂ ಹವಾದಾನ (ಜೀರಗಿಂಡಿ) ಗಳನ್ನು ಮಾಡುವ ಪದ್ಧತಿಯನ್ನು ಪ್ರಾರಂಭಿಸಬೇಕು.

೮. ಸಾಲೆಯೊಳಗಿನ ಹವೆಯು ಕೆಟ್ಟದೆಯೋ ಹ್ಯಾಗೆಂಬುವನ್ನು ತಿಳುಕೊಳ್ಳುವದಕ್ಕಾಗಿ ಕೆಳಗಿನ ಕೃತಿಯು ಬಲು ಹಗುರಾದದ್ದೂ ಪ್ರಯೋಜನಕರವಾದದ್ದೂ ಇರುತ್ತದೆ. ೨½ ತೊಲಿ (೧೦½ ಔಂಸ) ನೀರನ್ನು ಹಿಡಿಯುವಂಥ ಸೀಸೆಯನ್ನು ತೆಗೆದುಕೊಂಡು ಅದರಲ್ಲಿ ಸ್ವಚ್ಛವಾದ ನೀರನ್ನು ತುಂಬುಬೇಕು. ಆ ಬಳಿಕ ಸಣ್ಣದೊಂದು ತಿದಿಯನ್ನು ತೆಗೆದುಕೊಂಡು ಕೋಣೆಯೊಳಗಿನ ಹವೆಯನ್ನು ಆ ಸೀಸೆಯಲ್ಲಿ ತುಂಬುಬೇಕು. ತಿದಿಯು ಇಲ್ಲದಿದ್ದರೆ ಸೀಸೆಯೊಳಗಿನ ನೀರನ್ನು ಚನ್ನಾಗಿ ಘಲ್ಲಿಸಬೇಕು; ಅಂದರೆ ನೀರು ಹವೆಯನ್ನು ಶೋಷಿಸಿಕೊಳ್ಳುವದು. ಇಷ್ಟಾದ ಮೇಲೆ ಆ ಸೀಸೆಯಲ್ಲಿ ½ಔಂಸ (೧½ ತೊಲಿ) ಇಲ್ಲವೆ ದೊಡ್ಡ ಚಮಚೆಯಷ್ಟು ಸುಣ್ಣದ ತಿಳಿನೀರನ್ನು ಹಾಕಬೇಕು, ಮತ್ತು ಸೀಸೆಯ ಬಾಯಿಗೆ ಬಿಗಿಯನ್ನು ಹಾಕಿ ಅದನ್ನು ಮತ್ತೆ ಘಲ್ಲಿಸಬೇಕು. ಹೀಗೆ ಮಾಡಲಾಗಿ ಸೀಸೆಯೊಳಗಿನ ನೀರಿನ ಬಣ್ಣ ತಿಳಿದಾದರೆ (ಸುಣ್ಣ ಮತ್ತು ಕಾರ್ಬಾನಿಕ್ ಆಸಿಡ್‌ಗ್ಯಾಸ ಇವುಗಳ ಸಂಯೋಗದಿಂದ ಖಡು ಆಗುತ್ತದೆಂಬ ಮಾತು

ಕಾಸ್ತ್ರಸಿದ್ಧವಾದದ್ದು.) ಅಲ್ಲಿಯ ಹವೆಯಲ್ಲಿ ಪ್ರಕೃತಿಗೆ ಅಪಾ
ಯ ಮಾಡುವಷ್ಟು ಕಾರ್ಬಾನಿಕ್ ಆಸಿಡ್ ಇರುತ್ತದೆಂದು
ತಿಳಿಮಾಡಿಕೊಳ್ಳಬೇಕು. ಮಾಡಿಕೆಯಾಗಿ ಹವೆಯು ಕೆಟ್ಟದ
ಯೋ ಹ್ಯಾಗೆಂಬದನ್ನು ನಮ್ಮ ಮೂಗೇ ತಿಳಿಸುತ್ತದೆ. ಕೆ
ಟ್ಟ ಹವೆಯಲ್ಲಿ ಬಹಳ ಹೊತ್ತು ನಿಂತು ಘ್ರಾಣೇಂದ್ರಿಯದ
ತೀವ್ರತೆಯು ನಷ್ಟವಾಗಿದ್ದರೆ ಇಲ್ಲವೆ ಕುಡಿಮೆಯಾಗಿದ್ದರೆ ಈ
ಮಾತು ಬೇರೆ. ಹವೆಯ ಸಂಬಂಧವಾಗಿ ತಕ್ಕ ವ್ಯವಸ್ಥೆಯು
ಇಡಲ್ಪಟ್ಟಿದ್ದರೆ ನಾವು ಸ್ವಚ್ಛವಾದಂಥ ಹವೆಯುಳ್ಳ ಪ್ರದೇಶ
ದಲ್ಲಿ ತಿರುಗಾಡಿ, ಆ ಸ್ಥಳಕ್ಕೆ ಬಂದರೆ, ಎರಡನೇ ಪ್ರಕಾರದ
ಹವೆಯುಳ್ಳ ಸ್ಥಳಕ್ಕೆ ಬಂದೆವೆಂಬದು ಎಷ್ಟಮಾತ್ರವೂ ತಿಳಿ
ಯಲಿಕ್ಕಿಲ್ಲ.

SELECTIONS FROM THE KARNATIK GAZETTEER.

ಕನ್ನಡ ಗರೆಹುಟಿಯರದಿಂದ ಅವತರಣಿಗಳು.

(ಮೊದಲನೇ ಪುಟದಿಂದ ಸಾಗಿದ್ದು)

ಹೊಸ ಹಾನಗಲ್ಲಿನ ಪಶ್ಚಿಮಕ್ಕೆ ಸುಮಾರು ೬೦೦ ಯಾ
ರ್ಡಿನ ಮೇಲೆ "ಕುಂತಿಯ ದಿಬ್ಬ" ವೆಂಬದೊಂದು ಶಂಕ್ವಾ
ಕೃತಿಯಾದ ದಿಬ್ಬವಿರುತ್ತದೆ. ಕುಂತಿಯು ಜೋಳವನ್ನು
ಕೇರಿ ತೆಗೆದು ಚಲ್ಲಿದ ಹೊಟ್ಟಿನಿಂದ ಆ ದಿಬ್ಬವಾಗಿದೆ ಎಂದು
ಜನರು ಹೇಳುತ್ತಾರೆ.

ಹಾನಗಲ್ಲಿಗೆ ಶಿಲಾಲಿಪಿಗಳಲ್ಲಿ ವಿರಾಟನ ಕೋಟೆ, ವಿರಾಟ
ನಗರಿ, ಪನ್ನಂಗಲ್ ಎಂಬ ಹೆಸರುಗಳು ಕೊಡಲ್ಪಟ್ಟಿವೆ
ಪಾಂಡವರು ಅಜ್ಞಾತವಾಸದಲ್ಲಿ ವಿರಾಟರಾಜನ ಮತ್ಸ್ಯಪುರ
ವೆಂಬ ರಾಜಧಾನಿಯಲ್ಲಿ ವಾಸಿಸಿದರೆಂದು ಭಾರತದಲ್ಲಿ ಹೇಳ
ರುತ್ತದೆ. ಆ ಮತ್ಸ್ಯಪುರವು ಹಾನಗಲ್ಲೇ ಎಂದು ಜನರ

ಗ್ರಹಿಕೆಯುಂಟು. ಈ ಬಗ್ಗೆ ಹಲಕೆಲವು ಪ್ರಮಾಣಗಳಾದ ರೂ ಇರುತ್ತವೆ. ಮೇಲೆ ಹೇಳಿದಂತೆ ಪ್ರಾಚೀನ ಕಾಲದಿಂ ದ ಹಾನಗಲ್ಲಿಗೆ ವಿರಾಟನಗರಿ ಎಂಬ ಹೆಸರು ನಡಿದು ಬಂದ ಪ್ಪಲ್ಲದೆ, ಹಳೆ ಹಾನಗಲ್ಲಿನಲ್ಲಿ ಬಾಲೇ ಕಿಲ್ಲೆಯೊಳಗೆ ಭೀಮ ಕೀಚಕನ ಗುಡಿಯೆಂಬುದೊಂದು ಗುಡಿದುಂಟು. ಅಜೀ ಸ್ಥಳ ದಲ್ಲಿ ಭೀಮಸೇನನು ಕೀಚಕನನ್ನು ಕೊಂದನೆಂದು ಹೇಳು ತ್ತಾರೆ. ಪಾಂಡವರು ಅಜ್ಞಾತವಾಸ ಮುಗಿಸಿದ ಬಳಿಕ ಉ ಪಪ್ಲವ್ಯವೆಂಬ ಗ್ರಾಮದಲ್ಲಿ ಹೋಗಿ ನಿಂತು, ಅಲ್ಲಿ ತಮ್ಮ ಸಿಂಹಾಸನವನ್ನು ಸ್ಥಾಪಿಸಿದರೆಂದು ಭಾರತದಲ್ಲಿ ಲೇಖವಿದೆ. ಆ ಉಪಪ್ಲವ್ಯವೇ ಈಗ ತುಂಗಭದ್ರೆಯ ದಂಡೆಯಲ್ಲಿ ಸಣ್ಣ ದೊಂದು ಹಾಳು ಹಳ್ಳಿಯಾಗಿದ್ದ ಆನೇಗುಂದಿ ಎಂಬ ಬಗ್ಗೆ ಪ್ರಮಾಣಗಳು ದೊರೆಯುತ್ತವೆ. ಮಧ್ಯಕಾಲದ ಇತಿಹಾಸ ದಲ್ಲಿ ಆನೇಗುಂದಿಯು ಹೆಸರಾದ ರಾಜಧಾನಿಯು ಎನಿಸುತ್ತಿ ತ್ತು. ಇದಕ್ಕೆ ಬುನಾದಿಯಲ್ಲಿ "ದಕ್ಷಿಣ ಪಸ್ತಿನಾವತಿ" ಎಂಬ ಹೆಸರಿತ್ತೆಂದು ಶಿಲಾಲಿಪಿಗಳು ಹೇಳುತ್ತವೆ. "ಆನೇ ಗುಂದಿ" ಎಂಬ ಹೆಸರಾದರೂ "ಪಸ್ತಿನಾವತಿ" ಎಂಬ ಹೆಸ ರಿನ ಕನ್ನಡ ಭಾಷಾಂತರವೇ ಇರುತ್ತದೆ. ಆನೇಗುಂದಿ ಯಲ್ಲಿ ಪಾಂಡವರ ವಂಶದ ಅರಸರು ಬಹುಕಾಲ ಆಳಿದರೆಂತ ಲೂ ಶಿಲಾಲಿಪಿಗಳಿಂದ ತಿಳಿಯುತ್ತದೆ. ಆನೇಗುಂದಿಯು ಹೊ ರ್ತು ಮಧುರೆ, ತಿರುವಂಕೋಪು (ತ್ರಾವಣಕೋರ) ಮುಂ ತಾದ ಕಡೆಯಲ್ಲಿ ಬುನಾದಿಯಲ್ಲಿ ಆಳಿದ ಅರಸರಾದರೂ ಪಾಂ ಡವರ ವಂಶದವರೇ ಎಂದು ಅವರವರ ವಂಶಾವಳಿಗಳು ಹೇಳುತ್ತವೆ. ಇವಲ್ಲದೆ ವಿರಾಟನ ರಾಜ್ಯಕ್ಕೆ ತ್ರಿಗರ್ತ ದೇ ಶದ ಸುಶರ್ಮನ ರಾಜ್ಯವು ಹೊಂದಿತ್ತೆಂದು ವಿರಾಟಪರ್ವದ ಲ್ಲಿ ಹೇಳಿರುತ್ತದೆ. "ತ್ರಿಗರ್ತ" ವೆಂದರೆ ಮೂರು ತಗ್ಗು

ಗಳ ನಡುವಿನ ಶೀಮೆ ಎಂಬ ಅರ್ಥವಿರುತ್ತದೆ. ಈಗಿನ ಮೈಸೂರಿನ ರಾಜ್ಯದ ಪೂರ್ವ, ಪಶ್ಚಿಮ, ದಕ್ಷಿಣ ಈ ಮೂರು ದಿಕ್ಕುಗಳಲ್ಲಿ ಪೂರ್ವಘಟ್ಟ, ಪಶ್ಚಿಮಘಟ್ಟ (ಸಹ್ಯಾದ್ರಿ) ನೀಲಗಿರಿ, ಈ ಮೂರು ಪರ್ವತಗಳ ಆಚೆಯಲ್ಲಿ ತೆಗ್ಗು ನೇ ವಿರುವ ಕಾರಣ ಮೈಸೂರಿನ ಶೀಮೆಯೇ ತ್ರಿಗರ್ತದೇಶವ ಗುತ್ತದೆ. ಇದರಂತೆ ಬಲರಾಮನು ತೀರ್ಥಯಾತ್ರೆ ಮಾಡ ವಾಗ ರಾಮೇಶ್ವರದಿಂದ ತ್ರಿಗರ್ತ ದೇಶದೊಳಗೆ ಹಾದ ಗೋಕರ್ಣಕ್ಕೆ ಹೋದನೆಂದು ಭಾಗವತದಲ್ಲಿ ಲೇಖುವದೆ ಈ ಯಾವತ್ತು ಕಾರಣಗಳಿಂದ ಮೈಸೂರಿನ ಶೀಮೆಯೇ ತ್ರಿ ಗರ್ತ ದೇಶವೆಂತಲೂ, ಆನೇಗುಂದಿಯೇ ಉಪಪ್ಲಾವ್ಯವೆಂ ತಲೂ, ಹಾನಗಲ್ಲೇ ಮತ್ಸ್ಯಪುರವೆಂತಲೂ ಅನುಮಾ ನಾಗುತ್ತದೆ.

ಆನೇಗುಂದಿಯಲ್ಲಿ ಇಜಿಪ್ತದೇಶದ ಅರಸರೂ ಬೇರೆ ಕೇ ಪು ರಾಜವಂಶಗಳೂ ಆಳಿದ ಬಳಿಕ, ಅಲ್ಲಿಯೂ ಬನವಾಸಿ ಯಲ್ಲಿಯೂ ಕದಂಬ ವಂಶದ ಅರಸರು ಬಹುಕಾಲ ಆಳಿದರು. ಹಾನಗಲ್ಲು ಕದಂಬರ ರಾಜ್ಯಕ್ಕೆ ಬಹು ಪ್ರಾಚೀನ ಕಾಲದಿ ದ ಸೇರಿತ್ತೆಂದು ತೋರುತ್ತದೆ. ಅವರನ್ನು ಚಲುಕ್ಯರು ಗೆದ್ದ ಬಳಿಕ ಹಾನಗಲ್ಲು ಅವರ ಕೈಶೇರಿತ್ತು. ಆದರೆ ಕದಂ ಬರು ಚಲುಕ್ಯರ ಮಾಂಡಲಿಕರಾದ ಬಳಿಕ ಸಹ ಹಾನಗಲ್ಲು ಕದಂಬರ ರಾಜ್ಯದಲ್ಲಿಯೇ ಇತ್ತೆಂದು ತೋರುತ್ತದೆ. ಚಾಲು ಕ್ಯರ ರಾಜ್ಯವನ್ನು ಬಲ್ಲಾಳರು ಆಕ್ರಮಿಸಿದ ಬಳಿಕ ಹಾನ ಗಲ್ಲು ಅವರ ರಾಜ್ಯದ ಭಾಗವಾಯಿತು. ಮುಂದೆ ವಿಜಯ ನಗರದವರ ಕಾಲದಿಂದ ಹಾನಗಲ್ಲು ಬಂಕಾಪುರ ಶೀಮೆಯ ಕೆಳಗೆ ಹೋಯಿತೆಂದು ತೋರುತ್ತದೆ. ಆದ್ದರಿಂದ ಬಂಕಾ ಪುರದ ಇತಿಹಾಸವೇ ಹಾನಗಲ್ಲಿನ ಇತಿಹಾಸವೆಂದು ಹೇಳ

ಹುದು. ಸ್ಟ ೧೪೧೪ ರಲ್ಲಿ ಜನರಲ್ ಮುನ್ರೋನ ಕೈಕೆಳಗಿ
ನ ದಂಡಿನವರು ಹಾನಗಲ್ಲಿನ ಕೋಟೆಯನ್ನು ಹಕ್ಕೊಂಡರು

ಅಡೂರು—ಹಾನಗಲ್ಲಿನ ಪೂರ್ವಕ್ಕೆ ೧೦ ಮೈಲಿನ ಮೇ
ಲೆ ಅದೆ. ಇದಕ್ಕೆ ಪೂರ್ವದಲ್ಲಿ ಪೊಂಡಿಪುರವೆನ್ನುವರು.
ಕಲ್ಲೇಶ್ವರನ ಗುಡಿಯಲ್ಲಿ ಸ್ಟ ೧೦೪೪ನೇದೊಂದು ಲಿಪಿ
ಯುಂಟು. ಬಂದು ಹೊಲದೊಳಗೆ ಮತ್ತೊಂದು ಲಿಪಿಯು
೧೦೧೩ ರದು ಇರುತ್ತದೆ. ಇದು ಚಾಲುಕ್ಯರ ೬ನೇ ಅರಸನಾ
ದ ಕೀರ್ತಿವರ್ಮನ ಕಾಲದ್ದಿರುವ ಕಾರಣ ಶಾ. ಶ. ೪೯೦ನೇ ಶತ
ಕದ ಕಡೆಯಲ್ಲಿ ಹುಟ್ಟಿದ್ದಿರುತ್ತದೆ. ಇದು ಆ ಕಾಲದ ಕದಂ
ಬ ಅರಸರ ರಾಜ್ಯದ ಮಧ್ಯದಲ್ಲಿ ಇರುವ ಕಾರಣ ಚೆಲುಕ್ಯರು
ಕದಂಬರನ್ನು ಜಯಿಸಿದ್ದರೆಂದು ಅನುಮಾನವಾಗುತ್ತದೆ
ಈ ಊರಲ್ಲಿ ರಾಷ್ಟ್ರಕೂಟರ ೨ನೇ ಕೃಷ್ಣರಾಜನು ಬರಿಸಿ
ದ್ದಿನ್ನೊಂದು ಲಿಪಿಯುಂಟು. ಇವನು ಶಾ. ಶ. ೭೯೭ ರಿಂದ
೮೩೩ ರ ವರಿಗೆ ಆಳಿದನು.

ಅರಳೇಶ್ವರ—ಹಾನಗಲ್ಲಿನ ಈಶಾನ್ಯಕ್ಕೆ ೫ ಮೈಲಿನ ಮೇ
ಲೆ ಅದೆ. ಈ ಸಣ್ಣ ಹಳ್ಳಿಯಲ್ಲಿ ಕದಂಬೇಶ್ವರನ ಗುಡಿಯ
ಲ್ಲಿ ೧೧ನೇ ಶತಕದ ೩ ಲಿಪಿಗಳು ಅವೆ.

ಬಾಳೇಹಳ್ಳಿ—ಹಾನಗಲ್ಲಿನ ನೈಋತ್ಯಕ್ಕೆ ೬ ಮೈಲಿನ
ಮೇಲೆ ಅದೆ. ಮೈಲಾರದೇವ, ಮಲ್ಲಿಕಾರ್ಜುನ ಎಂಬ ಗು
ಡಿಗಳೂ ೧೨ ಲಿಪಿಗಳೂ ಅವೆ. ಇವೆಲ್ಲ ಬಹುತರ ೧೧ ನೇ
೧೨ ನೇ ಶತಕದಲ್ಲಿ ಹುಟ್ಟಿದಂಥವು.

ಬೆಳವಟ್ಟಿ—ಹಾನಗಲ್ಲಿನ ಈಶಾನ್ಯಕ್ಕೆ ೮ ಮೈಲಿನ ಮೆ
ಲೆ ಅದೆ. ಈ ಹಳ್ಳಿಯು ಪುನಾದಿಯಲ್ಲಿ ಲೀಲಾವತಿ ಎಂಬ
ಪಟ್ಟಣವಾಗಿತ್ತೆಂದು ಹೇಳುತ್ತಾರೆ. ಗೋಕುಲೇಶ್ವರನ ಗು
ಡಿಯಲ್ಲಿ ೫, ಬೇರೆ ಬೇರೆ ಕಡೆಯಲಿ ೩ ಲಿಪಿಗಳುಂಟು.

ಹಿರೇಬಾಸೂರು—ಹಾನಗಲ್ಲಿನ ಆಗ್ನೇಯಕ್ಕೆ ೧೫ ಮೈಲಿನ ಮೇಲೆ ಅದೆ. ಇಲ್ಲಿ ಹನುಮಂತನ ಗುಡಿಯಲ್ಲಿಯೂ ವೀರೇಶ್ವರನ ಗುಡಿಯಲ್ಲಿಯೂ ಲಿಪಿಗಳಿರುತ್ತವೆ. ಊರ ಹೊರಗೆ ಇರುವದೊಂದು ಗವಿಯು ಬಹಳ ದೂರ ಹೋಗಿರುತ್ತದೆಂದು ಹೇಳುತ್ತಾರೆ.

ಕ್ಯಾದ್ಗಿ—ಹಾನಗಲ್ಲಿನ ಈಶಾನ್ಯಕ್ಕೆ ೧೫ ಮೈಲಿನ ಮೇಲೆ ಇದೆ. ಇಲ್ಲಿ ಬಂಡು ಲಿಪಿಯುಂಟು. ಪ್ರತಿವರ್ಷ ಜಾತ್ರೆಯಾಗುತ್ತದೆ.

ನರೇಗಲ್ಲು—ಹಾನಗಲ್ಲಿನ ಈಶಾನ್ಯಕ್ಕೆ ೧೪ ಮೈಲಿನ ಮೇಲೆ ಅದೆ. ಇಲ್ಲಿಯ ಸರ್ವೇಶ್ವರನ ಗುಡಿಯು ಬಹು ಪುರಾತನದ್ದೆಂದು ಹೇಳುತ್ತಾರೆ. ಇಲ್ಲಿ ೪ ಲಿಪಿಗಳಿವೆ. ಈ ಊರ ಕೆರೆ ದೊಡ್ಡದಿರುತ್ತದೆ. ಪೂರ್ವದಲ್ಲಿ ಇದು ಪರಗಣೆಯ ಮುಖ್ಯ ಗ್ರಾಮವಿತ್ತು. ಇಲ್ಲಿ ಕೊರೆದ ಅಡಿಕೆಯ ವ್ಯಾಪಾರ ಬಹಳವಾಗುತ್ತದೆ.

ಶ್ರಂಗೇರಿ—ಹಾನಗಲ್ಲಿನ ನೈಋತ್ಯಕ್ಕೆ ೬ ಮೈಲಿನ ಮೇಲೆ ಇರುತ್ತದೆ. ಇದರ ಬಳಿಯಲ್ಲಿ ಧರ್ಮಾನದಿಗೆ ಬಹು ಭವ್ಯವಾದ ಒಡ್ಡು ಪುರಾತನದಲ್ಲಿ ಹಾಕಿದ್ದಾರೆ. ಅದು ಬುಡದಿಂದ ೧೭ ಫೂಟು ಎತ್ತರ, ತಲೆಯ ಮೇಲೆ ೭೦ ಫೂಟು ಅಗಲು, ಇರುತ್ತದೆ. ಈ ಒಡ್ಡಿಗೆ ಹಾಕಿದ ಕಲ್ಲುಗಳು ಹಾಳು ಬಿದ್ದ ಗುಡಿಗಳಿಂದ ತಂದಂತೆ ಕಾಣುತ್ತದೆ. ಕೆಲವು ಕಲ್ಲುಗಳ ಮೇಲೆ ಲಿಪಿಗಳು ಸಹ ಇರುತ್ತವೆ. ಅದ್ದರಿಂದ ಈ ಒಡ್ಡನ್ನು ವಿಜಯನಗರದ ಅರಸರು ಹಾಕಿಸಿದರೆಂದು ತೋರುತ್ತದೆ. ಈ ಅರಸರು ಮಾಡಿಸಿದ ಜಲಾಶಯಗಳು ಎಲ್ಲ ಕಡೆಯಲ್ಲಿ ಹೆಸರಾಗಿರುತ್ತವೆ. ಈ ಒಡ್ಡಿನ ಮೇಲ್ಗಡೆಯಿಂದ

ನೊಡ್ಡ ದೊಂದು ಕಾವಲಿಯನ್ನು ತೆಗೆದು ೧೬ ಮೈಲು ದೂರ ಬಯಿದಿದ್ದಾರೆ. ಈ ಕಾವಲಿಯಿಂದ ೭೦೦೦ ಏಕರು ತೋಟದ ಭೂಮಿಗೆ ನೀರು ದೊರೆಯುವದಲ್ಲದೆ ೮೯ ಕೆರೆಗಳು ತುಂಬುತ್ತವೆ.

HINTS TO SCHOOL MASTERS ABOUT PUNISH--MENT AND MORAL TRAINING.

ಶಿಕ್ಷೆ ನೀತಿ ಶಿಕ್ಷಣಗಳ ಸಂಬಂಧವಾಗಿ ಶಿಕ್ಷಕರಿಗೆ ಸೂಚನೆಗಳು.

ಶಿಕ್ಷೆಯು ವಿದ್ಯಾರ್ಥಿಗಳ ತಪ್ಪಿಗೆ ಅನುಗುಣವಾಗಿರತಕ್ಕ ದ್ದಷ್ಟೇ ಅಲ್ಲ, ಅವರ ಸ್ವಭಾವಕ್ಕೂ, ಸಾಮರ್ಥ್ಯಕ್ಕೂ ಅನುಗುಣವಾಗಿರತಕ್ಕದ್ದು. ತಪ್ಪಿನ ಸ್ವರೂಪವಿದ್ದಂತೆ ಏಕಾಂತವಲ್ಲಿ, ಅಥವಾ ವರ್ಗದಲ್ಲಿ, ಅಥವಾ ಶಾಲೆಯೊಳಗಿನ ಎಲ್ಲ ಪುಡುಗರು ಕೇಳುವಂತೆ ತಪ್ಪುಗಾರನಿಗೆ ಸಿಟ್ಟುಮಾತುವ ಶಿಕ್ಷೆಯನ್ನು ಕೊಟ್ಟರೆ, ಅದು ಮೇಲಾದ ಶಿಕ್ಷೆ ಎಂ

---

* ಎಲ್ಲ ಹುಡುಗರ ಸಮಕ್ಷ ವಿದ್ಯಾರ್ಥಿಗೆ ಕೇಳಿದರೆ ಅವನು ನಾಚಿಕೊಂಡು ತನ್ನ ತಪ್ಪನ್ನು ಒಡಂಬಡುವದಿಲ್ಲ. ಇದರಿಂದ ಅವನನ್ನು ಹಾದಿಗೆ ತರುವದು ಬಹು ಕಷ್ಟವಾಗುತ್ತದೆ. ಇದೇ ಮೇರೆಗೆ ನಾಲ್ಕು ಜನರ ಸಮಕ್ಷ ಕಟ್ಟು ಮಾಡುವದರಿಂದ ಮನಸ್ಸಿನ ಕೋಮಲತ್ವವು ನಷ್ಟವಾಗುವ ಸಂಭವ ಉಂಟು. ಆಗ ಅವನಿಗೆ ಶಿಕ್ಷೆಯಾವದ್ದು ಅನ್ಯಾಯವಾಯಿತೆಂದು ಹೇಳುವವರು ಕಿಕ್ಕರಿ, ತಾನು ಇನ್ನು ಮುಂದೆ ತಪ್ಪು ಮಾಡಬಾರದೆಂಬ ಆಲೋಚನೆಯು ಹುಟ್ಟುವದಕ್ಕೆ ಬದಲಾಗಿ ನನಗೆ ಅನ್ಯಾಯವಾಯಿತೆಂಬ ಮಾತು ಅವನ ಮನಸ್ಸಿನಲ್ಲಿ ನೆಲೆಗೊಂಡು, ಅವನಲ್ಲಿ ಇಷ್ಟ ಸುಧಾರಣೆಯು ಆಗಲಾರದು. ಆದದರಿಂದ ವರ್ಗದಲ್ಲಿ ಅಥವಾ ಶಾಲೆಯ ವಿದ್ಯಾರ್ಥಿಗಳ ಎದುರಿನಲ್ಲಿ ಶಿಕ್ಷೆ ಮಾಡಬೇಕಾದರೆ ದೂವತ್ತು ಜನರು ಅವನಿಗೆ ಛೀ ಹಾಕುವಂತೆ ವ್ಯವಸ್ಥೆಯನ್ನಿಡಬೇಕು.

ದನಿಸಿಕೊಳ್ಳುವದು. ತಡವಾಡಿ ಶಾಲೆಗೆ ಬರುವದು, ಮನೆಯಲ್ಲಿ ಮಾಡಿ ತರಹೇಳಿದ ಪಾಠವನ್ನು ದುರ್ಲಕ್ಷಿಸುವದು, ಅಪ್ಪಣೆಗಳನ್ನು ಮೀರುವದು, ಶಾಲಾ ವ್ಯವಸ್ಥೆಗೆ ಭಂಗ ತರುವದು, ಇವೇ ಮೊದಲಾದ ಸಣ್ಣ ಸಣ್ಣ ತಪ್ಪುಗಳಿಗಾಗಿ ನಂಬರು ಕಳೆಯುವ, ಗುಣಗಳನ್ನು ಹಿಡುಕೊಳ್ಳುವ, ಹೊರಗೆ ನಿಲ್ಲಿಸುವ, ಸೂಟಿಯ ಹೊತ್ತಿನಲ್ಲಿ ಅವರಿಗೆ ಆಡ ಬಿಡದೆ ಪುಸ್ತಕವನ್ನು ನೋಡಿ ಬರೆಯುವವಕ್ಕೆ ಪಚ್ಚು ವ, ಶಿಕ್ಷೆಗಳನ್ನು ಕೊಡತಕ್ಕದ್ದು; ಬಂದು ವೇಳೆ ಪುಸ್ತಕವನ್ನು ನೋಡಿ ಬರೆಯುವ ಶಿಕ್ಷೆಯನ್ನು ಕೊಟ್ಟದ್ದರೆ, ಶಿಕ್ಷೆಯನ್ನು ಹೊಂದಿದವರು, ಲಕ್ಷಗೊಟ್ಟು ಬರದಿರುವರೋ ಇಲ್ಲವೋ ಎಂಬದನ್ನು ನೋಡತಕ್ಕದ್ದು; ಮನಃಪೂರ್ವಕವಾಗಿ ಸುಳ್ಳು ಹೇಳುವ, ಅಪಶಬ್ದಗಳನ್ನು ನುಡಿಯುವ, ದುಷ್ಕೃತ್ಯಗಳನ್ನು ಮಾಡುವ, ಅಪ್ಪಣೆಯನ್ನು ಮೀರುವ ಮುಂತಾದ ನೀತಿಯನ್ನತಿಕ್ರಮಿಸುವ ಅಪರಾಧಿಗಳಿಗೆ ದೇಪದಂಡದ ಶಿಕ್ಷೆಯನ್ನು ಕೊಡಬಹುದು. ಈ ಮೂದರಿಯ ತಪ್ಪು ಮಾಡಿದ ವಿದ್ಯಾರ್ಥಿಯ ಕೈಯ ಮೇಲೆ ಮೂರಿಂದ ಆರು ಚಾಣಿಗಳನ್ನು ಹೊಡೆಯಬಹುದು. ಈ ಶಿಕ್ಷೆಯನ್ನು ಮುಖ್ಯ ಮಾಸ್ತರನೇ ಕೊಡತಕ್ಕದ್ದು. ಆವನು ಇಂಥ ಶಿಕ್ಷೆಗಳ ಸಂಬಂಧವಾಗಿ ಬಂದು ಪುಸ್ತಕವನ್ನು ಇಟ್ಟು, ಅದರಲ್ಲಿ ಆ ವಿದ್ಯಾರ್ಥಿಯ ಹೆಸರು, ಅವನು ಮಾಡಿದ ಅಪರಾಧ, ಅವನಿಗೆ ಕೊಟ್ಟ ಶಿಕ್ಷೆ, ಅಪರಾಧ ಸಂಭವಿಸಿದ ತಾರೀಖು ಇವುಗಳನ್ನೆಲ್ಲ ಬರೆದಿಡಬೇಕು.

ಇವರಿಂದ ದೇವದಂಡದ ಶಿಕ್ಷೆಯನ್ನು ಕೊಡುವ ಪ್ರಸಂಗವು ಬರ ಬರುತ್ತ ಬಪಳವಾಗಿ ಕಡಿಮೆಯಾಗುವದು. ಕಾಲೇಜಗಳಲ್ಲಿ ಮತ್ತು ನಾರ್ಮಲ್ ಶಾಲೆಗಳಲ್ಲಿ ಇರುವ

ಾರ್ಥಿಗಳಿಗೂ ಹದಿನಾರು ವರುಷ ಮೀರಿದ ಯಾವ
ೊಂದು ಶಾಲೆಯ ವಿದ್ಯಾರ್ಥಿಗಳಿಗೂ ಈ ಶಿಕ್ಷೆಯನ್ನು ಕೊ
ಲಾಗದು. ಪ್ರಾಥ ವಿದ್ಯಾರ್ಥಿಗಳಿಗೆ ಈ ಶಿಕ್ಷೆಯನ್ನು ಅಪ
ಾಧ ಸಂಭವಿಸಿದ ಮರುದಿವಸ ಕೊಡತಕ್ಕದ್ದು; ಆದರೆ
ಅಪರಾಧವು ಸಂಭವಿಸಿದ ಹೊತ್ತಿನಿಂದ ನಾಲ್ಕತ್ತೈಂಟು ತಾಸು
ಗಳೊಳಗಾಗಿಯೇ ಕೊಡತಕ್ಕದ್ದು. ಬಂದು ಬೇಳೆ ಅಪರಾ
ಧವು ಸುಲಿಗೆ ಸೂಟಿಯನ್ನು ಕೂಡುವ ದಿವಸವೇ ಆಗಿದ್ದರೆ
ಆ ದಿವಸವೇ ಶಿಕ್ಷೆಯನ್ನು ಕೊಡಬೇಕು. ನೀತಿಗೆ ಬಾಧೆ
ತರುವಂಥ ದೊಡ್ಡ ದೊಡ್ಡ ತಪ್ಪುಗಳನ್ನು ಮಾಡುವ ವಿದ್ಯಾ
ರ್ಥಿಗಳನ್ನು ಹಾದಿಗೆ ತರುವದು ಅಸಾಧ್ಯವೆಂದು ಕಂಡು
ಬಂದರೆ, ಅಪರನ್ನು ಶಾಲೆಯಿಂದ ಹೊರಗೆ ಹಾಕಬೇಕು.

ನೀತಿ ಶಿಕ್ಷಣ—ಸರಕಾರದ ಶಾಲೆಗಳಲ್ಲಿ ಯಾವದೊಂದು
ವಿಶೇಷ ಧರ್ಮದ ತತ್ವಗಳನ್ನು ಸೇರಿಸಿ ಶಿಕ್ಷಣವು ನಡಿಸಲ್ಪ
ಡುವದಿಲ್ಲ. ಮತ ಸಂಬಂಧದ ಶಿಕ್ಷಣಕ್ಕೆ ಅವುಗಳಲ್ಲಿ ಅವಕಾಶ
ವಿದ್ದರೂ ಆಸ್ಪದವಿಲ್ಲ. ಸ್ವಾಭಾವಿಕವಾದ ಧರ್ಮದ ತತ್ವಗಳು
ಮತ್ತು ನೀತಿಯ ದಿಟವಾದ ತತ್ವಗಳು ಎಲ್ಲ ಜಾತಿಯವರಿ
ಗೂ ಸಾಧಾರಣವಾದವುಗಳು ಇರುತ್ತವೆ. ಈಗಿನ ವಾಚನ
ಪುಸ್ತಕಗಳಲ್ಲಿ ಔದಾರ್ಯ, ನ್ಯಾಯ, ಸತ್ಯವಂತಿಕೆ, ಒಳ್ಳೇ
ನಡತೆ, ಕ್ಷಮೆ, ದಯಾ, ಶಾಂತಿ ಮೊಂತಾದ ವಿಷಯಗಳ
ನ್ನು ಕುರಿತು ಪಾಠಗಳಿರುತ್ತವೆ. ಮತ್ತು ಸೃಷ್ಟ ಪದಾರ್ಥ
ಗಳನ್ನು ಕುರಿತು ಸಹ ಎಷ್ಟೋ ಪಾಠಗಳುಂಟು. ಇವು
ಗಳನ್ನು ಓದಿದರೆ ಸೃಷ್ಟಿಕರ್ತನ ಅಸ್ತಿತ್ವದ ತಿಳುವಳಿಕೆ
ಯು ನೆಲೆಗೊಳ್ಳುವದಲ್ಲದೆ ವಿದ್ಯಾರ್ಥಿಗಳಿಗೆ ಪರಮೇಶ್ವರನ
ಅಗಾಧ ಮಹಿಮೆಯು ಮತ್ತು ಅತುಲ ಪ್ರೀತಿಯು ಜ್ಞಾನವಾ
ಗುವದು.

ಇತಿಹಾಸವು ಹಿಂದಕ್ಕೆ ಆಗಿ ಹೋದ ಕಲಿಗಳ ಶೌರ್ಯ ಪರಾಕ್ರಮಗಳಿಂದ ತುಂಬಿರುತ್ತದೆ. ಇದನ್ನು ಓದುವದರಿಂದ ಭೂಪತಿಗಳು ಮಹತ್ವಾಕಾಂಕ್ಷೆಗೆ ಬಳಗಾಗಿ ಹ್ಯಾಗೆ ನಷ್ಟ ಹೊಂದಿದರು, ಸಜ್ಜನರು ಹ್ಯಾಗೆ ಮೇಲು ಪಡೆದರು, ಸ್ವಾರ್ಥ ಸಾಧಕರು ಹ್ಯಾಗೆ ದುಃಖಕ್ಕೆ ಈಡಾದರು; ಮುಂತಾದ ಸಂಗತಿಗಳು ವಿದ್ಯಾರ್ಥಿಗಳ ಮನಃ ಸುಧಾರಣೆಗೆ ಕಾರಣೀಭೂತವಾಗುತ್ತವೆ. ಪ್ರತಿಯೊಬ್ಬ ಶಿಕ್ಷಕನು ತನ್ನ ವಿದ್ಯಾರ್ಥಿಗಳನ್ನು ಸನ್ಮಾರ್ಗಕ್ಕೆ ಪಚ್ಚಿಲಿಕ್ಕೆ ಯೋಗ್ಯವಾದ ಪ್ರಸಂಗಗಳನ್ನು ನೋಡಿ ಆ ಪ್ರಸಂಗಕ್ಕೆ ಸಂಬಂಧಿಸಿರುವ ಇತಿಹಾಸದ ಸಂಗತಿಗಳನ್ನು ಚನ್ನಾಗಿ ಅವರಿಗೆ ತಿಳುಹಿಸಿ ಕೊಟ್ಟು ಅವರನ್ನು ನೀತಿಯ ಮಾರ್ಗಕ್ಕೆ ಪಚ್ಚಬೇಕು; ಆದರೆ ನುಡಿಯಂತೆ ನಡೆ ಇಲ್ಲದಿರುವವರ ಪ್ರಯತ್ನಗಳು ನಿಷ್ಪ್ರಯೋಜನವಾಗುವವು, ಎಂಬ ಮಾತನ್ನು ಶಿಕ್ಷಕರು ಲಕ್ಷದಲ್ಲಿಡತಕ್ಕದ್ದು. ಇದರ ಅಭಿಪ್ರಾಯವೇನಂದರೆ–ಶಿಕ್ಷಕನು ಎಂಥವನೋ ಅಂಥವರೇ ಅವನ ವಿದ್ಯಾರ್ಥಿಗಳು ಇರುವರು. ಶಿಕ್ಷಕನು ವಿದ್ಯಾರ್ಥಿಗಳಿಗೆ ಹೇಳುವ ಉಪದೇಶದಂತೆ ಅವನ ಆಚರಣೆ ಇದ್ದರೆ ಅವನ ಬುದ್ಧಿಯು ನುಡಿಗಳಿಗೆ ಎರಡಷ್ಟು ಬಲ ಬಂದು ಅಪೇಕ್ಷಿಸಿದ ಫಲವು ಬೇಗನೆ ಕೈಸೇರುವದು. ಶಾಲೆಯ ಮುಖ್ಯ ಶಿಕ್ಷಕನು ತನ್ನ ಶಾಲೆಯು ಮಾದರಿಯಾಗಿರುತ್ತಾನೆಂಬ ಮಾತನ್ನು ಮರಿಯತಕ್ಕದ್ದಲ್ಲ. ವಿದ್ಯಾರ್ಥಿಗಳು ಪರೀಕ್ಷೆಯ ಕಾಲಕ್ಕೆ ಕಾಪಿ ಮಾಡಿದರೆಂಬದನ್ನು ತಮ್ಮ ಮೇಲಾಧಿಕಾರಿಗಳಿಗೆ ರಿಪೋರ್ಟು ಮಾಡುವ ಪ್ರಸಂಗವು ಮೇಲಿಂದ ಮೇಲೆ ಬರುತ್ತದೆ. ಕೆಲವು ಶಾಲೆಗಳಂತೂ ಕಾಪಿ ಮಾಡುವದರಲ್ಲಿ ಹೆಸರು ಪಡೆದವೆ, ಇದರ ಕಾರಣವನ್ನು ಕುರಿತು ವಿಚಾರಿಸಲು

ಮಾಸ್ತರರು ದುರ್ಲಕ್ಷ ಮಾಡುವದರಿಂದ ಈ ಬಾಳಿಗಳ
ವಿದ್ಯಾರ್ಥಿಗಳಿಗೆ ಪತ್ತುತ್ತವೆಂತಲೂ ಕೆಲವು ಮಾಸ್ತರರ
ಕಾಪಿ ಮಾಡುವದಕ್ಕೆ ವಿದ್ಯಾರ್ಥಿಗಳಿಗೆ ಹೇಳಿಕೊಡುತ್ತಾರೆ
ತಲೂ ನಮಗೆ ತಿಳಿದದೆ; ಆದರೆ ಇದು ಸರಿಯಲ್ಲೆಂದು ಇ
ಪ್ರತ್ಯೇಕವಾಗಿ ಹೇಳುವ ಕಾರಣವಿಲ್ಲ. ಇದರಿಂದ ವಿದ್ಯಾ
ರ್ಥಿಗಳ ನೀತಿಯು ಕೆಟ್ಟು ಅವರು ದುರ್ಮಾರ್ಗಿಗಳಾಗ
ವ ಭಯ ಉಂಟು. ವಿದ್ಯಾರ್ಥಿಗಳು ವರ್ಗಗಳಲ್ಲಿರುವಾಗ
ಬಹುಶಃ ಅವರಿಂದ ತಪ್ಪುಗಳು ಆಗುವದಿಲ್ಲ; ಆದರೆ ಅ
ರು ಆಟದ ಸ್ಥಳದಲ್ಲಿರುವಾಗ್ಗೆ ಮನ ಬಂದಂತೆ ನಡೆದು ಮೊ
ದಲು ಸಣ್ಣ ಸಣ್ಣ ತಪ್ಪುಗಳನ್ನು ಮಾಡುತ್ತಾರೆ. ಹೀಗ
ಮಾಡುತ್ತ ಮಾಡುತ್ತ ಅವು ಮೈಯುಂಡವೆಂದರೆ ಅದೇ
ವಿದ್ಯಾರ್ಥಿಗಳ ಸ್ವಭಾವವಾಗಿ ನಿಲ್ಲುತ್ತದೆ. ಆದದ್ದರಿಂದ ಶಿಕ್ಷ
ಕರು, ವಿದ್ಯಾರ್ಥಿಗಳು ಸ್ವತಂತ್ರರಾಗಿ ಆಡುತ್ತಿರುವಾಗ್ಗೆ
ಅವರಿಂದಾಗುವ ತಪ್ಪುಗಳನ್ನು ಅವರಿಗೆ ತಿಳುಹಿಸಿಕೊಟ್ಟು
ಬಳ್ಳೀ ಮಾರ್ಗಕ್ಕೆ ಪಡಿಸಬೇಕು. ಅವರು ಮಾಡಿಕೆಯಾಗ
ಮಾಡುವ ತಪ್ಪುಗಳು ಯಾವವೆಂದರೆ—ಒಬ್ಬರಗೂಡೊಬ್ಬ
ರು ಜಗಳಾಡುವದು, ಬೈದಾಡುವದು, ನಿರುಪದ್ರವಿಯಾದ
ಪ್ರಾಣಿಗಳಿಗೆ ಸುಮ್ಮ ಸುಮ್ಮನೆ ಕಲ್ಲು ಎಸೆಯುವದು ಮುಂ
ಕಾದವು. ಈ ದುರ್ಗುಣಗಳು ವಿದ್ಯಾರ್ಥಿಗಳಲ್ಲಿರದಂತೆ ಮಾ
ಸ್ತರರು ಪ್ರಯತ್ನ ಪಡತಕ್ಕದ್ದು. ರಜೆಯ ದಿವಸ ಸಪ ಪು
ಷರುಗಳು ಆಡುವ ಸ್ಥಳಕ್ಕೆ ಒಮ್ಮೊಮ್ಮೆ ಹೋಗುತ್ತಿರಬೇಕು.
ಗದ್ಯದ ಶಿಕ್ಷಣದಿಂದ ವಿದ್ಯಾರ್ಥಿಗಳು ತಕ್ಕಷ್ಟು ನೀತಿವಂ
ತರಾಗುವದಿಲ್ಲೆಂದು ಅನೇಕರು ದೂರು ಹೇಳುತ್ತಾರೆ.
ಇದು ಅಂಶತಃ ದಿಟವಿರುತ್ತದೆ. ವಿದ್ಯಾರ್ಥಿಗಳು ತಕ್ಕಷ್ಟು
ನಮ್ರತೆಯಿಂದ ನಡೆಯುವದಿಲ್ಲ. ಗುರು ಹಿರಿಯರಿಗೂ ತಂದೆ

ತಾಯಿಗಳಿಗೂ ತಕ್ಕಷ್ಟು ಮಾನ ಕೊಡುವದಿಲ್ಲ. ಈ ಅಸ
ಭ್ಯ ತನವನ್ನು ಮುರಿಯುವದು ಶಿಕ್ಷಕರ ಕರ್ತವ್ಯವಾಗಿ
ದೆ. ಅವರೆ ವಿದ್ಯಾರ್ಥಿಗಳು ಎಲ್ಲರಿಗೂ ದಾಸಾನುದಾಸರಾಗಿ
ವರ್ತಿಸತಕ್ಕದ್ದಲ್ಲ. ಅವರು ತಕ್ಕಷ್ಟು ನಯಭಯಗಳಿಂದ
ನಡೆದುಕೊಳ್ಳತಕ್ಕದ್ದು. ಧಾರವಾಡ ಬೆಳಗಾಂವಿ ಮುಂತಾ
ದ ದೊಡ್ಡ ದೊಡ್ಡ ಪಟ್ಟಣಗಳಲ್ಲಿಯು ಶಾಲೆಗಳಿಗೆ ಪರಸ್ಥಳ
ಗಳಿಂದ ಹುಡುಗರು ಹೋಗುತ್ತಾರೆ. ಅವರಿಗೆ ಅಲ್ಲಿ ಸಂಬಂ
ಧಿಕರು ಬಹುಶಃ ಯಾರೂ ಇರುವದಿಲ್ಲ. ಇಂಥ ಹುಡುಗರಿ
ಗಾಗಿ ಶಾಲಾ-ಗುರುಗಳಾಗಲಿ, ಊರೊಳಗಿನ ಸಭ್ಯಗೃಹಸ್ಥ
ರಾಗಲಿ ಭೋಜನ-ವಸತಿ-ಗೃಹವನ್ನು ಸ್ಥಾಪಿಸತಕ್ಕದ್ದು.
ಇಂಥ ಭೋಜನ ಗೃಹಗಳಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚು ಬ
ಸೌಖ್ಯವೂ ಸಂತೋಷವೂ ಆಗುವದಲ್ಲದೆ, ಸಂಬರವನ್ನಿಗೆ
ಕೊಡಬೇಕಾಗುವ ಪಣಕ್ಕಿಂತಲೂ ಕಡಿಮೆ ಹಣ ಪತ್ತುವ
ದು. ಅವರ ಅಭ್ಯಾಸವೂ ಅತಂಕವಿಲ್ಲದೆ ನಡೆಯುವದು.
ಇವಲ್ಲದೆ ದುರಾಚಾರಗಳಿಗೆ ಆಸ್ಪದ ಸಿಗಲಾರದು. ವಿದ್ಯಾರ್ಥಿ
ಗಳು ತಕ್ಕಷ್ಟು ಸ್ವಚ್ಛವಾದ ಉಡು ತೊಡುಗೆಗಳುಳ್ಳವರೂ
ನೇಮದಿಂದ ಶಾಲೆಗೆ ಬರುವವರೂ ಸದಾಚಾರಿಗಳೂ ಶುದ್ಧ
ವಾಗಿಯೂ ಸ್ಪಷ್ಟವಾಗಿಯೂ ಮಾತಾಡುವವರೂ ಇರು
ತ್ತಾರೋ ಇಲ್ಲವೋ ಎಂಬದನ್ನು ಲಕ್ಷಪೂರ್ವಕವಾಗಿ ನೋ
ಡುವದೂ ತಮ್ಮ ಕೆಲಸವನ್ನು ಉಲ್ಲಾಸ ವೃತ್ತಿಯಿಂದ ಮಾ
ಡಿದರೆ, ತಾಯಿ ತಂದೆಗಳಿಗೂ ಅನ್ಯರಿಗೂ ತಕ್ಕ ಮಾನ
ಮರ್ಯಾದೆಗಳಿಂದ ನಡೆದುಕೊಂಡರೆ, ಮಾತಾಡುವದರಲ್ಲಿ
ಯೂ ಕೃತ್ಯಗಳಲ್ಲಿಯೂ ಸತ್ಯವನ್ನೇ ಅವಲಂಬಿಸಿದರೆ ಆಗು
ವ ಒಳಿತುಗಳನ್ನು ವಿದ್ಯಾರ್ಥಿಗಳ ಮನಸಿನಲ್ಲಿ ಬಿಂಬಿಸಿ
ಕೊಡುವದೂ ಶಾಲಾಧಿಕಾರಸ್ಥರ ಕರ್ತವ್ಯವಾಗಿರುತ್ತದೆ.

ಉತ್ತಮ ವಿದ್ಯಾರ್ಥಿಗಳು ತಮ್ಮ ಕೂಡಲೂ ಊರೊಳಗಿನ ದೊಡ್ಡ ಜನರ ಕೂಡಲೂ ಮಾತಾಡುವಾಗ್ಗೆ ಬಹು ವಚನ ದಿಂದ ಮಾತಾಡುವಂತೆ ಮಾಡುವದೂ, ಅವರನ್ನು ಶಾಲೆಯಲ್ಲಿ ಅಥವಾ ವರ್ಗದಲ್ಲಿ ಕಂಡರೆ, ಅವರಿಗೆ ನಮಸ್ಕಾರ ಮಾಡಲಿಕ್ಕೆ ಹೇಳಿಕೊಡುವದೂ ಶಿಕ್ಷಕರ ಕರ್ತವ್ಯವಾಗಿರುವದು.

DEPARTMENTAL NOTICES.

ನೋಟೀಸು.

ನಂಬರು ೫೬೦೫.

ಸನ್ ೧೮೭೧ನೇ ಇಸವಿಯ ಅಕ್ಟೋಬರ ತಿಂಗಳ ಕನ್ನಡ ಶಾಲಾಪತ್ರಿಕೆಯ ೧೪ರಿಂದ ೧೬ನೇ ಪುಟಗಳಲ್ಲಿ ಛಾಪಿಸಿರುವ ನಿಯಮಗಳಂತೆ "ವರ್ಷ ಪ್ರಾಯಿಜ್" ಎಂಬ ಇನಾಮಿನ ಪರೀಕ್ಷೆಯನ್ನು ಕೆಳಗೆ ಸಹಿ ಮಾಡಿದವರು ಸರ್ ೧೮೭೫ನೇ ಇಸವಿಯ ಅಕ್ಟೋಬರ ತಿಂಗಳ ೧ನೇ ತಾರೀಖು ಮುಂಗಳವಾರ ದಿವಸ ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ತೆಗೆದುಕೊಳ್ಳುವರು. ೪೦ ರೂಪಾಯಿಗಳದೊಂದು ಇನಾಮು ಉಂಟು. ಈ ಪರೀಕ್ಷೆಗೆ ಬರಲಪೇಕ್ಷಿಸುವ ಉಮೇದವಾರರು ತಮ್ಮ ಅರ್ಜಿಗಳನ್ನು ಸರ್ ೧೮೭೫ನೇ ಇಸವಿಯ ಸಪಟಂಬರ ೨೦ನೇ ತಾರೀಖಿನ ಪೂರ್ವದಲ್ಲಿ ಅಥವಾ ಆ ತಾರೀಖಿನ ದಿವಸ ಕೆಳಗೆ ಸಹಿ ಮಾಡಿದವರ ಕಡಿಗೆ ಕಳುಹಜೇಕು. ಪರೀಕ್ಷೆಯು ಬೆಳಗಿನ ೧೦॥ ಘಂಟೆಗೆ (ಮದ್ರಾಸ ವೇಳೆ) ಪ್ರಾರಂಭವಾಗುವದು.

ಧಾರವಾಡ,
೧೦ನೇ ದಿಸಂಬರ ೧೮೭೪

B. R. Sahasrabudhe,
ಎಜ್ಯುಕೇಶನಲ್ ಇನಸ್ಪೇಕ್ಟರ,
ದಕ್ಷಿಣಭಾಗ.

ನೋಟೀಸು.

ದಕ್ಷಿಣಭಾಗದೊಳಗಿನ ಪಬ್ಲಿಕ್ ಸರ್ವೀಸ ಸರಟೀಫಿಕೇಟಿ ಪರೀಕ್ಷೆಗಳು:—

ಸನ್ನ ೧೮೮೪ನೇ ಇಸವಿಯ ಎಪ್ರೀಲ ೫ನೇ ತಾ। ನ
ಮುಂಬಯಿ ಸರಕಾರಿ ಗ್ಯಾಝೆಟಿನಲ್ಲಿ ಪ್ರಸಿದ್ಧವಾದ ನೇವ.
ಗಳ ಪ್ರಕಾರ ೧೮೮೫–೮೬ನೇ ಇಸವಿಯಲ್ಲಿ ಆಗುವ ಪರೀ
ಕ್ಷೆಗಳಿಗಾಗಿ ಕೆಳಗೆ ಬರೆದ ಪುಸ್ತಕಗಳು ಗೊತ್ತು ಮಾಡಲ್ಪ
ಟ್ಟವೆ.

ಎನೇ ಗ್ರೇಡ. (ಶೆಡ್ಯೂಲ ಇ,)

ಇಂಗ್ಲಿಷ—ರಾಬಿನ್ ಸನ್ ಕ್ರೂಸೊ (ಲಾರಿಜ ಎಡಿಶ್ಯ)
ದೊಳಗಿನ ಮೊದಲಿನ ೭೦ ಪುಟಗಳು ಅಥವಾ
ಟೇಲ್ಸಫ್ರಾಮು ಶೆಕ್ಸಪೀಯರದ ಎ. ಮಿಡ್-ಸಮ್ಮ
ರ ನಾಯಿಟ್ಸ ಡ್ರೀಮು, ದಿ ವಿಂಟರ್ಸ ಟೇಲ, ಮು
ಚ್ಚ ಅಡೋ ಅಬಾವುಟ ನಥಿಂಗ; ವಿಜಯು
ಲಾಯಿಕ ಇಟ್ಟ, ಮತ್ತು ಟೂ ಜಂಟಲಮೆನ್
ಆಫ ವ್ಹರೋನಾ, ಮತ್ತು ಗೋಲ್ಡ ಸ್ಮಿಥನ
ಟ್ರಾವ್ಹಲರದೊಳಗಿನ ಮೊದಲಿನ ೪೦ ಪಂಕ್ತಿಗ
ಳು ಅಥವಾ ಲೇಡಿ ಆಫ ದಿ ಲೇಕದ ಎನೇ ಕ್ಯಾಂ
ಟೊ.

ಮರಾಠಿ:—ಮಿ. ಓಕ ಕೃತ ಹಿಂದುಸ್ಥಾನ ಕಥಾರಸ.

ಕನ್ನಡ:—ಕನ್ನಡ ಸರಕಾರೀ ಒನೇ ಪುಸ್ತಕ ಪೂರ್ವಾರ್ಧ.

ಉರ್ದು:—ಅಖಲಾಕಿ ಕಾಷಿ.

ಸಿನೇ ಗ್ರೇಡ (ಶೆಡ್ಯೂಲ ಇ,)

ಮರಾಠಿ:—ಸರಕಾರಿ ಮರಾಠಿ ಒನೇ ಪುಸ್ತಕವು.

ಕನ್ನಡ:—ಸರಕಾರಿ ಕನ್ನಡ ಒನೇ ಪುಸ್ತಕವು.

ಉರ್ದು:—ಅಖಲಾಕಿ ಕಾಷಿ.

ಧಾರವಾಡ,
ಒನೇ ನವಂಬರ ೧೮೮೪

B. R. Sahasrabudhe,
ಎಜ್ಯುಕೇಶನಲ ಇನಸ್ಪೇಕ್ಟರ,
ದಕ್ಷಿಣಭಾಗ

DHARWAR TRAINING COLLEGE CERTIFICATE EXAMINATION 1894.—

ಕಾಲೇಜಿನ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು.

ಕನ್ನಡ—ಎನೇ ಪರ್ಷದ ವರ್ಗ.

೧. ಫ್ರೆದರಿಕ್ ಷೋಬರನ ಮತದಂತೆ ಭೂಮಿಯ ಮೂ ೧೦
ಲ ಸ್ವರೂಪವು ಹ್ಯಾಗೆ ಇತ್ತು ನುತ್ತು ಅದರಲ್ಲಿ ಯಾವ
ಯಾವ ಕಾರಣಗಳಿಂದ ಯಾವ ಯಾವ ರೂಪಾಂತರಗಳಾಗಿ
ಈಗಿನ ಭೂಕವಚವು ಆಗಿರುತ್ತದೆ.

೨. ವ್ಯಾಪಾರದ ಗಾಳಿಯು ಹುಟ್ಟುವ ಕಾರಣವೂ ಕ್ರ ೫
ಮವೂ ಯಾವವು.

೩. "ಮನೆಯ ಕಿಡಕಿಗಳು ಒಂದರಮುಂದೊಂದು ಬಹ ೫
ಳ ಇದ್ದರೆ ದೂರ ದೂರದ ಕಿಡಕಿಗಳು ಸಣ್ಣ ಸಣ್ಣವಾದ
ಹಾಗೆ ಕಾಣುತ್ತವೆ" ಇದಕ್ಕೆ ಶಾಸ್ತ್ರೀಯ ಕಾರಣ ಕೊಡು.

೪. ಕೆಳಗೆ ಬರೆದ ಪಾರಿಭಾಷಿಕ ಶಬ್ದಗಳ ಅರ್ಥವನ್ನು ಪೂ ೬
ರ್ಣವಾಗಿ ಬರೆ.

(a) ರಸಾಯನ ಪ್ರೀತಿ (b) ಅಂಗಾರಾಮ್ಲವಾಯು (c) ಐಸಬರ್ಗ (d) ಪ್ರಿವ್ಹಿಕೌನ್‌ಸಿಲ್ (e) ಪ್ರಸ್ತರೀ ಭೂತ ಶಿಲೆಗಳು (f) ಅಸ್ಯಸ್ಥವಂಶ ಕೋಟಿಯು ಪ್ರಾಣಿಗಳು.

೫. ಕೆಳಗೆ ಬರೆದ ಪದ್ಯಗಳ ಅರ್ಥವನ್ನು ಅದರೊಳಗಿನ ೧೦
ಪದ ಲೋಪಿಸದೆ ಬರೆ.

ಬಿಚ್ಚಿ ಪೆಣನಕ್ಕಿಗಳ ಹೃದಯವಂ ಬೇಯಿಸುವ । ಪೊಚ್ಚ
ಪೊಸ ಕೆಂಡಂಗಳಿನಿ ಲೋಕಮುಂ ನುಂಗ । ಲಿಚ್ಛೈಸಿ ಬಪ್ಪ
ಕತ್ತಲೆಯೆಂಬ ಕಾಳರಕ್ಕಸಿ ಕೋಪದಿಂದುಗುಳ್ದ !! ಕಿಚ್ಚಿನ
ಕೆದಗಿರ್ದಿಗಳಿನಿ ತನ್ನ ಬಾಳುವೆಗೆ । ನಚ್ಚಿನವಳ್ದೀ ರಾತ್ರಿಚ
ಧುವೆಂದು ಹಿಮುಕರಂ । ಮೆಚ್ಚಿ ಮುಂಗಳುಪಿದೆಳೆ ಮಾಣಿ
ಕದ ಮಣಿಗಳನಿ ಸಂಜೆದಾರೆಗಳಿಸೆದವು ॥

ವ್ಯಗ್ರವೇತಕೆ ನಿನಗೆ ನಾವಿಂದ್ರಿಯಂಗಳಂ । ನಿಗ್ರಹಿಸಿದ
ವರಲ್ಲ ವಿರಹವೆಮಗಿಲ್ಲಸುರ । ತ ಗ್ರಾಹ್ಯ ಮೋಹನದ ಪಂ
ಚಬಾಣ ಪ್ರಯೋಗಂಗಳೇಕೀಗ ನಿನ್ನ !! ವಿಗ್ರಹಕೆ ನನುಗಿ
ಕ್ಷುಚಾಪವಾರಡಿವೆದೆ ಸ । ಮಗ್ರಕುಸುಮಾಸ್ತ್ರಂಗಳಿಲ್ಲ ನೋ
ಡೆಮ್ಮ್ಯಾದೊಂ । ದುಗ್ರಸಾಯಕವನೆಂದಾರ್ದು ತೆಗೆದೆಚ್ಚನನು
ಸಾಲ್ವನಚ್ಯುತನ ಸುತನ ॥

೬. ಅಸಿಪತ್ರವ್ರತದ ಸ್ವರೂಪವನ್ನು ಹೇಳಿದ ಪದ್ಯವನ್ನು ಬರಿ.

೭. ಕೆಳಗೆ ಬರೆದ ವಾಕ್ಯಾಂಶಗಳ ಅರ್ಥವನ್ನು ಪೂರ್ಣ
ವಾಗಿ ಬರೆದು ಕವಿಯು ಅವುಗಳನ್ನು ಯಾವ ಪ್ರಸಂಗದಲ್ಲಿ
ನುತ್ತು ಯಾವ ವರ್ಣನೆಯಲ್ಲಿ ಉಪಯೋಗಿಸಿದ್ದಾನೆ ಹೇಳು.

(*a*) ಅಂಜನಾದ್ರಿಯು ನೋಲೆ ಸಿಡಿಲೆರಗಿದಂತಾಗೆ
(*b*) ಹೆಂಗಸುಂ ಕೊಂದಥಟತನದಿಂದ ಬಂಡಿಯುಂ ಭಂಗಿಸಿದ ಬಲ್ಪಿಂದ
(*c*) ಪುನ್ನಾಗಮುಂ ಪತ್ತಿರಂಜಿಸಿದರ್ಚ | ದುರ ಮಾನಟಿಗರಂತೆ
(*d*) ಗಗನಾಂಬುಧಿಯ ತಡಿಯ ನುಂಜುವಿದ್ರುನು ಲತೆಯೊ
(*e*) ಅಜನಕರ ಪಾತ್ರದಗ್ರೋದಕಂ
(*f*) ಅಂದು ರಾಘವಂ | ತೊಟ್ಟ ಬಾಣದ ಮೊನೆಯ ಧಳ್ಳುರಿಯ ರುಳಿಕೆ ಕಂಗೆಂಟ್ಟು ಸಿಡಿ ನಿಡಿ ಮಿಡಿಗೊಂಬ ಸಾಗರದ ಜೀನಾಳಿಯಂತೆ.

೪. ರಗಳೆಗಳ ವಿಧಗಳನ್ನೂ ಸ್ವಾಗತ ವಂಶಸ್ಥ ವೃತ್ತಗಳ ಲಕ್ಷಣಗಳನ್ನು ಭುಜಂಗ ಪ್ರಯಾತ ನೃತ್ತದ ಉದಾಹರಣೆಯನ್ನೂ ಕೊಡು. ೪

೯. "ಅದಕ್ಕೆ ತಕ್ಕ" "ಅದನ್ನು ಹೊಂದಿದ" ಈ ಅರ್ಥದಲ್ಲಿ ಸಂಸ್ಕೃತ ಧಾತುಗಳಿಗೆ ಹತ್ತುವ ಪ್ರತ್ಯಯಗಳು ಯಾವವು. "ಏ" ಉಪಸರ್ಗದ ಅರ್ಥಗಳು ಯಾವವು. ಉದಾಹರಣೆ ಸಹಿತ ಬರೆ. ಕೆಳಗೆ ಬರೆದ ಶಬ್ದಗಳ ವ್ಯುತ್ಪತ್ತಿಯನ್ನು ಬರೆ. ೪

(*a*) ಭಾಸ್ಕರ (*b*) ಪ್ರಭಾವ (*c*) ಭುಜಂಗ (*d*) ವಿಸ್ತೀರ್ಣ.

೧೦. ಪದ ಸಮುಚ್ಚಾಯಕಾವ್ಯಯಗಳು ಹೇಳುವ ಅರ್ಥ ವಿಶೇಷಗಳನ್ನು ಒಂದೊಂದು ಉದಾಹರಣೆ ಕೊಟ್ಟು ಹೇಳು. ಶಿಥಿಲ ಸಮುಚ್ಚಯವೆಂದರೇನು ಉದಾಹರಣೆ ಕೊಡು. ೪

೧೧. ಶಬ್ದಮಣಿದರ್ಪಣಕಾರರ ಮತದಂತೆ ಮಹಾಪ್ರಾಣಗಳ ಪ್ರಯೋಗವು ಕನ್ನಡ ಭಾಷೆಯಲ್ಲಿ ಎಲ್ಲೆಲ್ಲಿ ಇರುತ್ತದೆ. ಅವರ ಮತದ ಗ್ರಾಹ್ಯಾಗ್ರಾಹ್ಯತೆಯ ಬಗ್ಗೆ ವಿಚಾರ ಮಾಡು. ೪

೧೨. "ಪೋಗು ಗಮನೆ" "ತಿನ್ ಖಾದನೆ" ಈ ಧಾತುಗಳಿಂದ ಕ್ರಮವಾಗಿ "ಪ್ರೇಷಂ" "ಕಂಬಂ" ಈ ರೂಪಗಳನ್ನು ಸಾಧಿಸಿ ತೋರಿಸು. ಇದಕ್ಕೆ ಹತ್ತುವ ನಿಯಮಗಳನ್ನು ಕ್ರಮವಾಗಿ ಹೇಳು. ೪

೧೩. "ಪ್ರತಿಪಾದ್ಯ ಮುತ್ವಮಿತ್ವಂ | ಮತಿವಂತರಿನೆಯ್ದಿ ಪೂರ್ವಕಾಲ ಕ್ರಿಯೆಗಾ" ಈ ಸೂತ್ರವು ಭೂತ ನ್ಯೂಸಕ್ಕೆ ಇತ್ವವಿಧಿಯನ್ನೂ ಉತ್ವವಿಧಿಯನ್ನೂ ಹೇಳುತ್ತದೆ. ಅದರ ಇತ್ವವು ಎಲ್ಲಿ ಬರುವದು, ಮತ್ತು ಉತ್ವವು ಎಲ್ಲಿ ಬರುವದು ವಿವರಿಸು. ೧೦

KANARESE
SCHOOL PAPER.

ಪುಸ್ತಕ ೫೦.] ಫೆಬ್ರುವರಿ ೧೮೯೫. [ಸಂಚಿಕೆ ೨.

ಅನುಕ್ರಮಣಿಕೆ. ಪುಟ.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ... ೨೫
ಕನ್ನಡ ಗಝೆಟಿಯರದಿಂದ ಅವತರಣಿಗೆಗಳು ... ೩೨
ಮಕ್ಕಳ ನೀತಿ ಶಿಕ್ಷಣ ೩೬
ಸಾಕ್ಷೇಪ ೩೯
ಪತ್ರವ್ಯವಹಾರ ೪೧
ಕಾಲೇಜದ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು ... ೪೬

CONTENTS.

Educational Intelligence and Useful Notes ... 25
Selections from the Karnatik Gazetteer ... 32
The Moral Training of Children 36
Departmental Notice. 39
Correspondence 41
Dharwar Training College Certificate Examination—1894. 46

DHARWAR:
PRINTED AT THE KARNATIC BOOK DEPOT PRESS,
1895.

ಶಾಲಾ ಪತ್ರಿಕೆ

ಪದ್ಯಂ.

ಪ್ರಿಯವಿದ್ಯಾಗುರುಪರ್ಯಾಲುನ್ನತಿಕೆಯಂ ಸಚ್ಛಿಷ್ಟಣೋತ್ಕರ್ಷಮುಂ ।
ಲಯಸುತ್ತಂ ಪ್ರತಿಮಾಸವಾವಿಗೊಲವಿಂವೀಪತ್ರಮಂ ಪುಟ್ಟಿಸಿ ॥
ನಯದಿಂದಿತ್ತಪೆಪೋದುವರ್ಗನಗುಣಂ ತೋರಲ್ಕೈಕೊಂಬುಮೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೫ಂ.| ಫೆಬ್ರುವರಿ ೧೮೮೯ ಇ. |ಸಂಚಿಕೆ ೨.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧವಾದ ವೃತ್ತಾಂತಗಳು.

ಧಾರವಾಡ ಟ್ರೇನಿಂಗ ಕಾಲೇಜಿನ ಪ್ರವೇಶ ಪರೀಕ್ಷೆಗೆ ಬಂದ ವಿದ್ಯಾರ್ಥಿಗಳು ಭಾಷಾವಿಷಯವಾದ ಪ್ರಶ್ನೆಗಳಿಗೆ ಉತ್ತರವನ್ನು ಬರೆಯುವಾಗ ಮಾಡಿದ ಕೆಲವು ತಪ್ಪುಗಳನ್ನು ಮಾಸ್ತರ ಜನರಿಗೂ ವಿದ್ಯಾರ್ಥಿಗಳಿಗೂ ತಿಳಿಸುವದು ಅವಶ್ಯವೆಂದು ತೋರುತ್ತದೆ. ಅವು ಯಾವವೆಂದರೆ:—"ಭೂಮಿಯ ಇತಿಹಾಸವನ್ನು ಬರೆಯಿರಿ" ಎಂದು ಕೇಳಿದ್ದಕ್ಕೆ ಒಬ್ಬನು "ಶ್ರೀಮನ್ನಾರಾಯಣನ ನಾಭಿಪದ್ಮದಿಂದ ಬ್ರಹ್ಮನು ಹುಟ್ಟಿ ಪುರುಷಸ್ತ್ರೀಯರನ್ನು ಉತ್ಪನ್ನಮಾಡಿದನು. ಅವರಿಂದ ಮನುಷ್ಯ ವೃಷ್ಟಿಮಾದಿಗಳ ಸೃಷ್ಟಿಯಾಯಿತು" ಎಂದು ಬರೆಯುತ್ತಾನೆ. ಮತ್ತೊಬ್ಬನು "ಭೂಮಿಯಲ್ಲಿ ಮೊದಲು ಬೀಜಗಳನ್ನು ಹಾಕಿದರೆ ಗಿಡಗಳುಂಟಾಗುತ್ತವೆ" ಎಂದು ಬರೆಯುತ್ತಾನೆ. ಇನ್ನೊಬ್ಬನು "ಭೂಮಿಯು ಈಗಿದ್ದ ಸ್ಥಳದಲ್ಲಿ ಮೊದಲು ಇದ್ದಿಲ್ಲ" ಎಂದು ಹೇಳುತ್ತಾನೆ, ಇತ್ಯಾದಿ.

ಈ ಪುಸ್ತಕದೊಳಗಿನ ಉತ್ತರರಾಮ ಚರಿತ್ರದ "ನಿ

ಲ್ಲಿನ್ನು ದುಃಖಿಸದಿರೌ" ಎಂಬ ಪದ್ಯದ ಭಾವವನ್ನು ಬರೆಯು
ವಾಗ ಬಬ್ಬನು "ಸೀತೆಯು ಹಡೆಯುವ ಕಾಲಕ್ಕೆ ವಾಲ್ಮೀ
ಕಿಯು ಅವಳಿಗೆ ಸಮಾಧಾನ ಹೇಳಿದನು" ಎಂದು ಬರೆಯ
ತ್ತಾನೆ. ಮತ್ತೊಬ್ಬನು "ಸೀತೆಯು ರಾಮಲಕ್ಷ್ಮಣರನ್ನು
ಪಡೆದಳು" ಎಂದು ಬರೆಯುತ್ತಾನೆ. ಬಹು ಮಂದಿ ಅದ
ರ್ಥವನ್ನೇ ಬರೆದಿಲ್ಲ. ಇದರಿಂದ ಆ ಪಾಠವನ್ನು ವಿದ್ಯಾ
ರ್ಥಿಗಳು ಓದಿಲ್ಲವೆಂದು ಕಂಡುಬರುತ್ತದೆ. ಇದರಂತೆ "ರ
ರಥಕ್ಕೊಮ್ಮೆ" ಎಂಬ ಪದ್ಯದ ಭಾವವನ್ನು ಅಸಂಗತವಾ
ಎಷ್ಟೋ ವಿದ್ಯಾರ್ಥಿಗಳು ಬರೆದಿರುತ್ತಾರೆ. ಸಿಥಿಲ ಸಂಯು
ಕ್ತಾಕ್ಷರಗಳ ಲಕ್ಷಣವನ್ನು ಕೇಳಿದ್ದಕ್ಕೆ ಸಿಥಿಲ ಸಮುಚ್ಚ
ಯದ ಲಕ್ಷಣವನ್ನು ಬರೆಯುತ್ತಾರೆ. ಇಂದ್ರವಂಶ ವೃತ್ತ
ವನ್ನು ಕೇಳಿದರೆ ಇಂದ್ರವಜ್ರಾ ವೃತ್ತವನ್ನು ಬರೆಯ
ತ್ತಾರೆ. ತ್ರಿಪದಿಯ ಲಕ್ಷಣವನ್ನು ಯಾರೂ ಹೇಳಿಲ್ಲ. ಇ
ರಿಂದ ಛಂದಸ್ಸಿನ ಅಭ್ಯಾಸವು ಕಾಲೇಜುಗಳಲ್ಲಿ ಆಗುವುದೋ ಇ
ಲ್ಲವೋ ಎಂದು ಸಂಶಯ ಬರುತ್ತದೆ. ಕೃತ್ತದ್ಧಿತ ಶಬ್ದಗಳ
ಅರ್ಥಭೇದದಿಂದ ಎಷ್ಟು ವಿಧವೆಂದು ಕೇಳಿದ್ದಕ್ಕೆ ಎಪ್ಪತ್ತೆ
ಜನರು ಕೃದಂತ, ತದ್ಧಿತಾಂತ, ಸಮಾಸವೆಂದು ಬರೆಯ
ತ್ತಾರೆ. ಕೆಲವರು ನಾಮ, ಸರ್ವನಾಮ, ವಿಶೇಷಣ
ಅವ್ಯಯ, ಕ್ರಿಯಾಪದವೆಂದು ಬರೆಯುತ್ತಾರೆ. ಕೆಲವರು
ಭಾವಪ್ರತ್ಯಯ, ಸ್ತ್ರೀಪ್ರತ್ಯಯ, ಅನ್ವರ್ಥಪ್ರತ್ಯಯವೆಂ
ದು ಬರೆಯುತ್ತಾರೆ

ಜನ್ನಿಗೆ ಇದರ ಉತ್ಪತ್ತಿ "ಜನ್" ಎಂದು ಬಬ್ಬನ
"ಜನನಿ" ಎಂದು ಬಬ್ಬನು; ಅಣತಿ ಇದರ ಉತ್ಪತ್ತಿ "ಅ
ಎಂದು ಬಬ್ಬನು, "ಅಣ+ಅತಿ" ಎಂದು ಮತ್ತೊಬ್ಬನ
"ಪಲ್ಲಿ" ಇದರ ಉತ್ಪತ್ತಿ "ಪಲ್" ಎಂದು ಬಬ್ಬನು, "ಪ

ರ್" ಎಂದು ಮತ್ತೊಬ್ಬನು, "ಮೊಳ್ಕ" ಇದರ ಉತ್ಪತ್ತಿ
ಮೊಳ್" ಎಂದು ಬಬ್ಬನು, "ಮೂಣ" ಎಂದು ಮತ್ತೊಬ್ಬನು.
ಗೋವು" ಇದರ ಉತ್ಪತ್ತಿ "ಗೋ" ಎಂದು ಬಬ್ಬನು, "ಆ
ಳು" ಎಂದು ಮತ್ತೊಬ್ಬನು, "ಎಣ್ಣೆ" ಇದರ ಉತ್ಪತ್ತಿ
ಎಣೆ" ಎಂದು ಬಬ್ಬನು, "ಪಿಳ್" ಎಂದು ಮತ್ತೊಬ್ಬನು,
ಬಡವೆ" ಇದರ ಉತ್ಪತ್ತಿ "ಬಡೆ" ಎಂದು ಬಬ್ಬನು, "ಬ
ಸವೆ" ಎಂದು ಮತ್ತೊಬ್ಬನು, "ಕೂಸ್ರು" ಇದರ ಉತ್ಪತ್ತಿ
ಸುರು" ಎಂದು ಬರೆಯುತ್ತಾರೆ.

"ದೀಪ್ತಿ ಮುಕ್ಕಳಿಗೆ ಉಪದೇಶದ ಪದ್ಯವನ್ನು ಬರೆ" ಎಂ
ದು ಕೇಳಿದ್ದಕ್ಕೆ "ಜಲಜಾತಾಯತ ಲೋಚನೆ" ಎಂದು ಬ
ಬ್ಬನು, "ತಳಿವೆಳೆವೂವ್ರು" ಎಂದು ಮತ್ತೊಬ್ಬನು, ಬರೆ
ಯುತ್ತಾನೆ.

"ಎಲೆಹಬರ ಇಂ" ಇದರ ಪದಚ್ಛೇದವು ಮೂರು ವರ್ಷ
ಳಿಂದ ಕೇಳಿ ಅಡುತ್ತಲಿದೆ. ಅವರಿಗಿನ್ನೂ ವಿದ್ಯಾರ್ಥಿಗಳಿ
ತಿಳಿವಂತೆ ತೋರುವದಿಲ್ಲ. "ಸಾಹಸ ಮುಂದೋರ್ಬಲ
ಮುಂ" ಎಂಬಲ್ಲಿ "ಸಾಹಸ, ಮುಂದೋಕ್" ಎಂದು ಬಬ್ಬ
ನು, "ಸಾಹಸ, ಮುಂದೆ, ಓರ್" ಎಂದು ಮತ್ತೊಬ್ಬನು, "ಸಾ
ಹಸಮುಂ ತೋರ್" ಎಂದು ಇನ್ನೊಬ್ಬನು ಬರೆಯುತ್ತಾರೆ.

"ಮೆರೆಗುಮವುಲ್ಲಣೆ" ಎಂಬಲ್ಲಿ "ಮೆರೆಗುಮೆದು ಅಲ್ಲ
" ಎಂದು ಬಬ್ಬನು, "ಮೆರೆಗುಮವು ಅಲ್ಲಿ ಅದೆ" ಎಂದು
ಮತ್ತೊಬ್ಬನು ಬರೆಯುತ್ತಾರೆ. "ಜಲದಂಕನೋಳ್" ಎ
ಂಬಲ್ಲಿ "ಜಲದ, ಅಂಕನೊಳ್" ಎಂದು ಪದ ಬಿಡಿಸಿರು
ತ್ತಾರೆ. "ಬಡನರಿ ಮೊಲಪುಲ್ಲೆಗಳಲ್ಲಿ" ಎಂಬಲ್ಲಿ "ಬಡ
ರಿ, ಮೊಲ, ಪುಲ್ಲೆಗಳಲ್ಲಿ ಎಂದು ಎಲ್ಲ ವಿದ್ಯಾರ್ಥಿಗಳು ಪ
ಚ್ಛೇದ ಮಾಡುತ್ತಾರೆ.

"ತಳಿಗರ್ಳ್ ತನಿವಣ್ಗಳ್" ಎಂಬ ಪದ್ಯದ ಅನ್ವಯ
ಭಾವಗಳನ್ನು ಬರೆಯಲಿಕ್ಕೆ ೨೦೦ ಜನರಲ್ಲಿ ೩, ೪ ಮಂದಿ
ಸಮರ್ಥರಾಗಿದ್ದಾರೆ.

ಸತಿಸಪ್ತಮಿಯ ಲಕ್ಷಣವನ್ನು ಬಬ್ಬಿಬ್ಬರು ಮಾತ್ರ ಹೇ
ಳಿದ್ದಾರೆ. ನಿಪಾತಾವ್ಯಯವೆಂದರೆ ನಿಪಾತಕ್ಕೆ ಅವ್ಯಯವ
ನ್ನು ಕೂಡಿಸಿದವರಾಯಿತೆಂದು ಬಹುಮಂದಿ ಬರೆಯುತ್ತಾರೆ
ಇನ್ ಆಗಮವು ಎಲ್ಲಿ ಬರುವದೆಂದು ಕೇಳಿದ್ದಕ್ಕೆ ಬಬ್ಬನೂ
ನಿಜವಾದ ಉತ್ತರವನ್ನು ಹೇಳಿಲ್ಲ. ಉಕಾರಾಂತಕ್ಕೆಂದು
ಬಬ್ಬನು, ಅನಿತ್ಯ ಉಕಾರಾಂತಕ್ಕೆಂದು ಮತ್ತೊಬ್ಬನು
ಅಕಾರಾಂತ ನಪುಂಸಕಕ್ಕೆಂದು ಇನ್ನೊಬ್ಬನು, ಅಕಾ
ರಾಂತ ಪುಲ್ಲಿಂಗಕ್ಕೆಂದು ಮತ್ತೊಬ್ಬನು, ತೃತೀಯಾ ಷಷ್ಠಿ ಸ
ಪ್ತಮಿಗಳಿಗೆ ಬರುವದೆಂದು ಮತ್ತೊಬ್ಬನು ಹೀಗೆ ಅಸಂಗ
ತವಾಗಿ ಬರೆಯುತ್ತಾರೆ.

ಕೊಳ್ ಧಾತುವಿನ ಭವಿಷ್ಯತ್ಕಾಲದ ಎರಡು ರೂಪಗಳ
ನ್ನು ಬಬ್ಬರೂ ಬರೆಯಲಿಲ್ಲ. ಬಗ್ಗಾಲಿ ಇದರ ವಿಗ್ರಹ ಬರ್
ಗಾಲಿ ಎಂದೂ, ಬರ್ ಕಾಲಿಯೆಂದೂ, ಇಗ್ಲಿಸ ಇದರ ವಿಗ್ರ
ಹ ಇರ್+ಕೆಲಸ ಎಂದೂ, ಮುಚ್ಕೊಟ್ಟು ಇದರ ವಿಗ್ರಹ
ಮುರ್+ಚಿಕೊಟ್ಟು ಎಂದೂ ಬಹುಮಂದಿ ವಿದ್ಯಾರ್ಥಿಗಳು
ಬರೆಯುತ್ತಾರೆ. ಈ ಸಂಬಂಧದ ಸಂಧಿಗಳನ್ನು ೪, ೫ ಜ
ನರು ಮಾತ್ರ ಬರೆಯುತ್ತಾರೆ. ದೇವರು ಲೋಕವನ್ನು
ನಿರ್ಮಿಸಿದನು; ನಾಳೆ ಮುಲ್ಕೀಪರೀಕ್ಷೆಯಾಗುತ್ತದೆ. ಈ
ವಾಕ್ಯಗಳು ಕೂಡುವದಿಲ್ಲ. ಯಾಕಂದರೆ, ಲೋಕವ ನಿ
ರ್ಮಾಣವು ಆಗಿ ಹೋಗಿರುವದರಿಂದ ಅದು ಪೂರ್ಣ ವಾಕ್ಯ
ವದೆ; ಮುಲ್ಕೀ ಪರೀಕ್ಷೆಯು ಇನ್ನೂ ಆಗದೆ ಇರುವದರಿಂ
ದ ಅದು ಅಪೂರ್ಣವದೆ ಎಂದು ಬಬ್ಬನು, ಮೊದಲನೆಯ ವಾ

ಕ್ಯವು ಭೂತಕಾಲದ್ದದೆ, ಎರಡನೆಯದು ವಾಕ್ಯವು ಭವಿಷತ್ ಕಾಲದ್ದದೆ, ಕಾರಣ ಅವೆರಡೂ ಕೂಡುವದಿಲ್ಲೆಂದು ಮತ್ತೊಬ್ಬನು, ಇನ್ನೂ ಹಲವರು ಅನೇಕವಿಧ ಅಸಂಗತವಾಗಿ ಉತ್ತರಗಳನ್ನು ಕೊಟ್ಟಿರುತ್ತಾರೆ.

ಇದೇಪ್ರಕಾರ ತಪ್ಪುಗಳನ್ನು ಮುಲಖೀ ಪರೀಕ್ಷೆಯ ವಿದ್ಯಾರ್ಥಿಗಳು ಮಾಡುತ್ತಾರೆ. ಅದರಿಂದ ಶಿಕ್ಷಕರಿಗೂ ಶಿಕ್ಷಿತರಿಗೂ ಕುಂದು ಬರುತ್ತದೆ. ಮೂರು ವರ್ಷದಿಂದ ನಾವು ತೋರಿಸಿದ ತಪ್ಪುಗಳನ್ನೂ ಮಾಡಿದ ಸೂಚನೆಗಳನ್ನೂ ಶಿಕ್ಷಕರು ಲಕ್ಷದಲ್ಲಿಟ್ಟು ತಕ್ಕ ಸುಧಾರಣೆಯಾಗುವಂತೆ ಯತ್ನಿಸಿದರೆ ವಿದ್ಯಾರ್ಥಿಗಳ ಕಲ್ಯಾಣವೂ ಶಿಕ್ಷಕರಿಗೆ ಭೂಷಣವೂ ಆಗುವದೆಂಬದಕ್ಕೆ ಏನೂ ಸಂಶಯವಿಲ್ಲ.

ಈ ಭಾಗದ ಮುಲಖೀ ಪರೀಕ್ಷೆಯ ಪರಿಣಾಮವನ್ನು ಕೆಳಗೆ ಕಾಣಿಸಿರುತ್ತೇವೆ

ಪರೀಕ್ಷಾ ಸ್ಥಳಗಳು.	ಪರೀಕ್ಷೆಗೆ ಕೂತವರ ಸಂಖ್ಯೆ		ಪಾಸಾದವರ ಸಂಖ್ಯೆ.		ಶೇಕಡಾ.	
	ಎನ್ನೇ ಗ್ರೇಡ.	ಕಿನ್ನೇ ಗ್ರೇಡ.	ಎನ್ನೇ ಗ್ರೇಡ.	ಕಿನ್ನೇ ಗ್ರೇಡ.	ಎನ್ನೇ ಗ್ರೇಡ.	ಕಿನ್ನೇ ಗ್ರೇಡ.
ಧಾರವಾಡ ...	೦	೩೬೦	೦	೫೬	೦	೧೫.೫
ಬೆಳಗಾವ ...	೩	೦೪೦	೧	೬೧	೩೩.೩	೧೯.೭
ವಿಜಾಪೂರ ...	೩	೧೪೦	೦	೪೦	೦.೦	೨೮.೫
ಕ್ಯಾನರಾ ...	೩೪	೧೪೩	೧೯	೩೯	೫೫.೪	೨೧.೩

ಮೈಸೂರ ಮಹಾರಾಜರಾವ ಶ್ರೀಮನ್ ಛತ್ರಪತಿ ಶ್ರೀ ಚಾಮರಾಜೇಂದ್ರ ಬಡಿಯರ ಬಹದ್ದೂರ ಕೇ. ಜಿ. ಸಿ. ಎಸ್. ಅಯ್. ಇವರು ಕಳೆದ ತಿಂಗಳ ಎನ್ನೇ ತಾರೀಖು

ಶುಕ್ರವಾರ ದಿವಸ ಪ್ರಾತಃಕಾಲದ ೭ ಘೆಂಟೆಗೆ ಕಲಕತ
ರಾಜಧಾನಿಯಲ್ಲಿ ಪರಲೋಕವನ್ನೈದಿದರೆಂಬ ಹೃದಯಭ
ದಕವಾದ ಅಶುಭವಾರ್ತೆಯನ್ನು ನಮ್ಮ ವಾಚಕರಿಗೆ ತಿ
ಹಲಿಕ್ಕೆ ನನಗೆ ಅತ್ಯಂತ ದುಃಖವಾಗುತ್ತದೆ. ಈ ಮಹ
ರಾಜರವರು ಸರ್ ೧೮೬೦ನೇ ಇಸವಿಯಲ್ಲಿ ಜನಿಸಿದರ
ಇವರು ಮೂರು ವರ್ಷದವರಿದ್ದಾಗ್ಗೆ ಇವರ ದತ್ತವಿಧಾನವ
ಯಿತು. ಮುಂದೆ ಸರ್ ೧೮೮೮ನೇ ಇಸವಿಯಲ್ಲಿ ಈ ಮ
ಹಾರಾಜರವರು ಪಟ್ಟಾಭಿಷಿಕ್ತರಾಗಿ ೧೮೮೦ನೇ ಇಸವಿ
ಮಾರ್ಚ್ ತಿಂಗಳಲ್ಲಿ ರಾಜ್ಯಭಾರವನ್ನು ಸ್ವತಃ ಕೈಕೊಂ
ರು. ಅಂದಿನಿಂದ ಈವರೆಗೆ ಇವರು ತಮ್ಮ ರಾಜ್ಯವನ್ನು
ಜಾಣತನದಿಂದಲೂ, ಪ್ರೀತಿಯಿಂದಲೂ, ದಕ್ಷತೆಯಿಂದಲೂ
ಆಳಿದರು. ಈ ಮಹಾರಾಜರವರು ತಮ್ಮ ಪ್ರಜೆಗಳ ಸು
ದುಃಖವನ್ನು ತಾವೇ ಚನ್ನಾಗಿ ಮನಗಂಡು ಅವರಿಗೆ ಯ
ವಾಗಲೂ ಹಿತವಾಗುವಂತೆಯೂ ತೊಂದರೆಯೂ ಅನ್ಯಾಯ
ವೂ ಆಗದಂತೆಯೂ ಪೂರ್ಣ ಕಾಳಜಿಯಿಂದ ಆಳಿದ್ದರಿಂ
ಇವರ ಆಳಿಕೆಯು ಪ್ರಜೆಗಳಿಗೆ ಸುಖಾವಹವೂ ಆನಂದದ
ಯಕವೂ ಆಗಿ ಅವರು ಈ ಶ್ರೀಮಂತರ ಆಳಿಕೆಯು ಚಿ
ಕಾಲವಿರಲೆಂದು ಯಾವಾಗಲೂ ಬೇಡಿಕೊಳ್ಳುತ್ತಿದ್ದರು
ಆದರೆ ವಿಧಿಯು ಬೇರೆ ಚಿಂತಿಸಿ ಇವರನ್ನು ೩೦ ವರ್ಷ
ಅಲ್ಪಾಯುಷ್ಯದಲ್ಲಿಯೇ ಕಟ್ಟಿಕೊಂಡು ಹೋಗಿ ಎಲ್ಲರನ್ನು
ದುಃಖಸಮುದ್ರದಲ್ಲಿ ಮುಳುಗಿಸಿದನು. ಇವರ ಮರಣದಿ
ದ ಹಿಂದುಸ್ತಾನದಲ್ಲಿಯೂ ಎಲ್ಲ ನಿವಾಸಿಗಳಿಗೂ ದುಃಖವಾ
ಗುತ್ತದೆ; ಅದರಲ್ಲಿ ಈ ಶ್ರೀಮಂತರು ಕರ್ನಾಟಕಸ್ಥರ
ದ್ದರಿಂದ ನಮಗಂತೂ ಅತ್ಯಂತ ದುಃಖವಾಗಿರುವದು ಸಾ
ಜಿಕವೇ ಇರುತ್ತದೆ. ಇವರ ಆತ್ಮಕ್ಕೆ ಸುಖಶಾಂತಿಯನ್ನೂ

ಇವರ ಸಂತತಿಗೆ ಚಿರಾಯುಷ್ಯವನ್ನೂ ಸುಖಸಾಮ್ರಾಜ್ಯವನ್ನೂ ಈಯಲೆಂದು ದೇವರನ್ನು ಬೇಡಿಕೊಳ್ಳುತ್ತೇವೆ.

ಈ ಮಹಾರಾಜರ ಕಾಲದಲ್ಲಿ ಎಲ್ಲ ಪ್ರಕಾರದ ಸುಧಾರಣೆಗಳು ಆಗಿರುವವು; ಅವುಗಳಲ್ಲಿ ಮುಖ್ಯವಾದವುಗಳು ಯಾವವೆಂದರೆ:—ಸ್ತ್ರೀ ಶಿಕ್ಷಣ, ವ್ಯವಸಾಯ ಸುಧಾರಣೆ, ಪ್ರಜಾಪ್ರತಿನಿಧಿ ಸಭೆ, ಸಾಮಾಜಿಕ ಸುಧಾರಣೆ, ವೃದ್ಧಬಾಲಿಕಾ ವಿವಾಹ ನಿಷೇಧ ಮುಂತಾದವು. ಈ ಕೆಲಸದಲ್ಲಿ ಮಹಾರಾಜರವರಿಗೆ ಅವರ ದಿವಾಣರಾದ ಮ. ರಾ. ರಂಗಾಚಾರ್ಲು ಸರ್ ಶೇಷಾದ್ರಿ ಅಯ್ಯರ್‌ರವರೂ ಯೋಗ್ಯ ಸಹಾಯ ಮಾಡಿದರು.

ಈ ಮಹಾರಾಜರವರ ತರುವಾಯ ಮೈಸೂರ ಪಟ್ಟಕ್ಕೆ ಯುವರಾಜ ಕೃಷ್ಣರಾಜ ಬಡಿಯರರವರ ಬಾಧ್ಯಸ್ತಿಕೆಯನ್ನು ಹಿಂದುಸ್ಥಾನ ಸರಕಾರದವರು ಒಪ್ಪಿಕೊಂಡಿರುತ್ತಾರೆ. ಪಟ್ಟಾಭಿಷೇಕ ಸಮಾರಂಭವು ಈ ಹೊತ್ತು (೧೯೧೮ ಫೆ.) ಮೈಸೂರಿನಲ್ಲಿ ಆಗುವದು. ಇವರ ವಯಸ್ಸು ೧೫ ವರ್ಷದ್ದಿರುವದರಿಂದ ಕೌನ್ಸಿಲ್ ಆಫ ರಿಜೆನ್ಸಿಯನ್ನು ನೇಮಿಸಿ, ಆಫವಾ ಬೇರೊಂದು ಬಗೆಯಿಂದ ವ್ಯವಸ್ಥೆಯನ್ನು ಮಾಡಿ ರಾಜ್ಯಭಾಡಳತೆಯನ್ನು ನಡಿಸುವದು ಗೊತ್ತಾಗತಕ್ಕದ್ದದೆ. ಇವರ ಹಿರಿಯರ ಕಾಲದ ಅನುಭವಿಕರೂ, ದೇಶಾಭಿಮಾನಿಗಳೂ, ಜಾಣರೂ, ಕಾರ್ಯದಕ್ಷರೂ ಆದ ಸರ್ ಶೇಷಾದ್ರಿ ಅಯ್ಯರ ದಿವಾಣರವರು ರಾಜ್ಯದ ಸುಕರ್ಣಧಾರರಾವದ್ದರಿಂದ ಮೈಸೂರ ಸಂಸ್ಥಾನವ ಸುಸ್ಥಿತಿಯ ಬಗ್ಗೆ ನಮಗೆ ಸಂಶಯವಿಲ್ಲ.

SELECTIONS FROM THE KARNATIK GAZETTEER.

ಕರ್ನಾಟಕ ಗೆಜೆಟಿಯರಿನಿಂದ ಆಯ್ದ ಉತಾರೆಗಳು.

(ಇಂಗ್ಲೀಷಿನಿಂದ ಕನ್ನಡಕ್ಕೆ ತರ್ಜುಮೆ ಮಾಡಿದ್ದು)

ಬಂಕಾಪುರ ತಾಲೂಕ.

ಇದು ಜಿಲ್ಲೆಯ ಪಶ್ಚಿಮ ಭಾಗದ ಮಧ್ಯ ದೇಶದಲ್ಲಿ ಹು ಬ್ಬಳ್ಳೀ ತಾಲೂಕಿನ ಎಕ್ಷಿಣಕ್ಕೆ ಇರುತ್ತದೆ. ಇದರಲ್ಲಿ ೧೫೫ ಕುಂಕಾರೀ ಗ್ರಾಮಗಳೂ ೧೬ ದುಮ್ಮಾಲೀ ಗ್ರಾಮಗಳೂ ಉಂಟು. ಇವು ಕ್ಷೇತ್ರಫಲ ೬೫೩ ಚಬಾಕ್ಕೆ ಕುಂಮೈಲು ಜನ ಸಂಖ್ಯೆ ೩೩೫೫೭ ಭೂಮಿಯು ಕಂದಾಯ ೧೯೮೫೦ ರೂ ಮಾಪು.

ಪಶ್ಚಿಮ ಭಾಗದಲ್ಲಿ ಗುಡ್ಡಗಳೂ ಅಡವಿಯೂ ಉಂ ಟು. ಅಲ್ಲಿ ಬಿಡ ಬುಕ್ಕಲಿಗರ ಸಣ್ಣ ಸಣ್ಣ ಹಳ್ಳಿಗಳು ವೊಂ ದಕ್ಕೊಂದು ಸಮೀಪವಾಗಿರುತ್ತವೆ. ಮಧ್ಯಭಾಗದಲ್ಲಿ ಸವ ಳಿದ ಭೂಮಿಯುಂಟು. ಉತ್ತರ ಪೂರ್ವ ಭಾಗಗಳಲ್ಲಿ ಅಲ್ಲಲ್ಲಿಗೆ ಸನಿ ಇಳ್ಳವಂಥ ಬಿನ್ನೆಗಳಿವೆ. ಈ ಪ್ರದೇಶದಲ್ಲಿ ದೈ ವಕ್ಕಳ್ಳ ಪ್ರೊಕ್ಕಲಿಗರ ದೊಡ್ಡ ದೊಡ್ಡ ಗ್ರಾಮಗಳು ದೂರ ದಲಾ ಇರುತ್ತವೆ.

ಭೂಮಿಯು ಪಶ್ಚಿಮದಲ್ಲಿ ಮುಖ್ಯವಾಗಿ ಕೆಂಪು, ಉತ್ತ ರ ದಕ್ಷಿಣಗಳಲ್ಲಿ ಮುಖ್ಯವಾಗಿ ಎರೆ; ಪೂರ್ವದಲ್ಲಿ ಎರೆ ಕೆಂಪು ಮಿಶ್ರ ಈ ಭೂಮಿಯು ಉತ್ತರದಿಂದ ಪಶ್ಚಿಮಕ್ಕೆ ಇಳು ವಲಾಗಿ ಇರುತ್ತದೆ. ಶಿಗ್ಗಾವಿಯ ನೆರೆ ಪ್ರದೇಶ ಹೊರತಾ ಗಿ ಈ ತಾಲೂಕಿನ ಹವೆಯು ಆರೋಗ್ಯದ್ದಿರುತ್ತದೆ. ಮೆ ಲೆಯು ನೀಮು ನೂನವಾಗಿರುತ್ತದೆ. ಗಾಳಿಂದ ಫೆ ಇಂ ಚಿನವರೆಗೆ ಸರಾಸರಿ ೦೫ ಇಂಚು. ದಕ್ಷಿಣಮೇರೆಯಲ್ಲಿ ವ ರದಾನದಿಯೂ ಅವಕ್ಕೆ ಕೂಡುವವೊಂದು ಹಳ್ಳವೂ ಆ ಪ್ರ ದೇಶದ ಜನರಿಗೆ ಮುಖ್ಯ ನೀರಿನ ಆಶ್ರಯವು ಉಳಿದಕ

ತಿಯಲ್ಲೆಲ್ಲ ಸಣ್ಣ ದೊಡ್ಡ ಶೀನೀರಿನ ಕೆರೆಗಳ ಅಸರವು. ದೊಡ್ಡ ಕೆರೆಗಳ ನೀರು ತಕ್ಕ ಮಟ್ಟಿಗೆ ನಿರ್ಮಲವಿರುತ್ತದೆ.

ಸರ್ ೧೮೮೧ರ ಖಾನೇಸುಮಾರಿಯಂತೆ ವೈಟ್ಟ ಜನಸಂಖ್ಯದಲ್ಲಿ ಶೇಕಡಾ ೪೫. ೩೧ ಹಿಂದೂ ಜನರು ೧೪. ೬೫ ಮುಸಲ್ಮಾನರು, ೬ ಕ್ರಿಸ್ತಿಯರ್ಯರು ಈ ತಾಲೂಕಿನಲ್ಲಿ ಇದ್ದರು. ಹಿಂದೂ ಜನರಲ್ಲಿ ಬ್ರಾಹ್ಮಣರು ೬೬೮೦, ಕುರುಬರು ೬೦೮೪, ಆರೇರು ೪೫೬೪, ಜೇಡರು ೪೦೧೧, ಗಾಣಿಗರು ೨೬೪೪, ಲಿಂಗವಂತರು ೧೬೭೪, ಪಂಚಾಳರು ೧೬೪೦, ಅಂಬಿಗರು ೧೧೦೪, ಬಡಗರು ೧೧೧೪ ಇತ್ಯಾದಿ.

ದೊಡ್ಡ ಊರುಗಳು.

ಬಂಕಾಪೂರ—ಇದು ಮೊದಲು ತಾಲೂಕಿನ ಮುಖ್ಯ ಗ್ರಾಮವಿತ್ತು. ಜ. ಸ. ೪೧೧ ೬೦೩೭. ಇಲ್ಲಿ ಹಾಳಾದ ದೊಂದು ಕೋಟೆಯೂ ಎಡು ಬುನಾದಿಯ ಗುಡಿಗಳೂ ಇರುತ್ತವೆ. ಮಂಗಳವಾರದ ಸಂತೆಯಲ್ಲಿ ದೇಶೀ ಬಟ್ಟೆಗಳೂ, ಕಂಬಳಿಗಳೂ, ಪಾತ್ರೆಗಳೂ, ಎಣ್ಣೆಕಾಳು ಇವುಗಳ ವ್ಯಾಪಾರವಾಗುತ್ತದೆ. ಅಲ್ಲಿಯ ಕಂಬದ ಬಸ್ತಿ, ಸಿದ್ಧೇಶ್ವರನ ಗುಡಿ ಇವೇ ಎರಡು ಜೈನ ದೇವಸ್ಥಾನಗಳು. ಬಸ್ತಿಗೆ ನಗರೇಶ್ವರನ ಬಸ್ತಿ ಎಂತಲೂ ಅನ್ನುವರು ಇದು ಅರ್ಧಮರ್ಧ ಹಾಳಾಗಿದೆ. ಕೆಲವು ಭಾಗ ನೆಲದೊಳಗೆ ಮುಗಿದದೆ. ಈ ಬಸ್ತಿಯ ಸಭಾಮಂಟಿಕ್ಕೆ ಅಲ್ಲಲ್ಲಿ ಕಂಬಗಳಿರುತ್ತವೆ. ಅದರ ಸುತ್ತಮುತ್ತ ಗೋಡೆಯನ್ನು ಬಹು ಸುಂದರವಾಗಿ ಕಟ್ಟಿದ್ದಾರೆ ಕಂಬಗಳಿಲ್ಲ ಕಡೇ ಕೆಲ್ಲಿನವು ಗಾಡಕ್ಕೆ ಪಚ್ಚಿ ನುಣುಪು ಮಾಡಲ್ಪಟ್ಟಿರುತ್ತವೆ. ಮುಖ್ಯ ಬಸ್ತಿಯೊಳಗೆ ಹೋಗಲಿಕ್ಕೆ ದಕ್ಷಿಣದಿಕ್ಕಿನಲ್ಲಿ ಮಾಡಿದ ಬಾಗಿಲು ಬಹು ಸುಂದರವಾಗಿರುತ್ತದೆ. ಆದರೆ ಅದರ ಎಡ ಬಲದಲ್ಲಿಯ ಕೆಲಕೆಲವು ಗೊಂಬೆಗಳನ್ನು ಜನರು ಕದ್ದು

ಕೊಂಡು ಹೋಗಿದ್ದಾರೆ. ಈ ಬಸ್ತಿಯಲ್ಲಿ ಆರು ಶಿಲಾಲಿಪಿಗಳಿರುತ್ತವೆ. ಅವೆಲ್ಲ ೧೧ನೇ ೧೫ನೇ ಶತಕಗಳಲ್ಲಿ ಬರಿದಂಥವು. ಶಿವ್ದೀಶ್ವರನ ಗುಡಿಯು ಬಸ್ತಿಗಿಂತ ಸಣ್ಣದು. ಅದರಷ್ಟು ಹಳೇದೂ ಅಲ್ಲ. ಇದರ ಸಭಾಮಂಟಪಕ್ಕೆ ೪ ಕಂಬಗಳಿವೆ. ಈ ಗುಡಿಗೆ ಸರಕಾರೀ ಇನಾಮು ನಡಿಯುತ್ತದೆ. ಇವರಲ್ಲಿ ಬಂದು ಲಿಪಿಯು ೧೦೫೫ನೆಯ ವರ್ಷದ್ದು ಇರುತ್ತದೆ. ಇ. ಸ. ೯೯೪ನೇ ವರ್ಷ ಬರೆದದ್ದೊಂದು ಕೊಲ್ಲಾಪುರದಲ್ಲಿರುವ ಜೈನಗ್ರಂಥದಲ್ಲಿ ಬಂಕಾಪುರದ ಉಲ್ಲೇಖವಿದೆ. ಸವಣೂರ ನಬಾಬನ ಪೂರ್ವಜನಾದ ಅಬದುಲ್ ಕರೀಮ್ ಖಾನನು ೧೬೭೩ರಲ್ಲಿ ಬಂಕಾಪುರದ ಸುಭೇದಾರನಾದನು. ಅವನು ಸ್ವತಂತ್ರನಾದ ಬಳಿಕ ಬಂಕಾಪುರದಲ್ಲಿ ಕೆಲವು ದಿವಸ ಆಳಿದನು. ಹೈದರನೂ ಟೀಪೂನೂ ಬಂಕಾಪುರವನ್ನು ಹಾಳು ಮಾಡಿದರು.

ಛಾಂಡಿಸಿ—ಶಿಗ್ಗಾವಿಯ ವಾಯವ್ಯಕ್ಕೆ ಆರು ಮೈಲಿನ ಮೇಲೆ ಅದೆ. ಕಾನಡಾ ಜಿಲ್ಲೆಯ ಸರಹದ್ದಿನ ಮೇಲೆ ದೊಡ್ಡ ಪೇಟೆಯು ಸ್ಥಾನವು. ಜ. ಸ. (೧೧) ೨೫೫೪, ಗುರುವಾರದ ಸಂತೆಯಲ್ಲಿ ಅಡಿಕೆ, ಮೆಣಸು, ಯಾಲಕ್ಕಿ, ಮೆಣಸಿನಕಾಯಿ, ಕೊಬ್ಬರಿ, ಬೆಲ್ಲ, ಅಕ್ಕಿ, ಉಪ್ಪು, ಸಕ್ಕರಿ ಇವುಗಳ ವ್ಯಾಪಾರವು ಬಹಳ ಆಗುತ್ತದೆ.

ಗಂಗೀಭಾವಿ—ಈ ಬಾವಿಯು ಶಿಗ್ಗಾವಿಯ ಪಶ್ಚಿಮಕ್ಕೆ ನಾಲ್ಕು ಮೈಲಿನ ಮೇಲೆ ಎದಲಾಬಾದೆಂಬ ಹಾಳುಹಳ್ಳಿಯ ಹದ್ದಿನೊಳಗೆ ಇರುತ್ತದೆ. ಈ ಬಾವಿಯು ಮಾವಿನ ಬನದೊಳಗೆ ಇರುತ್ತದೆ. ಸುತ್ತು ಮುತ್ತು ಕಿರಿ ಆಡಿವಿ ಬೆಳೆದಂಥ ಸಣ್ಣ ಸಣ್ಣ ಗುಡ್ಡಗಳಿವೆ. ಬಾವಿಯ ದಂಡೆಯಲ್ಲಿ ಕಾಮೇಶ್ವರನೆಂಬ ಈಶ್ವರನ ದೇವಾಲಯವಿರುತ್ತದೆ. ಈ ಬಾವಿಯಲ್ಲಿ ಸ್ನಾನ ಮಾಡಿದವರ ಜ್ವರ ಮುಂತಾದ ರೋಗಗಳು ಪರಿ

ಹಾರವಾಗುತ್ತವೆಂದು ಪ್ರಸಿದ್ಧಿಯುಂಟು. ಅದ್ದರಿಂದ ಮಹಾತ್ಮ್ಯವು ಬೆಳಿದದೆ. ಕಾಮೇಶ್ವರನಿಗೆ ೯೩ ರೂಪಾಯಿಯು ಇನಾಮು ಭೂಮಿಯಲ್ಲದೆ ನಗದ ೬೦ ರೂಪಾಯಿ ಸರಕಾರದಿಂದ ದೊರೆಯುತ್ತದೆ. ಪೂಜಾರಿಯು ನಿತ್ಯದಲ್ಲಿ ಪೂಜೆ ಮಾಡಿ ಗುಡಿಯಲ್ಲಿ ನಂದಾದೀಪವಿಡುತ್ತಾನೆ. ಮಕರಸಂಕ್ರಾಂತಿಯ ಮರುದಿವಸ ಈ ದೇವರ ಜಾತ್ರೆಯಾಗುತ್ತದೆ. ಸುಮಾರು ಎರಡು ಸಾವಿರ ಜನರು ಕೂಡುತ್ತಾರೆ. ಆದರೆ ವ್ಯಾಪಾರವು ಬಹಳ ಆಗುವದಿಲ್ಲ. ಗಂಗೀಬಾವಿಯಿಂದ ಬಂದು ಸಣ್ಣ ಸರು ಹೊರಟು ಹನ್ನೆರಡು ತಿಂಗಳೂ ಪರಿಯುತ್ತದೆ. ಒಟ್ಟಿಗೆ ಇದು ರಮಣೀಯ ಸ್ಥಳವಿದೆ. ಈ ಬಾವಿಯ ನೆರೆಯಲ್ಲಿಯೇ ಬಂದು ಗವಿಯುಂಟು. ಇಲ್ಲಿ ಜಮ್ನು ಮುನಿಯು ತಪಸ್ಸು ಮಾಡುತ್ತಿದ್ದನಂತೆ.

ಹುಲಗೂರು—ಶಿಗ್ಗಾವಿಯ ಈಶಾನ್ಯಕ್ಕೆ ೪ ಮೈಲಿನ ಮೇಲೆ ಆದೆ. ಜ. ಸ. (೧೯೧೧) ೮೯೩, ಈ ಊರ ಬಳಿ ಪಜರತ ಶಹಾಕಾದರಿ ಎಂಬ ಫಕೀರನ ಗೋರಿಯುಂಟು. ಈ ಪೀರನ ಜಾತೆ ಯು ಮಾಘ ಪೌರ್ಣಿಮೆಯಲ್ಲಿ ಆಗುತ್ತದೆ. ಸುಮಾರು ೫೦೦ ಸಾವಿರ ಜನ ಕೂಡುತ್ತದೆ. ಮೊದಲು ಸವಣೂರಿನ ನಬಾಬನು ಈ ಜಾತ್ರೆಗೆ ಹೋಗುತ್ತಿದ್ದಾಗ ಬಹಳ ಜನ ಕೂಡುತ್ತಿತ್ತು. ಈ ಪೀರನಿಗೆ ೫೦೦ ರೂಪಾಯಿಯ ಭೂಮಿಯು ನಡಿಯುತ್ತಿದ್ದದ್ದಲ್ಲದೆ ೧೫೦ ರೂಪಾಯಿ ನಗದು ದೊರೆಯುತ್ತದೆ. ಹುಲಗೂರಲ್ಲಿ ಶಿವ್ದಲಿಂಗನ ಗುಡಿಯಲ್ಲಿ ೪ ಲಿಪಿಗಳಿರುತ್ತವೆ. ಅವನ್ನು ಇನ್ನೂ ಯಾರೂ ಓದಿಲ್ಲ.

ಕಳಸ—ಶಿಗ್ಗಾವಿಯ ಈಶಾನ್ಯಕ್ಕೆ ೧೫ ಮೈಲಿನ ಮೇಲೆ ಉಂಟು. ಜ. ಸ. (೧೯೧) ೭೧೭೫. ಶನಿವಾರ ಸಂತೆಯೂ

ಗುತ್ತದೆ. ನಾರಾಯಣ ದೇವರ ಗುಡಿಯಲ್ಲಿಯೂ ಜೇರಿ ಕಡೆಯಲ್ಲಿಯೂ ೫ ಲಿಪಿಗಳಿರುತ್ತವೆ. ಇವುಗಳಲ್ಲಿ ಬಂದು ೯೫೦ ನೇ ವರ್ಷದ್ದು ಇರುತ್ತದೆ.

ಕಾರಡಗಿ—ಬಂಕಾಪುರದ ಈಶಾನ್ಯಕ್ಕೆ ೮ ಮೈಲಿನ ಮೇಲೆ ದೊಡ್ಡ ಹಳ್ಳಿಯು ಪೂರ್ವದಲ್ಲಿ ಪರಗಣೆಯ ಮುಖ್ಯ ಗ್ರಾಮವಿತ್ತು.

ಶಿಗ್ಗಾಂವಿ—ಧಾರವಾಡದ ಆಗ್ನೇಯಕ್ಕೆ ೪೦ ಮೈಲಿನ ಮೇಲೆ ಅದೆ. ಜನಸಂಖ್ಯೆ (೮೧) ೪೧೯೪. ಇಲ್ಲಿ ಬಂಕಾಪುರದ ತಾಲೂಕ ಕಚೇರಿ ಇರುತ್ತದೆ. ಊರ ಸುತ್ತಮುತ್ತ ತೋಟಗಳಿವೆ; ವ್ಯಾಪಾರವು ಬಳಿತಾಗಿ ಆಗುತ್ತದೆ. ಇಲ್ಲಿ ೭ ಬುನಾದಿಯ ಗುಡಿಗಳೂ ೧೦ ಲಿಪಿಗಳೂ ಇರುತ್ತವೆ. ಅವುಗಳಲ್ಲಿ ಕೆಲವುಗಳನ್ನು ಇನ್ನೂ ಯಾರೂ ಓದಿಲ್ಲ.

THE MORAL TRAINING OF CHILDREN

ಬಾಲ್ಯಕ್ಕೆ ನೀತಿ ಶಿಕ್ಷಣ.

(ಎರಡನೇ ಪುಟದಿಂದ ಮುಂದೆ ಸಾಗಿದ್ದು.)

"ಜೀವ ಹೋದರೂ ಸುಳ್ಳಾಡಬಾರದು" ಎಂಬ ಗೌರವದ ಅಭಿಪ್ರಾಯವನ್ನು ಅವರಲ್ಲಿ ನೆಲಗೊಳಿಸಬೇಕು. ಕಳ್ಳನು ಬಹಳ ತಪ್ಪಿಸಿಕೊಳ್ಳಲು ಹುದು, ಎಷ್ಟು ಸಾರಿ ತಪ್ಪಿಸಿಕೊಳ್ಳಬಹುದು; ಆದರೆ ಕಡೆಯಲ್ಲಿ ಸಿಕ್ಕಿ ಶಿಕ್ಷೆಗೆ ಪಾತ್ರನಾಗುವನು ಬಾರಿ ಸಾರಿ ಕಳ್ಳನೆಂದು ತಿಳಿದಮೇಲೆ ಅವನನ್ನು ಯಾರೂ ನಂಬುವದಿಲ್ಲ. ಅವನನ್ನು ಪತ್ತರ ಸಹ ಬರಗೊಡುವದಿಲ್ಲ ಅವನು ಎಲ್ಲರಿಂದಲೂ ಛೀ ಹಾಕಿಸಿಕೊಳ್ಳುವನು ಅವನಿಗೆ ನಿಜವಾದ ಸೌಖ್ಯವೂ ಮನಸಿನ ಸ್ವಸ್ಥತೆಯೂ ದೊರಕುವದಿಲ್ಲ ಯಾಕಂದರೆ ತನ್ನ ಮೋಸದ ಕೃತ್ಯಗಳು ಎಲ್ಲಿ ಹೊರಬೀಳುವವೋ ಎಂಬ ಭಯವೇ ಯಾವಾಗಲೂ ಅವನ ಮನಸಿನಲ್ಲಿ ಕಟಿಯುತ್ತಿರುತ್ತದೆ.

ಅವನು ಬಬ್ಬ ಪೋಲೀಸ ಸಿವಾಯಿಯನ್ನು ಕಂಡಕೂಡಲೆ, ಅವನ ಎಜಮೊಡೆದು ತನ್ನನ್ನು ಶೆರೆ ಮನೆಗೆ ಎಲ್ಲಿ ಕರ ಕೊಂಡು ಹೋಗುವನೋ ಎಂದು ಅಂಜಿಕೊಳ್ಳುವನು.

"ದೇವರೇ, ನೀನು ನನ್ನನ್ನು ಯಾವಾಗಲೂ ನೋಡು ತ್ತೀ" "ನಿನಗೆ ಸರಿ ಬಾರದ ಕೆಲಸವನ್ನು ನಾನೆಂದೂ ಮಾಡ ಲಿಕ್ಕಿಲ್ಲ." ಎಂಬೀ ಮಹತ್ವದ ವಾಕ್ಯಗಳನ್ನು ಸಣ್ಣವರೂ ದೊಡ್ಡವರೂ ಯಾವಾಗಲು ನೆನಪಿನಲ್ಲಿಡಬೇಕು.

ತಾಯಿ ತಂದೆಗಳು ತಮ್ಮ ಮಕ್ಕಳಲ್ಲಿ ಪ್ರಾಮಾಣಿಕತನವು ಚಿಕ್ಕಂದಿನಲ್ಲಿಯೇ ಸೇರುವಂತೆ ಬಹಳ ಎಚ್ಚರದಿಂದ ಅವರನ್ನು ತಿದ್ದಬೇಕು. ಪ್ರಾಮಾಣಿಕತನದಷ್ಟು ಗೌರವ ವುಳ್ಳದ್ದು ಮತ್ತೊಂದಿಲ್ಲ. ತಾಯಿ ತಂದೆಗಳ ಮತ್ತು ಮಕ್ಕಳ ಸುಖ ಸಂತೋಷಗಳು ಈ ಗುಣವನ್ನು ವಿಶೇಷವಾಗಿ ಅವಲಂಬಿಸಿರುತ್ತವೆ. ಬಬ್ಬ ಕಳ್ಳನು ತನ್ನ ಅಪರಾಧಕ್ಕಾಗಿ ಮರಣದ ಶಿಕ್ಷೆ ಹೊಂದುವ ಕಾಲಕ್ಕೆ ತನ್ನ ತಾಯಿಯ ಕಿವಿಯಲ್ಲಿ ಕೆಲವು ಗುಟ್ಟಿನ ಮಾತುಗಳನ್ನು ಹೇಳ ತಕ್ಕವನಿದ್ದೇನೆ, ಕಾರಣ ನನಗೆ ವಯವಾಡಿ ಅಪ್ಪಣೆಯ ಕೊಡಬೇಕೆಂದು ನ್ಯಾಯಾಧೀಶನಿಗೆ ಬೇಡಿಕೊಂಡನು. ಈ ಅಪ್ಪಣೆಯು ಸಿಕ್ಕಮೇಲೆ ಅವನು ತಾಯಿಯ ಕಿವಿಯ ಸಮೀಪಕ್ಕೆ ತನ್ನ ಬಾಯಿಯನ್ನು ಸೈದು ಅವಳ ಕಿವಿಯನ್ನೇ ಪಲ್ಲಿನಿಂದ ಕಡಿದು ಬಿಟ್ಟನು. ಇದನ್ನು ನೋಡಿ ನ್ಯಾಯಾಧೀಶನು ಹೀಗೆ ಯಾಕೆ ಮಾಡಿದಿ ಎಂದು ಅವನನ್ನು ಕೇಳಲು, ಅವನು ಪ್ರತ್ಯುತ್ತರವಾಗಿ ಹೇಳಿದ್ದೇನೆಂದರೆ:—ನ್ಯಾಯಾಧೀಶರೇ ಚಿಕ್ಕ ತನದಲ್ಲಿ ಸಣ್ಣ ಸಣ್ಣ ಪದಾರ್ಥಗಳನ್ನು ಕದ್ದು ತಂದು ಇವಳ ಕೈಯಲ್ಲಿ ಕೊಟ್ಟಾಗ್ಗೆ ಇವಳು ಬಳಿತಾಗಿ ನನ್ನ ಕಿವಿ ಹಿಂಡಿ ಚನ್ನಾಗಿ ಬುದ್ಧಿಗಲಿಸಿದ್ದರೆ ಈ ಗಲ್ಲು ಕಂಭದ ಮೇಲೆ ಪ್ರಾಣ ಕೊಡುವ ಹೊತ್ತು ನನಗೆ ಎಂದೂ ಬರುತ್ತಿದ್ದಿಲ್ಲ.

ಸಂಸ್ಕೃತನದ ನಡತೆ.

ಅಭದ್ರ ಭಾಷಣವು ನಮ್ಮ ದೇಶವಲ್ಲಿ ಸಾಧಾರಣವಾಗಿರುತ್ತದೆ. ಅಶಕ್ಯವಾದ ಅನಾಚ್ಯ ಶಬ್ದಗಳು ಮೇಲಿಂದ ಮೇಲೆ ಉಚ್ಚರಿಸಲ್ಪಡುತ್ತವೆ, ಮತ್ತು ಅವುಗಳನ್ನು ಕುರಿತು ಜನರು ಸರಿಯಾಗಿ ವಿಚಾರಿಸುವಂತೆ ತೋರುವದಿಲ್ಲ. ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಅಂಥ ಶಬ್ದಗಳನ್ನು ತಮ್ಮ ಮುಂದೇ ಆಡಗೊಡುತ್ತಾರೆ. ಎಷ್ಟೋ ಶಾಲಾಧ್ಯಾಪಕರು ಈ ತರವ ಶಬ್ದಗಳನ್ನು ತಮ್ಮ ವಿದ್ಯಾರ್ಥಿಗಳು ಆಡದಂತೆ ಕಟ್ಟು ಮಾಡುವದಿಲ್ಲ. ಇದಂತೂ ಇರಲಿ, ಎಷ್ಟೋ ತಿಳಿಗೇಡಿಗಳಾದ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಮಾತಾಡಲಿಕ್ಕೆ ಚನ್ನಾಗಿ ಬರುವ ಪೂರ್ವದಲ್ಲಿಯೇ ಇಂಥ ಶಬ್ದಗಳನ್ನು ಕಲಿಸುತ್ತಾರೆ; ಮತ್ತು ಅವರಿಂದ ಆ ಶಬ್ದಗಳನ್ನು ಆ ಬಾಲಕರ ತಾಯಂದಿರಿಗೆ ಆಡಿಸಿ ತಾವು ಮುಗುಳು ನಗೆಯಿಂದ ನಗುತ್ತಾರೆ. ಇದರಿಂದ ಅವರಿಗೆ ಉತ್ತೇಜನವಾಗುತ್ತದೆ. ಈ ತರದ ನಡತೆಯು ತೀರ ಅಸಮಾಧಾನಕರವಾದದ್ದು.

ಕೆಟ್ಟ ಚೇಷ್ಟೆಗಳನ್ನೂ ನಗೆ ಮಾತಿನ ಮೇಲೆ ಹಾಕುವದುಂಟು. ಭಂಡು ಪದಗಳನ್ನು ಹಾಡುವದೂ ಮತ್ತು ಕೆಟ್ಟ ಪುಸ್ತಕಗಳನ್ನು ಓದುವದೂ ವಿಶೇಷವಾಗಿರುತ್ತದೆ.

ಎಷ್ಟೋ ಜನ ಸ್ತ್ರೀಯರು ತಾವು ಬಹಳ ಮರ್ಯಾದೆಯುಳ್ಳವರೆಂದು ತೋರಿಸುತ್ತಾರೆ. ಅವರು ತಮ್ಮ ಮೋರೆಯನ್ನು ಜನರಲ್ಲಿ ತೋರಿಸಲಿಕ್ಕೆ ನಾಚಿಕೊಂಡಾಗ್ಯೂ ಭಂಡು ಮಾತುಗಳಿಂದ ಬೈದಾಡಲಿಕ್ಕೆ ಹೇಸುವದಿಲ್ಲ. ಇಂಥವರಲ್ಲಿ ಸುಳ್ಳು ವಿನಯವಲ್ಲದೆ ಖರೇ ವಿನಯವಿರುವದಿಲ್ಲ.

ಈ ಸಂಬಂಧದಿಂದ ಅನುಸರಿಸತಕ್ಕ ಸೂಚನೆಗಳು ಯಾವವೆಂದರೆ;—

೧. ತಂದ ತಾಯಿಗಳು ಅವಾಚ್ಯ ಶಬ್ದಗಳನ್ನು ಎಂದೂ ನುಡಿಯಬಾರದು. ಅವಾಚ್ಯಶಬ್ದಗಳನ್ನು ಆಡ್ಯಾಡಿ ಅವು ಕೆಲವರ ಬಾಯಿಯಲ್ಲಿ ಕೂತು ಹೋಗಿರುತ್ತವೆ. ಅವರಿಗೆ ಈ ಸೂಚನೆಯಂತೆ ನಡಿಯುವದು ದುಸ್ಸಾಧ್ಯವಾಗಿ ತೋರುವದು. ಆವರೆ ಆಗ್ರಹಪೂರ್ವಕವಾಗಿ ಅವರು ಯತ್ನಿಸಿದರೆ ಈ ಸೂಚನೆಯಂತೆ ನಡಿಯುವದು ಸ್ವಲ್ಪ ದಿವಸದಲ್ಲಿ ಸಾಧ್ಯವಾಗಬಹುದು.

೨. ಹುಡುಗರು ಅವಾಚ್ಯಶಬ್ದಗಳನ್ನು ಎಂದೂ ನುಡಿಯಕೂಡದೆಂದು ಖಂಡಿತವಾಗಿ ನಿರ್ಬಂಧವನ್ನು ಮಾಡಬೇಕು. ಹುಡುಗರು ಇಂಥ ನುಡಿಗಳನ್ನು ಆಡಿದಾಗ್ಗೆ ಅವುಗಳ ಬಗ್ಗೆ ದುರ್ಲಕ್ಷ ಮಾಡದೆ ಅಥವಾ ಮುಗುಳು ನಗೆ ನಗದೆ ಅವರಿಗೆ ಬಳಿತಾಗಿ ಛೀ ಹಾಕಬೇಕು. ಬವ್ಮೆ ಬಬ್ಬ ಹುಡುಗನು ಅಭವ್ಯ ಮಾತನ್ನು ಆಡಿದನು. ಆಗ ಅವನ ಜಾಣಳಾವ ತಾಯಿಯು ಅವನಿಗೆ ಅಂದದ್ದು,—"ಎಂಥ ಹೊಲಸು ಬಾಯಿ, ಇಂಥ ಶಬ್ದಗಳು ಶುಚಿಯಾದ ಬಾಯಿಯಿಂದ ಬರಲಾರವು! ಬಾ ನಿನ್ನ ಹೊಲಸು ಬಾಯಿಯನ್ನು ತೊಳಿಯುವೆ." ಆ ಪ್ರಕಾರ ಅವಳು ಅವನ ಬಾಯಿಯನ್ನು ಸಿಗೇಕಾಯಿ ಹಚ್ಚಿ ಸ್ವಚ್ಛವಾಗಿ ತೊಳಿದು ಬರಿಸಿ, ನೀನು ಪುನಃ ನಿನ್ನ ಬಾಯಿಯನ್ನು ಹೊಲಸು ಮಾಡಿಕೊಳ್ಳಬೇಡೆಂದು ಆಗ್ರಹಪೂರ್ವಕವಾಗಿ ಹೇಳಿದಳು.

DEPARTMENTAL NOTICES.

ನೋಟೀಸು.

ಸರ್ಕಾರಿನೇ ಇಸವಿಯಲ್ಲಿ ಆಗತಕ್ಕ ಧಾರವಾಡ ಟ್ರೇನಿಂಗ ಕಾಲೇಜಿನ ಮತ್ತು ಎನೇ ವರ್ಷಗಳ ಸರ್ಟಿಫಿಕೇಟ ಪರೀಕ್ಷೆಗಳಿಗಾಗಿ ಕೆಳಗೆ ಕಾಣಿಸಿದ ಕನ್ನಡು ಮತ್ತು

ಸಂಸ್ಕೃತ ವಿಷಯಗಳು ನೇಮಿಸಲ್ಪಟ್ಟಿರುತ್ತವೆ. ಹೊರಗಿನಿಂದ ಪರೀಕ್ಷೆಗೆ ಬರುವವರು ಸಹ ಇವುಗಳನ್ನೇ ಓದಿಕೊಂಡು ಬರಬೇಕು.

೩ನೇ ವರ್ಷ.

ಕನ್ನಡ—(ಅ) ರಾಜಶೇಖರ ೬ನೇ ಆಶ್ವಾಸದ ಆರಂಭದಿಂದ ೧೫೦ ಶ್ಲೋಕಗಳು.

(ಬ) ಜೈಮಿನಿ ೮ನೇ ಸಂಧಿಯ ಆರಂಭದಿಂದ ೧೫೦ ಶ್ಲೋಕಗಳು.

(ಕ) ತೊರವಿ ರಾಮಾಯಣ ಬಾಲಕಾಂಡ ೧೪ನೇ ಸಂಧಿಯಿಂದ ೧೫೦ ಶ್ಲೋಕಗಳು.

(ಡ) ಮುದ್ರಾಮಂಜೂಷ.

(ಇ) ಕನ್ನಡ ವ್ಯಾಕರಣ ಪೂರಾ, ಶಬ್ದಮಣಿದರ್ಪಣ—೨ನೇ ವರ್ಷದ ಅಭ್ಯಾಸವಲ್ಲದೆ ನಾಮಪ್ರಕರಣ ಮತ್ತು ೪೮, ೬೬, ೬೮, ೧೬೪, ೧೬೫, ೧೬೮, ೨೧೬, ೨೫೪, ೨೮೯, ೨೮೯, ೨೬೦ ಮುಂತಾದ ೧೦ ಸೂತ್ರಗಳು.

(ಈ) ನಿಬಂಧ, ಶಬ್ದವ್ಯುತ್ಪತ್ತಿ, ಛಂದಸ್ಸಾರ.

ಸಂಸ್ಕೃತ—(ಅ) ೨ನೇ ಪುಸ್ತಕ ಕಾಯದೇಯಲ್ಲಿ ಹೇಳಿದಪ್ಪು.

(ಬ) ಉತ್ತರರಾಮಚರಿತ್ರ ಮೊದಲಿನ ನಾಲ್ಕು ಅಂಕಗಳು.

೪ನೇ ವರ್ಷ.

ಕನ್ನಡ—(ಅ) ಕನ್ನಡ ೬ನೇ ಪುಸ್ತಕ.

(ಬ) ಜಯಮಿನಿಯ ೧೫, ೧೬, ೧೭ ಸಂಧಿಗಳು.

(ಕ) ಕನ್ನಡ ವ್ಯಾಕರಣ ಪೂರಾ. ಶಬ್ದಮಣಿದರ್ಪಣ-ಆಖ್ಯಾತ ಪ್ರಕರಣ, ಮತ್ತು ೩, ೪,

೬, ೭, ೮, ೯, ೧೧, ೧೩, ೧೪, ೧೫, ೧೬, ೨೦, ೨೧, ೪೦, ೪೫, ೪೯, ೫೦, ೫೭, ೬೦, ೬೧, ೬೫, ೬೯, ೭೬, ೭೮, ೮೦, ೮೭, ೮೪, ೯೩, ೯೪, ೧೦೬, ೧೦೬, ೧೬೪, ೧೬೫, ೧೬೭, ೧೬೮, ೭೫೩, ೭೫೪, ೭೫೫ ಮುಂತಾದ ೪೦ ಸೂತ್ರಗಳು, ಶಬ್ದವ್ಯುತ್ಪತ್ತಿ, ಛಂದಸ್ಸಾರ.

(ಡ) ನಿಬಂಧ, ಕಿತ್ತೆ ಹಾಕುವದು.

ಸಂಸ್ಕೃತ—(ಅ) ಎನೇ ಪುಸ್ತಕ ಕಾಯಿದೆಯಲ್ಲಿ ಹೇಳಿದಷ್ಟು.

(ಬ) ಹಿತೋಪದೇಶ—ಸಂಧಿ ಮಿತ್ರಲಾಭ.

ಧಾರವಾಡ ಟ್ರೇ. ಕಾಲೇಜ,
ತಾ॥ ೧೫ನೇ ಜಾನೆವಾರಿ ೧೮೯೫. } Raoji B. Karandikar,
ಪ್ರಿನ್ಸಿಪಾಲ.

CORRESPONDANCE.

ಪತ್ರವ್ಯವಹಾರ.

ರಾವಸಾಹೇಬ ಶಾಲಾಪತ್ರಕದ ಎಡಿಟರವರ ಸನ್ನಿಧಿಗೆ—

ವಿ. ವಿ. ಶಾಲೆಗಳಲ್ಲಿ ಬಾಲಕರ ಇಯತ್ತೆಗೆ ಕಲಿಸತಕ್ಕ ಕೆಲವು ಪದಗಳನ್ನು ಇವರಡಿ ಬರೆದು ಕಳುಹಿಸಿರುತ್ತೇನೆ. ಅವುಗಳನ್ನು ತಮ್ಮ ಅಂದವಾದ ಪತ್ರಿಕೆಯಲ್ಲಿ ಮುದ್ರಿಸುವದಾಗಬೇಕೆಂದು ಬೇಡಿಕೊಳ್ಳುತ್ತೇನೆ.

॥ ಪದ ॥ ಲಂಬೋದರ ಗಿರಿಜಾನಂದನಾ ॥ ಇವರಂತೆ,
ಪುಂಡಲಿಕ ಬಾಬಾ ಬೇಗಬಾ ॥
ಬೆಂಡನು ಕೊಡುವೆನು ತಿನ್ನುಬಾ ॥ ಪಲ್ಲ ॥
ಬಾರದೆ ಇದ್ದರೆ ರಾಮುಗೆ ಕೊಡುವೆನು ।
ತೀರುವ ದೆಲ್ಲವು ಬಾಬಾ ॥ ೧ ॥
ಮುಕ್ಕಳು ಹಟಹಿಡಿ ಬಾರದು ನಿನಗೆ ।
ಸಕ್ಕರೆ ಕೊಡುವೆನು ಬಾಬಾ ॥ ೨ ॥

ಕೇಳದೆ ಮಾತನು ಇದ್ದರೆ ಗುರುಗಳಿ ।
ಗ್ಹೇಳಬರುವೆ ನೋಡುಬಾಬಾ ॥ ೩ ॥

॥ ಪದ॥ ಸಣ್ಣ ಬಾಲ ನೀ ಬಾರೋ ।
ಹಣ್ಣು ಕೊಡುವೆ ನಿನಗಿನ್ನು ಕೈತೋರೋ ॥ಪ॥
ಬೆಂಡುಬತ್ತಾಸಾ ಕೊಂಡು ನಾ ಕೊಡುವೆ ॥
ಚಂಡು ಬೊಗರಿ ಗೋಲಿ ಗುಂಡು ನಾ ಕೊಡುವೆ॥
ಚಿಣಿಕೋಲು ಫಣಿಯನ್ನಿಕ್ಷಣ ತಂದುಕೊಡುವೆ॥
ಮನಸಿಗೊಪ್ಪುವಾ ಚಿಂತಾಮಣಿ ತಂದುಕೊಡುವೆ॥
ನಡಿಯೋ ನಿನಗೆ ದೊಡ್ಡ ಗುಡಿಯ ತೋರಿಸುವೆ॥
ಪೊಡವಿಯ ಒಡಿಯನ ಮೇಲಡಿಯ ತೋರಿಸುವೆ॥

। ಕಂದ॥ ಪರಮೇಶ್ವರ ನತಿ ಕೃಪೆಯಿಂ ।
ನಿರುತಂ ಪೊರೆಯಲಿ ರಾಣಿ ವಿಕ್ಟೋರಿಯರಂ ॥
ಚಿರಕಾಲವಿರಲಿ ರಾಜ್ಯಂ ।
ಧರೆಯೋಳ್ ಕಬ್ಬಿಗರು ಪೊಗಳಿ ಪಾಡುವ ತೆರ
ದೋಳ್ ॥ ೧ ॥

॥ದ್ವಿಪದಿ॥ ಶಿವನೆ ದೇವರು ಎಂದು ಭಜಿಸುವರು ಕೆಲರು ।
ಶಿವ ಬಿಡು ವಿಷ್ಣುವೇ ಗತಿಯೆನುತ ಕೆಲರು ॥
ಅಗ್ನಿ ವಾಯುವ ಕೆಲರು ಬೌದ್ಧಮತ ಕೆಲರು ।
ವಿಘ್ನೇಶ ಮೈಲಾರ ಭೈರವನು ಕೆಲರು॥
ಬಿಡು ನಿಮ್ಮದೈವ ನಮ್ಮೊಡೆಯ ನಧಿಕೆಂದು ।
ಹೊಡದಾಡಿ ಕಾವಿಪರು ಕಡಿವೆ ಹೆಜ್ಜಿಂದು ॥
ಸರ್ವರೊಳಗೊಬ್ಬ ಪರಮಾತ್ಮನಿಹ ನೆಂದು ।
ಗರ್ವವನು ತ್ಯಜಿಸಿ ಲನಂದದೊಳಗಿಹರು ॥
ಒಳ್ಳೇ ನಡತೆಯ ಬಗ್ಗೆ ಉಪದೇಶದ ಮಾತುಗಳು.
ಸೂಲಿಯಲ್ಲಿ ಬಂದು ಬೇಗ ಪಾಠ ಕಲಿಯಿರೀ ॥
ಕಲಿತ ಪಾಠ ಎಂದೆಂದು ಮರಿಯ ಬೇಡರೀ ॥

ಸತ್ಸಂಗತಿಯನ್ನು ಹಿಡಿದು ಸುಗುಣ ಬೆಳಿಸಿರೀ ॥
ಮಾತಾ ಪಿತಾ ಗುರುಗಳಾಜ್ಞೆ ಮೀರಬೇಡರೀ ॥
ಕೆಟ್ಟ ಜನರ ಸ್ನೇಹವನ್ನು ಬಯಸಬೇಡರಿ ॥
ಕೊಟ್ಟ ಮಾತಿಗೆಂದೆಂದು ತಪ್ಪ ಬೇಡರಿ ॥

ಶ್ಲೋಕ ॥ ಜಾಣ ಹುಡುಗರೇ ಸಾಲಿಗೋಗದೆರೆ ।
ಬುದ್ಧಿವಂತರಾ ದಿರೆನ್ನ ಪ್ರೀಯರೇ ॥
ಮಾನಸಿಗುವದು ಮುಂದೆ ನಿಮಗೆ ।
ಪ್ರಾಥಪ್ಯಾಯದೋಳೆನ್ನ ಮಿತ್ರರೆ ॥ ೧ ॥

॥ ಕಸರತ್ತು ॥

ಅಂಗದ ಬಲುವಿಯ ಹೆಚ್ಚಿಸಬೇಕು ॥
ರಂಗಿನ ಕಸರತು ಆಡಲುಬೇಕು ॥ ಪಲ್ಲ ॥
ಕರವ ನೊಬ್ಬೊಬ್ಬರು ಹಿಡಿಯಲು ಬೇಕು ।
ಗರಗರನೆಲ್ಲರು ತಿರುಗಲು ಬೇಕು ॥
ಚರಣವ ನೊಂದೊಂದಿರಿಸಲು ಬೇಕು ।
ಹರಹರ ಪಕ್ಷಿಯ ಪಾರಿಸಬೇಕು ॥ ೧ ॥
ಚಟಪಟಿಕನೆ ಕೂಡ್ರೇಳಲು ಬೇಕು ॥
ನಟನೆಯೊಳ್ ತಿರುಗಿ ರಂಗೆಬ್ಬಿಸ ಬೇಕು ॥
ವಟುಗಳ ಕವಾಯತ್ತಾಡಲು ಬೇಕು ।
ಕಟುಗೆ ಬಂದುಕವನು ಹಿಡಿಯಲು ಬೇಕು ॥ ೨ ॥
ಬಲ ಬಾಜುಕೆ ನಾವ ಸರಿಯಲು ಬೇಕು ।
ನಿಲದೊಬ್ಬರ ಹಿಂದೋಡಲು ಬೇಕು ॥
ನೆಲದೊಳು ಮೊಣಕಾಲೂರಲು ಬೇಕು ।
ನಲಿಯುತ ನಾವ್ಕೈ ಮುಗಿಯಲು ಬೇಕು ॥ ೩ ॥
ತಪ್ಪಿವರೆ ಕಿವಿ ಹಿಡಿಯಲು ಬೇಕು ।

ತಪ್ಪದೆ ದೇವರಿ ಗೊಂದಿಸಬೇಕು ॥
ಅಪ್ಪಗಳಿದರ ನಾವರಿಯಲು ಬೇಕು ।
ಥಪ್ಪನೆ ದೇವರ ನೆನೆಯಲು ಬೇಕು. ॥ ೪ ॥

ಕಳಿಯು ಬೇಡರಿ ವ್ಯರ್ಥ ಕಾಲವಾ ।
ಕಳೆದ ಕಾಲವೂ ಬಾರದೆಂದಿಗೂ ॥
ತಿಳಿದು ನೀವಿದುದ್ಯೋಗ ಮಾಡಿರಿ ।
ಫಳಿಸಿ ದ್ರವ್ಯವಾ ಸಾಕ್ಷ್ಯಿ ಹೊಂದಿರಿ ॥
ಯಾದವ ನೀ ಬಾ, ಯದುಕುಲ ನಂದನ ।
ಮಾಧವ ಮುವಸೂದನ ಬಾರೋ ॥ ಪಲ್ಲ ॥
ಸೋದರ ಮಾವನ ಮಥುರೆಲಿ ಮಡಿಯಿಪ ।
ಯಶೋದೆ ನಂದನಾ ನೀ ಬಾರೋ ॥ ಅನುಪಲ್ಲ ॥
ಕಣಕಾಲೊಂದುಗೆ ಘಣಘಣಯೆನುತಲಿ ;
ರುಣರುಣ ವೀಣಾ ನಾದಗಳೂ ॥
ಜಿಣಿಕೊಲು ಚಂಡುಬೊಗರಿಯನಾಡುತ ।
ಸಣ್ಣ ಸಣ್ಣ ಗೋವಳರೊಡಗೂಡಿ ॥ ೧ ॥
ಶಂಖ ಚಕ್ರವು ತೋಳಲಿ ಹೊಳೆಯುತ ।
ಬಿಂಕದ ಗೋವಳಾ ನೀ ಬಾರೋ ॥
ಅಕಳಂಕ ಮೂರುತಿ ಆದಿನಾರಾಯಣ ।
ಬೇಕೆಂದು ಭಕ್ತರಿಗೊಲಿದು ಬಾರೋ ॥ ೨ ॥
ಖಗವಾಹನನೇ ಬಗಬಗೆಯಿಂದಲಿ ।
ನಗೆಮುಖದರಸೇ ನೀ ಬಾರೋ ॥
ಜಗದೊಳು ನಿನ್ನಯ ಮಹಿಮೆಯುಹೊಗಳುವೆ ।
ಪುರಂದರ ವಿಠಲಾ ನೀ ಬಾರೋ ॥ ೩ ॥

ಎಡಿಟರ ಮಹಾರಾಜರೇ ಪತ್ರವಿಸ್ತಾರಕ್ಕೆ ಕ್ಷಮೆ ಇರಲಿ ಇಂತಿ ವಿನಂತಿ.

ತಮ್ಮ ಆಜ್ಞಾಧಾರಕ,
ಕ್ಷ.

ಬೆಳಗಾವ ಜಿಲ್ಲಾ ಖಾನಾಪೂರ ತಾಲೂಕ ಹಲಸಿ ಮಾಸ್ತರರು ಕಳುಹಿಸಿದ ಪತ್ರವನ್ನು ಇದರಡಿ ಕೊಟ್ಟಿರುತ್ತೇವೆ. ಅದರಲ್ಲಿ ಬರೆದಂತೆ ಊರಿನ ಎಲ್ಲ ಕಡಿಯ ಮೆಂಬರರೂ ಸಾವುಕಾರರೂ ಸಾಲೆಗಳನ್ನು ನೋಡಿ ಮಾಸ್ತರ ಜನರಿಗೆ ಉಮೇದ ಬರುವಂತೆ ಮಾಡಿದರೆ ಹಳ್ಳೂರಲ್ಲಿರುವ ಮಾಸ್ತರ ಜನರ ಕೆಲಸವು ಹೆಚ್ಚು ಭರವಸೆಯಿಂದ ನಡೆಯುವಹಾಂಗೆ ಆಗದೇ ಹೋಗುವದಿಲ್ಲ.

ರಾವಸಾಹೇಬ ಕನ್ನಡ ತಾಲಾಪತ್ರಕದ ಎಡಿಟರ ದೊರೆಗಳ ಚರಣ ಸನ್ನಿಧಿಗೆ—

ವಿ. ವಿ. ಕೆಳಗಿನ ನಾಲ್ಕು ಸಾಲುಗಳಿಗೆ ಈ ತಿಂಗಳ ನಂಬಿಕೆಯಲ್ಲಿ ಸ್ಥಳ ಕೊಡಬೇಕಾಗಿ ಬೇಡಿಕೊಳ್ಳುತ್ತೇನೆ.

ಇವತ್ತಿನ ಬಾಪತ ಬೀನಿಯ ಪ್ರಸಿದ್ಧ ಸಾವುಕಾರರೂ, ಲೋಕಲ್‌ಬೋರ್ಡ ಮೆಂಬರರೂ ಆದ ರಾ. ರಾ. ವಿರು ಪಾಷ್ಟಪ್ಪ ಕರವೀರಪ್ಪ ಜವಳಿ ಇವರು ನಮ್ಮ ಸಾಲೆಗೆ ಬಂದು ಹುಡುಗರ ಅಭ್ಯಾಸವನ್ನೂ ವ್ಯವಸ್ಥೆಯನ್ನೂ ಕಂಡು, ಸಂತುಷ್ಟರಾಗಿ ಕೆಲವು ಇನಾಮು ಕೊಟ್ಟು ವಿಜಿಟಿಸರ್ ಬುಕ್ಕಿಗೆ ಶರಾ ಬರೆದು ಹೋದರು. ಇವರು ಈ ರೀತಿ ವಿದ್ಯೆಯಿಂದ ಕೆಲಸಕ್ಕೆ ಉತ್ತೇಜನ ಕೊಡುತ್ತಿರುವದನ್ನು ಕಂಡು ನಾನು ಅವರ ಆಭಾರಿಯಾಗಿದ್ದೇನೆ.

ಸರಕಾರಿ ಕನ್ನಡ ಸಾಲೆ ಹಲಸಿ,
ತಾ॥ ೭೭-೧೧-೧೯೧೪.

ತಮ್ಮ ವಿಧೇಯ,
ದ. ಕೃ. ಸಾಂಭಾರೆ.

ಚಿಕ್ಕೊಪ್ಪೀಡಿ ತಾಲೂಕ ಇನಾಮುಗ್ರಾಮ ಅಂಕಲಿಯ ಇನಾಮುದಾರರ ಮಕ್ಕಳಾದ ಶ್ರೀ॥ ರಾ॥ ಬಾಬಾಸಾಹೇಬ ಶಿತೋಳೆ ಮತ್ತು ಶ್ರೀ॥ ಜಯಶಿಂಗರಾವ ಕಾಪಶಿಕರ ಇವರೀರ್ವರು ತರುಣರು. ಇಲ್ಲಿಯ ಶಾಲೆಗೆ ಬಂದು ವಿದ್ಯಾರ್ಥಿಗಳನ್ನು ಪರೀಕ್ಷಿಸಿ, ಹುಡುಗರಿಗೆ ಪುಸ್ತಕಗಳನ್ನೂ, ಹುಡಿಗಯೆರಿಗೆ ಖಣಗಳನ್ನೂ ಎಲ್ಲರಿಗೆ ಮಿಠಾಯಿಯನ್ನೂ ಕೊಟ್ಟು ಅವರಿಗೂ ಮಾಸ್ತರರಿಗೂ ಉತ್ತೇಜನ ಕೊಟ್ಟರೆಂತಲೂ ಅವರು ವಿದ್ಯದ ಕೆಲಸಕ್ಕೆ ಬಹಳ ಮನಸ್ಸು ಹಾಕುತ್ತಾರೆಂತಲೂ ಅಲ್ಲಿಯ ಮಾಸ್ತರರು ತಿಳಿಸುತ್ತಾರೆ, ಇದನ್ನು ಕೇಳಿ ನಮಗೆ ಬಹಳ ಸಂತೋಷವಾಗುತ್ತದೆ.

ಲಕ್ಷ್ಮೇಶ್ವರದ ಜನರು ಅಲ್ಲಿಯ ಮಾಜಿ ಶಾಲಾಮಾಸ್ತರರಾದ ಯಶವಂತ ಗಣೇಶ ಜಾಧವ ಇವರಿಗೆ ಮಾನಪತ್ರ ಕಂಠೀ ಮುಂತಾದವುಗಳನ್ನು ಕೊಟ್ಟು ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಇದು ಬಹಳ ಸಂತೋಷದ ಸಂಗತಿಯು. ಈ ಪೇರೆಗೆ ಮಾಸ್ತರಜನರಿಗೆ ಸರಿಯಾಗಿ ಉತ್ತೇಜನ ಶಿಕ್ಕರೆ ಎಲ್ಲರಿಗೂ ಹಿತವೇ ಸರಿ. ಈ ಮಾನಪತ್ರದ ಸಭೆಯ ಸಂಬಂಧದ ಬಂದು ಪತ್ರವು ನಮ್ಮ ಕಡಿಗೆ ಬಂದಿರುತ್ತದೆ. ಆದರೆ ಅದು ಇಲ್ಲಿಯ ವರ್ತಮಾನಪತ್ರಗಳಲ್ಲಿ ಪ್ರಸಿದ್ಧವಾದದ್ದರಿಂದ ಪುನಃ ಛಾಪಿಸುವ ಅವಶ್ಯ ತೋರುವದಿಲ್ಲ.

DHARWAR TRAINING COLLEGE CERTIFICATE EXAMINATION 1894.—

ಕಾಲೇಜಿನ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು.

೧ನೇ ವರ್ಷದ ವರ್ಗ.—ಕನ್ನಡ ಭಾಷಾ.

(ಬಲಕ್ಕೆ ಬರೆದ ಅಂಕಿಗಳು ಪ್ರಶ್ನೆಗಳ ಪೂರ್ಣ ಗುಣಗಳು.)

೧. ಕೆಳಗೆ ಬರೆದ ಸಿದ್ಧಾಂತಗಳನ್ನೂ ಅನುಭವದ ಮಾತುಗಳನ್ನೂ ಶಾಸ್ತ್ರೀಯ ಕಾರಣಗಳಿಂದ ಸಿದ್ಧ ಮಾಡಿ ತೋರಿಸು. ೧೪

(ಅ) ದ್ರವ್ಯವು ಅವಿನಾಶಿಯಾಗಿರುತ್ತದೆ.

(ಬ) ಆಕರ್ಷಣದಿಂದ ಯಾವತ್ತು ಪದಾರ್ಥಗಳ ಪಿಂಡಗಳುಂಟಾಗಿರುತ್ತವೆ.

(ಕ) ಉಣ್ಣೆಯು ನಮ್ಮ ಹೊದ್ದುಕೊಳ್ಳುವದರಿಂದ ಚಳಿಯು ಹತ್ತುವದಿಲ್ಲ.

(ಡ) ಕಟ್ಟಿಗೆಯಂತೆ ನೀರಾದರೂ ಉಷ್ಣತೆಯ ಅವಾಹಕವಿರುತ್ತದೆ. ಕಟ್ಟಿಗೆಯ ಒಂದು ತುದಿಗೆ ಬೆಂಕಿ ಹಚ್ಚಿದರೆ ಎರಡನೇ ತುದಿಯು ಕಾಯುವದಿಲ್ಲ. ಅದೇ ನೀರಿನ ಬುಡಕ್ಕೆ ಉರಿ ಹಚ್ಚಿದಾಗ ಮೇಲಿನ ನೀರು ಕಾಯುತ್ತದೆ.

(ಇ) ಚಳಿಗಾಲದಲ್ಲಿ ಬಾಗಿಲ ಕಿಡಕಿ ಮೊದಲಾದ ಕಟ್ಟಿಗೆ ಸಾಮಾನುಗಳು ಬಿಳಿದು ಬೇಸಿಗೆಯಲ್ಲಿ ಸಂಕೋಚವಾಗುತ್ತವೆ.

(ಫ) ಪಣತಿಯೊಳಗಿನ ಎಣ್ಣೆಯು ಮೇಲಕ್ಕೇರಿ ದೀಪಕ್ಕೆ ಮುಟ್ಟುತ್ತದೆ.

(ಗ) ನುರ ಕಡಿಯುವ ಆಳನ್ನು ನಾಸು ದೂರದಿಂದ ನೋಡಿದರೆ ಕೊಡ್ಲಿಯ ಹೊಡೆತವು ಕಾಣಿಸಿದ ಕ್ಷಣದಲ್ಲಿಯೇ ಅದರ ಸಪ್ಪಳವು ಕೇಳಿಸದೆ ತುಸು ಹೊತ್ತಿನ ಮೇಲೆ ಕಿವಿಗೆ ಬೀಳುತ್ತದೆ.

೨. ಕನ್ನಡ ಭಾಷೆಯು ಸಂಸ್ಕೃತ ವರ್ಗದ್ದಲ್ಲ ಎಂಬದಕ್ಕೆ ಎರಡೂ ಭಾಷೆಗಳ ವ್ಯಾಕರಣ ಪರ್ಯಾಲೋಚನೆಯಿಂದ ಹೊರಡುವ ಪ್ರಮಾಣಗಳು ಯಾವವು.

೩. ಪದಾರ್ಥಗಳ ಸಾಂಸಿದ್ಧಿಕ ಧರ್ಮಗಳು ಯಾವವು, ಮತ್ತು ಅವುಗಳನ್ನು ಸ್ಪಷ್ಟೀಕರಿಸು.

೪. ಕೆಳಗೆ ಬರೆದ ಪದ್ಯಗಳ ಅರ್ಥವನ್ನು ಅವುಗಳೊಳಗಿನ ಶಬ್ದಗಳನ್ನು ತೋಟಿಸದೆ ಬರಿ.

(ಅ) ಪಸಿದ್ಧತಂದುಣ್ಬದಾ ಪೆಣ್ಬಲಿಯು ಪೊರೆಯುವಲ್ಲಿ ರ್ದ ಸಾರಂಗ ಶಾವಂ । ದ್ವಿಶಿರಂ ತಾಯ್ದಪ್ಪಿ ಪಾಯ್ದಂಟಡಿಗ ಗುಟ್ಟಕನೋಲ್ದೂಮುಗುಂದಂತೆ ಪೋತ ॥ ಪ್ಪಸರಕ್ಕಂಗಾಲ್ಗಳೊಳ್ಕುಳ್ಕಿ ಕ್ರಿದೊಡುಗರ್ಗಳಿಂತೀರ್ಜುಗುಂ ಸಿಂಹಮಾದು । ಬ್ಬಸಮುಂ ಸ ಪ್ಪರ್ಭಕಕ್ಕಾತಪದೆ ತೊಲಗಿ ಕುಂಪರ್ಎಂಬ ಹೆಸರ್ಬ್ಬಂದಂ ।

(ಬ) ಜಗದೇಕ ವೀರನಾಮಂ । ನಗೆಗೆಮೆಯಾಯ್ತನಗೆ ಪಬ್ಬಿದತ್ತೇಣ್ಣೆಸೆಯೊಳ್ ॥

ನಿಗಳ್ದಪಯಶವಿಾಶಬರನಿ । ನೊಗೆದ ಪರಾಭೂತಿ
ವೆತ್ತಕಾರಣದಿಂದಂ।

(ಕ) ಎತ್ತಣ ಬನವೆತ್ತಣ ಕಿಟ । ಯೆತ್ತಣ ಕಾಳ್ಬಿಯ
ದ ನಾಗಮುಂ ಕರ್ಮವೆ ಮೇ ॥
ಣೆತ್ತಣ ಕಾಳಗದುಜ್ಜಗ । ವೆತ್ತಣ ಪರಿಭವವಿ
ದೆನಗೆ ಸಾರ್ದುದು ದೇವಾ !

೫. ಕೆಳಗೆ ಬರೆದ ವಾಕ್ಯಾಂಶಗಳ ಅರ್ಥವನ್ನು ವಿವರಿಸು.

(a) ಪಾರಿಭಾಷಿಕ (b) ದ್ರವ್ಯಘಟಿತ (c) ಅಳಿದುಳಿ
ದು ಭಂಗವಯನೂಗಿರ್ದು ಸುರಿದವ್ವಸದಳವಮ್ಲ
(d) ಪಿತೃವನದೊಳ್ ಪೊಕ್ಕವಸೊಳ್ (e) ತಂದನು
ಸೂತನುರು ಹಯವಾ

೬. ಪ್ರಾತಿಪಾದಿಕಗಳಿಗೆ ಉಣ್, ಇಜ, ಕುಳಿ, ಅಡಿಗ ಈ ಪ್ರತ್ಯಯಗಳನ್ನು ಹಚ್ಚುವದರಿಂದಾ ಆಗುವ ಅರ್ಥ ವಿಶೇಷಗಳು ಯಾವವು? ಉದಾಹರಣೆ ಕೊಡು.

೭. ಮುಪ್ಪು, ಮುಂಗಾರಿ, ಸಿಗುರಿ, ಬಾಂದೊರೆ ತುಂಬುಪೆರೆ, ತಂಕಬರ್, ಕೇಕೆ, ಎಲರುಣಿ, ಎಸಳು ಈ ಶಬ್ದಗಳ ವ್ಯುತ್ಪತ್ತಿಯನ್ನು ಹೇಳು

೮. ಕೆಳಗೆ ಬರೆದ ಸಂಧಿಯಿಂದ ಕೂಡಿಸಿದ ಶಬ್ದಗಳನ್ನು ವಿಂಗಡಿಸು. ಮತ್ತು ಮೊದಲಿನ ನಾಲ್ಕು ಶಬ್ದಗಳ ಸಂಧಿ ನಿಯಮಗಳನ್ನು ಹೇಳು.

(a) ಸಂಗಡಲೇ (b) ಎಲ್ಲಿಯಾಗಲಿ (c) ಮನೋಜಾ
ತ (d) ಅರವತ್ತು (e) ಚಿಂತಾತುರ (f) ಕೆಂಜೋ
ಳ (g) ನಿಷ್ಕಾಮ (h) ನೀರ್ಗಣಿ (i) ಕಾಲಂದುಗೆ.

೯. ನ್ಯೂನ ರೂಪಗಳಂದರೇನು? ವಾಕ್ಯದಲ್ಲಿ ಅವು ಹೇಳುವ ಅರ್ಥ ವಿಶೇಷಗಳು ಯಾವವು.

೧೦. ಕೆಳಗೆ ಬರೆದ ಧಾತುಗಳ ಭೂತನ್ಯೂನ್ಯ, ಭೂತ ಕೃದ್ವಾಚಿ, ಭೂತ ಅಖ್ಯಾತ ನಪುಂಸಕೈಕವಚನಗಳನ್ನು ಬರಿ.

ಸಾಲು, ಬೇ, ತೆರು, ಬೆವರು.

೧೧. ಧಾತುಗಳಿಗೆ ಅಖ್ಯಾತ ಪ್ರತ್ಯಯಗಳು ಹತ್ತುವಾಗ ಆಗುವ ಮುಖ್ಯ ಸಂಧಿಯ ವಿಧಿಗಳು ಯಾವವು.

೧೨. ಗಮುಕಸಮಾಸ, ಅರಿಗುಣಸರ್ಗ, ನಿಪಾತ, ಉತ್ತರವಿಶೇಷಣ ಇವುಗಳ ಲಕ್ಷಣಗಳನ್ನು ಬರೆದು ಉದಾಹರಣೆ ಕೊಡು.

ವರ್ಗಣಿ ವಸೂಲು.

ಧಾರವಾಡ ಜಿಲ್ಲೆ.

	ರೂ.	ಆ.	ಪೈ.
ರಾ. ಸಾ. ಡಿ. ಎ. ಇನಸ್ಪೆಕ್ಟರ ಜಿಲ್ಲಾ ಧಾರವಾಡ ಇವರಿಂದಾ ನನಂಬರ ತಿಂಗಳ ಬಾ॥ ಲೋ. ಬೋ. ಶಾಲೆಗಳಬಗ್ಗೆ.	೦೫	೬	೯

ವಿಜಾಪೂರ ಜಿಲ್ಲೆ.

ರಾ. ಸಾ. ಡಿ. ಎ. ಇನಸ್ಪೇಕ್ಟರ ಜಿಲ್ಲಾ ವಿಜಾಪುರ ಇವರಿಂದ ಲೋ. ಬೋ. ಮತ್ತು ಮ್ಯುನಿಸಿಪಲ್ ಸಾಲೆಗಳ ಬಗ್ಗೆ ಡಿಸೆಂಬರ ತಿಂಗಳ ಬಾ॥	೧೪	೮	೬

ಬೆಳಗಾಂವ ಜಿಲ್ಲೆ.

ರಾ. ಸಾ. ಡಿ. ಎ. ಇನಸ್ಪೆಕ್ಟರ ಜಿಲ್ಲಾ ಬೆಳಗಾಂವ ಇವರಿಂದ ಲೋ. ಬೋ. ಸಾಲೆಗಳ ಬಗ್ಗೆ ೯೮ನೇ ಇಸವಿಯ ಅಕ್ಟೋಬರ, ನವಂಬರ ತಿಂಗಳ ಬಾ॥	೪೫	೩	೩

ಕಿರುಕುಳ.

ರಾ. ಸ್ಕೂಲ ಮಾಸ್ತರ ಶಿರ್ಸಿ ಇವರಿಂದ ಅಲ್ಲಿಯ ಸಾಲೆಗಳ ಬಾ॥ ೯೮ ಇ. ಸಪ್ಟಂಬರದಿಂದ ಡಿಂಬರ ಅಖೈರವರೆಗೆ.	೧	೯	೦
ರಾ. ಸ್ಕೂಲ ಮಾಸ್ತರ ಹುಬ್ಬಳ್ಳಿ ಇವರಿಂದ ೯೮ ಇ. ಅಕ್ಟೋಬರ, ನವಂಬರ, ಡಿಸೆಂಬರ ತಿಂಗಳ ಬಗ್ಗೆ.	೫	೮	೬
ರಾ. ಮ್ಯು. ಸ್ಕೂಲ ಮಾಸ್ತರ, ಧಾರವಾಡ ಇವರಿಂದ ೯೮ ಇ. ಅಕ್ಟೋಬರ, ನವಂಬರ, ಡಿಸೆಂಬರ ತಿಂಗಳ ಬಗ್ಗೆ.	೦	೧೫	೦

---

* ಇದರೊಳಗೇನಾದರೂ ತಪ್ಪು ಇದ್ದರೆ ಅದನ್ನು ದಯಮಾಡಿ ತಿಳುಹಬೇಕು

ಕನ್ನಡ ಪಾಲಾಪತ್ರಿಕದ ವರ್ಗಣಿ ವರ್ಷಕ್ಕೆ ಮುಂಗಡ ...೧೫ ರೂಪ
ಒಂದು ಸಂಚಿಕೆಗೆ ... ... ೨ ಆಣೆ

ಪ್ರಕಟನೆಗಳನ್ನು ಛಾಪಿಸುವ ದರಗಳು.

ಇಟ್ಟರೆ.	೪	ಪಂಕ್ತಿಗಳವರೆಗೆ	೧ ರೂ
ಮೂರುಸಾರೆ ಇಟ್ಟರೆ	೧೦	,,	,,
ಆರುಸಾರೆ ಇಟ್ಟರೆ	೧೫	,,	,,

ಸೂಚನೆಗಳು.

೧. ಪಾಲಾಪತ್ರಿಕಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವಿಪ್ರ
೨. ಶಿರೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರಾ ಪಂಕ್ತಿಯ
ಹಾಸಲು ಬೀಳುವದು.
೩. ಭಾಷಾಂತರ ಮೊದಲು ಛಾಪಿಸುವದಾದರೆ ಮೇಲಿನ ದರದ ೧
ನ್ನುಡಿ ಫೀ ಬೀಳುವದು.
೪. ಪ್ರಕಟನೆಯು ಕೂಡ ಪಣ ಕಳುಹಲಿಕ್ಕೆ ಜೀವು.
೫. ಟಿಕೀಟು ಇಟ್ಟ ಹೊರ್ತು ಉತ್ತರ ಶಿಗಲಾರದು.

RAOJI B. KARANDIKAR.
ವ್ಯವಸ್ಥಾಪಕ, ಕನ್ನಡ ಪಾಲಾಪತ್ರಿಕ.

ಶಾಲಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ।
ಚಯಸುತ್ತಂ ಪ್ರತಿವಾಸವಾಬಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆಸುಗುಣಂ ತೋರಲ್ಕೆಕೈಕೊಂಬುಪೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಈ ಇಲಾಖೆಯಲ್ಲಿ ಭಾಷಾಭೇದದಿಂದ ನಾಲ್ಕು ಮುಖ್ಯ ಭಾಗಗಳುಂಟು. ಅವುಗಳಲ್ಲಿ ಉತ್ತರಭಾಗ ಅಥವಾ ಗು ಜರಾಥ ಮತ್ತು ಮಧ್ಯಭಾಗ ಅಥವಾ ಮಹಾರಾಷ್ಟ್ರ ಇವು ವಿದ್ಯೆಯಲ್ಲಿ ಮುಂದಾದಂಥವು ಇದ್ದು ಇವುಗಳಿಗೆ ಯೋಚಿಸ್ದ ಅನುಕೂಲತೆಗಳನ್ನು ಸರಕಾರದವರು ಬಹು ದಿವಸದಿಂದ ಬಯಸಿಕೊಂಡ್ಬರುತ್ತಾರೆ. ವಿದ್ಯೆಯಲ್ಲಿ ಹಿಂದೆ ಬಿದ್ದಂಥ ಮೂರನೆಯ ಭಾಗ ಅಂದರೆ ಸಿಂಧಪ್ರಾಂತವು, ಇತರ ವಿಷಯಗಳಲ್ಲಿ ಇಲ್ಲವಿದ್ದರೂ ಸ್ತ್ರೀ ಶಿಕ್ಷಣ ವಿಷಯದಲ್ಲಿ ನಮ್ಮ ಭಾಗವನ್ನು ಹಿಮ್ಮೆಟ್ಟಿಸಿ ೭ ಇಲ್ಲ ವರ್ಷಗಳ ಕೆಳಗೆ ಸ್ತ್ರೀಯರಿಗಾಗಿ ಬಂದು ಶಿಕ್ಷಕಳ ಶಿಕ್ಷಣ ವಿದ್ಯಾಲಯವನ್ನು ಪಡಕೊಂಡಿತು. ನಮ್ಮ ಭಾಗದ ಈ ಕೊರತೆಯು ಈಗ್ಗೆ ದೂರಾದದ್ದನ್ನು ತಿಳುಪಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ.

ಧಾರವಾಡದ ಕಲೇಕ್ಟರರಾದ ಮೆ. ಮ್ಯೂರ ಸಾಹೇಬರವರ ಪ್ರೋತ್ಸಾಹನದಿಂದಲೂ ರಾವಬಹದ್ದೂರ ಪಟವರ್ಧನ ಮತ್ತು ಸಹಸ್ರಬುದ್ಧೆ ಈ ಉಭಯ ಎಜ್ಯುಕೇಶನಲ್ ಇನ

ಸ್ಪೇಕ್ಟರರ ಪರಿಶ್ರಮದಿಂದಲೂ ಕನ್ನಡ ಸ್ತ್ರೀ ಶಿಕ್ಷಕ ಶಿಕ್ಷ
ವರ್ಗವು ಸಸಿಯ ರೂಪವಾಗಿ ಧಾರವಾಡದಲ್ಲಿ ಸ್ಥಾಪಿಸ
ಟ್ಟರುವದು. ಈ ವರ್ಗದ ಪ್ರವೇಶ ಪರೀಕ್ಷೆಯು ಜಾನು
ರಿ ತಿಂಗಳ ಒಳಗೇ ತಾರೀಖಿಗೆ ಪ್ರಾರಂಭವಾಯಿತು. ಇ
ಪ್ರಥಮ ಪರೀಕ್ಷೆ ಇದ್ದಾಗ್ಯೂ, ಇದರ ವಿಷಯದ ಸು
ಯು ನಾಲ್ಕು ಭಾಗಗಳಲ್ಲಿ ಸರಿಯಾಗಿ ಗೊತ್ತಾಗದಿದ್ದಾ ಗ
ಪರೀಕ್ಷಿತರ ಸಂಖ್ಯೆಯು ತಕ್ಕ ಮಟ್ಟಿಗೆ ಸಮಾಧಾನಕರವಾ
ತ್ತು. ಪರೀಕ್ಷೆಗೆ ೧೬ ಜನ ವಿದ್ಯಾರ್ಥಿನಿಯರು ಕೂಡಿದ್ದರು
ಆದರೆ ಅವರಲ್ಲಿ ನಾಲ್ಕು ಜನರು ಚಿಕ್ಕ ವಯಸ್ಸಿನವರಾದ
ರಿಂದಲೂ, ಬಬ್ಬಳು ನಾಪಾಸು ಆದ್ದರಿಂದಲೂ, ಬಬ್ಬಳು ಗೃ
ಕೃತ್ಯವ ಅಡಚಣೆಯ ಮೂಲಕವಾಗಿ ವರ್ಗದಲ್ಲಿ ನಿಂತ
ಅಭ್ಯಾಸ ಮಾಡಲಿಕ್ಕೆ ಅನುಮತಿಸದ್ದರಿಂದಲೂ ೯ ಜನರನ್ನೆ
ವರ್ಗದಲ್ಲಿ ಶೇರಿಸಿ ವರ್ಗವು ಕಳೆದ ತಿಂಗಳ ೧ನೇ ತಾರೀ
ಖಿಗೆ ಪ್ರಾರಂಭ ಮಾಡಲ್ಪಟ್ಟಿತು. ಈ ವಿದ್ಯಾರ್ಥಿನಿಯರಿ
ತಿಂಗಳಿಗೆ ೯ ರೂ. ಸ್ಕಾಲರಷಿಪ್ಪು ಶಿಗುವದು. ವರ್ಗಕ್ಕೆ ಕ
ಸುವ ಕೆಲಸವನ್ನು ಸದ್ಯಕ್ಕೆ ಧಾರವಾಡ ಕನ್ನಡ ೧ನೇ ನಂ
ರ ಗರ್ಲಸ್ಕೂಲಿನ ಹೆಡ್ಡ ಮಾಸ್ತರರಿಗೆ ಹೇಳಿರುತ್ತದೆ. ಇ
ರಸಹಾಯಕ್ಕಾಗಿ ಲೋಕಲ್‌ಬೋರ್ಡಿನಿಂದ ಬಬ್ಬ ಟ್ರೇಂಡ
ಮನುಷ್ಯನನ್ನು ಕೊಟ್ಟಿರುತ್ತದೆ. ೪/೧೦ ತಿಂಗಳಲ್ಲಿ ಈ ವ
ರ್ಗದ ಅಭ್ಯಾಸವನ್ನೂ ಸ್ಥಿತಿಯನ್ನೂ ವಿಚಾರಿಸಿ ಇದನ್ನು
ಮೈಸೂರಿನ ಬಬ್ಬ ಸುಶಿಕ್ಷಿತ ಶಿಕ್ಷಕಿಯ ಕೈಯಲ್ಲಿ ಕೊಡು
ವರೆಂಬ ನಮಗೆ ಸಾಧಾರವಾಗಿ ತಿಳಿದಿರುತ್ತದೆ. ಈ ವರ್ಗ
ವು ಬಳಿತಾಗಿ ನಡಿಯಲೆಂದೂ ಇದಕ್ಕೆ ಸಹಾಯ ಮಾಡಬೇ
ಕೆಂಬ ಬುದ್ಧಿಯು ಎಲ್ಲರಲ್ಲಿ ಹುಟ್ಟಲೆಂದೂ ಇಚ್ಛಿಸುತ್ತೇವೆ.

ಈ ಕನ್ನಡ ಸ್ತ್ರೀ ಶಿಕ್ಷಕ ಶಿಕ್ಷಣ ವರ್ಗವು ಸ್ಥಾಪನೆ

ಯೂದದ್ದನ್ನು ಕೇಳಿ ಎಲ್ಲ ಕನ್ನಡಿಗರಿಗೆ ಸಮಾಧಾನವಾಗು ವದೆಂಬದಕ್ಕೆ ಏನೂ ಸಂದೇಹವಿಲ್ಲ. ಸುಶಿಕ್ಷಿತ ಸ್ತ್ರೀಯರು ದೇಶಾಭ್ಯುದಯಕ್ಕೆ ಮೂಲ ಕಾರಣರಾಗಿರುತ್ತಾರೆಂಬ ಮಾತು ನಿರ್ವಿವಾದವಾದದ್ದು. ಪ್ರಸಿದ್ಧ ಬಾಬೂ ಕೇಶವ ಚಂದ್ರ ಸೇನನು ಒಂದು ಪ್ರಸಂಗದಲ್ಲಿ ಹೇಳಿದ್ದೇನೆಂದರೆ:—ವ್ಯಾಕರಣದ ರೂಪಕವನ್ನು ಕಲ್ಪಿಸಿ ಕೆಲವರು, ಹೆಂಗಸು ವಿಶೇಷಣ ಇವರ ವಿಶೇಷ್ಯ ಗಂಡಸು ಎಂದು ಹೇಳುತ್ತಾರೆ. ಆದರೆ ಸೂಕ್ಷ್ಮ ನೀತಿಯಿಂದ ವಿಚಾರಿಸಿ ನೋಡಲಾಗಿ ಹೆಂಗಸು ಇದು ಸಕರ್ಮಕ ಕ್ರಿಯಾಪದವು ಗಂಡಸು ಎಂಬದು ಅದಕ್ಕೆ ಆಧೀನವಾದ ದ್ವಿತೀಯಾ ವಿಭಕ್ತಿಕ ನಾಮಪದವು ಇರುತ್ತದೆ. ಹೆಂಗಸರೇ ಈ ಪ್ರಪಂಚದ ಮೂಲಾಧಾರ; ಇವರ ಸುಸ್ಥಿತಿಯೇ ರಾಷ್ಟ್ರದ ಸುಸ್ಥಿತಿಯು ಕುರುಹಾಗಿರುವದು.

ಇಂಗ್ಲಿಷ ಜನರ ಸಾಮ್ರಾಜ್ಯಕ್ಕೆ ಆ ಜನರ ದೇಶಪ್ರೀತಿಯೇ ಮೂಲವಾಗಿರುತ್ತದೆ. ಸುರತ ಪಟ್ಟಣದಲ್ಲಿ ವಾಸ ಮಾಡಿಕೊಂಡಿರುವ ಇಂಗ್ಲಿಷವರ್ತಕರ ಕೂಡ ಗ್ಯಾಬ್ರಿಯಲ್ ಬೌಲನನೆಂಬ ವೈದ್ಯನಿದ್ದನು. ಅವನು ದಿಲ್ಲಿಯ ಬಾದಶಹನಾದ ಶಹಾಜಹಾನನ ಪ್ರೀತಿಯ ಮಗಳಿಗೆ ಔಷಧ ಕೊಟ್ಟು ರಾಜವೈದ್ಯರಿಗೆ ಹಣಿಯುವಂಥ ದುರ್ಧರ ರೋಗದಿಂದ ಅವಳನ್ನು ಮುಕ್ತಮಾಡಿದನು. ಬಾದಶಹನು ಪ್ರಸನ್ನನಾಗಿ ಬೇಕಾದದ್ದು ಬೇಡೆಂದು ಹೇಳಲಾಗಿ ಅವನು ಸ್ವಾರ್ಥವನ್ನು ಬದಿಗಿಟ್ಟು ತಮ್ಮ ದೇಶದ ಹಿತವನ್ನು ನೆನಿಸಿ ತಮ್ಮ ಜನರಿಗಾಗಿ ಕೆಲವು ಹಕ್ಕುಗಳನ್ನು ಪಡಕೊಂಡನು. ಇವನು ಸ್ವಾರ್ಥಬುದ್ಧಿಯಿಂದ ಜಹಾಗೀರು ಬೇಡಿದ್ದರೆ ಒಂದು ಸಾಮಾನ್ಯ ಜಹಾಗೀರದಾರನಾಗಿ ಇರುತ್ತಿದ್ದನಷ್ಟೇ. ಆದರೆ ದೇಶಪ್ರೀ

ತಿಯಿಂದ ತಮ್ಮ ಜನರಿಗಾಗಿ ಹಕ್ಕುಗಳನ್ನು ಪಡೆದದ್ದರಿಂ
ಇಡೀ ದೇಶದ ಸಾಮ್ರಾಜ್ಯವನ್ನು ತಮ್ಮವರ ಕೈ ಸೇರಿಸಿ
ನೆಂಬುದಕ್ಕೆ ಏನೂ ಸಂದೇಹವಿಲ್ಲ. ಈ ಮಾತು ನಮ್ಮ
ಜನರು ಧ್ಯಾನದಲ್ಲಿಡತಕ್ಕಂತಾದಾಗಿರುತ್ತದೆ.

ನಮ್ಮ ಧರ್ಮ ಗ್ರಂಥಗಳು—ನಾವು ಇರುವ ದೇಶಕ್ಕೆ
ಆರ್ಯಾವರ್ತವೆಂತಲೂ ನಮಗೆ ಆರ್ಯರೆಂತಲೂ ಹೆಸ
ರುಂಟು. ಆರ್ಯರೆಂದರೆ ಶ್ರೇಷ್ಠರು ಸುಜ್ಞರು; ಗುಡ್ಡ
ಗಾಡ ಅಥವಾ ಅಜ್ಞ ಜನರಲ್ಲ. ಅರ್ಥಾತ್ ಆರ್ಯಭೂಮಿ
ಯೆಂದರೆ ಶ್ರೇಷ್ಠ ಭೂಮಿಯು ಆರ್ಯರ ಧರ್ಮವೆಂದರೆ
ಸುಜ್ಞರ ಧರ್ಮವು ಎಂದೂ ಆರ್ಯರ ಶಾಸ್ತ್ರ ಸಾಹಿತ್ಯ
ಗಳು ಶ್ರೇಷ್ಠವಿರುತ್ತವೆಂದೂ ನಾವು ಯಾವಾಗಲೂ ಅಭಿ
ಮಾನ ಪಡುತ್ತೇವೆ. ನಮ್ಮ ಧರ್ಮಗ್ರಂಥಗಳು ಭೂಲೋ
ಕದಲ್ಲಿ ಪ್ರಚಲಿತವಾದ ಯಾವತ್ತು ಧರ್ಮಗಳಿಗೆ ಮೂಲಾ
ಧಾರವಾಗಿರುತ್ತವೆಂದು ನಾವು ಮಾದಿಸುತ್ತೇವೆ. ಭೂಪಾ
ಶಾಸ್ತ್ರದ ಶೋಧಗಳೂ ಜ್ಯೋತಿಷ ಶಾಸ್ತ್ರದ ಶೋಧಗಳೂ
ನಮ್ಮ ವಾದವನ್ನು ಪುಷ್ಟೀಕರಿಸುವಂತೆ ತೋರುತ್ತವೆ. ಇದು
ಹ್ಯಾಗೇ ಇರಲಿ; ನಮ್ಮ ಧರ್ಮಗ್ರಂಥಗಳ ಜ್ಞಾನವು ನಮ್ಮಲ್ಲಿ
ಬಹುಜನರಿಗಿರುವದಿಲ್ಲ; ಇದು ಲಕ್ಷಣದ ಮಾತು. ಎಷ್ಟೋ
ಜನರಿಗೆ ಅವುಗಳ ಹೆಸರು ಸಹ ಗೊತ್ತಿರುವದಿಲ್ಲ. ಯಾಸ್ಕ
ನೆಂಬವನೊಬ್ಬ ಪ್ರಾಚೀನ ಋಷಿಯು ವೇದವಲ್ಲಿಯ ವಿಶೇಷ
ಶಬ್ದಗಳ ಬಂದು ಕೋಶವನ್ನು ಬರೆದಿದ್ದಾನೆ. ಆವರ ಪ್ರಾರಂ
ಭದಲ್ಲಿ ಅವನು ಈ ಪ್ರಕಾರ ಅನ್ನುತ್ತಾನೆ :—

स्थाणुरयं भारवाहः किलाभूत् ।
अधीत्यवेदं नविजानातियोऽर्थम् ॥

ವೇದದ ಅಂದರೆ ಆದಿ ಧರ್ಮಗ್ರಂಥದ ಅರ್ಥ ತಿಳಕೊಳ್ಳದೆ ಪಠನ ಮಾಡುವವನು ಕೇವಲ ಮೂರ್ಖನೂ ಭಾರವಾಹಕನೂ ಆಗಿರುತ್ತಾನೆ. ಸವ್ಯಕ್ಕೆ ವೇದಾರ್ಥವೂ ಬರೀ ವೇದಪಠಣವೂ ಬತ್ತಟ್ಟಿಗಿರಲಿ, ವೇದಗಳ ಹೆಸರುಗಳನ್ನು ಸಹ ಅರಿಯದ ಜನರ ಸಂಖ್ಯೆಯು ಹಚ್ಚಾಗಿರುತ್ತದೆ. ಈ ಕೊರತೆಯನ್ನು ದೂರ ಮಾಡುವ ಉದ್ದೇಶದಿಂದ ಕೆಲವು ಮಾಹಿತಿಯನ್ನು ಇವರಡಿ ಕೊಡುತ್ತೇವೆ.

ಶಾಸ್ತ್ರಗ್ರಂಥಗಳು ಐದು ವಿಧ. (೧) ವೇದ, ವೇದಾಂಗ ಮತ್ತು ಉಪವೇದ. (೨) ದರ್ಶನ. (೩) ಸ್ಮೃತಿ. (೪) ಇತಿಹಾಸ ಮತ್ತು ಪುರಾಣ. (೫) ತಂತ್ರ.

೧. ವೇದ ವೇದಾಂಗ ಮತ್ತು ಉಪವೇದ:—ಮೂಲ ವೇದಗಳು ಮೂರು ಉಂಟು. ಅತಿ ಪ್ರಾಚೀನ ಕಾಲದ ಗ್ರಂಥಗಳಲ್ಲಿ ತ್ರಯೀ ಅಂದರೆ ವೇದತ್ರಯವೆಂದು ಉಲ್ಲೇಖವುಂಟು. ಆದರೆ ನಾಲ್ಕನೆಯ ವೇದವು ಪ್ರಚುರದಲ್ಲಿ ಬಂದು ಅನೇಕ ಶತಕಗಳಾದವು. ಈಗ್ಗೆ ಚತುರ್ವೇದಗಳೆಂದು ಜನರಲ್ಲಿ ಪರಿಪಾಠವುಂಟು. ಅವು ಯಾವವೆಂದರೆ, (೧) ಋಗ್ವೇದ. (೨) ಯಜುರ್ವೇದ. (೩) ಸಾಮವೇದ. (೪) ಅಥರ್ವವೇದ. ಪ್ರತಿ ಬಂದು ವೇದದಲ್ಲಿ (೧) ಸಂಹಿತಾ ಅಥವಾ ಮೂಲ ಮಂತ್ರ, (೨) ಬ್ರಾಹ್ಮಣ, (೩) ಉಪನಿಷತ್ ಅಥವಾ ಅರಣ್ಯ, (೪) ಸೂತ್ರ, ಈ ಪ್ರಕಾರ ನಾಲ್ಕು ಭಾಗಗಳುಂಟು. ವೇದ ಮಂತ್ರಗಳ ಕೆಲ ಕೆಲವು ಭಾಗಗಳಿಗೆ ಶಾಖಾ ಅನ್ನುತ್ತಾರೆ. ಮಂತ್ರದಲ್ಲಿ ಯಾವದೊಂದು ದೇವತೆಯ ಸ್ತುತಿಯಾಗಲಿ ಆವಾಹನವಾಗಲಿ ಇರುತ್ತದೆ. ಬ್ರಾಹ್ಮಣದಲ್ಲಿ ಅರಣ್ಯಕವೆಂಬದೊಂದು ಬೇರೆ ಭಾಗವುಂಟು. ಬ್ರಾಹ್ಮಣದಲ್ಲಿ ಯಜ್ಞ ಯಾಗಾದಿಗಳ ವಿಧಿಯು ಮತ್ತು ಅವುಗಳಲ್ಲಿ ಅನ್ನಿಸಿಕ್ಕ ಮಂತ್ರಗಳು ಉಲ್ಲೇಖಿಸಿರುತ್ತವೆ.

ಉಪನಿಷತ್ತಿಲ್ಲಿ ವೇದಾಂತ ಭಾಗವಿರುವದು. ಸೂತ್ರ ಗ್ರ
ಥಗಳಲ್ಲಿ ಗೃಹ್ಯಸೂತ್ರ ಮತ್ತು ಶ್ರೌತಸೂತ್ರವೆಂಬವೆರಡ
ಬಳಭೇದಗಳುಂಟು. ಗೃಹ್ಯದಲ್ಲಿ ಜನ್ಮಾದಾರಭ್ಯ ಮರ
ಣಕಾಲದವರೆಗೆ ಮನುಷ್ಯನ ಸಾಂಸಾರಿಕ ಮತ್ತು ಪಾರಮಾ
ರ್ಥಿಕ ವರ್ತನದ ಬಗ್ಗೆ ನಿಯಮಗಳಿರುವವು. ಶ್ರೌತದ
ಲ್ಲಿ ಅವನು ಯಜ್ಞಯಾಗಾದಿಗಳಲ್ಲಿ ಅನ್ನತಕ್ಕ ಮಂತ್ರಗಳ
ಮತ್ತು ಮಾಡತಕ್ಕ ಕೃತಿಗಳ ಉಲ್ಲೇಖ ಉಂಟು. ಯಜು
ರ್ವೇದವಲ್ಲಿ (೧) ಶುಕ್ಲ ಯಜುರ್ವೇದ. (೨) ಕೃಷ್ಣ
ಯಜುರ್ವೇದ ಎಂಬವೆರಡು ಭಾಗಗಳುಂಟು. ಈ ಎ
ಡೂ ಭಾಗಗಳಲ್ಲಿ ಮೇಲೆ ಹೇಳಿವ ಸಂಹಿತೆ ಮುಂತಾದ ನಾ
ಲ್ಕೂ ಭಾಗಗಳುಂಟು. ವೇದಪಠಣಕ್ಕೆ ಸಹಾಯಭೂತವಾ
ಶಾಸ್ತ್ರಗಳಿಗೆ ವೇದಾಂಗವೆಂದೆನ್ನುತ್ತಾರೆ.

ಮುಲಖೀ ಪರೀಕ್ಷೆಯ ನೇಮಗಳನ್ನು ಸರಕಾರದವರು
ಪುನಃ ಪ್ರಕಟಿಸಿರುತ್ತಾರೆ. ಅದರೆ ಏನೇ ಷಿನೇ ಗ್ರೇಡಿನ
ಪರೀಕ್ಷಾ ವಿಷಯಗಳಲ್ಲಿ ಏನೂ ಹೆಚ್ಚು ಕಡಿಮೆ ಮಾಡಿಲ್ಲ.
ಸ್ಕೂಲ ಫೈಯನಲ್ ಪರೀಕ್ಷೆಯ ಐಚ್ಛಿಕ ವಿಷಯಗಳಲ್ಲಿ
ಮ್ಯಾನುಯಲ್ ಟ್ರೇನಿಂಗ ಅಂದರೆ ಕೈಗಾರಿಕೆಯ ಕೆಲಸವು
ಹೆಚ್ಚಾಗಿ ಸೇರಿಸಲ್ಪಟ್ಟಿರುತ್ತದೆ. ಅವಶ್ಯವುಳ್ಳವರು ಜಾನ್ಯು
ಆರಿ ತಿಂಗಳ ೧೫ನೇ ತಾರೀಖಿನ ಗ್ಯಾಝೀಟನ್ನು ನೋ
ಡಬಹುದು.

SELECTIONS FROM THE KARNATIK GAZETTEER.

ಕನ್ನಡ ಗರೆಝಟಿಯರದಿಂದ ಅವತರಣಿಗಳು.

(೫೬ನೇ ಪುಟದಿಂದ ಸಾಗಿದ್ದು)

ಕಲಘಟಗಿ ತಾಲೂಕು—ಇದು ಧಾರವಾಡ ಜಿಲ್ಲೆಯ
ಪಶ್ಚಿಮ ಭಾಗದಲ್ಲಿ ಧಾರವಾಡ ತಾಲೂಕಿನ ದಕ್ಷಿಣಕ್ಕೆ

ಬತ್ತುವು. ಸುಮಾರು ಹಳ್ಳಿಗಳು ೧೦೧ ದುಮ್ಮಾಲಿ ೦೦ ಕ್ಷೇತ್ರಫಲ ೦೨೯೯ ಚ ಮೈಲು. ಜನಸಂಖ್ಯೆ ೫೦೦೫೯. ಭೂಮಿಯ ಕಂದಾಯ ೧೦೯೮೫ ರೂಪಾಯಿ.

ಸ್ವರೂಪ, ಭೂಮಿ—ಬಹುತರ ಎಲ್ಲ ಕಡೆಯಲ್ಲಿಯೂ ಗುಡ್ಡಗಳೂ ಅಡವಿಗಳೂ ಉಂಟು; ದಕ್ಷಿಣ ಪೂರ್ವ ಭಾಗಗಳಲ್ಲಿ ಸ್ವಲ್ಪ ಕಡಿಮೆ. ಹಳ್ಳಿಗಳ ಸುತ್ತುಮುತ್ತು ಗೋಕಿಗಳಿಲ್ಲ; ಅವು ದಟ್ಟವಾಗಿರುತ್ತವೆ. ಬಹುತರ ಎಲ್ಲ ಕಡೆಯಲ್ಲಿಯೂ ಕೆಂಪು ಭೂಮಿಯು; ಕೆಲವು ಕಡೆಯಲ್ಲಿ ಗರಸಿನ ನೆಲವುಂಟು.

ಮಳೆಗಾಲದಲ್ಲಿ ಶೈತ್ಯ ಬಹಳವಾಗಿ ರೋಗಗಳು ಹುಟ್ಟುತ್ತವೆ. ಚಳಿಗಾಲದಲ್ಲಿ ಚಳಿಯು ಹೆಚ್ಚಾದಾಗ್ಯೂ ಆರೋಗ್ಯವಿರುತ್ತದೆ. ಪಶ್ಚಿಮಭಾಗದಲ್ಲಿ ಮಳೆ ಬಹಳ. ಕಲಘಟಗಿಯಲ್ಲಿ ೦೦ ಇಂಚಿನಿಂದ ೪೫ ವರೆಗೆ ಮಳೆಯಾಗುತ್ತದೆ. ಸರಾಸರಿ ೦೯ ಇಂಚು.

ಹವೆ, ಮಳೆ, ನೀರು—ನೀರು ಸಮೃದ್ಧಿಯುಂಟು. ಬಿಡತೀ ಹಳ್ಳ, ಕಲ್ಲ ಹಳ್ಳ ಇವೆರಡು ದೊಡ್ಡ ಹಳ್ಳಗಳು ಈ ತಾಲೂಕಿನೊಳಗಿಂದ ಹರಿಯುತ್ತವೆ. ಇವಲ್ಲದೆ ಊರೂರಿಗೆ ಕೆರೆಗಳವೆ. ಈ ಹಳ್ಳಗಳ ಪ್ರವಾಹವು ಜೇಸಿಗೆಯಲ್ಲಿ ಕಡಿದಾಗ್ಯೂ ಅಲ್ಲಲ್ಲಿಗೆ ನೀರು ನಿಂತಿರುತ್ತದೆ.

ಜನರು—ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೯೯.೬೦ ಹಿಂದೂ ಜನರು, ೯.೩೦ ಮುಸಲ್ಮಾನರು, ೧.೦೪ ಕ್ರೈಸ್ತಿಗಳು, ಹಿಂದು ಜನರಲ್ಲಿ ಬ್ರಾಹ್ಮಣರು ೯೪೬, ಲಿಂಗವಂತರು ೦೦೪೩, ಜೈನರು ೧೦೬೦, ಅರೇರು ೬೫೧೬, ಕುರಬರು ೧೧೬೦, ಬೇಡರು ೬೯೦೦, ಒಡ್ಡರು ೧೧೦೪, ಮಾದಿಗರು ೬೫೦, ಹೊಲಿಯರು ೧೦೪೬ ಇತ್ಯಾದಿ.

ದೊಡ್ಡ ಊರುಗಳು.

ಬೆಲವಂತ್ರ—ಕಲಘಟಗಿಯ ದಕ್ಷಿಣಕ್ಕೆ ೩ ಮೈಲಿನ ಲೆ ಅದೆ. ಈ ಊರಲ್ಲಿ ಎರಡು ಲಿಪಿಗಳಿವೆ.

ಚಳವಟ್ಟಿ—ಕಲಘಟಗಿಯ ಈಶಾನ್ಯಕ್ಕೆ ೧೦ ಮೈ ಮೇಲೆ ಉಂಟು. ಇದರ ಬಳಿಯಲ್ಲಿ ಅಜವನಕಟ್ಟ ಎ ಗವಿಯುಂಟು.

ಕಲಘಟಗಿ—ಉತ್ತರ ಅಕ್ಷಾಂಶ ೧೫, ೧೯; ಪೂರ್ವ ಖಾಂಶ ೭೫, ೩; ಧಾರವಾಡದ ದಕ್ಷಿಣಕ್ಕೆ ೨೦ ಮೈ ಮೇಲೆ ಅದೆ. ಜನಸಂಖ್ಯೆ (೪೧) ೩೨೭೧. ಇದು ಮು ಗ್ರಾಮವು; ಇಲ್ಲಿ ಮಾಮಲೇದಾರ ಕಚೇರಿ, ಪೋಷ್ಟ ಆ ಸು, ತಾಲೂಕಾ ಸ್ಕೂಲು ಇರುತ್ತವೆ. ಬುಧವಾರ ಸಂತೆಯ ಮುಖ್ಯವಾಗಿ ಅಕ್ಕಿಯ ವ್ಯಾಪಾರವಾಗುತ್ತದೆ. ಮಹಾ ಪ್ಪುರ ಆಳಿಕೆಯಲ್ಲಿ ಇದು ಸಮ್ಮತಿನ ಮುಖ್ಯ ಗ್ರಾಮವಿತ್ತ

ಕಾಮಧೇನು—ಕಲಘಟಗಿಯ ಈಶಾನ್ಯಕ್ಕೆ ೬ ಮೈಲಿ ಮೇಲೆ ಅದೆ. ಇಲ್ಲಿ ಕಲಮೇಶ್ವರನ ಗುಡಿಯುಂಟು. ಗುಡಿಯ ಗೋಡೆಯಲ್ಲಿ ನಾನಾ ಪ್ರಕಾರದ ಚಿತ್ರಗಳಿರುತ್ತ ಅದರ ಬಳಿಯಲ್ಲಿ ಸವೆದಂಥ ಲಿಪಿಗಳು ಎರಡು ಇರುತ್ತವೆ ಊರ ದಕ್ಷಿಣಕ್ಕೆ ಮೈಲಿನ ಮೇಲೆ ಹರಿಯುವ ಕಲ್ಲಹಳ್ಳಕ್ಕ ಸರಕಾರವವರು ೧೮೫೦ ರಲ್ಲಿ ಕಲ್ಲಿನ ಬಡ್ಡಿ ಕಟ್ಟಿಸಿ ಭಾ ಮಿಗಳ ಉಪಯೋಗಕ್ಕಾಗಿ ನೀರು ಏರಿಸಿದ್ದಾರೆ.

ಮಿಶ್ರಿಕೋಟೆ—ಕಲಘಟಗಿಯ ಈಶಾನ್ಯಕ್ಕೆ ೮ ಮೈಲಿನ ಮೇಲೆ. ಜನಸಂಖ್ಯೆ (೮೧) ೩೦೭೬. ಶುಕ್ರವಾರ ಸಂತ ಯಾಗುತ್ತದೆ. ಇಲ್ಲಿ ದೊಡ್ಡ ದೊಂದು ಕೋಟೆಯೂ ರಾಮೇ ಶ್ವರನ ಬುನಾದಿಯ ಗುಡಿಯೂ ಉಂಟು.

ಕರ್ಜಗಿ ತಾಲೂಕು.

ಇದು ಜಿಲ್ಲೆಯ ಮಧ್ಯಭಾಗದ ಆಗ್ನೇಯದಲ್ಲಿ ಲಕ್ಷ್ಮೇಶ್ವ

ತಾಲೂಕಿನ ದಕ್ಷಿಣಕ್ಕೆ ಇರುತ್ತದೆ. ಸರಕಾರೀ ಹಳ್ಳಿಗಳು ೧, ದುಮೂಲೀ ೬. ಕ್ಷೇತ್ರ ೪೪೦ ಚ. ಮೈಲು. ಜನ ಖ್ಯೆ ೪೩೦೧೬, ಭೂಮಿಯ ಕಂದಾಯ ೧೮೯೩೦. ನೈಋತ್ಯದಲ್ಲಿ ಮಾತ್ರ ಸ್ವಲ್ಪ ಗುಡ್ಡಗಳಿವೆ. ಉಳಿದದ್ದೆ ಲ್ಲ. ವರದಾ ನದಿಯು ಈ ತಾಲೂಕಿನೊಳಗಿಂದ ಹರಿ ಯುತ್ತದೆ. ಪಶ್ಚಿಮದಲ್ಲಿ ಹಳ್ಳಿಗಳು ದಟ್ಟ, ಸಣ್ಣವು. ಪೂ ರ್ವದಲ್ಲಿ ಅಂಗಲ, ದೊಡ್ಡವು. ಪಶ್ಚಿಮ ದಕ್ಷಿಣಗಳಲ್ಲಿ ಭೂ ಕೆಂಪು, ಉಳಿದ ಕಡೆಯಲ್ಲಿ ಯರೆ.

ಪಶ್ಚಿಮ ದಕ್ಷಿಣಗಳಲ್ಲಿ ಹವೆ ಉಷ್ಣ. ಸ್ವಲ್ಪ ಅನಾರೋ ಗ್ಯವಾದದ್ದು, ಆದರೂ ಒಟ್ಟಿನಲ್ಲಿ ಹವೆ ಆರೋಗ್ಯವಾದದ್ದು. ಳೆಯು ಎಲ್ಲ ಕಡೆಯಲ್ಲಿ ಸಮನಾಗಿ ಆಗುತ್ತದೆ; ಕಜ್ಜ ರುಲ್ಲಿ ೧೩ ಇಂಚಿನಿಂದ ೩೪ ವರೆಗೆ, ಸರಾಸರಿ ೨೩ ಚು, ಪೂರ್ವ ಮೇರೆಯಲ್ಲಿ ತುಂಗಭದ್ರೆಯೂ, ಮಧ್ಯ ಭಾಗದೊಳಗಿಂದ ವರದಾ ನದಿಯೂ ಹರಿಯುತ್ತಿರುವ ಕಾರ ಣ ನೀರಿನ ಸಮೃದ್ಧಿಯುಂಟು. ಹಳ್ಳಿಗಳಿಗೆ ಕೆರೆಗಳೂ ಇ ತ್ತವೆ.

ದೊಡ್ಡ ಊರುಗಳು.

ಒಟ್ಟು ಜನಸಂಖ್ಯೆಯಲ್ಲಿ ಬೇಡರು ೯೦.೭೬ ಹಿಂದೂ ಜ ರು, ೯.೭೩ ಮುಸಲ್ಮಾನರು, ಹಿಂದೂ ಜನರಲ್ಲಿ ಬ್ರಾಹ್ಮ ಣರು೭೦, ಲಿಂಗವಂತರು ೩೦೩೩, ಆರೇರು ೨೦೭೧, ಕ್ಷತ್ರಿಯರು ೧೦೯೬, ಪಂಚಾಳರು ೧೪೦೪; ಗಾಣಿಗರು ೩೪೩, ಜೇಡರು ೧೧೭೦, ಕುರುಬರು ೧೦೨೪೪, ಬೇಡ ರು೬೭೧೪, ಅಂಬಿಗರು ೨೪೦೬, ಬಡ್ಡಿರು ೨೨೦೭, ಮಾ ಗರು ೩೩೨೩ ಇತ್ಯಾದಿ.

ಕಜ್ಜಗಿ—ಉತ್ತರ ಅಕ್ಷಾಂಶ ೧೪, ೩೦ ಪೂರ್ವ ರೇಖಾಂ

ಕ ೬೫, ೫೧ ಜನಸಂಖ್ಯೆ ೩೪೩೪ ತಾಲೂಕಿನ ಮು
ಗ್ರಾಮವು. ಮಂಗಳವಾರ ಸಂತೆಯಾಗುತ್ತದೆ.

ದೇವಿಹೊಸೂರು—ಕರ್ಜಗಿಯ ನೈಋತ್ಯಕ್ಕೆ ೧೦
ಲಿನ ಮೇಲೆ. ಜ ಸ. (೪೧) ೧೮೪೬. ಬನಶಂಕರಿ, ಚ
ವಣ್ಣ, ಭೋಗೇಶ್ವರ ಎಂಬ ಬುನಾದಿಯ ಗುಡಿಗಳಲ್ಲಿಯ
ಬೇರೆ ಕಡೆಯಲ್ಲಿಯೂ ಕೂಡಿ ಈ ಊರಲ್ಲಿ ೧೧ ಲಿಪಿಗಳಿ
ತ್ತವೆ.

ದಿಡಗೂರು—ಕರ್ಜಗಿಯ ನೈಋತ್ಯಕ್ಕೆ ೧೫ ಮೈಲಿ
ಮೇಲೆ. ಹನುಮಂತನ ಗುಡಿಯಲ್ಲಿಯೂ ಬೇರೆ ಕಡೆಂ
ಲ್ಲಿಯೂ ಕೂಡಿ ೪ ಲಿಪಿಗಳಿರುತ್ತವೆ.

ಗಳಗನಾಥ—ತುಂಗಭದ್ರೆಯ ದಂಡೆಯಲ್ಲಿ ಕರ್ಜಗಿಯ
ಈಶಾನ್ಯಕ್ಕೆ ೬೦ ಮೈಲಿನ ಮೇಲೆ. ಹೊಳೆಯ ದಂಡೆಯಲ್ಲಿ
ಗಾರೇಶ್ವರನ ಗುಡಿಯು ಪ್ರಾಚೀನವಾದ ದೊಡ್ಡದಿರುತ್ತದೆ
ಇದರಲ್ಲಿ ಎರಡು ಶಿಲಾಲಿಪಿಗಳುಂಟು. ಹನುಮಂತನ ಗು
ಯಲ್ಲಿ ಬಂದು ವೀರಗಲ್ಲೂ, ಲಿಪಿಯೂ ಉಂಟು.

ಗುತ್ತಲ—ಕರ್ಜಗಿಯ ಪೂರ್ವಕ್ಕೆ ೧೨ ಮೈಲಿನ ಮೇ
ಲೆ. ಜ. ಸ. (೪೧) ೫೧೩೬. ಸೋಮವಾರ ಸಂತೆಯಲ್ಲಿ
ಕಾಳುಕಡಿಯ ಮಾರಾಟವು ಬಳಿತಾಗಿ ಆಗುತ್ತದೆ. ಚಂದ್ರ
ಶೇಖರನ ಗುಡಿಯಲ್ಲಿ ಎರಡು ಲಿಪಿಗಳಿರುತ್ತವೆ. ಇಲ್ಲಿ ಪ್ರಾ
ತನದ್ದೊಂದು ಹೊಂಜವು ಬಹು ಭದ್ರವಾಗಿ ಕಟ್ಟಿದ್ದಿರುತ್ತ
ದೆ. ಪೂರ್ವಕಾಲದಲ್ಲಿ ಇದು ಪ್ರಸಿದ್ಧ ಗ್ರಾಮವಿತ್ತು.

ಹರಳಹಳ್ಳಿ—ಕರ್ಜಗಿಯ ಪೂರ್ವಕ್ಕೆ ೧೫ ಮೈಲಿನ
ಮೇಲೆ. ಈ ಸಣ್ಣ ಹಳ್ಳಿಯಲ್ಲಿ ಮೂರು ಶಿಲಾಲಿಪಿಗಳು ಇ
ರುತ್ತವೆ. ಸ್ಟ ೧೪೪೦ರಲ್ಲಿ ಬಂದು ತಾಮ್ರದ ಪಟ ದೊ
ರೆದದೆ. ಅದರಲ್ಲಿ ೫೦ ಜನ ಬ್ರಾಹ್ಮಣರಿಗೆ ರಿತ್ತಿ ಎಂಬ

ಗ್ರಾಮವನ್ನು ಯಾದವ ವಂಶದ ಎನೇ ಶಿಂಪಣನು ಕ್ರಿ. ಶ. ೧೦೦೦ರಲ್ಲಿ ಅಗ್ರಹಾರ ಹಾಕಿಕೊಟ್ಟ ಬಗ್ಗೆ ಲೇಖವದೆ. ಈ ತಾಮ್ರಪಟವು ಈಗ ಮುಂಬಯಿಯಲ್ಲಿ ಏಶಿಯಾಟಿಕ ಸೋಸಾಯಿಟಿಯವರ ಪದಾರ್ಥಸಂಗ್ರಹಾಲಯದಲ್ಲಿ ಇರುತ್ತದೆ.

METHODS OF TEACHING-NOTES OF LESSONS.

ಕಲಿಸುವ ಪದ್ಧತಿಗಳು.—ಪಾಠದ ಟಿಪ್ಪಣಿಗಳು.

ಶಿಕ್ಷಕರ ಕೆಲಸವು ಬಹಳ ಜವಾಬದಾರಿಯುಳ್ಳದ್ದೂ ಕಠಿಣವಾದದ್ದೂ ಎಂಬವಕ್ಕೆ ಏನೂ ಸಂದೇಹವಿಲ್ಲ. ಆದರೆ ಕೆಲವರು ಶಿಕ್ಷಕರು ತಮ್ಮ ಜವಾಬದಾರಿಯನ್ನು ಆಲೋಚಿಸದೇ ತಮ್ಮ ಕೈಕೆಳಗಿನ ವಿದ್ಯಾರ್ಥಿಗಳ ಹಿತವನ್ನು ಲಕ್ಷಿಸದೇ ಹಾಗೂ ಹೀಗೂ ಕಾಲಪರಣ ಮಾಡುವದರಿಂದ 'ಗುರು' ಎಂಬ ಗೌರವದ ಹೆಸರಿಗೆ ಕುಂದು ತಂದಿರುವರು. ಇದನ್ನು ಕಂಡು ಯಾರಿಗಾದರೂ ಖೇದವಾಗಬಹುದು. ಇತ್ತಲಾಗಿ ಟ್ರೇನಿಂಗ ಕಾಲೇಜದ ಜನರು ಕೈಲಾದಮಟ್ಟಿಗೆ ಈ ಕುಂದನ್ನು ಹೋಗಲಾಡಿಸುವ ಯತ್ನ ಮಾಡುತ್ತಿರುವದನ್ನು ಕೇಳಿ ಸಮಾಧಾನವಾಗುತ್ತದೆ.

ಶಿಕ್ಷಕನು ಎಷ್ಟು ಬಹುಶ್ರುತನೂ ಪಂಡಿತನೂ ಆದಾಗ್ಯೂ ವರ್ಗಕ್ಕೆ ಕಲಿಸುವ ಪಾಠಗಳನ್ನು ಪ್ರತಿದಿನ ಆಲೋಚಿಸಿ ಸಿದ್ಧ ಮಾಡಿಕೊಂಡು ಹೋಗುವದು ಅವಶ್ಯವಾದದ್ದು. ಈ ಪ್ರಕಾರ ಪೂರ್ವಸಿದ್ಧತೆಯಿಂದ ಕಲಿಸಲು, ಕೆಲಸವು ಭರದಿಂದ ಸಾಗುವದೆಂಬದಿಷ್ಟೇ ಅಲ್ಲ, ವಿದ್ಯಾರ್ಥಿಗಳ ನಡೆನುಡಿಗಳಲ್ಲಿಯೂ ತಿದ್ದುಪಾಟು ಆಗುವದು. ಆಲಸ್ಯ, ಮೈಗಳ್ಳತನ, ಸುಳ್ಳಾಡೋಣ ಮುಂತಾದ ದುರ್ಗುಣಗಳಿಗೆ ಆಸ್ಪದವೇ ಇಲ್ಲದಂತಾಗಿ ಅವು ಗೂಳ

ಕಟ್ಟಿಕೊಂಡು ಹೋಗುವವು ಪೂರ್ವಸಿದ್ಧತೆಯಿಂದ ಈ ರ
ರವ ಲಾಭಗಳಾಗುತ್ತವೆ. ಆದದರಿಂದ ಎಲ್ಲ ಶಾಲಾಗುರು
ಳು ತಾವು ಸ್ವತಃ ಪಾಠಗಳನ್ನು ಸಿದ್ಧ ಮಾಡಿಕೊಂಡು ಹೊ
ಗುವದಲ್ಲದೆ ಉಪಶಿಕ್ಷಕರೂ ತಮ್ಮ ಪಾಠಗಳನ್ನು ಸಿದ್ಧಮ
ಡಿಕೊಂಡು ಬರುವಂತೆ ಯತ್ನಿಸತಕ್ಕದ್ದು. ಶಿಕ್ಷಕರೂ ಉ
ಪಶಿಕ್ಷಕರೂ ತಾವು ಕಲಿಸುವ ಪಾಠದ ಟಿಪ್ಪಣಿಗಳನ್ನು ಸಿ
ದ್ಧ ಮಾಡಬೇಕೆಂದು ನಾವು ಆಗ್ರಹಪೂರ್ವಕವಾಗಿ ಹೇಳು
ತ್ತೇವೆ. ಈ ಟಿಪ್ಪಣಿಗಳ ಮಾದರಿಗಳನ್ನು ಯಥಾವಕಾ
ಶವಾಗಿ ಈ ಪುಸ್ತಕದಲ್ಲಿ ಕೊಡುವೆವು.

ಪಾಠದ ಟಿಪ್ಪಣಿಗಳು:—ಕಲಿಸುವ ವಿಷಯದ ಸಂಬಂಧ
ವಾಗಿ ವಿದ್ಯಾರ್ಥಿಗಳಿಗೆ ಹೇಳತಕ್ಕ ಸಂಗತಿಗಳನ್ನೆಲ್ಲ ವ್ಯವ
ಸ್ಥಿತವಾಗಿ ಸೇರಿಸಿ ಕೊಳ್ಳಪ್ಪಕರೂಪದಿಂದ ತಯಾರಿಸಿದ ಟಿಪ್ಪ
ಣಿಯು ಪಾಠದ ಟಿಪ್ಪಣಿಯೆಂದು ವ್ಯವಹರಿಸುವದು. ಕಲಿಸುವ
ವಿಷಯವನ್ನು ಯಥಾಕ್ರಮವಾಗಿ ರಚಿಸುವದೂ ವಿದ್ಯಾರ್ಥಿಗಳ
ಮನಸ್ಸು ಆ ವಿಷಯದ ಕಡೆಗೆ ಎಳೆಯುವಂತೆ ಮಾಡುವದೂ
ಸ್ಮರಣಶಕ್ತಿಯನ್ನು ಬಲಪಡಿಸುವದೂ ಇವೇ ಮೊದಲಾದ
ವು ಈ ಟಿಪ್ಪಣಿಗಳ ಉದ್ದೇಶಗಳು. ಈ ಟಿಪ್ಪಣಿಗಳು ಕಲಿ
ಸತಕ್ಕ ವಿಷಯದ ಸಾರಸಂಗ್ರವವಾಗಿರುವವು. ಇವುಗಳಿಂದ
ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಬಹು ಪ್ರಯೋಜನ ಉಂಟು

ಶಿಕ್ಷಕರಿಗಾಗುವ ಪ್ರಯೋಜನಗಳು:—ಇವರಿಂದ ಶಿಕ್ಷ
ಕರಿಗೆ ಅವರ ಸ್ವಂತ ಜ್ಞಾನದ ಮಟ್ಟವು ಗೊತ್ತಾಗುತ್ತದೆ;
ಹೇಳತಕ್ಕ ಸಂಗತಿಗಳನ್ನು ಅರಿಸುವ ಮತ್ತು ಹೊಂದಿಸುವ
ರೂಢಿಯಾಗುತ್ತದೆ; ವಿಷಯದ ಪೂರ್ಣ ಜ್ಞಾನವಾಗುತ್ತದೆ;
ವಿಷಯದ ಮುಖ್ಯ ಮುಖ್ಯ ಪ್ರಕರಣಗಳನ್ನು ಅಂದರೆ ಭಾ
ಗಗಳನ್ನು ಭಾಗ ಭಾಗಗಳ ಸಂಬಂಧವನ್ನು ತಕ್ಕ ಕ್ರ

ಮದಿಂದ ವೇಳೆ ಕಳೆಯದೆ ವಿದ್ಯಾರ್ಥಿಗಳ ಮುಂದಿಡುವ ಸಾಮರ್ಥ್ಯವು ಮಟ್ಟುತ್ತದೆ.

ವಿದ್ಯಾರ್ಥಿಗಳಿಗೆ ಪ್ರಯೋಜನ:—ಶಿಕ್ಷಕನು ವ್ಯವಸ್ಥಿತವಾದ ಟಿಪ್ಪಣಿಗಳ ಸಹಾಯದಿಂದ ಅಭ್ಯಾಸವನ್ನು ಸಾಗಿಸಲು ವಿದ್ಯಾರ್ಥಿಗಳಿಗೆ ಅಷ್ಟಿಷ್ಟು ಪ್ರಯೋಜನವಾಗುತ್ತದೆಂದು ಹೇಳಲಾಗದು. ಕರೆ ಪಲಿಗೆಯ ಮೇಲೆ ಬರೆದ ಪಾಠವು ಮರ್ಯಾದಾರೇಖೆಯಿಂದ ಅವರಿಗೆ ವಿಷಯದ ಸ್ವರೂಪವು ಬಿಮ್ಮಲೇ ಗೊತ್ತಾಗುವದಿಲ್ಲದೆ, ಭಾಗ ಭಾಗಗಳ ಪರಸ್ಪರ ಸಂಬಂಧವೂ, ಭಾಗಕ್ಕೂ ವಿಷಯಕ್ಕೂ ಇರುವ ಸಂಬಂಧವೂ ತಿಳಿಯುವದು. ಇದರಿಂದ ಅವರ ಜ್ಞಾನವು ಬೆಳೆಯುವದು; ಸ್ಮರಣಶಕ್ತಿಯೂ ಬಲಪಡುವದು. ಪಾಠವನ್ನು ವ್ಯವಸ್ಥಿತವಾಗಿ ಹೇಳಿ ಹೇಳಿದಂತೆ ವಿದ್ಯಾರ್ಥಿಗಳ ಮನಸ್ಸು ವಿಸ್ತೃತವಾದದ್ದೂ ಸಾಮರ್ಥ್ಯವುಳ್ಳದ್ದೂ ಆಗುವದು. ಅವರ ಜ್ಞಾನವು ಬೆಳೆಯುತ್ತ ಹೋದಂತೆ ನಿರೀಕ್ಷಣ-ತುಲನಾ ಸಾಮರ್ಥ್ಯಗಳು ಹೆಚ್ಚಿಗೆ ಕೆಲಸಕ್ಕೆ ಹಚ್ಚಲ್ಪಟ್ಟು ಬೆಳೆಯುವವು. ವಿಚಾರಶಕ್ತಿಯನ್ನು ಪ್ರಯೋಗಿಸುವ ಉತ್ಸಾಹವು ಅವರಲ್ಲಿ ಹುಟ್ಟುವದು; ಅಂದರೆ ಪರರ ಸಹಾಯವಿಲ್ಲದೆ ಸ್ವಂತ ಶ್ರಮದಿಂದ ಕಲಿಯುವ ವಿಷಯದ ಸಂಬಂಧದ ಸಂಗತಿಗಳನ್ನು ತಿಳಿಕೊಳ್ಳುವ ಉತ್ಸಾಹವು ಅವರಲ್ಲಿ ತಲೆದೋರುವದು. ಸಾರಾಂಶ, ಶಿಕ್ಷಣವು ಯಥಾರ್ಥವಾಗಿ ಸಾಗುವದು. ಗಿಳಿಯು ಪಿದಿಗೆ ಅವಕಾಶ ದೊರಿಯುವದಿಲ್ಲ.

ಈ ಟಿಪ್ಪಣಿಗಳೇ ಶಿಕ್ಷಕನ ಶಿಕ್ಷಣಕಾರ್ಯದ ಕುರುಹುಗಳಾಗಿರುತ್ತವೆ. ಶಿಕ್ಷಕನು ಬಹು ಶ್ರುತನಾಗಿರುವದು ಅವಶ್ಯವು. ಆದರೆ ಪಲವು ಸಂಗತಿಗಳ ಜ್ಞಾನವಷ್ಟೇ ಸಾಲದು. ಕಲಿಸುವ ಕಾರ್ಯದಲ್ಲಿ ಆ ಜ್ಞಾನವನ್ನು ಹ್ಯಾಗೆ

ಕಟ್ಟಿಕೊಂಡು ಹೋಗುವವು ಪೂರ್ವಸಿದ್ಧತೆಯಿಂದ ಈ ರವ ಲಾಭಗಳಾಗುತ್ತವೆ. ಅದರಿಂದ ಎಲ್ಲ ಶಾಲಾಗುರು ಳು ತಾವು ಸ್ವತಃ ಪಾಠಗಳನ್ನು ಸಿದ್ಧ ಮಾಡಿಕೊಂಡು ಹೋ ಗುವದಲ್ಲದೆ ಉಪಶಿಕ್ಷಕರೂ ತಮ್ಮ ಪಾಠಗಳನ್ನು ಸಿದ್ಧಮಾ ಡಿಕೊಂಡು ಬರುವಂತೆ ಯತ್ನಿಸತಕ್ಕದ್ದು. ಶಿಕ್ಷಕರೂ ಉ ಪಶಿಕ್ಷಕರೂ ತಾವು ಕಲಿಸುವ ಪಾಠದ ಟಿಪ್ಪಣಿಗಳನ್ನು ಸಿ ದ್ಧ ಮಾಡಬೇಕೆಂದು ನಾವು ಆಗ್ರಹಪೂರ್ವಕವಾಗಿ ಹೇಳು ತ್ತೇವೆ. ಈ ಟಿಪ್ಪಣಿಗಳ ಮಾದರಿಗಳನ್ನು ಯಥಾವಕಾಶ ವಾಗಿ ಈ ಪುಸ್ತಕದಲ್ಲಿ ಕೊಡುವೆವು.

ಪಾಠದ ಟಿಪ್ಪಣಿಗಳು:—ಕಲಿಸುವ ವಿಷಯದ ಸಂಬಂಧ ವಾಗಿ ವಿದ್ಯಾರ್ಥಿಗಳಿಗೆ ಹೇಳತಕ್ಕ ಸಂಗತಿಗಳನ್ನೆಲ್ಲ ವ್ಯವ ಸ್ಥಿತವಾಗಿ ಸೇರಿಸಿ ಕೋಷ್ಟಕರೂಪದಿಂದ ತಯಾರಿಸಿದ ಟಿಪ್ಪ ಣಿಯು ಪಾಠದ ಟಿಪ್ಪಣಿಯೆಂದು ವ್ಯವಹರಿಸುವದು. ಕಲಿಸುವ ವಿಷಯವನ್ನು ಯಥಾಕ್ರಮವಾಗಿ ರಚಿಸುವದೂ ವಿದ್ಯಾರ್ಥಿಗಳ ಮನಸ್ಸು ಆ ವಿಷಯದ ಕಡೆಗೆ ಎಳೆಯುವಂತೆ ಮಾಡುವದೂ ಸ್ಮರಣ ಶಕ್ತಿಯನ್ನು ಬಲವಡಿಸುವದೂ ಇವೇ ಮೊದಲಾದ ವು ಈ ಟಿಪ್ಪಣಿಗಳ ಉದ್ದೇಶಗಳು. ಈ ಟಿಪ್ಪಣಿಗಳು ಕಲಿ ಸತಕ್ಕ ವಿಷಯದ ಸಾರಸಂಗ್ರಹವಾಗಿರುವವು. ಇವುಗಳಿಂದ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಬಹು ಪ್ರಯೋಜನ ಉಂಟು.

ಶಿಕ್ಷಕರಿಗಾಗುವ ಪ್ರಯೋಜನಗಳು:—ಇವರಿಂದ ಶಿಕ್ಷ ಕರಿಗೆ ಅವರ ಸ್ವಂತ ಜ್ಞಾನದ ಮಟ್ಟು ಗೊತ್ತಾಗುತ್ತದೆ ಹೇಳತಕ್ಕ ಸಂಗತಿಗಳನ್ನು ಅರಿಸುವ ಮತ್ತು ಹೊಂದಿಸುವ ರೂಢಿಯಾಗುತ್ತದೆ; ವಿಷಯದ ಪೂರ್ಣ ಜ್ಞಾನವಾಗುತ್ತದೆ ವಿಷಯದ ಮುಖ್ಯ ಮುಖ್ಯ ಪ್ರಕರಣಗಳನ್ನು ಅಂದರೆ ಭಾ ಗಗಳನ್ನೂ ಭಾಗ ಭಾಗಗಳ ಸಂಬಂಧವನ್ನೂ ತಕ್ಕ ಕ್ರ

ಮುದಿಂದ ಮೇಳೆ ಕಳಿಯಬೆ ವಿದ್ಯಾರ್ಥಿಗಳ ಮುಂದಿಡುವ ಸಾಮರ್ಥ್ಯವು ಪುಟ್ಟುತ್ತದೆ.

ವಿದ್ಯಾರ್ಥಿಗಳಿಗೆ ಪ್ರಯೋಜನ:—ಶಿಕ್ಷಕನು ವ್ಯವಸ್ಥಿತವಾದ ಟಿಪ್ಪಣಿಗಳ ಸಹಾಯದಿಂದ ಅಭ್ಯಾಸವನ್ನು ಸಾಗಿಸಲು ವಿದ್ಯಾರ್ಥಿಗಳಿಗೆ ಅಷ್ಟಿಷ್ಟು ಪ್ರಯೋಜನವಾಗುತ್ತದೆಂದು ಹೇಳಲಾಗದು. ಈರೆ ಪಲಿಗೆಯ ಮೇಲೆ ಬರೆದ ಪಾಠವು ಮರ್ಯಾದಾರೇಖೆಯಿಂದ ಅವರಿಗೆ ವಿಷಯದ ಸ್ವರೂಪವು ಒಮ್ಮೆಲೇ ಗೊತ್ತಾಗುವದಲ್ಲದೆ, ಭಾಗ ಭಾಗಗಳ ಪರಸ್ಪರ ಸಂಬಂಧವೂ, ಭಾಗಕ್ಕೂ ವಿಷಯಕ್ಕೂ ಇರುವ ಸಂಬಂಧವೂ ತಿಳಿಯುವದು. ಇದರಿಂದ ಅವರ ಜ್ಞಾನವು ಬೆಳೆಯುವದು; ಸ್ಮರಣಶಕ್ತಿಯೂ ಬಲಪಡುವದು. ಪಾಠವನ್ನು ವ್ಯವಸ್ಥಿತವಾಗಿ ಹೇಳ ಹೇಳಿದಂತೆ ವಿದ್ಯಾರ್ಥಿಗಳ ಮನಸ್ಸು ವಿಸ್ತೃತವಾದದ್ದೂ ಸಾಮರ್ಥ್ಯವೃದ್ಧಿಯೂ ಆಗುವದು. ಅವರ ಜ್ಞಾನವು ಬೆಳೆಯುತ್ತ ಹೋದಂತೆ ನಿರೀಕ್ಷಣ-ತುಲನಾ ಸಾಮರ್ಥ್ಯಗಳು ಹೆಚ್ಚಿಗೆ ಕೆಲಸಕ್ಕೆ ಹಚ್ಚಲ್ಪಟ್ಟು ಬೆಳೆಯುವವು. ವಿಚಾರಶಕ್ತಿಯನ್ನು ಪ್ರಯೋಗಿಸುವ ಉತ್ಸಾಹವು ಅವರಲ್ಲಿ ಹುಟ್ಟುವದು; ಅಂದರೆ ಪರರ ಸಹಾಯವಿಲ್ಲದೆ ಸ್ವಂತ ಶ್ರಮದಿಂದ ಕಲಿಯುವ ವಿಷಯದ ಸಂಬಂಧದ ಸಂಗತಿಗಳನ್ನು ತಿಳಕೊಳ್ಳುವ ಉತ್ಸಾಹವು ಅವರಲ್ಲಿ ತಲೆದೋರುವದು. ಸಾರಾಂಶ, 'ಶಿಕ್ಷಣವು ಯಥಾರ್ಥವಾಗಿ ಸಾಗುವದು. ಗಿಳಿಯು ಪಿದಿಗೆ ಅವಕಾಶ ದೊರಿಯುವದಿಲ್ಲ.

ಈ ಟಿಪ್ಪಣಿಗಳೇ ಶಿಕ್ಷಕನ ಶಿಕ್ಷಣಚಾತುರ್ಯದ ಕುರುಹುಗಳಾಗಿರುತ್ತವೆ. ಶಿಕ್ಷಕನು ಬಹು ಪ್ರತಿಭಾವಂತನಾಗಿರುವದು ಅವಶ್ಯವು. ಆದರೆ ಪಲವು ಸಂಗತಿಗಳ ಜ್ಞಾನವಷ್ಟೇ ಸಾಲದು. ಕಲಿಸುವ ಕಾರ್ಯದಲ್ಲಿ ಆ ಜ್ಞಾನವನ್ನು ಹ್ಯಾಗೆ

ಪ್ರಯೋಗಿಸಬೇಕೆಂಬವರ ಜ್ಞಾನವೂ ಇರಲಿಕ್ಕೆ ಬೇಕು. ವಲ ಇಮಾರತಿನ ಸಾಹಿತ್ಯ ಹತ್ಯಾರಗಳಿಂದಲೇ ಭವ್ಯವಾ ದಂಥ ಇಮಾರತನ್ನು ಕಟ್ಟುವದು ಯಾರಿಗೂ ಸಾಧ್ಯವಾಗ ಇಮಾರತನ್ನು ಕಟ್ಟುವ ಮನುಷ್ಯನಿಗೆ ಆ ಇಮಾರತಿನ ಕಾತೆಯು ಬೇಕೇ ಬೇಕು. ನಕಾತೆಯಲ್ಲಿ ತೋರಿಸಿದಂತೆ ಇಮಾರತಿನ ಸೊಬಗೂ, ಸಾಮರ್ಥ್ಯವೂ ಆಗುವವು. ಆ ದೇ ಪ್ರಕಾರ ಪಾಠದ ಟಿಪ್ಪಣಿಗಳು ಶಿಕ್ಷಣಕ್ರಮವನ್ನು ಸೂ ಚಿಸುವವು. ಶಿಕ್ಷಕನು ತಯಾರಿಸಿದ ಟಿಪ್ಪಣಿಯಿಂದ ಅವ ನಿಗೆ ಪಾಠದ ವಿಷಯವಾಗಿ ಏನು ಗೊತ್ತಿದೆ ಎಂಬದು ತಿ ಯುವದಲ್ಲದೆ, ಅವನು ಆ ಪಾಠವನ್ನು ಹ್ಯಾಗೆ ಕಲಿಸುವ ನು; ವಿದ್ಯಾರ್ಥಿಗಳಿಗೆ ಹ್ಯಾಗೆ ಸಹಾಯ ಮಾಡುವನು, ಅವರ ಮಾನಸಿಕ ಶಕ್ತಿಗಳನ್ನು ಹ್ಯಾಗೆ ಬಲಪಡಿಸುವನು, ವಿಚಾರ ಮಾಡಲಿಕ್ಕೆ ಅವರಿಗೆ ಹ್ಯಾಗೆ ಹಚ್ಚುವನು; ಎಡ ರುಗಳನ್ನು ಪರಿಹರಿಸುವ ಧೈರ್ಯವನ್ನು ಹ್ಯಾಗೆ ಹುಟ್ಟಿಸು ವನು, ಎಂಬದೂ ಗೊತ್ತಾಗುವದು.

ಪಾಠದ ಟಿಪ್ಪಣಿಯ ಭಾಗಗಳು:—ಪಾಠಿಕೆಯಾಗಿ ಪಾಠ ದ ಟಿಪ್ಪಣಿಯ ಭಾಗಗಳು ನಾಲ್ಕು ಇರುತ್ತವೆ.—(೧) ಉ ಪೋದ್ಘಾತ. (೨) ಪ್ರಕರಣಗಳು. (೩) ವಿಷಯ. (೪) ಕ ಲಿಸುವ ಕ್ರಮ.

೧. ಉಪೋದ್ಘಾತ—ಪಾಠದ ವಿಷಯವನ್ನು ಸೂಚಿಸು ವಂಥ ಇಲ್ಲವೆ ಆ ವಿಷಯಕ್ಕೆ ಹೋಲುವಂಥ ಬಂದು ರೂಢಿಯೊ ಗಿನ ಪದಾರ್ಥವನ್ನು ವಿದ್ಯಾರ್ಥಿಗಳ ಮುಂದಿಟ್ಟು ಅದರ ದ್ವಾರದಿಂದ ವಿಷಯವನ್ನು ಪಕ್ರಮಿಸಬಹುದು. ವಿಷಯದ ಉಪಕ್ರಮವನ್ನು ಪ್ರಶ್ನರೂಪದಿಂದಾಗಲಿ, ಕಥೆಯ ರೂಪ

ದಿಂದಾಗಲಿ ಮಾಡಬಹುದು. ಬಂದು ಚಿತ್ರವನ್ನಾಗಲಿ, ನಕಾಶವನ್ನಾಗಲಿ, ಪಾಠದ ವಿಷಯಭೂತವಾದ ಬಡವೆಯನ್ನಾಗಲಿ, ವಿದ್ಯಾರ್ಥಿಗಳ ಮುಂದಿಟ್ಟು ಅವರ ಲಕ್ಷವನ್ನಿಳಿಕೊಳ್ಳಬಹುದು. ಪ್ರಸಂಗೋಪಾತ್ತಾಗಿ ಬಮ್ಮೆಲೆ ವಿಷಯವನ್ನು ಹೇಳಿ ಅದನ್ನು ಕಲಿಸಲಿಕ್ಕೆ ಹತ್ತಬಹುದು. ಸಿಂಹದ ಪಾಠವನ್ನು ಕಲಿಸುವಾಗ ಉಪೋದ್ಘಾತ ರೂಪದಿಂದ ಬೆಕ್ಕಿನ ಸ್ವಲ್ಪ ವರ್ಣನೆಯನ್ನು ಹೇಳಬಹುದು. ಇದಕ್ಕೆ ಕಾರಣವೇನಂದರೆ, ಬೆಕ್ಕು ಸಿಂಹದ ಕುಲದ್ದು ಇದ್ದು, ವಿದ್ಯಾರ್ಥಿಗಳಿಗೆ ಪರಿಚಿತವಾದದ್ದು, ಗುಣಧರ್ಮಾದಿಗಳಲ್ಲಿ ಸಿಂಹಕ್ಕೆ ಹೋಲುವಂಥಾದು ಇರುತ್ತದೆ. ಇದೇ ಮೇರೆಗೆ ಆನೆಯ ಪಾಠವನ್ನು ಹೇಳುವಾಗ ಕುದುರೆಯಿಂದ ಆ ಪಾಠವನ್ನಾರಂಭಿಸಬಹುದು; ತೋಳನ ಪಾಠವನ್ನು ನಾಯಿಯ ವರ್ಣನೆಯಿಂದ, ಹಾವಿನ ಪಾಠವನ್ನು ಕೀಟಯ ವರ್ಣನೆಯಿಂದ ಉಪಕ್ರಮಿಸಬಹುದು. ಬಂದೇ ಪ್ರಕಾರದ ಉಪಕ್ರಮದಿಂದ ಬೇಸರಿಕೆ ಬರುವಂತೆ ಕಂಡರೆ ಅನ್ಯ ಪ್ರಕಾರದಿಂದ ಕೈಕೊಂಡ ವಿಷಯವನ್ನು ಉಪಕ್ರಮಿಸಬಹುದು. ಆಕಳ ಪಾಠವನ್ನು ಪಾಯಸದ ವರ್ಣನೆಯಿಂದ, ಗಿಡದ ಪಾಠವನ್ನು ಮೇಜು ಖುರ್ಚಿಗಳ ವರ್ಣನೆಯಿಂದ, ಕಬ್ಬಿಣದ ಪಾಠವನ್ನು ಮೊಳೆ ಮರಡುಗಳ ಮುಖಾಂತರದಿಂದ ಆರಂಭಿಸಬಹುದು. ಉಪೋದ್ಘಾತ ವೈಚಿತ್ರ್ಯವು ಬಹಳ ಪ್ರಯೋಜನಕರವಾದದ್ದು; ಆದರೆ ಉಪೋದ್ಘಾತವು ತಕ್ಕದ್ದೂ ಪ್ರಯೋಜನಕರವಾದದ್ದೂ ಇರಲಿಕ್ಕೆ ಬೇಕು. ಯಾವದೊಂದು ಪಾಠದ ಗೌರವವು ವಿದ್ಯಾರ್ಥಿಗಳ ಲಕ್ಷವನ್ನವಲಂಬಿಸಿರುವದು. ಲಕ್ಷವನ್ನು ಎಳಕೊಳ್ಳಲಿಕ್ಕೆ ಶಿಕ್ಷಕರು ಆರಂಭದಲ್ಲಿಯೇ ಎಚ್ಚರ ಪಡಬೇಕು. ಆದದರಿಂದ ಪಾಠ

ದ ಉಪಕ್ರಮದ ಸಂಬಂಧದಿಂದ ಶಿಕ್ಷಕರು ಜಾಗೃತರಾಗಿರು ವದು ಬಹು ಅವಶ್ಯವಾದದ್ದು.

೨. ಪ್ರಕರ್ಣ—ಕಲಿಸುವ ವಿಷಯವು ಸರಿಯಾಗಿ ತಿಳಿಯುವಂತೆ ಅದರಲ್ಲಿ ಕಲ್ಪಿಸಿದ ಮೆಟ್ಟುಗಳೇ ಪ್ರಕರಣಗಳು. ಇವು ಸ್ವಲ್ಪಾಗಿಯೂ ಪೂರ್ಣವಾಗಿಯೂ ಪರಸ್ಪರ ಭಿನ್ನವಾಗಿಯೂ ಇರತಕ್ಕವು. ಪಾಠ ಹೇಳುವಾಗ ಈ ಪ್ರಕರಣಗಳನ್ನು ಕರೇ ಹಲಿಗೆಯ ಮೇಲೆ ಬರೆಯಬೇಕು.

CORRESPONDENCE.
ಪತ್ರವ್ಯವಹಾರ.

ರಾ. ಸಾ. ಎಡೀಟರ ಕನ್ನಡ ಶಾಲಾಪತ್ರಿಕ ಇವರ ಸನ್ನಿಧಿಗೆ—

ವಿ. ವಿ. ಕೆಳಗೆ ಬರೆದ ಗಣಿತ ಪ್ರಶ್ನಗಳನ್ನು ತಮ್ಮ ಕರಕೋಕನವದಿಂದುವ್ಬವಿಸುವ ಕಮನೀಯವಾದ ಶಾಲಾಪತ್ರಿಕದಲ್ಲಿ ಪ್ರಸಿದ್ಧಿಸುವಿರೆಂದು ತುಂಬಾ ಕೋರುತ್ತೇನೆ.

೧. ಅ, ಬ, ಕ ಈ ಮೂರು ಊರುಗಳ ನಡುವೆ ಅನುಕ್ರಮವಾಗಿ, ೧೫—೨೦—೨೦ ಮೈಲು ಅಂತರ ಉಂಟು. ಈ ಮೂರೂ ಊರುಗಳಿಂದ ಸಮಾನಾಂತರದ ಮೇಲೆ, ಬಂದು ಸರೋವರವದೆ; ಆದರೆ ಅದು ಆ ಊರುಗಳಿಂದ ಎಷ್ಟು ಅಂತರದ ಮೇಲೆ ಇರುವದು?

೨. ಘಡಿಯಾರದೊಳಗೆ ೪ ಮತ್ತು ೫ ಹೊಡೆಯುವದರ ನಡುವೆ ತಾಸಿನ ಮುತ್ತು ಮಿನೀಟಿನ ಮುಳ್ಳುಗಳಲ್ಲಿ ಯಾವ ಸ್ಥಿತಿಯಿರುವದೋ, ಅದರ ವ್ಯುತ್ಕ್ರಮ ಸ್ಥಿತಿಯು ೧೦ ಮತ್ತು ೧೧ ದರ ನಡುವೆ ಆದರೆ ಮೊದಲು ಘಡಿಯಾರದಲ್ಲಿ ಎಷ್ಟು ವೇಳೆಯಾಗಿತ್ತು?

೩. ಎರಡು ಸಂಖ್ಯೆಗಳ ವರ್ಗಗಳ ಬೇರೀಜು, ಅವೇ

ಸಂಖ್ಯೆಗಳ ಘನಗಳ ಬೇರೀಜಿಗೆ ಸರಿ ಇವ್ವರೆ, ಆ ಸಂಖ್ಯೆಗಳು,—೫ ಬೇಕಾದ ಎರಡು ಅಂಕೆಗಳ ವರ್ಗಗಳ ಬೇರೀಜಿಗೆ, ಅವುಗಳ ಘನಗಳ ಬೇರೀಜಿನಿಂದ ಭಾಗಿಸಿ ಬಂದ ಭಾಗಾಕಾರಕ್ಕೆ ಮೂಲ ಅಂಕೆಗಳಿಂದ ಗುಣಿಸಿ ಬಂದ ಗುಣಾಕಾರಗಳೇ ಇರುವವು; ಎಂಬದನ್ನು ಸಪ್ರಮಾಣ ಸಿದ್ಧ ಮಾಡಿರಿ.

ಇವುಗಳನ್ನು ಯಾರಾದರೂ ಇದೇ ಪತ್ರಕದ ಮುಖಾಂತರವಾಗಿ ಬಿಡಿಸಿ ಕಳುಹಿದರೆ, ಅವರ ಉಪಕಾರವನ್ನು ನೆನಿಸುವೆನು. ಇಂತಿ ವಿಜ್ಞಾಪನೆ.

ಕಲ್ಲೋಳ ತಾ. ಬಿಕ್ಕೋಡಿ,
ತಾ॥ ೧೬–೧–೧೯೯೫.

ವಿಷ್ಣು ಬಾಬಾಜಿರಾವ,
ಕುಲಕರ್ಣಿ ಕಲ್ಲೋಳ.

ರಾವಸಾಹೇಬ ಶಾಲಾ ಪತ್ರ ದೆರೆಯರ ಸನ್ನಿಧಿಗೆ–

ಸಾಷ್ಟಾಂಗ ನಮಸ್ಕಾರ ವಿನಂತಿ—ಅಯ್ಯಾ! ಈಗ ನಡೆಯುವ ಶಾಲೆಗಳೊಳಗಣ ಮೂರನೇ ಇಯತ್ತೆಯ ವಿದ್ಯಾರ್ಥಿಗಳಿಗೆ ನಾಮ, ಸರ್ವನಾಮ, ವಿಶೇಷಣ, ಕ್ರಿಯಾಪದ, ಅವ್ಯಯ ಈ ವಿಷಯಗಳ ಸಾಧಾರಣ ವ್ಯಾಕರಣ ಜ್ಞಾನವುಂಟಾಗಬೇಕೆಂಬ ನೇಮವಿರುವದಾದ್ದರಿಂದಾನು ಎನ್ನ ಕೊಂಚ ತಿಳುವಳಿಕೆಗೆ ಹೊಳೆದ ಮಟ್ಟಿಗೆ ಮೇಲ್ಕಾಣಿಸಿದವುಗಳನ್ನು, ನೀನೇ ಇಯತ್ತೆಯವರ್ಗಂತು ತಿಳಿಸಬೇಕೆಂಬದರ ಹೊಳವನ್ನು ತಮ್ಮಡಿಗಳ್ಗೆ ಬರೆದು ಕೊಂಡಿರುವೆನಿ ನರೊಳ್ಕೊಂಕು ಕೊರತೆಗಳೇನಾದರೂ ಕಂಡು ಬಂದಲ್ಲಿ ಅವುಗಳನ್ನು ಕಿತ್ತಿ ಬಗೆದು ತಕ್ಕದ್ದನ್ನೇ ಇದೇ ತಿಂಗಳ ನಿಮ್ಮ ಪತ್ರಿಕೆಯಲ್ಲಿ ಬೈಲಿಗೆ ತರುವಿರೆಂಬ ತುಂಬಾ ನಂಬಿಕೆ ನನಗುಂಟು. (ಮೊದಲು ಪಂಚೇಂದ್ರಿಯಗಳಾವವೆಂಬದಂ ತಿಳಿಸಬೇಕು.)

ಗುರು—(ಬಬ್ಬ ವಿದ್ಯಾರ್ಥಿಗೆ) ಸಪ್ಪಳವು ನಮಗೆ ಯಾತರಿ
ದ ತಿಳಿಯುತ್ತದೆ?

ವಿದ್ಯಾರ್ಥಿ—ಕಿವಿಯಿಂದ ತಿಳಿಯುತ್ತದೆ. (ಕೆಲವು ವಾದ್ಯಗಳ
ಸಪ್ಪಳಗಳನ್ನು ಕೇಳಬೇಕು.)

ಗು—ನಾತವು ಯಾತರಿಂದ ತಿಳಿಯುತ್ತದೆ?

ವಿ—ಮೂಗಿನಿಂದ ತಿಳಿಯುತ್ತದೆ. (ಗಂಧದೆಣ್ಣೆ, ಚಿಮಣಿಯೆ
ಣ್ಣೆ, ಗೌಲಕಜ್ಜರ, ಊದಿನಕಡ್ಡಿ, ಬುಕ್ಕಿಟ್ಟು, ಕೇಸ
ಗಿ, ಕಾವುಕಸೂರಿ ಮುಂತಾದವುಗಳ ನಾತವು ಹ್ಯಾಗೆ
ಇರುತ್ತದೆಂಬವನ್ನು ವಿದ್ಯಾರ್ಥಿಗಳಿಂದ ಹೊರಡಿಸ
ಬೇಕು.)

ಗು—ಆನೆ ದೊಡ್ಡದೋ? ಆಡು ದೊಡ್ಡದೋ?

ವಿ—ಆನೆ ದೊಡ್ಡದು.

ಗು—ಆನೆ ದೊಡ್ಡದೆಂಬದು ಯಾತರಿಂದ ತಿಳಿಯುತ್ತದೆ?

ವಿ—ಕಣ್ಣಿನಿಂದ ನೋಡಲಾಗಿ ತಿಳಿಯುತ್ತದೆ. (ಕಣ್ಣಿಗೆ ಕಾ
ಣುವ ಗಿಡ, ಮನೆ, ಕಾಗದ, ಪುಸ್ತಕ, ಮೇಜು, ಪಾಟಿ
ಮುಂತಾದವುಗಳು ಕಣ್ಣಿನಿಂದ ತಿಳುಕೊಳ್ಳತಕ್ಕವೆಂಬ
ದನ್ನು ಚನ್ನಾಗಿ ತಿಳಿಸಿಕೊಡಬೇಕು.

ಗು—ಸಕ್ಕರೆಯು ರುಚಿ ಹ್ಯಾಗೆ ಇರುತ್ತದೆ?

ವಿ—ಸವಿ ಇರತೈತ್ರಿ.

ಗು—ಹುಣಸಿ ಪಣ್ಣಿನ ರುಚಿ ಹ್ಯಾಗೆ ಇರುತ್ತದೆ?

ವಿ—ಹುಳಿ ಇರುತ್ತದೆ.

ಗು—ಹುಳಿ ಸವಿ ಇವು ಯಾತರಿಂದ ತಿಳಿಯುತ್ತವೆ?

ವಿ—ನಾಲಿಗೆಯಿಂದ ತಿಳಿಯುತ್ತವೆ. (ಕಾರ, ಉಪ್ಪು, ಬಿ
ರು, ಕಹಿ ಮುಂತಾದವು ನಾಲಿಗೆಗೆ ತಿಳಿಯುತ್ತವೆಂಬ
ದನ್ನು ಓದುಗರಿಂದಲೇ ಹೊರಡಿಸಬೇಕು.)

-ಗಾಳಿಯು ನಮಗೆ ಕಾಣುತ್ತದೊ ?

-ಇಲ್ಲ.

-ಹಾಗಾದರೆ ಗಾಳಿ ಬಿಟ್ಟಿದೆ ಎಂಬದು ನಮಗೆ ಯಾವಾಗ ತಿಳಿಯುತ್ತದೆ ?

ನಮ್ಮ ಮೈ ಚರ್ಮಕ್ಕೆ ಬಂದು ಬಡಿದಾಗ್ಗೆ ಗೊತ್ತಾಗುತ್ತದೆ. (ಚಿಕ್ಕಾಟಿ, ತಗುಣಿ, ಇರುವೆ ಮುಂತಾದವುಗಳ ಕಡತಗಳು ಚರ್ಮದಿಂದ ತಿಳಿಯುತ್ತವೆಂಬದನ್ನು ಹೊರಡಿಸಬೇಕು)

-ಯಾವದೊಂದನ್ನು ತಿಳಕೊಳ್ಳಬೇಕಾದರೆ ಯಾತ್ಯಾತರಿಂದ ತಿಳಕೊಳ್ಳುವೆವು ?

-ಕಿವಿ, ಮೂಗು, ಕಣ್ಣು, ನಾಲಿಗೆ, ಚರ್ಮಗಳಿಂದ ತಿಳಕೊಳ್ಳುವೆವು.

-(ಮತ್ತೊಮ್ಮೆ ಕಿವಿ ಮೊದಲಾದ ಪಂಚೇಂದ್ರಿಯಗಳನ್ನು ಅಂದು) ಇವೆಲ್ಲಾ ಕೂಡಿ ಎಷ್ಟಾದವು ?

-ಐದು ಆದವು.

-ಇವುಗಳಿಗೆ ಪಂಚೇಂದ್ರಿಯಗಳೆಂದೆನ್ನುವರು.

-ಪಂಚೇಂದ್ರಿಯಗಳು ಯಾವವು ?

-ಕಿವಿ, ಮೂಗು, ಕಣ್ಣು, ನಾಲಿಗೆ, ಚರ್ಮ (ಐದು ಅವಯವವೆ=ಪಂಚೇಂದ್ರಿಯಗಳು)

-ನೀನು ಶಿನೀ ಇಯತ್ತೆಯಲ್ಲಿ ಪಾಸಾದರೆ ನಿನಗೆ ಏನಾಗುವದು ?

-ಹರುಷವಾಗುವದು.

- ನಾಪಾಸಾದರೆ ?

-ದುಃಖವಾಗುವದು.

-(ಹರುಷ, ದುಃಖ, ಪಾಪ, ಪುಣ್ಯ, ಸೊಕ್ಕು, ಸ್ವರ್ಗ, ನರಕ ಮುಂತಾದವುಗಳು ಮನಸ್ಸಿನಿಂದ ತಿಳುಕೊಳ್ಳತ

ಕ್ಕವೆಂಬದನ್ನು ಹೇಳಿ) ಮನಸ್ಸು ಇದಾದರೂ ಬಂ
ಇಂದ್ರಿಯ ಇರುತ್ತದೆ.

ಗು—ಪಂಚೇಂದ್ರಿಯಗಳು ಮನಸ್ಸು ಇವುಗಳಲ್ಲಿ ಬಂದಕ್ಕೆ
ಥವಾ ಹಲವುಗಳಿಗೆ ತಿಳಿಯುವದು ಬಡವೆಯನಿಸುವದ

ಗು—ಬಡವೆ ಎಂದರೇನು?

ವಿ—(ಮೇಲಿನ ವ್ಯಾಖ್ಯೆಯನ್ನು ಹೇಳುವದು.)

ಗು—ನೀನು ತಲೆಗೆ ಸುತ್ತಿರುವದು ಬಡವೆ ಹೌದೋ
ಅಲ್ಲೋ?

ವಿ—ಹೌದು.

ಗು—ಯಾವ ಇಂದ್ರಿಯದಿಂದ ತಿಳಿಯಿತು?

ವಿ—ಕಣ್ಣಿನಿಂದ.

ಗು—ಆ ಬಡವೆಯ ಹೆಸರೇನು?

ವಿ—ರುಮಾಲ (ಈರೆ ಹಲಿಗೆಯ ಮೇಲೆ ರುಮಾಲವೆಂದು ಬ
ರಿಸುವದು.)

ಗು—ನೀನು ತೊಟ್ಟಿರುವ ಬಡವೆಯ ಹೆಸರೇನು?

ವಿ—ಅಂಗಿ (ಬರಿಸುವದು.)

ಗು—(ಮೇಜನ್ನು ತೋರಿಸಿ) ಈ ಬಡವೆಯ ಹೆಸರೇನು?

ವಿ—ಮೇಜು (ಬರಿಸುವದು.)

ಗು—(ಮೇಲಿನಂತೆ ಧೋತರ, ಪಾಟಿ, ಪುಸ್ತಕ, ಸೂರ್ಯ,
ಚಂದ್ರ, ಮುಂತಾದ ೧೦।೧೨ ಉದಾಹರಣೆಗಳನ್ನು ಬ
ರಿಸಿ, ಆಮೇಲೆ ಹಲಿಗೆಯ ಮೇಲಿನ ರುಮಾಲ ಈ ಶ
ಬ್ದದ ಕಡೆಗೆ ಬೊಟ್ಟು ತೋರಿಸಿ) ಇಲ್ಲಿ ಏನೆಂದು ಬರೆ
ದದೆ?

ವಿ—ರುಮಾಲವೆಂದು ಬರೆದದೆ.

ಗು—ಇಲ್ಲಿ ರುಮಾಲವೆಂಬ ಬಡವೆ ಅದೋ?

ವಿ—ಇಲ್ಲ.

-ಹಾಗಾದರೆ ಮತ್ತೇನದೆ?

ರುಮಾಲವೆಂಬ ಬಡವೆಯು ಹೆಸರದೆ.

(ಅಂಗಿ ಶಬ್ದದ ಕಡೆಗೆ ತೋರಿಸಿ) ಇಲ್ಲಿ ಅಂಗಿ ಅದೆಯೋ?

ಇಲ್ಲ.

-ಹಾಗಾದರೆ ಮತ್ತೇನದೆ?

ಅಂಗಿ ಎಂಬ ಬಡವೆಯು ಹೆಸರದೆ.

-(ಇದರಂತೆ ಹಲಿಗೆಯ ಮೇಲೆ ಬರಿಸಿದ ಶಬ್ದಗಳು ಬಡವೆಗಳಲ್ಲ, ಬಡವೆಗಳ ಹೆಸರುಗಳೆಂಬುದನ್ನು ವಿದ್ಯಾರ್ಥಿಗಳಿಂದಲೇ ಹೊರಡಿಸಿ) ಹಾಗಾದರೆ ಇಲ್ಲಿ ಬರೆದಿರುವ ಶಬ್ದಗಳೆಲ್ಲ ಬಡವೆಗಳೋ?

.ಇಲ್ಲರಿ.

-ಹಾಗಾದರೆ ಮತ್ತೇನು?

ಬಡವೆಗಳ ಹೆಸರುಗಳು.

-ಯಾವದೊಂದು ಬಡವೆಯ ಹೆಸರಿಗೆ ನಾಮವೆನ್ನುವರು.

—ನಾಮವೆಂದರೇನು?

-(ಮೇಲಿನ ವ್ಯಾಖ್ಯೆಯನ್ನು ಪೇಳುವದು.)

-(ಇಷ್ಟಾದ ಮೇಲೆ ನಾಮವೆಂದರೇನೆಂಬದು ವಿದ್ಯಾರ್ಥಿಗಳಿಗೆ ಚನ್ನಾಗಿ ತಿಳಿವದೋ ಇಲ್ಲೋ ಎಂಬುದನ್ನು ಮನವರಿಕೆ ಮಾಡಿಕೊಳ್ಳುವದಕ್ಕಾಗಿ ಈ ಹಲಿಗೆಯ ಮೇಲಿನವಲ್ಲದೆ ಬೇರೆ ಯಾವುದಾದರೊಂದು ನಾಮವುದಾಹರಣೆಗಳನ್ನು ವಿದ್ಯಾರ್ಥಿಗಳಿಂದಲೇ ಹೊರಡಿಸಬೇಕು.)

ಅಯ್ಯಾ! ಇನ್ನೊಮ್ಮೆ ತಪ್ಪುಗಳನ್ನು ಕಂಡುಕೊಳ್ಳಬೇಕು ಕೊಡುವ

ತಮ್ಮ ಶಿಷ್ಯ,

ಬಬಳಿ ತಾ. ಕುಸುಗಲ್ಲ ಡ ಸಾಲೆ ಒಳ್ಳೆ-ಇಂ-ರಿಖ

ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿ.

DHARWAR TRAINING COLLEGE CERTIFICATE EXAMINATION 1894.–

ಕಾಲೇಜಿನ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು.

ಸಿನೇ ವರ್ಷದ ವರ್ಗ.

ಭಾಷಾ ವಿಷಯ—ಕನ್ನಡ ಗದ್ಯ ಪದ್ಯ.

ಬಲಕ್ಕೆ ಬರಿದ ಅಂಕಿಗಳು ಪ್ರಶ್ನೆಗಳ ಪೂರ್ಣ ಗುಣಗಳು.

೧. ಕೆಳಗೆ ಬರೆದ ಪದ್ಯಗಳ ಅರ್ಥವನ್ನು ಪದ ಲೋಪ ನಾಗದಂತೆ ಹೊಸಗನ್ನಡದಲ್ಲಿ ಬರಿ.

ತಿಸರಂ ತೊಳಗುವ ಮುತ್ತಿನ
ಪಸುರಂ ಮೊಲೆ ಬಿಟ್ಟು ತೆರೆಯೆಂದನಿಸಂ
ತಸದಕಡಲಂತೆ ಮಿಲ್ಲನಿ
ಪೊಸವೆಂಡಿಗ್ಗಡಣ ಮಿಸವಿನಂ ನಡೆತಂದರ್
ಎಡಗಿರುವ ಮೊಲೆಯ ಪೊರ್ದಿಯಿಂ
ಬಡನಡು ನಡೆ ನೋಡುವನರ ಬಗೆ ನಡುಗುವ ಪೊ
ಲ್ಲಡುಗೆ ನಲವಿಂದ ಮೊಡನೊಡ
ನಡಿಯಿಟ್ಟರ್ಸಿರೆದು ಬಿಂಕಗಾರ್ತಿಯರೆಂಬರ್
ಇಸಲೊಡರಿಸು ವಿಂಗೋಲನ
ವಿಸಗುವ ಪೊಸವಿಲ್ಲ ಜೇವಡೆಯ ದನಿಯ ಪೊಲೆ
ನ್ದೊಸೆಯೊಳ್ನೀವುರದುಲೆ ಪಸ
ರಿಸೆವಿಲ್ಲನೆ ಜೆಲ್ಲಗಾರ್ತ್ತಿಯರ್ ನಡೆತಂದರ್.

೨. ಜೆಂದೆಂಗು, ನುಣ್ಣರ, ಮಾಂಗಾಯ್, ಬಲುಗಾಯ್, ಕಾಪಂ, ಈ ಶಬ್ದಗಳ ಅರ್ಥವನ್ನು ಬರೆದು ಇವುಗಳಲ್ಲಿ ನ್ಯಾಕರಣ ಸಂಬಂಧದಿಂದ ವಿಶೇಷ ವಿಚಾರವಿದ್ದರೆ ಬರಿ.

೩. ಕೆಳಗೆ ಬರೆದ ಶಬ್ದಗಳ ಅರ್ಥವನ್ನು ಬರಿ.

ಕಾಲೂರ್, ತರುಗಾರ್ತಿ, ಕರುಮಾಡ,
ಪಚ್ಚೆವರಲ್, ಪಾಂಗು, ಗರುನರ್, ಪಸಾಯ್ತರ, ಬಿಸುಗದಿ
ಗುಜ್ಜು, ಕೋಡುವ, ಇಂಗೋಲ, ನುರುವರಸರ್.

೪. ಕೆಳಗೆ ಬರೆದ ಉಕ್ತಿಗಳು ಯಾವ ಸಂಬಂಧದಿಂದ ಯಾರ ಮುಖದಿಂದ ಮುದ್ರಾಮಂಜೂಷ ಗ್ರಂಥದಲ್ಲಿ ಹೇಳಲ್ಪಟ್ಟವೆ.

(a) ಈ ಮೂರು ಸಾಧನ ಉಂಟಾಗುವಲ್ಲಿ ನಂದರು ಯಾವ ಪಾತಾಳವಂ ಪೊಕ್ಕಾರು

(b) ಅನ್ನರ ಮಕ್ಕಳ ಬಾವಿಗೆ ತಳ್ಳಿ ಆಲಾ ನೋಡಿದ

ಕಂಬ ಗಾದಗ ಸರಿಯಾಗಿ ವೈರಿಗಳು ನಿನ್ನನ್ನು ನಮ್ಮ ಖಡ್ಗಧಾರೆಗೆ ಗುರಿ ಮಾಡಿದರು.

(c) ಅತ್ಯುತ್ಕಟೈ: ಪುಣ್ಯಪಾಪೈರಿಹೈವ ಫಲ ನು ಶ್ನುತೆ ಎಂಬ ಶಾಸ್ತ್ರವು ಸತ್ಯವಾಯಿತು.

(d) ದರ್ವಿಯಂ ಸಂಪಾದಿಸಿರಲು ಕೈಯನ್ನು ಸು ಡಿಸಲ್ಯಾಕೆ

(e) ಎಲೈ ಪ್ರಜ್ವಲಿಸುವಾಗ್ನಿಯಂ ಉಡಿಯಲ್ಲಿ ಕಟ್ಟಿ ದಂತೆ ಚಂಡ ಮಾರುತನಂ ಹಗ್ಗದಲ್ಲಿ ಬಿಗಿದಂ ತೆ, ಮಹಾ ಸಿಂಹನಂ ವೈತಡವಿದಂತೆ.

ಮೊದಲನೇ ವಾಕ್ಯದಲ್ಲಿ ಹೇಳಿದ ಮೂರು ಸಾಧನಗಳು ಯಾವವು ಸಂಕ್ಷೇಪದಿಂದ ಹೇಳು.

೫. ಕೆಳಗೆ ಬರೆದ ವಾಕ್ಯಗಳು ಮುದ್ರಾಮಂಜೂಷ ಗ್ರಂಥದಲ್ಲಿ ಯಾವ ಸಂಬಂಧದಿಂದ ಬಂದಿರುತ್ತವೆ ಅದನ್ನು ಬರೆದು ಅವುಗಳಲ್ಲಿ ಸೂಚಿಸಿದ ಕಥೆಯನ್ನು ಸ್ವಲ್ಪದರಲ್ಲಿ ಬರಿ.

(a) ಅನ್ಯಮಿಂದ್ರಂ ಕರಿಷ್ಯಾಮಿ ಲೋಕೋವಾಸ್ಯ ದನಿಂದ್ರಕಂ

(b) ನಾನು ಈತನಿಗೆ ಈ ಕುಬುದ್ಧಿ ತಪ್ಪುವಂತೆ ಗಯೆನೆಂಬ ಗಂಧರ್ವನ ಕಥೆಯನ್ನು ಹೇಳಿ ನ ಯಭಯದಿಂದ ಬೋಧಿಸುವೆನು.

(c) ಅನ್ಯತಾವಿಭಾವಾವಸರದಲ್ಲಿ ಕಪಟಾಂಗನೆ ಯಾಗಿ ಅವಲೋಕನ ಮಾತ್ರದಿಂ ಅಸುರವರ್ಗ ದ ಮನಸ್ಸುಗಳಂ ತವಕಗೊಳಿಸುತ್ತಾ ಬರು ತ್ತಿರುವ ನಾರಾಯಣಿಯ ಪ್ರತಿಬಿಂಬವೋ?

(d) ಅರ್ಜುನನು ಮಗನ ದುಃಖವನ್ನು ಸಹಿಸಲಾ ರದೆ ಕುಮಾರನಿಗೆ ಸಹಾಯವಾಗಿ ಬರುವ ಭೀ ಮಾದಿಗಳನ್ನು ಕಾಲರುದ್ರ ಸಾರೂಪ್ಯನಾಗಿ ಪದ್ಮವ್ಯೂಹಂ ಹೋಗಲೀಯದೆ ತಡೆದನೆಂದು ಕೇಳಿ ಜಯದ್ರಥನನ್ನು ಶಪಥಪೂರ್ವಕವಾಗಿ ಸಂಹರಿಸಿ ಕೀರ್ತಿಯಂ ಪಡೆದಂತೆ.

೬. ಅಮಾತ್ಯ ರಾಕ್ಷಸನು ಚಾಣಕ್ಯನ ಕೈವಶವಾಗುವ ಪೂರ್ವದಲ್ಲಿ ಅವನ ಶತ್ರುವನ್ನು ಯಾರು ಹ್ಯಾಗೆ ಯಾವ ಉ ದ್ದೇಶದಿಂದ ಕಸಕೊಂಡರು.

೭. ಮುದ್ರಾಮಂಜೂಷ ಗ್ರಂಥದ ಭಾಷೆ ಕಥಾಸಂವಿ ಧಾನಕ ಇವೇ ಮೊದಲಾದವುಗಳನ್ನು ಕುರಿತು ಗುಣದೋ

ಷಗಳನ್ನು ವಿವರಿಸಿ ಆ ಗ್ರಂಥದ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಕೊಡರಿ.

೪. ಕೆಳಗೆ ಬರೆದ ಪದ್ಯಗಳ ಪ್ರತಿಪದ ಟೀಕೆಯನ್ನೂ ಭಾವಾರ್ಥವನ್ನೂ ಪದ ಲೋಪಿಸದೆ ಬರಿ.

(a) ಶಿವನಿಂ ದಿನ್ಯತರಾಸ್ತ್ರನುಂ ಪಡೆಯಲೇಳ್ತಿಂದಂ
ದು ಪಾರ್ಥಂ ಮಹೋತ್ಸವದಿಂದಂ ತನಗುಳ್ಳ
ಸರ್ವಶರಮುಂ ದೇವೇಶನೋಡೆಂದು ತೋರ್ಪ
ಪೊಲೆಚ್ಚಂ ಕಡಿದಾಕಳಂ ಖಮನಿತಂ ನಿನ್ನಿಷ್ಟ
ನಾದಸ್ತ್ರನುಂತವೆ ನೋಡೆಂದವನಲ್ಲಿ ತೋರುವ
ಪೊಲಾತಂಗೆಬ್ಬನುಗ್ರಾಂಬಕಂ.

(b) ಶರವರ್ಷವನೆಂ ಕರೆವುದು
ಪಿರಿದೆ ಮಹಾಕಾಲಮೇಘಗರ್ಜನ ಜಲದಂ
ಭರದಿ ದಿದಿರಾಂತನನಘ
ಶರವರ್ಷವನಲ್ಲಿ ಕರೆದುದಿದು ಚಿತ್ರತರಂ.

೯. ಕೆಳಗೆ ಬರೆದ ವಾಕ್ಯಾಂಶಗಳ ಅರ್ಥವನ್ನು ಪೂರ್ಣವಾಗಿ ಬರಿ.

(a) ನಿರರ್ಗಳ ನಿಸ್ಸಹಾಯ ಪರಾಕ್ರಮೋಕ್ತಿಗೆಳ್ದ
(b) ಅಖಿಳನು ಪರ್ವಾಗ್ರಣಿಯೋಳ್.
(c) ಹರಿಶರನೋಳ್
(d) ತಳವಿಳಗಾಗುತ್ತೆ ವಾರ್ಧನಂದಿಂತೆಂದಂ
(e) ಅಭ್ಯರ್ಹಿತ ಜೇತನಗತನೋಳ್.

೧೦. (a) ನಿನುಗೆ ಬೇಡಿದ ವರವನೀವೆನು ಸುಮತಿಗ
ಳಿಂದಾ ಜೇಷ್ಣು ನೀವೆನಿ ರಮಣಿಯುಂ ರಮಣನು
ನುಲರ್ದಷ್ಟಾಂಗದಲಿ ನನಿಸಿ। ಪ ನುಥನಾ
ಥ ಹಿಮಾದಿ ಜಾನಿ। ದ್ರುನುಲತಾನ್ತತಸಲಿ
ತ ಕಲ್ಪ। ದ್ರುಮವಸಫರಿಸು ನೀವೆ ಸನ್ನಿಧಿ
ಯಾಗಿರಲು ನುಂದೆ ॥

(b) ಇನ್ನು ನುತ್ತೊಂದಂ ಬಯಸಿದಡೆ। ನಿನ್ನವ
ರ್ನಾವಲ್ಲಲ್ಲಾಯಿ ಬಿನ್ನಣದ ನುಡಿಯುಂ ನು
ಡಿಯದೇ ಚಿತ್ತವಿಪುತೆನ್ಮ। ಬಿನ್ನವನಿಲಿ
ದಾಗಳುಂಭವ। ದುಂನತ್ರಾಂಘ್ರಿಯುಗ ಸ್ಮರಣ
ಸಂಪನ್ನತೆಯನಿತ್ತುದ್ಧರಿಸು ನನುಗಿದುವೆ ಸಾ
ಕೆನಲು ॥

ಈ ಪದ್ಯಗಳ ಅರ್ಥವನ್ನು ಪದ ಲೋಪಿಸದೆ ಬರಿ.

ಶಾಲಾಪತ್ರೆ.

ಪದ್ಯಂ.

ಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ।
ಬಸುತ್ತಂ ಪ್ರತಿಮಾಸವಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ಬಿಂದಿತ್ತಪೆಪ್ಪೋದುವರ್ಗೆಸಗುಣಂ ತೋರಲ್ಕೆ ಕೈಕೊಂಬುದೈ ।
ಯಿಂದೋಷವತಿದ್ದಪೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಸ್ತಕ ೫ಂ.] ಏಪ್ರಿಲ್ ೧೮೯೫. [ಸಂಚಿಕೆ ೪.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧವು ವೃತ್ತಾಂತಗಳು.

ಮುಂಬಯಿ ಇಲಾಖೆಯ ಹೋದ ವರ್ಷದ (೧೮೯೪-೯೫) ವಿದ್ಯಾಖಾತೆಯ ರಿಪೋರ್ಟು ಪ್ರಸಿದ್ಧವಾಗಿರುತ್ತದೆ. ಇದರಿಂದ ತಿಳಿಯುವ ಮುಖ್ಯ ಮುಖ್ಯ ಸಂಗತಿಗಳು ಯಾವ ವೆಂದರೆ,—ನಮ್ಮ ಇಲಾಖೆಯೊಳಗಿನ ಶಾಲೆಗಳಲ್ಲಿ ಅಭ್ಯಾಸ ಮಾಡುವ ಗಂಡು ಮಡುಗರ ಸಂಖ್ಯೆಯು ಹೋದ ವರ್ಷ ೪೧೦,೦೮೪ ಇತ್ತು; ಈ ವರ್ಷ ೪೧೮,೧೫೯ ಆಗಿರುತ್ತದೆ; ಮತ್ತು ಹೆಣ್ಣು ಮಕ್ಕಳ ಸಂಖ್ಯೆಯು ಹಿಂದಿನ ವರ್ಷ ೬೯,೪೬ ಇತ್ತು; ಈ ವರ್ಷ ೭೧,೪೭೧ ಆಗಿರುತ್ತದೆ. ಈ ಇಲಾಖೆಯಲ್ಲಿ ಯಾವತ್ತು ಪ್ರಕಾರದ ಸರಕಾರೀ ಖಾಸಗೀ ಶಾಲೆಗಳು ಕೂಡಿ ಹಿಂದಿನ ವರ್ಷ ೧೮೬೦ ಇದ್ದವು. ಈ ವರ್ಷ ೧೮೬೫ ಆಗಿರುತ್ತವೆ. ಸರಕಾರೀ ಶಾಲೆಗಳು ಹಿಂದಿನ ವರ್ಷ ೯೩೪, ಖಾಸಗೀ ಶಾಲೆಗಳು ೧೮೧೭ ಇದ್ದವು. ಈ ವರ್ಷ ಸರಕಾರೀ ಶಾಲೆಗಳು

೯೯೫೯, ಖಾಸಗೀ ಶಾಲೆಗಳು ೬೪೧೫ ಆಗಿದ್ದವು ಮೆ. ದಿನ ವರ್ಷ ಕನಿಷ್ಠ ಪ್ರತಿಯ ದೇಶ ಭಾಷೆಯ ಸರಕಾ ಶಾಲೆಗಳು ೯,೩೦೩, ವಿದ್ಯಾರ್ಥಿಗಳು ೫೫,೦೫೫;೪೧೫ ಇದ್ದ ಈ ವರ್ಷ ಅನುಕ್ರಮವಾಗಿ ೯,೪೪೪ ಮತ್ತು ೫೫,೪೦,೨ ಇದ್ದಾರೆ.

ಈ ಇಲಾಖೆಯ ದಕ್ಷಿಣ ಭಾಗದಲ್ಲಿ ಜನಸಂಖ್ಯೆಯ ೬೯,೦೦,೫೧೦ ಇರುತ್ತದೆ; ಮತ್ತು ಯಾವತ್ತು ಪ್ರಕಾರ ಶಾಲೆಗಳು ೦,೫೧೯ ವಿದ್ಯಾರ್ಥಿಗಳು ೧,೫೧೧,೦೫೪ ಇವರು. ಕನಿಷ್ಠ ಪ್ರತಿಯ ಗಂಡು ಹುಡುಗರ ಶಾಲೆಗಳು ೦,೦೩೩ ಮತ್ತು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರು ಕೂಡಿ ೧,೩೫೫,೧೩೪ ಇದ್ದಾರೆ. ಹೆಣ್ಣು ಮಕ್ಕಳ ಶಾಲೆಗಳು ೧೩೩, ವಿದ್ಯಾರ್ಥಿನಿಯರು ೫,೬೫೪ ಇರುವರು. ಗಂಡು ಹುಡುಗರ ಶಾಲೆಗಳಿಗೆ ಹೋಗುವ ಹೆಣ್ಣು ಮಕ್ಕಳ ಸಂಖ್ಯೆಯು ೩,೬೪೦ ಇರುವದು. ಈ ವರ್ಷ ನಮ್ಮ ದಕ್ಷಿಣ ಭಾಗದಲ್ಲಿ ಬಟ್ಟೆಗೆ ೩ ಶಾಲೆಗಳೂ ೪,೦೫೬ ವಿದ್ಯಾರ್ಥಿಗಳು ಹೆಚ್ಚಾಗಿದ್ದಾರೆ.

ಮುಂಬಯಿ ಇಲಾಖೆಯೊಳಗಿನ ವಿದ್ಯಾಖಾತೆಯ ಒಟ್ಟು ಖರ್ಚು ೬೩,೧೧,೧೪೯ ರೂಪಾಯಿ ಆಗಿರುತ್ತದೆ. ಈ ರೂಪಾಯಿಯೊಳಗಿಂದ ಫೀ ಹಣ ೧೪,೪೦,೯೯೪ ರೂಪಾಯಿ, ಮತ್ತ

---

* ಸರಕಾರದ ಖರ್ಚಿನಿಂದಲೇ ನಡಿಯುವ ಶಾಲೆಗಳ ಬ ೪೫೯೯೬ ರೂಪಾಯಿ. ಲೋಕಲ್ ಬೋರ್ಡ ಶಾಲೆಗಳ ಬ ೧೪೪೬೬೪೦ ರೂ. ಮುನಸಿಪಲ್ ಬೋರ್ಡ ಶಾಲೆಗಳ ಬ ೬೯೧೯೯ ರೂ. ಸಂಸ್ಥಾನದೊಳಗಿನ ಶಾಲೆಗಳ ಬಾ ೧೦೪೯೬೦ ರೂ. ಗ್ರಾಂಟ ಇನ್ ಏಡ್ ಶಾಲೆಗಳ ಬಗೆ ೧೩೯೧೦೦೯ ರೂ. ಅನ್ ಏಡೆಡ್ ಶಾಲೆಗಳ ಬಗೆ ೦೦೧೧೦ ರೂ. ಮತ್ತು ಇತರ ೫೬೪೪೬ ರೂ. ಅಂತೂ ಒಟ್ಟು ಖರ್ಚು ೬೩೧೧೧೪೯ ರೂಪಾಯಿ.

ನರ್ಗಣಿ ಮುಂತಾವ ಬಾಬುಗಳಿಂದ ಆದ ಉತ್ಪನ್ನ ೧೯,೫೯,೦೭೦ ರೂಪಾಯಿ ವಜಾ ಹೋಗಲಾಗಿ, ಉಳಿದ ಖರ್ಚಿನಲ್ಲಿ ಸರಕಾರಕ್ಕೆ ೭೦,೦೦,೯೭೪ ರೂಪಾಯಿ, ಲೋಕಲ್‌ಫಂಡಿಗೆ ೯,೩೫,೦೪೭ ರೂಪಾಯಿ, ಮ್ಯುನಿಸಿಪಾಲಟಿಗಳಿಗೆ ೩,೭೪,೦೭೦ ರೂಪಾಯಿ ಬಿತ್ತು. ಕನಿಷ್ಠ ಪ್ರತಿಯ ಶಿಕ್ಷಣಕ್ಕೆ ೩೧,೮೯,೬೪೭ ರೂಪಾಯಿ ಖರ್ಚು ಆಯಿತು. ಇದರೊಳಗೆ ಫೀ ಉತ್ಪನ್ನ ೩,೭೬,೫೦೪ ರೂಪಾಯಿ ಮತ್ತು ಇತರ ಬಾಬುಗಳಿಂದ ಆಗುವ ಉತ್ಪನ್ನ ೯,೪೦,೫೦೧ ರೂಪಾಯಿ ವಜಾ ಹೋಗಲಾಗಿ, ಉಳಿವದ್ದರಲ್ಲಿ ಸರಕಾರಕ್ಕೆ ೭,೭೩,೦೦೦ ರೂಪಾಯಿ, ಲೋಕಲ್‌ಫಂಡಿಗೆ ೭,೧೦,೦೦೭ ರೂಪಾಯಿ, ಮ್ಯುನಿಸಿಪಾಲಿಟಿಗಳಿಗೆ ೦,೬೭,೬೧೩ ರೂಪಾಯಿ ಖರ್ಚು ಬಿತ್ತು.

ಈ ವರ್ಷ ವಿದ್ಯಾಪೀಠದ ಬೇರೆ ಬೇರೆ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರಿಗೆ ಪದವಿದಾನದ ಸಮಾರಂಭಗಳು ಎರಡು ಆದವು. ಮೊದಲನೇದು ತಾ॥ ೧೦ನೇ ಫೇಬ್ರುವರಿ ದಿನದ ಮತ್ತು ಎರಡನೇದು ತಾ॥ ೧೯ನೇ ಫೇಬ್ರುವರಿ ದಿವಸ ಆಯಿತು. ವಿದ್ಯಾಪೀಠದ ಚಾನ್ಸೆಲರರಾದ ಹ್ಯಾರೀಸ ಧೊರೆಗಳು ಈ ಇಲಾಖೆಗೆ ಬಂದಂದಿನಿಂದ ಶಾಲಾಖಾತೆಯ ಕೆಲಸವನ್ನು ಸ್ವತಃ ನೋಡುತ್ತಿದ್ದರು. ವಿದ್ಯಾಖಾತೆಯ ಸಂಬಂಧದಿಂದ ಅವರಿಗ ಆವ ಅನುಭವಗಳನ್ನು ತಿಳುಹಲಿಕ್ಕೆ ಪದವಿದಾನ ಸಮಾರಂಭದ ಸಮಯವು ಯೋಗ್ಯವೆಂದು ತಿಳಿದು ವ್ಹಾಯಿಸ ಚ್ಯಾನ್ಸೆಲರವರು ಹ್ಯಾರಿಸ ಧೊರೆಗಳು ಸ್ವದೇಶಕ್ಕೆ ಹೋಗುವ ಪೂರ್ವದಲ್ಲಿ ಅಂದರೆ ತಾ॥ ೧೦ನೇ ಫೆಬ್ರುವರಿಗೆ ಈ ಸಮಯೋಗವನ್ನು ನೇಮಿಸಿದರು. ಆ ಕಾಲಕ್ಕೆ

ಧೊರೆಗಳವರು ಮಾಡಿದ ಭಾಷಣ*ದಿಂದ ವಿದ್ಯಾಪೀಠದ ದೇಶಭಾಷೆಗಳು ಶೇರುವದು ತೀವ್ರವಾಗಿ ಸಾಧ್ಯವಾದೀತ ದು ತೋರುವದಿಲ್ಲ. ಅವರು ಈ ಇಲಾಖೆಯಲ್ಲಿ ವಿದ್ಯೆಯ ಪ್ರಸಾರವು ಆಗತಕ್ಕಷ್ಟು ಆಗಿರುತ್ತದೆಂದು ಸಾಧಾರವಾಗಿ ಹೇಳಿ, ದೇಶೀಯ ವರ್ತಮಾನ ಪತ್ರಗಳ ಸ್ಥಿತಿಯು ಸಮಾಧಾನಕರವಾಗಿಲ್ಲ, ಅದನ್ನು ಪಾಶ್ಚಿಮಾತ್ಯವಿದ್ಯೆಯು ಸಂಸ್ಕಾರವಾದ ಜನರು ಶ್ರಮದಿಂದಲೂ ಸಾಹಸದಿಂದಲೂ ಸುಧಾರಿಸಬೇಕೆಂದು ಆಸ್ಥಾಪೂರ್ವಕವಾಗಿ ತಿಳಿಸಿದರು. ಎರಡನೆ ಸಮಾರಂಭದ ಕಾಲಕ್ಕೆ ಕೆಲವು ವಿದ್ಯಾರ್ಥಿಗಳು ವ್ಹಾಯಿಸ ಚ್ಯಾನ್ಸಲರವರಿಗೆ ಅಪಮಾನವಾಗುವಂಥ ಕೆಲವು ಸಂಗತಿಗ ಳನ್ನು ನಡಿಸಿದರು. ಇದು ಬಳ್ಳೇದಾಗಲಿಲ್ಲ.

ಕ್ವಿನೈನವು ಜ್ವರಕ್ಕೆ ಬಹಳ ಪ್ರಯೋಜನಕರವಾದದ್ದಿಂ ದು ಎಲ್ಲರಿಗೂ ಗೊತ್ತಿದ್ದ ಮಾತು. ೧। ೧॥ ಗ್ರೇನ ಕ್ವಿನೈನ ವನ್ನು ಪ್ರತಿದಿನ ಪ್ರಾತಃಕಾಲಕ್ಕೆ ತೆಗೆದುಕೊಳ್ಳುವದರಿಂದ ಮನುಷ್ಯನ ಪ್ರಕೃತಿಯು ನಿರೋಗವಾಗಿಯೂ ಸದೃಢವಾಗಿ ಯೂ ಇರುತ್ತದೆಂದು ಡಾಕ್ಟರ ಜನರು ಅನುಭವದಿಂದ ಸಿದ್ಧ ಮಾಡಿರುತ್ತಾರೆ. ಈ ತರದ ಉತ್ತಮ ಔಷಧವು ಸರ್ವರಿಗೂ ಸುಲಭವಾಗಿ ದೊರಿದು ಅದರ ಉಪಯೋಗವು ಎಲ್ಲರಿಗೂ ಆಗಬೇಕೆಂದು ಸರಕಾರದವರು ಜಿಲ್ಲೆಯ ಮು ಖ್ಯ ಅಂಚೆಕಟ್ಟೆಗಳು ಹೊರತಾಗಿ ಉಳಿವ ಅಂಚೆಕಟ್ಟೆಗಳಲ್ಲಿ ಈ ಔಷಧದ ಚೀಟುಗಳನ್ನು ಮಾರಬೇಕೆಂದು ಗೊತ್ತು ಪಡಿಸಿರುತ್ತಾರೆ. ೪ ಗ್ರೇನಿನ (೮॥ ಗುಂಜಿಯ) ಬಂದ ಚೀಟಿಗೆ ೧ ಮಡ್ಡಿ ಕ್ರಯವಿರುತ್ತದೆ.

---

* ಈ ಭಾಷಣದ ಕೆಲವು ಮುಖ್ಯ ಮುಖ್ಯ ಸಂಗತ್ರಿಗಳನ್ನು ಮುಂದಿನ ಸಂಚಿಕೆಯಲ್ಲಿ ಕೊಡುವೆವು.

ಕಲಕತ್ತೆಯ 'ಸ್ಕೂಲ ಆಫ್ ಆರ್ಟ್' ದೊಳಗಿನ ವಿದ್ಯಾ
ರ್ಥಿಯಾದ ಬಾಬು ರೋಹಿಣೀಕಾಂತ ನಾಗ ಇವನು ಚಿತ್ರ
ಲಾ ಮತ್ತು ಶಿಲ್ಪಶಾಸ್ತ್ರದ ಅಭ್ಯಾಸ ಮಾಡುವದಕ್ಕಾಗಿ
ತಾಲಿ ದೇಶಕ್ಕೆ ಬಹು ದಿವಸದಿಂದ ಹೋಗಿರುವನು. ಹೊ
ನ್ನ ಹೊಸ್ಸ ರೋಮವಲ್ಲಿ ಅದ ಪರೀಕ್ಷೆಯಲ್ಲಿ ಕೆತ್ತಿಗೆ ಕೆಲ
ದ ಬಗ್ಗೆ ಇವನಿಗೆ ಬಂದು ಬಕ್ಷಿಸು ದೊರಿಯಿತು. ಇವ
ಗೆ ಚಿತ್ರಕರ್ಮಸಂಬಂಧದ ಎಷ್ಟೋ ಬಕ್ಷಿಸುಗಳು ಈ
ಪೂರ್ವದಲ್ಲಿಯೇ ದೊರತಿರುತ್ತವೆ. ನಮ್ಮ ದೇಶದ ಚಿತ್ರ
ಕಾರನು ಈ ಮೇರಿಗೆ ಹೆಸರು ಪಡಿದದ್ದನ್ನು ಕೇಳಿ ನಮ್ಮ
ಜನರಿಗೆ ಆನಂದವಾಗುವದು ಸಹಜವು. ದೃಢನಿಶ್ಚಯದಿಂ
ದಲೂ, ಧೈರ್ಯದಿಂದಲೂ ಉದ್ಯೋಗವನ್ನು ಮಾಡಿದರೆ
ಫಲವು ತಪ್ಪದು.

(ಹಿಂದಿನ ಪುಟದಿಂದ ಸಾಗಿದ್ದು.)

ವೇದಗಳೂ ಅವುಗಳ ಭಾಗಗಳೂ ಪ್ರಾಮಾಣಿಕರೆ :—

ಋಗ್ವೇದ.

೧. ಸಂಹಿತಾ—ಈ ವೇದದ ಎಲ್ಲ ಋಚೆಗಳು.

೨. ಬ್ರಾಹ್ಮಣ—ಐತರೇಯ ಬ್ರಾಹ್ಮಣ ಮತ್ತು ಐತರೇಯ ಆರಣ್ಯಕ.

೩. ಉಪನಿಷತ್ತು—ಐತರೇಯೋಪನಿಷತ್ತು ಮತ್ತು ಕೌಷೀತಕಿ.

೪. ಗೃಹ್ಯಸೂತ್ರ—ಸಾಂಖ್ಯಾಯನ ಮತ್ತು ಆಶ್ವಲಾಯನ.
ಶ್ರೌತ್ರಸೂತ್ರ—ಸಾಂಖ್ಯಾಯನ ಮತ್ತು ಆಶ್ವಲಾಯನ.

ಯಜುರ್ವೇದ.

ಕೃಷ್ಣಯಜುರ್ವೇದ.

೧. ಸಂಹಿತಾ—ತೈತ್ತಿರೀಯ, ೨. ಬ್ರಾಹ್ಮಣ—ತೈತ್ತಿರೀ
ಯ ಬ್ರಾಹ್ಮಣ—ತೈತ್ತಿರೀಯ ಆರಣ್ಯಕ.

ಶಾಖಾ—(೧) ಮೈತ್ರಾಯಣೀ. (೨) ಕಠ.

೩. ಉಪನಿಷತ್—ತೈತ್ತಿರೀಯೋಪನಿಷತ್, (೨) ಮೈತ್ರ
ಅಥವಾ ಮೈತ್ರಾಯಣೀ, (೩) ಕಠ, (೪) ಶ್ವೇತಾಶ್ವತರ

೪. ಗೃಹ್ಯ ಸೂತ್ರ—ಬೌಧಾಯನ ಮತ್ತು ಆಪಸ್ತಂಬ
ಶ್ರೌತಸೂತ್ರ—ಬೌಧಾಯನ ಮತ್ತು ಆಪಸ್ತಂಬ

ಶುಕ್ಲ ಯಜುರ್ವೇದ.

೧. ಸಂಹಿತಾ—ವಾಜಸನೇಯ ಸಂಹಿತಾ.

೨. ಬ್ರಾಹ್ಮಣ—ಶತಪಥ ಬ್ರಾಹ್ಮಣ.

ಶಾಖಾ—(೧) ಮಾಧ್ಯಂದಿನಿ. (೨) ಕಾಣ್ವ. (೩) ಕಾತ್ಯಾಯನ.

೩. ಉಪನಿಷತ್—ಈಶೋಪನಿಷತ್, ಬೃಹದಾರಣ್ಯಕೋಪನಿಷತ್.

೪. ಗೃಹ್ಯಸೂತ್ರ—ಪಾರಸ್ಕರ; ಶ್ರೌತಸೂತ್ರ ಕಾತ್ಯಾಯನ.

ಸಾಮವೇದ.

೧. ಸಂಹಿತಾ—ಆರ್ಚಿಕ ಸಂಹಿತಾ

೨. ಬ್ರಾಹ್ಮಣ—(೧) ಷಡ್ವಿಂಶ ಬ್ರಾಹ್ಮಣ, (೨) ಪಂಚವಿಂಶ ಬ್ರಾಹ್ಮಣ, ಮತ್ತು (೩) ತಾಂಡ್ಯಮಹಾ ಬ್ರಾಹ್ಮಣ.

ಶಾಖಾ—(೧) ತಲವಕಾರ, (೨) ಕೌಥೂಮಿ, (೩) ರಾಣಾಯನೀ.

೩. ಉಪನಿಷತ್—ತಲವಕಾರ ಅಥವಾ ಕೇನೋಪನಿಷತ್, (೨) ಛಾಂದೋಗ್ಯೋಪನಿಷತ್.

೪. ಸೂತ್ರ—ಗೃಹ್ಯಸೂತ್ರ-ಗೋಭಿಲಕೃತ, ಶ್ರೌತಸೂತ್ರ-(೧) ಲಾಟ್ಯಾಯನಕೃತ ಮತ್ತು, (೨) ಗೋಭಿಲಕೃತ.

ಆಥರ್ವವೇದ.

೧. ಸಂಹಿತಾ.

೨. ಬ್ರಾಹ್ಮಣ—ಗೋಪಥ ಬ್ರಾಹ್ಮಣ.

೩. ಉಪನಿಷತ್—ಮುಂಡಕೋಪನಿಷತ್, ಮಾಂಡೂಕ್ಯೋಪನಿಷತ್ ಮತ್ತು ಪ್ರಶ್ನೋಪನಿಷತ್.

೪. ಸೂತ್ರ—ಕೌಶಿಕ ಸೂತ್ರ,

ಉಪನಿಷತ್ತುಗಳ ಸಂಖ್ಯೆಯು ೧೦೦। ೧೫೦ ಕ್ಕಿಂತಲೂ ಹೆಚ್ಚುಂಟು; ಆದರೆ ಅವುಗಳಲ್ಲಿ (೧) ಈಶ (೨) ಕೇನ, (೩) ಕಠ, (೪) ಪ್ರಶ್ನ, (೫) ಮುಂಡ, (೬) ಮಾಂಡೂಕ್ಯ, (೭) ಐತರೇಯ, (೮) ತೈತ್ತಿರೀಯ, (೯) ಛಾಂದೋಗ್ಯ ಮತ್ತು (೧೦) ಬೃಹದಾರಣ್ಯಕ ಈ ಪ್ರಕಾರ ಹತ್ತು ಪ್ರಧಾನ ತಿಳಿಯಲ್ಪಟ್ಟಿರುತ್ತವೆ. ಈ ಬಗ್ಗೆ ಬಂದು ಶ್ಲೋಕ ಉಂಟು.

ईशाकेन कठप्रश्न मुण्ड माण्डूक्य तित्तिरिः ।
छान्दोग्यं बृहदारण्यमैतरेयस्तथादश ॥

ಈ ಹತ್ತು ಮತ್ತು ಇನ್ನೂ ಎರಡು ಮೂರು ಉಪನಿಷತ್ತುಗಳ ಮೇಲೆ ಶ್ರೀಮಚ್ಛಂಕರಾಚಾರ್ಯರು ಉತ್ತಮ ಟೀಕೆ ಬರೆದಿರುತ್ತಾರೆ. ಅದಕ್ಕೆ ಭಾಷ್ಯವೆಂಬ ಹೆಸರುಂಟು.

(ಸಶೇಷ.)

SELECTIONS FROM THE KARNATIK GAZETTEER.

ಕನ್ನಡ ಗೆಜೆಟಿಯರದಿಂದ ಅವತರಣಿಗಳು.

(ಹಿಂದೇ ಪುಟದಿಂದ ಸಾಗಿದ್ದು)

ಹಶ್ತಿಮತ್ತೂರ—ಕರ್ಜಗಿಯ ಉತ್ತರಕ್ಕೆ ೫ ಮೈಲಿ ನಮೇಲೆ. ಇಲ್ಲಿ ಬಂದೇ ಕಲ್ಲಿನ ಮೇಲೆ ಎರಡು ಲಿಪಿಗಳು ಉಂಟು. ಬಂದು ೯೦೬ ವರ್ಷದ್ದು, ಯರಡನೇದು ೧೧ನೇ ಶತಕದ ಈಚೆಯಲ್ಲಿ ಆವದ್ದು ಇರುತ್ತದೆ.

ಹಾವೇರಿ—ಕರ್ಜಗಿಯ ಈಶಾನ್ಯಕ್ಕೆ ೬ ಮೈಲಿನಷ್ಟು ದೂ. ಜಿ. ಸ. (೪೧) ೫೬೫೫೦. ಈ ಊರಲ್ಲಿ ಸಬ್‌ಜಡ್ಜ್ ಕೋರ್ಟು, ಪೋಷ್ಟ ಆಫೀಸು, ಮ್ಯುನಿಸೀಪ್ಯಾಲಿಟಿ, ಆ ಕ್ಷೇತ್ರಗಳು ಇರುತ್ತವೆ. ಇಲ್ಲಿಯೂ ಕ್ಕೆ ಅರಳಿ ಮುಂತಾ ಸರಕುಗಳ ವ್ಯಾಪಾರವು ಬಳಿತಾಗಿ ನಡೆಯುತ್ತದೆ. ಈ ಊ ರಲ್ಲಿ ಇರುವದೊಂದು ಸೌಳು ನೀರಿನ ಬಾವಿಯಲ್ಲಿ ಯಾ ಕ್ಷೆಗಳನ್ನು ತೊಳಿದರೆ ಅವು ಉಬ್ಬಿ ಜಿಕ್ಕಗೆ ಆಗುತ್ತವೆ ಆ ಬಾವಿಯ ನೀರೊಳಗೆ ಸುಣ್ಣ ವಿರುವದರಿಂದ ಹೀಗಾ ತ್ತದೆಂದು ಹೇಳುತ್ತಾರೆ. ಹಾವೇರಿಯ ಮುನಿಸಿಪಾಲಿಟಿ ಆದಾಯವು ಸರ್ ೧೮೪೫ ರಲ್ಲಿ ೧೫೬೦ ರೂಪಾಯಿ ಇತ್ತ ಬಸವಣ್ಣನ ಗುಡಿಯಲ್ಲಿ ನಾಲ್ಕು ಲಿಪಿಗಳಿರುತ್ತವೆ. ಈ ರಾಘವೇಂದ್ರ ಸ್ವಾಮಿಯು ಮಠವಿರುತ್ತದೆ.

ಕನವಳ್ಳಿ—ಕರ್ಜಗಿಯ ಆಗ್ನೇಯಕ್ಕೆ ೧೦ ಮೈಲಿನ ಮೆ ಲೆ. ಕಣವಿ ಸಿದ್ಧೇಶ್ವರನ ಗುಡಿಯಲ್ಲಿ ೪ ಲಿಪಿಗಳಿರುತ್ತ ಅವೆಲ್ಲ ೧೧ ನೇ ಶತಕದಲ್ಲಿ ಆದಂಥವು.

ಸಂಗೂರು—ಕರ್ಜಗಿಯ ನೈಋತ್ಯಕ್ಕೆ ೧೦ ಮೈಲಿ ಮೇಲೆ ವರದಾ ನದಿಯ ನಂಡೆಯಲ್ಲಿ ಒಂದು ಹಾಳು ಕೋ ಎರಡು ಹಾಳು ಗುಡಿಗಳಿರುತ್ತವೆ. ಇಲ್ಲಿ ಶಿಲಾಲಿಪಿಗಳಿ ತ್ತವೆ.

ದೇವಗಿರಿ—ಕರ್ಜಗಿಯ ಪಶ್ಚಿಮಕ್ಕೆ ೬ ಮೈಲಿನ ಮೇ ರಾಣೆಬೆನ್ನೂರ ಬಂಕಾಪುರ ದಾರಿಯ ಮೇಲೆ ದೊಡ್ಡ ಗ ವುವದೆ. ಇಲ್ಲಿ ಅ. ಕಲೆಕ್ಟರರ ಬಂಗ್ಲೆಯೂ, ಹನುಮಂ ಬಸವಣ್ಣ ಮತ್ತು ಎಲ್ಲಮ್ಮನ ಗುಡಿಗಳೂ ಉಂಟು. ಎ ಮ್ಮನ ಗುಡಿಯು ಜಕಣಾಚಾರ್ಯರು ಕಟ್ಟಿದ್ದಿರುತ್ತದೆ ಆ ಗುಡಿಗಳಲ್ಲಿ ಕೆಲವು ಲಿಪಿಗಳಿರುತ್ತವೆ.

ರಾಣೆಬಿನ್ನೂರ ತಾಲೂಕು.

ಕ್ಷೇತ್ರ—ಇದು ಜಿಲ್ಲೆಯ ಆಗ್ನೇಯ ಮೂಲೆಯಲ್ಲಿ ಈ ತಾಲೂಕಿನ ದಕ್ಷಿಣದಲ್ಲಿ ಇರುತ್ತದೆ. ಸರಕಾರಿ ಗ್ರಾಮಗಳು ೧೩೧, ದುಮ್ಮಾಲೀ ೧೨, ಇರುತ್ತವೆ. ಕ್ಷೇತ್ರ ೫೫ ಚ. ಮೈಲು, ಜನಸಂಖ್ಯೆ ೭೪.೧೧೭, ಭೂಮಿಯ ಕಂದಾಯ ೧೫೪೪೦೦ ರೂಪಾಯಿ.

ಸ್ವರೂಪ—ಉತ್ತರದಲ್ಲಿ ಒಂದು ಕಿರಿಗುಡ್ಡವೂ, ಪೂರ್ವದಲ್ಲಿ ಕೆಲವು ಗುಡ್ಡಗಳೂ ಹೊರ್ತಾಗಿ ಸವನೆಲ ಭೂಮಿಯುಂಟು. ಗುಡ್ಡಗಳ ನೆರೆಯಲ್ಲಿ ಕೆರಿ ಅಡವಿ ಇರುತ್ತದೆ. ಕಣಿವೆಗಳು ಸಣ್ಣವು ದಟ್ಟ. ಎತ್ತರ ಪ್ರದೇಶಗಳಲ್ಲಿಯೂ, ಗುಡ್ಡಗಳಲ್ಲಿಯೂ ಕೆಂಪು ನೆಲ, ಉಳಿದದ್ದೆಲ್ಲ ಕರಿ ಭೂಮಿ.

ಹವೆ. ಮಳೆ, ನೀರು—ಪೂರ್ವಭಾಗದ ಹವೆಯು ಪಶ್ಚಿಮ ಭಾಗಕ್ಕಿಂತ ಉಷ್ಣ ಆದರೆ ನೋಟ್ಟನಲ್ಲಿ ಆರೋಗ್ಯಕರವಾದದ್ದು. ಮಳೆಯು ಬಹುತರವಾಗಿ ಎಲ್ಲ ಕಡೆಯಲ್ಲಿಯು ಸಮನಾಗಿ ಬೀಳುತ್ತದೆ. ರಾಣೆಬಿನ್ನೂರಿನಲ್ಲಿ ೧೦ ರಿಂದಾ ೩೫ ಇಂಚಿನವರಿಗೆ, ಸರಾಸರೀ ೨೨ ಇಂಚು, ದಕ್ಷಿಣ ಪೂರ್ವ ಸೀರೆಗಳಲ್ಲಿ ತುಂಗಭದ್ರೆಯಲ್ಲದೆ ತಾಲೂಕಿನೊಳಗಿಂದ ಹಾಯುವ್ಯತಿಯು ಉತ್ತರಕ್ಕೆ ಹರಿದು ತುಂಗಭದ್ರೆಗೆ ಕೂಡುತ್ತದೆ. ಬೇರೆ ಸರುವುಗಳೂ ಕೆರೆಗಳೂ ಕೇವುಂಟು. ಎಷ್ಟಗೆ ನೀರಿನ ತಾಪತ್ರಯವಿಲ್ಲ.

ಜನರು—ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೯೧.೬೭ ರಷ್ಟು ಜನರು, ೮.೩೧ ಮುಸಲಮಾನರು. ಹಿಂದೂ ಜನದಲ್ಲಿ ಬ್ರಾಹ್ಮಣರು ೧೧೬೪, ಲಿಂಗವಂತರು ೨೮೬೪, ಕೀಳು ೨೨೯, ಪಂಚಾಳರು, ೨೦೬೦, ಹಟಗಾರರು, ೯೮೬, ಜೀವಿತರು ೩೪೮೨, ಕುರುಬರು ೪೯೨೬, ಬೇಡರು ೫೭೬೧, ನೊಣ್ಣರು ೧೧೬೭, ಮಾದಿಗರು ೩೪೪೧.

ದೊಡ್ಡ ಊರುಗಳು.

ರಾಣೆಬಿನ್ನೂರು—ಉತ್ತರ ಅಕ್ಷಾಂಸ ೧೪, ೩೭, ಪೂ ರ್ವರೇಖಾಂಶ ೭೫, ೪೧,ಧಾರವಾಡದ ದಕ್ಷಿಣಕ್ಕೆ ೪೦ ಮೈ ಲಿನ ಮೇಲೆ, ಜನಸಂಖ್ಯೆ (೧೯೧೧) ೧೦೨೦೪. ತಾಲೂಕಿನ ಮುಖ್ಯ ಗ್ರಾಮವು; ತಾಲೂಕಿನಲ್ಲಿ ಇರತಕ್ಕ ಕಛೇರಿಗಳ ಲ್ಲ ಇರುತ್ತವೆ; ೫ ಶಾಲೆಗಳುಂಟು. ಮ್ಯುನಿಸಿಪಾಲಿಟಿಯ ಆದಾಯವು ಸರ ೧೯೪೦—೪೫ ರಲ್ಲಿ ೪೦೯೦ ರೂಪಾಯಿ ಇತ್ತು. ಈ ಊರಲ್ಲಿ ಮೇಲಾದ ನೂಲಿನ ವಸ್ತ್ರಗಳೂ ರೇ ಶಿಮೆಯ ವಸ್ತ್ರಗಳೂ ಹುಟ್ಟುತ್ತವೆ; ಆದಿತ್ಯವಾರ ಸಂತೆಯ ಲ್ಲಿ ಅರಳೆಯ ವ್ಯಾಪಾರವು ಬಳಿತಾಗಿ ಆಗುತ್ತದೆ. ಸಿದ್ಧೇ ಶ್ವರನ ಗುಡಿಯಲ್ಲಿ ಬಂದು ಲಿಪಿಯುಂಟು. ಈ ಊರಲ್ಲಿ ಹಜರತ್ ಜಮೂಲ ಶಹಾವಾಲೋ ಎಂಬ ಸತ್ಪುರುಷನ ಕಬ ರಸ್ಥಾನವಿರುತ್ತದೆ. ಅಲ್ಲಿ ಮೊಹರಮ್ ತಿಂಗಳಲ್ಲಿ ಜಾತ್ರೆ ಯಾಗುತ್ತದೆ. ಹಜರತ ಜಮೂಲಶಹನು ಬಂದೇ ಹಗ್ಗಕ್ಕೆ ಇಲಿ, ಬೆಕ್ಕು, ನಾಯಿ, ಯರಳೆ, ಹಾವು, ಮುಂಗಲಿ ಇವು ಗಳನ್ನು ಕಟ್ಟ ಸಾಕಿದ್ದನೆಂದು ಹೇಳುತ್ತಾರೆ. ಈ ಊರಿ ನ ಸುತ್ತು ಮುತ್ತು ತೋಟಗಳು ಬಹಳ ಇರುತ್ತವೆ.

ಬ್ಯಾಡಗಿ—ರಾಣೆಬಿನ್ನೂರಿನ ವಾಯವ್ಯಕ್ಕೆ ೧೦ ಮೈಲಿ ನಮೇಲೆ. ಜ. ಸ. (೧೯೧೧) ೪೧೧೭. ಇಲ್ಲಿ ಮ್ಯುನಿಸಿಪಾಲಿ ಟಿಯುಂಟು. ಶನಿವಾರ ದಿವಸ ಬಹು ದೊಡ್ಡ ಸಂತೆಯಾಗುತ್ತದೆ. ಅದರಲ್ಲಿ ಕಿರಾಣಿ, ಕಾಳು, ಮೆಣಸಿನಕಾಯಿ, ಇವು ಗಳ ವ್ಯಾಪಾರವು ಬಹಳವಾಗುತ್ತದೆ. ಈ ಊರಲ್ಲಿ ಪೋಷ್ಟ ಆಫೀಸು, ಎರಡು ಸರಕಾರೀ ಶಾಲೆಗಳು ಇರುತ್ತವೆ.

ಮ್ಯುನಿಸಿಪಾಲಿಟಿಯ ಆದಾಯವು ಸರ ೧೯೪೦—೪೫ ರಲ್ಲಿ ೪೯೦೦ ರೂಪಾಯಿ ಇತ್ತು. ಇಲ್ಲಿ ರಾಮೇಶ್ವರನ

ಗುಡಿಯಲ್ಲಿ ಎರಡು ಲಿಪಿಗಳಿರುತ್ತವೆ. ಸನ್ನ ೧೪೪೬ರಲ್ಲಿ ಇಲ್ಲಿ ಒಂದು ಮಗ್ಗಗಳಿದ್ದವು; ಈಗೂ ಮಗ್ಗಗಳಿರುತ್ತವೆ.

ಚೌದಾದಾವುಪುರ—ರಾಣೆಬಿನ್ನೂರಿನ ಉತ್ತರಕ್ಕೆ ೫ ಮೈಲಿನ ಮೇಲೆ ತುಂಗಭದ್ರೆಯ ದಂಡೆಯಲ್ಲಿ. ಇಲ್ಲಿ ಮುಕ್ತೇಶ್ವರ, ಈಶ್ವರ, ಗೋಪದೇವಸ್ವಾಮಿ, ಎಂಬ ಗುಡಿಗಳಿವೆ. ಇವುಗಳಲ್ಲೆಲ್ಲ ಕೂಡಿ ೪ ಲಿಪಿಗಳುಂಟು; ಒಂದು ನೂತ್ರ ೪೯೯ನೇ ವರ್ಷದಲ್ಲಿ ಆದದ್ದುಂಟು; ಉಳಿದವುಗಳೆಲ್ಲ ೧೦ನೇ ಶತಕದ ಈಚೆಯಲ್ಲಿ ಆದಂಥವು.

ಐರಣಿ—ರಾಣೆಬಿನ್ನೂರಿನ ಪೂರ್ವಕ್ಕೆ ೧೨ ಮೈಲಿನ ಮೇಲೆ ತುಂಗಭದ್ರೆಯ ಥಡದಲ್ಲಿ ದೊಡ್ಡ ಪಳ್ಳಿ; ನಿವಾಸಿಗಳು (೪೧) ೧೪೭೪. ಈ ಊರ ದಕ್ಷಿಣಕ್ಕೆ ಭದ್ರವಾದ ದೊಂದು ಸಣ್ಣ ಕೋಟೆಯು ಪೂರ್ವದಲ್ಲಿ ಇತ್ತು; ಅದು ಈಗ ಹಾಳಾಗಿದೆ.

ಗುಡ್ಡಗುಡ್ಡಾಪುರ ಅಥವಾ ದೇವರಗುಡ್ಡ—ರಾಣೆಬಿನ್ನೂರಿನ ಉತ್ತರಕ್ಕೆ ಎಂಟು ಮೈಲಿನ ಮೇಲೆ ಬಂದು ಎತ್ತರವಾದ ಗುಡ್ಡದ ಮೇಲೆ ಇರುತ್ತದೆ. ಜನಸಂಖ್ಯೆಯು ೫೦೦ಕ್ಕಿಂತ ಹೆಚ್ಚಿಲ್ಲ.

ಇಲ್ಲಿಯ ಮಲ್ಲಾರಿ ಅಥವಾ ಮೈಲಾರಲಿಂಗವೆಂಬ ದೇವಸ್ಥಾನವು ಪ್ರಸಿದ್ಧ ಉಂಟು. ಗುಡಿಯು ತಕ್ಕಮಟ್ಟಿಗೆ ದೊಡ್ಡದಿರುತ್ತದೆ; ದೇವರಿಗೆ ಇನಾಮು ಭೂಮಿಯು ೬೫೦ ರೂಪಾಯದ್ದು ನಡಿಯುತ್ತದೆ. ಈಶ್ವರನು ಇಲ್ಲಿ ಅವತಾರ ಮಾಡಿ ಮಲ್ಲನೆಂಬ ದೈತ್ಯನನ್ನು ೫ ಪೂಟು ಉದ್ದವಾದ ಬಿಲ್ಲಿನಿಂದ ಯುದ್ಧ ಮಾಡಿ ಕೊಂದನೆಂದು ಹೇಳುತ್ತಾರೆ. ಬಿಲ್ಲು ಈಗ್ಯೂ ಇರುತ್ತದೆ. ಗುಡಿಯ ಸುತ್ತಮುತ್ತ ೬೦ ವಗ್ಗಯ್ಯಗಳ ಮನೆಗಳುಂಟು. ದಸರೆಯ ಪೂರ್ವ ದಿವಸದಿಂದ

ಮೂರು ದಿವಸ ದೊಡ್ಡ ಜಾತ್ರೆಯಾಗುತ್ತದೆ; ೫೦೦ ದೀಪ ೧೦೦೦ ವರೆಗೆ ಜನ ಕೂಡುತ್ತದೆ. ಈ ಜಾತ್ರೆಯಲ್ಲಿ ಹಗ್ಗ ಯ್ಯುಗಳು ಸರ್ಪಣಿ ಹರಿಯೋಣ ಕಾಲೊಳಗೆ ಕಬ್ಬಿಣದ ಸಲಾಖಿಯು ಚುಚ್ಚಿ ಪೂರು ಮಾಡೋಣ, ಮುಂತಾದ ಅ ಸುರೀ ಕೃತ್ಯಗಳನ್ನು ಮಾಡುತ್ತಾರೆ. ವ್ಯಾಪಾರವು ಅಪ ಕ್ಕಷ್ಟೇ. ಜಾತ್ರೆಯಲ್ಲಿ ಮಲ್ಲಾರಿಗೆ ಸುಮಾರು ೧೦೦೦ ರೂ ಪಾಯಿ ಕಾಣಿಕೆ ಬರುತ್ತದೆ. ಈ ಹಳ್ಳಿಯಲ್ಲಿ ಮೈನಸಿಪಾಲಿ ಟಿಯುಂಟು.

ಕವರಮಂಡಲಗಿ—ಬಾಣಿಬಿನ್ನೂರಿನ ಪಶ್ಚಿಮಕ್ಕೆ ೯ ಮೈಲಿನ ಮೇಲೆ. ಜ. ಸ. ೧೭೫೩. ಅಲ್ಲಿಯ ಪ್ರಸಿದ್ಧವಾದ ಹ ನುಮಂತನ ಮೂರ್ತಿಯನ್ನು ಜನಮೇಜಯ ರಾಜನು ಸ್ಥಾಪಿಸಿದನೆಂದು ಹೇಳುತ್ತಾರೆ; ಆದರೆ ಗುಡಿಯಲ್ಲಿ ಇರುವ ಲಿಪಿಯು ೧೫೭೬ ನೇ ವರ್ಷದ್ದಿರುತ್ತದೆ.

METHODS OF TEACHING-NOTES OF LESSONS.

ಕಲಿಸುವ ಪದ್ಧತಿಗಳು.—ಪಾಠದ ಟಿಪ್ಪಣಿಗಳು.

(೬೪ ನೇ ಪುಟದಿಂದ ಮುಂದೆ ಸಾಗಿದ್ದು.)

೩. ವಿಷಯ—ತಿಳಿಸತಕ್ಕದ್ದೆಲ್ಲ ಈ ಭಾಗದ ಮುಖಾಂ ತರವಾಗಿ ವಿದ್ಯಾರ್ಥಿಗಳ ಕಣ್ಣ ಮುಂದೆ ಇಡಲ್ಪಡುವದು. ಇದರಲ್ಲಿ ಸೇರಿಸತಕ್ಕ ಸಂಗತಿಗಳು (೧) ನಿಜವಾದವುಗಳಿರ ಲಿಕ್ಕೆ ಬೇಕು. ನಿಜತ್ವವು ಬಹಳ ಬೆಲೆಯುಳ್ಳ ಗುಣವು. ಈ ಗುಣವು ಇರದಿದ್ದರೆ ಈ ಭಾಗದಿಂದ ಏನೂ ಪ್ರಯೋ ಜನವಾಗಲಾರದು. ಹೇಳತಕ್ಕ ಸಂಗತಿಗಳು ನಿಜತ್ವವು ಳ್ಳವುಗಳಿರುವದಲ್ಲದೆ ವಿದ್ಯಾರ್ಥಿಗಳ ವಯಸ್ಸಿಗೂ ಯೋಗ್ಯ ತೆಗೂ (೨) ಅನುಗುಣವಾಗಿ ಇರಲಿಕ್ಕೆ ಬೇಕು. ೫ನೇ ೬ನೇ ಇಯತ್ತೆಗಳ ವಿದ್ಯಾರ್ಥಿಗಳಿಗೆ ಸರಿಯಾದ ಸಂಗತಿಗಳು ಹೊ

ಲನೇ ಇಯತ್ತೆಯವರಿಗೆ ಬಹು ಕಠಿಣವಾಗುವವು. ಆ ೀ ಮೇರೆಗೆ ಚಿಕ್ಕ ಬಾಲಕರಿಗೆ ಸರಿಯಾದ ಸಂಗತಿಗಳು ೃಬುದ್ಧ ವಿದ್ಯಾರ್ಥಿಗಳಿಗೆ ನಿಷ್ಪ್ರಯೋಜನವಾಗುವವು. ಈ ಭಾಗದಲ್ಲಿಯ ಸಂಗತಿಗಳು (೩) ಮನೋರಂಜಕವಾ ಿರಬೇಕು. ಋಣ ವಿವರಣೆಗಳಿಗೆ ವಿದ್ಯಾರ್ಥಿಗಳ ಮನಸ್ಸು ಿಳಿಯುವದಿಲ್ಲ. ವಿಲಕ್ಷಣವಾದ ನಡಾವಳಿಗಳ ವರ್ಣನೆ ಗಳೂ, ಚಮತ್ಕಾರದ ಒಡವೆಗಳ ವರ್ಣನೆಗಳೂ ಮನೋ ವೃತ್ತಿಯನ್ನು ಪ್ರಚಲಿಸುವ ಸಂಗತಿಗಳ ವರ್ಣನೆಗಳೂ ವಿ ದ್ಯಾರ್ಥಿಗಳ ಮನಸ್ಸನ್ನು ಎಳಕೊಳ್ಳುವವು.

ಈ ಭಾಗದಲ್ಲಿ ಸಂಗ್ರಹಿಸಿದ ಸಂಗತಿಗಳು (೪) ಪ್ರಯೋ ಜನಕರವಾಗಿರಬೇಕು. ವಾಡಿಕೆಯಾಗಿ ಕೆಲಸಕ್ಕೆ ಬಾರದಂಥ ಸಂಗತಿಗಳನ್ನು ಕ್ಲಿಷ್ಟಕಲ್ಪನೆಗಳನ್ನು ಹೇಳುವದರಿಂದ ಏನೂ ಪ್ರಯೋಜನವಿಲ್ಲ. ವಿದ್ಯಾರ್ಥಿಗಳಿಗೆ ಪ್ರಯೋಜನ ಕರವಾದಂಥ ಸಂಗತಿಯನ್ನೇ ಹೇಳುತ್ತಿರಬೇಕು. ವಿದ್ಯಾ ರ್ಥಿಗಳಿಗೆ ತಿಳಿಯದಂಥ ಸಂಗತಿಗಳನ್ನು, ಅಲ್ಲವೆ ಅವರಿಗೆ ಎಂದೂ ಕೆಲಸಕ್ಕೆ ಬಾರದಂಥ ಸಂಗತಿಗಳನ್ನು ಹೇಳುವದ ರಿಂದ ಕಾಲಾಪವ್ಯಯವಾಗುವದಲ್ಲದೆ ಅವರ ಬುದ್ಧಿ ಸಾಮ ರ್ಥ್ಯದ ದುರುಪಯೋಗವಾಗುತ್ತದೆ.

೪. ಕಲಿಸುವ ಕ್ರಮ:—ವಿಷಯವನ್ನು ವಿದ್ಯಾರ್ಥಿಗಳಿಗೆ ಸುಬೋಧವಾಗಿ ತಿಳಿಹಿಸುವ ಉಪಾಯ ಪರಂಪರೆಯೇ ಶಿಕ್ಷಣ ಕ್ರಮವೆನಿಸುತ್ತದೆ. ಶಿಕ್ಷಕನು ಸಂಗತಿಗಳನ್ನು ಹೇಳು ವದು, ವಿದ್ಯಾರ್ಥಿಗಳು ಆ ಸಂಗತಿಗಳನ್ನು ತಿರಿಗಿ ನುಡಿಯು ವದು ಇಷ್ಟರಿಂದಲೇ ಪ್ರಯೋಜನವಾಗಲಾರದು. ವಿದ್ಯಾ ರ್ಥಿಗಳ ಮುಂದಿಟ್ಟ ಸಂಗತಿಗಳನ್ನು ಅವರಿಗೆ ತಿಳಿಸಲಿಕ್ಕಾ ಅವುಗಳ ಮರ್ಮವನ್ನು ಗ್ರಹಿಸುವಂತೆ ಮಾಡುವದಕ್ಕಾ

ಬಗೆ ಬಗೆಯ ಪಂಚಿಕೆಗಳನ್ನೂ ಉಪಾಯಗಳನ್ನೂ ಯೋ
ಚಿಸಬೇಕಾಗುವದು. ಈ ಉಪಾಯಗಳಿಂದಲೇ ಶಿಕ್ಷಕ
ಜ್ಞಾನತನವು ಬೈಲಿಗೆ ಬರುವದು. ಶಿಕ್ಷಕನ ನೈಪುಣ್ಯ
ಈ ಉಪಾಯ ಪರಂಪರೆಯನ್ನು ರಚಿಸುವಲ್ಲಿ ಕಂಗೊ
ಸುವದು. ಸುಲಭವಾದಂಥ, ಸರಿಯಾದಂಥ, ಸ್ಪಷ್ಟವಾದ
ವ್ಯತ್ಯಾಸಗಳು, ಪರಿಚಿತವಾದ ದೃಷ್ಟಾಂತಗಳು ಇವ
ಮೊದಲಾದ ಉಪಾಯಗಳನ್ನು ಕೈಕೊಂಡು ವಿದ್ಯಾರ್ಥಿಗ
ಬುದ್ಧಿಯನ್ನು ಬೈಲಿಗೆ ಎಳೆಯುವ ಮಾಸ್ತರನೇ ಶಿಕ್ಷ
ಕ್ರಮವನ್ನು ಆರಿತವನು. ಉದಾಹರಣಾರ್ಥವಾಗಿ ಸಿಂ
ದ ಪಾಠವನ್ನು ಕಲಿಸುವದೆಂದು ಕಲ್ಪಿಸುವ. ಆದ
ಸಿಂಹವು ಸಸ್ತನ ಪ್ರಾಣಿಯಾಗಿರುವದೆಂಬದು ಸಸ್ತನ ರಚ
ಸಾಧಾರಣ (ಸುಲಭ), ವಿವರಣೆಯಿಂದ ತಿಳಿಯುವದು.
ಹವು ಮಾಂಸಭಕ್ಷಕ ಪ್ರಾಣಿಯಾಗಿರುವದೆಂಬದು ಮಾಂಸ
ಹಾರಿಗಳ್ಲದಂಥ ಕುದುರೆ ಆಕಳುಗಳಿಗೆ ಸರಿ ಮಾಡಿ ನೋ
ಡಿದರೆ ತಿಳಿಯುವದು. ಸಿಂಹದ ಪಂಜಾವು ಆಯ್ಕೆತವಾಗಿ
ತ್ತದೆಂಬ ಸಂಗತಿಯನ್ನು ಕತ್ತಿ ಮತ್ತು ಬರೆ ಇವುಗಳ
ಹೋಲಿಸುವದರಿಂದ ಸೂಚಕ ರೀತಿಯಾಗಿ ವಿದ್ಯಾರ್ಥಿಗ
ಗೆ ತಿಳಿಯುವದು. ಸಿಂಹವು ಎತ್ತು ಕೋಣಗಳನ್ನು ಆಮೂ
ತ ಎತ್ತಿಕೊಂಡು ಹೋಗುವ ಸಂಗತಿಯನ್ನೂ ಬಂದೂ
ಹೊಡತದಿಂದ ಕುದುರೆಯು ಟೊಂಕ ಮುರಿಯುತ್ತದೆಂದು
ತಿಳಿಸುವಂಥ ಕಥೆಗಳನ್ನೂ ಹೇಳಿ ಸಿಂಹದ ಸಾಮರ್ಥ್ಯ
ವನ್ನು ತಿಳಿಸಬಹುದು. ಈ ಉದಾಹರಣವು ಬಹು ಸು
ಭವಿದೆ. ಸಾಲಭ್ಯವು ವಿಷಯ ವರ್ಣನೆಯಲ್ಲಿ ಆವಶ್ಯಕವಾ
ಗುಣವು ಎಂಬುದನ್ನು ಶಿಕ್ಷಕರು ಮರಿಯಲಾಗದು. ಜಿತ
ಗಳು, ನೆತಾಡಿಗಳು, ಆಕೃತಿಗಳು, ಗೊಂಬೆಗಳು, ಪ್ರತ್ಯಕ್ಷ

ದಾರ್ಥಗಳು ಮುಂತಾದವುಗಳನ್ನು ತಕ್ಕಸ್ಥಳದಲ್ಲಿ ಉಪ
ತೋರಿಸಲಿಕ್ಕೆ ಬೇಕು. ಪಾಠ ಹೇಳುವಾಗ ಯಾವದೊಂದು
ಳವನ್ನು ಹೇಳುವ ಪ್ರಸಂಗ ಬಂದರೆ ಅದನ್ನು ತಪ್ಪದೆ
ಕಾತೆಯಲ್ಲಿ ತೋರಿಸಬೇಕು. ವಿಷಯವಿವರಣಕ್ಕೆ ಅವಶ್ಯ
ವಿದ ಆಕೃತಿಗಳನ್ನೂ ಚಿತ್ರಗಳನ್ನೂ ತಪ್ಪದೇ ಕರೀ ಪಲ
ಯದಮೇಲೆ ತೆಗೆಯಬೇಕು. ಉನ್ನತತೆ, ಅಗಲಳತೆಗಳನ್ನು
ಪ್ರತ್ಯಕ್ಷ ಅಳತೆಮಾಡಿ ತೋರಿಸಬೇಕು. ಹಾಗೆ ತೋರಿಸುವ
ದು ಅಸಾಧ್ಯವಾದರೆ ತುಲನೆಯಿಂದ ತೋರಿಸಬೇಕು. ವಸ್ತು
ವರ್ಶನವ ಪಾಠ ಹೇಳುವಾಗ ಆ ವಸ್ತುವು ವಿದ್ಯಾರ್ಥಿಗಳ
ನೈತ್ಯವ ರೂಢಿಯೊಳಗಿನದಿದ್ದಾಗ್ಯೂ ಪ್ರತ್ಯಕ್ಷವಾಗಿ ಆ ಪದಾ
ರ್ಥವನ್ನಾಗಲಿ, ಅವರ ಚಿತ್ರವನ್ನಾಗಲಿ ತೋರಿಸಲೇ ಬೇ
ಕು. ವರ್ಷಾನು ವರ್ಷ ಬಂದು ಪದಾರ್ಥವನ್ನು ವಿದ್ಯಾ
ರ್ಥಿಗಳು ಕೈಯಲ್ಲಿ ಹಿಡಿದಿದ್ದಾಗ್ಯೂ ಬರೇ ಸ್ಮರಣಶಕ್ತಿಯಿಂದ
ಅವರ ಯಾವತ್ತೂ ಗುಣಗಳನ್ನೂ ಆಕೃತಿಯನ್ನೂ ಹೇಳು
ವದು ಪುಸ್ತಕವಾಗಿರುವದು. ಪ್ರತ್ಯಕ್ಷ ಪದಾರ್ಥವನ್ನು ತೋ
ರಿಸುವದಕ್ಕೆ ಕೆಲಸ ತೀರಲಿಲ್ಲ. ಅವರ ಆಕಾರವನ್ನೂ ಗುಣ
ಗಳನ್ನೂ ಅನುಭವದಲ್ಲೇ ಹೊರಡಿಸಬೇಕು. ಕಿತ್ತಳೆಹಣ್ಣು
ದುಂಡಗಾಗಿಯೂ ಅರಿಸಿನ ಬಣ್ಣದ್ದಾಗಿಯೂ ಇರುತ್ತದೆಂದು
ದೃಷ್ಟಿಯಿಂದ ತಿಳಿಯುತ್ತದೆ. ಗುಲಾಬೀ ಹೂವಿಗೆ ಸುಗಂ
ಧವಿರುವದೆಂದು ಘ್ರಾಣೇಂದ್ರಿಯವು ಹೇಳುತ್ತದೆ. ಸ್ವಾದವು
ಉಕ್ಕ ನೀಚವಾವದೆಂಬದು ಕ್ಯುತಿಯಿಂದ ತಿಳಿಯುತ್ತದೆ.
ಸಕ್ಕರೆ ಸವಿ ಇರುತ್ತದೆಂಬದು ರಸನೆಯಿಂದ ತಿಳಿಯುತ್ತದೆ.
ಕಬ್ಬಿಣವು ತಣ್ಣಗಿರುವದೆಂತಲೂ ಕಠಿಣವಾಗಿರುವದೆಂತಲೂ
ಸ್ಪರ್ಶದಿಂದ ತಿಳಿಯುತ್ತದೆ.

ವಿದ್ಯಾರ್ಥಿಗಳಿಗೆ ಕಲಿಸತಕ್ಕ ವಿಷಯಗಳನ್ನು ಎಚ್ಚರ
ದಿಂದ ಆರಿಸಲಿಕ್ಕೆ ಬೇಕೆಂದು ಹಿಂದೆ ಹೇಳಿರುತ್ತೇವಷ್ಟೇ.

ಅವರೆ ಆ ವಿಷಯಗಳನ್ನು ಕಲಿಸುವ ಕ್ರಮದ ಸಂಬಂಧವಾಗಿ ಅವಕ್ಕೂ ಹೆಚ್ಚು ಎಚ್ಚರ ಪಡಲಿಕ್ಕೆ ಬೇಕು. ವಿದ್ಯಾರ್ಥಿಗಳ ವಯಸ್ಸನ್ನೂ ಕಲಿಸಲಿಕ್ಕೆ ಬೇಕಾದ ಸಾಹಿತ್ಯಗಳ ಅನುಕೂಲತೆಯನ್ನೂ ಕಾಲಮಾನವನ್ನೂ ವಿಚಾರಿಸಿ ಕಲಿಸುವ ಕ್ರಮ ಗೊತ್ತು ಪಡಿಸಲಿಕ್ಕೆ ಬೇಕು. ಈ ಕೆಲಸಕ್ಕೆ ಸಾರಾಸಾರ ವಿಚಾರವೂ ತಿಳುವಳಿಕೆಯೂ ಬಹಳ ಬೇಕಾಗುತ್ತದೆ. ವಿದ್ಯಾರ್ಥಿಗಳು ಚಿಕ್ಕವರಿದ್ದಂತೆ ಅವರಿಗೆ ಸುತ್ತಲಿನ ಸಂಗತಿಗಳ ಜ್ಞಾನವು ಹೆಚ್ಚಿಗಿರಲಾರದು. ಇಂಥವರಿಗೆ ಸುಲಭವಾದ ಮಾರ್ಗಗಳಿಂದ ವಿಷಯವನ್ನು ತಿಳಿಸಿಕೊಡವದು ಬಹಳ ಶ್ರಮದ ಕೆಲಸವು. ಇದು ಸುಸಾಧ್ಯವಲ್ಲ. ಅನುಭವಿಕರೂ, ಆಸ್ಥೆಯುಳ್ಳವರೂ, ಬುದ್ಧಿವಂತರೂ ಆದ ಮಾಸ್ತರರು ಮಾತ್ರ ಇದನ್ನು ಮಾಡಬಲ್ಲರು. ಚಿಕ್ಕ ಹುಡುಗರಿಗೆ ಕಲಿಸುವಾಗ ಶಿಕ್ಷಕರು ಕೊಡುವ ದೃಷ್ಟಾಂತಗಳೂ ಮಾಡುವ ತುಲನೆಗಳೂ ಅವರಿಗೆ ಗೊತ್ತಿದ್ದ ಸಂಬಂಧವನ್ನೇ ಇರತಕ್ಕದ್ದೇ ಹೊರತು ಗೊತ್ತಿಲ್ಲದಂಥವು ಇರಕೂಡದು. ಬಾರದ ಗೊತ್ತಿಲ್ಲದ ಸಂಗತಿಯಿಂದ ಮತ್ತೊಂದು ಗೊತ್ತಿಲ್ಲದ ಸಂಗತಿಯನ್ನು ತಿಳಿಸಿ ಕೊಡುವ ಪ್ರಯತ್ನ ಮಾಡುವದೂ ಗ್ರೀಕ, ಲಾತಿನ್ ಮುಂತಾದ ಅರಿಯದ ಭಾಷೆಯಲ್ಲಿ ಚಿಕ್ಕ ಹುಡುಗರ ಮತ್ತು ಹೆಂಗಸರ ಕೂಡ ಮಾತನಾಡುವದೂ ಬಂದೇ ವಿಧವಾಗಿರುವದು. ಈ ಕಾರಣಗಳಿಂದಲೇ ಪ್ರಬುದ್ಧ ಹುಡುಗರಿಗೆ ಕಲಿಸುವದಕ್ಕಿಂತ ತೀರ ಚಿಕ್ಕ ಹುಡುಗರಿಗೆ ಕಲಿಸುವದು ಜಿಗಿಯಾಗಿರುವದು. ಪ್ರಬುದ್ಧ ಹುಡುಗರಿಗೆ ಅನೇಕ ಶಬ್ದಗಳು ಗೊತ್ತಿರುತ್ತವೆ; ಸ್ವಭಾಷೆಯ ಜ್ಞಾನವು ತಕ್ಕಮಟ್ಟಿಗೆ ಆಗಿರುತ್ತದೆ. ದೃಷ್ಟಾಂತ ಕೊಡತಕ್ಕ ಎಷ್ಟೋ ಸಂಗತಿಗಳನ್ನು ಅವರು ನೋಡಿ

ುತ್ತಾರೆ. ಅವರ ಮಾನಸಿಕ ಸಾಮರ್ಥ್ಯಗಳು ತಕ್ಕಮಟ್ಟಿಗೆ ಬಲ ಹೊಂದಿರುತ್ತವೆ. ಮತ್ತು ಅವರ ಗ್ರಾಹಕಶಕ್ತಿಯು ಬೆಳೆದಿರುತ್ತದೆ. ಬೀದಿಯ ವಿಷಯದ ಮೇಲೆ ಜೀವಿಸಬೇರೆ ವಯಸ್ಸಿನ ಮಡುಗರಿಗೆ ತಕ್ಕಂಥ ಪಾಠದ-ಟಿಪ್ಪಣಿಗಳನ್ನು ರಚಿಸುವದು ಶಿಕ್ಷಕರ ಮುಖ್ಯ ಕರ್ತವ್ಯವೆಂದು ತೀಳಬಹುದು.

THE MORAL TRAINING OF CHILDREN.

ಮಕ್ಕಳ ನೀತಿ ಶಿಕ್ಷಣ.

(ಇನ್ನೇ ಪ್ರಟದಿಂದ ಮುಂದೆ ಸಾಗಿದ್ದು.)

೩. ಚಿಕ್ಕಂದಿನಿಂದಲೇ ಮಡುಗರಿಗೆ ಮರ್ಯಾದೆಯಿಂದಿಲಿಕ್ಕೆ ಕಲಿಸಬೇಕು. ನಮ್ಮ ಜನರು ಸಣ್ಣ ಹುಡುಗರನ್ನು ಗೂಳಿಗಳಂತೆ ಬೀದಿಗಳಲ್ಲಿ ಬತ್ತಲೆಯಾಗಿ ತಿರುಗಾಡಲೊಡುತ್ತಾರೆ. ಅವರ ಕಿವಿಗಳಲ್ಲಿ ಬಾವುಲಿಗಳೂ ಮುಂಗೈಯಲ್ಲಿ ಕಡಗಗಳೂ ಪರಡುಗಳ ಮೇಲೆ ಕಾಲ್ಕಡಗಗಳೂ ಇರುತ್ತವೆ. ಆದರೆ ನಡುವಿನಲ್ಲಿ ಇದ್ದರೆ ಕೆಲವು ಆಭರಣಗಳೇ ಇರುವವು ಹೊರತು ನಾಲ್ಕು ಬಟ್ಟೆ ಜೀಂದಿ ಕೂಡ ಇರುವದಿಲ್ಲ. ಇದರಿಂದ ನಾಚಿಕೆಯ ಕಲ್ಪನೆಯು ಎಷ್ಟು ಮಾತ್ರವೂ ಹುಟ್ಟಲರಿಯದು. ಇದಕ್ಕೆ ಮಡುಗರು ಅರಿವೆಗಳನ್ನು ಹೊಲಸು ಮಾಡಿಕೊಳ್ಳುತ್ತಾರೆಂಬ ನೆವನವು ತೋರಿಸಲ್ಪಡುವದು. ಅವರಿಗೆ ಮಡುಗರಿಗೆ ಅರಿವೆಗಳನ್ನು ಸ್ವಚ್ಛವಿಡುವ ರೀತಿಯನ್ನು ಮಾಡಿ ತೋರಿಸಬೇಕಷ್ಟೆ; ಕಟ್ಟಿ ಹೊಲಸು ಮಾಡಿದರೆ ಬಗಿಯುವದಾದರೂ ಕಠಿಣವಲ್ಲ. ಕೀರ ಚಿಕ್ಕವಿರುವಿಗೆ ನಾಚಿಕೆಯ ಕಲ್ಪನೆಯು ಇಲ್ಲದಿದ್ದರೂ ಅದು ದೊಡ್ಡವಾಗುತ್ತ ಹೋದ ಹಾಗೆ ತಾನು ಬತ್ತಲೆಯಾಗಿ ತಿರುಗಿದ ಕಾಲವು ಅದರ ಸ್ಮರಣೆಯಲ್ಲಿ ಎಂದೂ ನಿಲ್ಲಕೂಡದು. ದೊಡ್ಡ ಹುಡುಗರು ಬತ್ತಲೆ ಓಡ್ಯಾಡುವದರಿಂದ ಅವರಿಗೆ

ಕೀಡಾಗುವದು. ಬತ್ತಲೆ ಓಡ್ಯಾಡುವಂಥ ದೊಡ್ಡ ಹುಡುಗರನ್ನು ಕಂಡು ದೊಡ್ಡವರ ಮನಸ್ಸಿನಲ್ಲಿ ಸಹ ಕೆಟ್ಟ ವಿಚಾರಗಳು ಬರುವವು.

೪. ಮಲಗುವ ಸ್ಥಳಗಳೂ ಪೋಷಾಕುಗಳನ್ನು ಹಾಕುವ ತೆಗೆಯುವ ಸ್ಥಳಗಳೂ ಗಂಡು ಹೆಣ್ಣು ಹುಡುಗರಿಗೆ ಬೇರೆ ಬೇರೆ ಇರಬೇಕು. ಕನಿಷ್ಠ ಗಂಡು ಹುಡುಗರ ಸ್ಥಳಕ್ಕೂ ಹೆಣ್ಣು ಹುಡುಗರ ಸ್ಥಳಕ್ಕೂ ನಡುವೆ ಬಂದು ಪರದೆಯಾದರೂ ಇರಬೇಕು. ಇದೇ ಮೇರೆಗೆ ಶೌಚ, ಮುಖ ಮಾರ್ಜನದ ಸ್ಥಳಗಳೂ ಸ್ನಾನದ ಸ್ಥಳಗಳೂ ಬೇರೆ ಬೇರೆ ಇರಬೇಕು.

೫. ಕಾಮವಿಕಾರಕ್ಕೆ ಅನುಕೂಲಿಸುವ ಸಂಗತಿಗಳನ್ನು ಎಚ್ಚರದಿಂದ ದೂರ ಮಾಡಬೇಕು. ಈ ದೇಶದಲ್ಲಿ ಹುಡುಗರು ತೀರ ಚಿಕ್ಕವರಿರುವಾಗಲೇ ಅವರ ಲಗ್ನದ ವಿಚಾರ ನಡಿಸುತ್ತಾರೆ. ಹೆಂಗಸರು ಹುಡುಗನನ್ನು ಗಂಡನಾಗಿಯೂ ಪುಡಿಗೆಯನ್ನು ಹೆಂಡತಿಯಾಗಿಯೂ ಗೊತ್ತು ಮಾಡಿ ನಗೆ ಮಾಡುತ್ತಾರೆ. ಹುಡಿಗೆಯು ಮೈನೆರೆದ ಕೂಡಲೆ ಬಹಳ ಸಂಭ್ರಮದಿಂದ ಉತ್ಸವ ಮಾಡುತ್ತಾರೆ. ಮತ್ತು ಆ ಚಿಕ್ಕ ಗಂಡ ಹೆಂಡರನ್ನು ಆದಷ್ಟು ತೀವ್ರ ಪ್ರಜೋತ್ಪಾದನಕ್ಕೆ ಕೂಡಿಸುತ್ತಾರೆ.

ಸಣ್ಣ ಮಕ್ಕಳನ್ನು ಪಾತರದವರ ನಾಚಿಗೆ ಕಲೆಮುಕೊಂಡು ಹೋಗುತ್ತಾರೆ. ಅವರ ಉಡಿಗೆ ತೊಡಿಗೆಗಳನ್ನೂ ಹಾವ ಭಾವಗಳನ್ನೂ ಅವರ ಕಾಮೋದ್ದೀಪಕವಾದ ಚೇಷ್ಟೆಗಳನ್ನೂ ನೋಡಿ ಮತ್ತು ಅವರ ಹಾಡುಗಳನ್ನು ಕೇಳಿ ಮನಸ್ಸು ವಿಕಾರವಶವಾಗುತ್ತದೆ. ದಕ್ಷಿಣ ಹಿಂದುಸ್ಥಾನದಲ್ಲಿ ಎಷ್ಟೋ ದೇವಾಲಯಗಳಲ್ಲಿ ಪಾತರದವರಿಗೆ ಅವಕಾಶವು

ಅವರು ನಿತ್ಯಶಃ ದೇವರ ಸೇವೆಯನ್ನು ಮಾಡಬೇಕೆಂದು ನಿರ್ಬಂಧವಿರುತ್ತದೆ. ಕೆಲವು ಗುಡಿಗಳಲ್ಲಿ ಜೋಗತಿಯರು ಮತ್ತು ಬಸವೆಯರು ಅಸಂಖ್ಯವಾಗಿರುತ್ತಾರೆ. ಹೋಳೀ ಹುಣ್ಣಿಮೆದಲ್ಲಿ ಅಭದ್ರ ಮಾತುಗಳಿಗೆ ಕಟ್ಟೇ ಇರುವದಿಲ್ಲ.

೬. ಅಭದ್ರ ಮಾತು ಪಾಪಮಯವಿರುತ್ತದೆಂದು ಬಾಲಕರಿಗೆ ಕಲಿಸತಕ್ಕದ್ದು. ನಮ್ಮ ಮನಸ್ಸಿನಲ್ಲಿ ನಡೆಯುವ ವಿಚಾರಗಳೂ ನಾವು ಆಡುವ ಮಾತುಗಳೂ ದೇವರಿಗೆ ತಿಳಿಯುತ್ತವೆಂಬದನ್ನೂ ಅವನು ಈಗ್ಗೆ ನಮ್ಮ ಕರ್ಮಗಳಿಗೆ ಸಾಕ್ಷಿಯೂ ಮುಂದೆ ಕರ್ಮಗಳಂತೆಫಲ ಕೊಡುವವನೂ ಆಗಿರುತ್ತಾನೆಂಬದನ್ನೂ ಚಿಕ್ಕ ಮಕ್ಕಳಿಗೆ ಯಾವಾಗಲೂ ಹೇಳುತ್ತಿರಬೇಕು.

ಹುಡುಗರನ್ನು ಸೋಮಾರಿಗಳಾಗಗೊಡಬಾರದು. ದುರ್ಗುಣಕ್ಕೆ ಬಳ್ಳೀ ಕೆಲಸವೇ ಮದ್ದು. ಬಳ್ಳೀ ವ್ಯಾಯಾಮವಾಗುವಂಥ ಆಟಗಳು ಹುಡುಗರನ್ನು ದುರ್ಗುಣಗಳಿಂದ ಕಾಯುವದಕ್ಕೆ ಪ್ರಯೋಜನಕರವಾಗಿರುತ್ತವೆ. ಬಾಲಕರ ಜೊತೆಗಾರರನ್ನು ಕುರಿತು ಚನ್ನಾಗಿ ಲಕ್ಷ ಕೊಡಬೇಕು. ಅಸ್ವಚ್ಛತೆಯಿಂದ ಆಗುವ ಕೆಟ್ಟ ಪರಿಣಾಮಗಳನ್ನು ಅವರಿಗೆ ಚನ್ನಾಗಿ ತಿಳಿಸಿ ಹೇಳಬೇಕು.

ಪರಸ್ತ್ರೀಯರ ಅಥವಾ ಸೂಳೆಯರ ಮುಖದಿಂದ ಜೇನಿನಂತೆ ಸವಿ ಮಾತುಗಳು ಹೊರಡುತ್ತವೆ; ಅವರ ಬಾಯಿಯು ಎಣ್ಣೆಗಿಂತ ನುಣುಪಾಗಿರುತ್ತದೆ; ಆದರೆ ಅವರ ಸಹವಾಸವು ದವನದಂತೆ ಕಹಿಯೂಗಿಯೂ ಎರಡೂ ಮಗ್ಗಲು ಧಾರೆಯುಳ್ಳ ಕಪ್ಪದಂತೆ ತೀಕ್ಷ್ಣವಾಗಿಯೂ ಇರುತ್ತದೆ.ಕೆಟ್ಟಸ್ತ್ರೀಯರ ಗಾಳಿ ಸೊಂಕದಂತೆ ಅವರಿಂದ ದೂರಿರು, ಮತ್ತು ಅವರ ನೆರಳಿಗೆ ಸಹ ಹೋಗಬೇಡವೆಂಬ ಸದುಪದೇಶವನ್ನು ಹುಡುಗರಲ್ಲಿ ನೆಲೆಗೊಳ್ಳುವಂತೆ ಮಾಡಬೇಕು.

DEPARTMENTAL NOTICE.

ನೋಟೀಸು.

ಇಂಗ್ಲೀಜಿ ನಂಬರು ೬೫೯—೧೦.

ದಕ್ಷಿಣ ಭಾಗದೊಳಗಿನ ಎಲ್ಲ ಡಿಪೂಟಿ ಎಜ್ಯುಕೇಶನಲ್ ಇನಸ್ಪೇಕ್ಟರರಿಗೆ.—

ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣಭಾಗ ಇವರ ಲೇಖನ—

ನೀವು ನಿಮ್ಮ ಜಿಲ್ಲೆಯೊಳಗಿನ ಎಲ್ಲ ಲೋ. ಬೋ. ಮ್ಯುನಿಸಿಪಲ್ ಮತ್ತು ಸಹಾಯ ಪಿಕ್ಕುವಂಥ ಅಂಗ್ಲೋ ವ್ಹರ್ನ್ಯಾಕ್ಯುಲರ ಮತ್ತು ವ್ಹರ್ನ್ಯಾಕ್ಯುಲರ ಸ್ಕೂಲ ಮಾಸ್ತರರಿಗೆ ಬಂದು ಬಿಟ್ಟ ಹುಕುಮಿನ ದ್ವಾರದಿಂದ ತಿಳಿಸತಕ್ಕದ್ದೇನಂದರೆ:—ಸಾಲಿಯ ಮಾಸ್ತರರಿಂದ ಸರಟಿಫಿಕೇಟನ್ನು ತೆಗೆದುಕೊಳ್ಳದೆ ಗೌಡ ಕುಲಕರ್ಣಿಯರ ಕಡಿಂದಾಗಲಿ ಯಾವನಾದರೊಬ್ಬ ಸಭ್ಯ ಗೃಹಸ್ಥನ ಕಡಿಂದಾಗಲಿ ಸರಟಿಫಿಕೇಟನ್ನು ತೆಗೆದುಕೊಂಡು ಏನೇ ಅಥವಾ ಏನೇ ಗ್ರೀಡ ಮುಲಖೀ ಪರೀಕ್ಷೆಗೆ ಬರಲಿಚ್ಛಿಸುವ ಹೊಸ ಉಮೇದವಾರರು ಇನ್ನು ಮುಂದೆ ತಾವು ಮೊದಲು ಕಲಿತಂಥ ಸಾಲಿಯ ಮಾಸ್ತರರ ಕಡಿಂದ ವಯಸ್ಸಿನ ದಾಖಲೆಯನ್ನು ಪಡೆಕೊಂಡು ಅದನ್ನೂ ತಮ್ಮ ಅರ್ಜಿಯ ಕೂಡ ಕಳಿಸುತ್ತಿರಬೇಕು. ಈ ದಾಖಲೆ ಇದ್ದ ಹೊರತು ಅರ್ಜಿಗಳು ಹಿಡಿಯಲ್ಪಡಲಿಕ್ಕಿಲ್ಲ. ಈ ದಾಖಲೆಗಳಲ್ಲಿ ಬರೆದ ಜನನ ತಾರೀಖಿಗೂ ಅಥವಾ ವಯಸ್ಸಿಗೂ ಅರ್ಜಿಗಳಲ್ಲಿ ಕಾಣಿಸಿದ ಜನನ ತಾರೀಖಿಗೂ ಅಥವಾ ವಯಸ್ಸಿಗೂ ಮೇಳವಿರಲಿಕ್ಕೆ ಬೇಕು. ಹೆಚ್ಚು ಕಡಿಮ ಇರಲಿಕ್ಕಾಗದು, ಎಲ್ಲ ಉಮೇದವಾರರು ಸ್ವಲ್ಪ ದಿವಸಗಳಾದರೂ ಬೂದಿಲ್ಲ ಬಂದು ಸಾಲಿಗೆ ಜೋಗಿರ

ಕ್ಕೆ ಬೇಕು. ಆದವರಿಂದ ಈ ಪ್ರಕಾರದ ವಯಸ್ಸಿನ ದಾಖಲೆಗಳನ್ನು ಪಡಕೊಳ್ಳಲಿಕ್ಕೆ ಅವರಿಗೆ ಏನೂ ಅಡಚಣಿ ಹುಂಟಾಗಲಾರದು. ಯಾವ ಉಮೇದವಾರನಿಗಾದರೂ ಈ ದಾಖಲೆಯನ್ನು ಕೊಡಲಿಕ್ಕೆ ಯಾವ ಕಾರಣದಿಂದಲೂ ಸಾಧ್ಯವಾಗದಿದ್ದರೆ ಇಲ್ಲವೆನ್ನಬಾರದೆಂತಲೂ ಈ ದಾಖಲೆಯ ಬಗ್ಗೆ ಏನೇ ತೆಗೆದುಕೊಳ್ಳಬಾರದೆಂತಲೂ ಅವರಿಗೆ ನೀವು ಖಂಡಿತವಾದ ಹುಕುಮು ಕೊಡಬೇಕು. ಈ ದಾಖಲೆಯಲ್ಲಿ ಮಾಸ್ತರರು ತಮ್ಮ ಸಾಲಿಯ ಒನ್ನೇ ನಂಬರದ ರಜಿಸ್ಟರದಲ್ಲಿ ನಮೂದ ಇರುವ ಜನನ ತಾರೀಖು ಇಂಥಾದು ಅಥವಾ ವಯಸ್ಸು ಇಂತಿಷ್ಟು ಎಂಬವನ್ನಷ್ಟೇ ಬರೆಯತಕ್ಕದ್ದು.

ಈಪೂರ್ವದಲ್ಲಿ ಪರೀಕ್ಷೆಗೆ ಕೂತಂಥ ಉಮೇದವಾರರು ಈ ವಯಸ್ಸಿನ ದಾಖಲೆಗಳನ್ನು ಕಳಿಸುವ ಕಾರಣವಿಲ್ಲ. ಆದರೆ ಮೊದಲನೇಸಾರಿ ಪರೀಕ್ಷೆಗೆ ಕೂಡ್ರುವಾಗ್ಗೆ ಕೊಟ್ಟಿಂಥ, ಪರೀಕ್ಷಾ ಕಮಿಟಿಯವರು ಬಡಂಬಟ್ಟಂಥ, ಜನನ ತಾರೀಖನ್ನೇ ಕೊಡತಕ್ಕದ್ದು. ಈ ಉಮೇದವಾರರು ತಾವು ಇಂಥ ವರ್ಷ ಪರೀಕ್ಷೆಗೆ ಕೂತಿದ್ದೀವೆಂದು ಕಮಿಟಿಯವರಿಗೆ ತಿಳಿಸಬೇಕು.

ಈ ಬಗ್ಗೆ ನೀವು ಮಾಸ್ತರರಿಗೆ ಕೊಟ್ಟ ಬಿಟ್ಟ ಹುಕುಮಿನ ಬಂದು ನಕಲನ್ನು ನೋಡುವದಕ್ಕೆ ಇತ್ತ ಕಡೆಗೆ ಕಳಿಸಬೇಕು.

ತಾಲ್ಲೂಕಿನ ಜಾನ್ಯ ಅರಿ ಸರ್ಕಾರಿ ಇಸವಿ } B. R. Sahasrabuddhe
ಎಜ್ಯುಕೇಶನಲ್ ಇನಸ್ಪೇಕ್ಟರ ದಕ್ಷಿಣ

CORRESPONDENCE.
ಪತ್ರವ್ಯವಹಾರ.

ರಾವಸಾಹೇಬ ಕನ್ನಡ ಬಾಲಾಪತ ದಕ್ಷಿಣಿಕರ ಗೂರಿಗಳ ಚರಣಸನ್ನಿಧಿಗೆ.—

ವಿ. ವಿ. ಕೆಳಗಿನ ನಾಲ್ಕು ಸಾಲುಗಳಿಗೆ ಈ ತಿಂಗಳ ಸ
ಚಿಕೆಯಲ್ಲಿ ಸ್ಥಳ ಕೊಡಬೇಕಾಗಿ ಆಶಿಸುತ್ತೇನೆ.

ಇವತ್ತಿನ ದಿವಸ ರಾಣೆಬಿನ್ನೂರ ತಾಲೂಕ ಹಲಗೇರಿ
ಪ್ರಸಿದ್ಧ ಸಾವಕಾರರೂ ಶಾಲೆಯ ಮೆಂಬರರೂ ಆದ ರಾ
ರಾ॥ ಗೋವಿಂದ ನಾಯಿಕ ಚಿಕ್ಕೇರೂರ, ರಾ॥ ರಾ॥ ಚನ್ನಬ
ಸಪ್ಪ ಬೆಲ್ಲದ, ರಾ॥ ರಾ॥ ಮುರಿಗೆಪ್ಪ ಗಚ್ಚಿನಮನಿ ಇವರು
ಉಳಿವ ಶಾಲೆಯ ಮೆಂಬರರನ್ನು ಕರಕೊಂಡು ಕಳೆದ ವ
ರ್ಷ ಶಾಲೆಯ ಪರೀಕ್ಷೆಯಾದ ಮೇಲೆ ಬಂದು ಪಾಸಾದ ಪು
ಡುಗರಿಗೆಲ್ಲರಿಗೂ ಇನಾಮು ಕೊಟ್ಟು ಹೋಗಿದ್ದರು. ಅದ
ರಂತೆ ಈ ವರ್ಷವಾದರೂ ವಾರ್ಷಿಕ ಪರೀಕ್ಷೆಯಾದ ಮೇ
ಲೆ ಶಾಲೆಗೆ ಬಂದು ವ್ಯವಸ್ಥೆಯನ್ನೂ ಮತ್ತು ಪರೀಕ್ಷೆಯ
ಪರಿಣಾಮವನ್ನೂ ಕಂಡು ಸಂತುಷ್ಟರಾಗಿ ಕೆಲ ಹುಡುಗರಿಗೆ
ಇನಾಮು ಮತ್ತು ಶಾಲೆಯ ಉತ್ತೇಜನಕ್ಕಾಗಿ ೧೫ ರೂ
ಪಾಯದ ಫಡಿಯೂರವನ್ನೂ ಕೊಟ್ಟು ವ್ಹಿಜಿಟಿಸರ್ ಬುಕ್ಕಿಗೆ
ಶರಾ ಬರೆದು ಹೋದರು. ಈ ಊರ ಮೆಂಬರರು ಈ ರೀ
ತಿಯಾಗಿ ಶಿಕ್ಷಣದ ಕೆಲಸಕ್ಕೆ ಉತ್ತೇಜನ ಕೊಡುತ್ತಿರುವದ
ನ್ನು ಕಂಡು ನಾನು ಅವರ ಆಭಾರಿ ಇದ್ದೇನೆ.

ಸರಕಾರಿ ಶಾಲೆ ಹಲಗೇರಿ,
ತಾಲೂಕ ರಾಣೆಬಿನ್ನೂರ.
೧೦–೩–೨೫.

ತಮ್ಮ ವಿಧೇಯ,
ಕೃ. ಶ. ಜಡಿ, ಮಾಸ್ತರ ಹಲಗೇರಿ

ರಾವಸಾಹೇಬ ಕನ್ನಡ ಶಾಲಾಪತ್ರಿಕೆಯ ವ್ಯವಸ್ಥಾ
ಪಕ ದೊರೆಗಳ ಸನ್ನಿಧಿಗೆ.—

ವಿನಂತಿ—ಕೆಳಗಿನ ಬರಹವು ತಮ್ಮ ಅಂದವಾದ ಪತ್ರಿಕೆಯಲ್ಲಿ
ಸ್ಥಳ ಹೊಂದಲಿಕ್ಕೆ ತಕ್ಕದ್ದಾಗಿ ತೋರಿದಲ್ಲಿ ದಯ ಮಾಡಿ
ಸ್ಥಳ ಕೊಡುವದಾಗಬೇಕೆಂದು ಬೇಡಿಕೊಳ್ಳುತ್ತೇನೆ.

ಭಾಷೆಯ ಅಭ್ಯಾಸಕ್ಕೆ ಬೇಕಾಗುವ ಮುಖ್ಯವಾದ ಸಾಧನಗಳಲ್ಲಿ ಹಲವು ಬಗೆಯ ಶಬ್ದಗಳ ಸಂಗ್ರಹವು ಬಂದಾಗಿರುತ್ತದೆ. ಆದರೆ ರೂಢಿಯೊಳಗಿರದೆ ಕೇವಲ ಗ್ರಂಥಗಳಲ್ಲಿ ಮಾತ್ರ ಉಪಯೋಗಿಸಲ್ಪಟ್ಟ ಹಲವು ಶಬ್ದಗಳ ಪರಿಚಿತಿಯು ಜನರಿಗೆ ಇರುವದಿಲ್ಲವೆಂಬದಿಪ್ಪೇ ಅಲ್ಲ; ರೂಢಿಯೊಳಗಿನ ಸರ್ವಸಾಧಾರಣವಾದ ಬಡವೆಗಳ ಹಾಗು ಅವುಗಳ ಅವಯವಗಳ ಕೆಲವು ಹೆಸರುಗಳು ಸಹ ನಮಗೆ ಗೊತ್ತಿರುವದಿಲ್ಲ. ಇದರಿಂದ ಭಾಷಾಜ್ಞಾನಕ್ಕೆ ದೊಡ್ಡ ಕೊರತೆಯುಂಟಾಗುವದಲ್ಲದೆ ಪ್ರಸಂಗದಲ್ಲಿ ತೊಂದರೆಗಳೊದಗುತ್ತವೆ. ಕಾರಣ ಬಂದೊಂದು ಬಡವೆಯ ಸಂಬಂಧದಿಂದ ಉಪಯೋಗಿಸಲ್ಪಡುವ ಶಬ್ದಗಳನ್ನೆಲ್ಲ ಕ್ರಮದಿಂದ ಸಂಗ್ರಹಿಸಿ ಶಿಕ್ಷಣದಲ್ಲಿ ಉಪಯೋಗಿಸಿದರೆ ವಿದ್ಯಾರ್ಥಿಗಳ ಭಾಷಾಜ್ಞಾನವು ಬೆಳೆಯುವದಕ್ಕೆ ಅನುಕೂಲವಾಗುವದಲ್ಲದೆ ಅಂಥ ಶಬ್ದಗಳನ್ನು ಬೇರೆ ಬೇರೆ ವಾಕ್ಯಗಳಲ್ಲಿ ಉಪಯೋಗಿಸಿ ಬಡವೆಗಳ ಗುಣ, ಧರ್ಮ, ಉಪಯೋಗ ಮುಂತಾದವುಗಳನ್ನು ಕಲಿಸಲಿಕ್ಕೆ ಸಹ ಅನುಕೂಲವಾಗುವದು. ಇಲ್ಲಿ ಮಾದರಿಗಾಗಿ ಕೆಲವು ಬಡವೆಗಳ ಬೇರೆ ಬೇರೆ ಭಾಗಗಳ ಹೆಸರುಗಳನ್ನು ಸಂಗ್ರಹಿಸಿ ಬರೆದಿರುತ್ತೇನೆ. ಇದೇ ಕ್ರಮದಿಂದ ಬೇರೆ ಬಡವೆಗಳ ಸಂಬಂಧದಿಂದ ಉಪಯೋಗಿಸಲ್ಪಡುವ ಶಬ್ದಗಳನ್ನು ನಮ್ಮ ಬಂಧುಗಳಾದ ಶಿಕ್ಷಕರು ಸಂಗ್ರಹಿಸಿ ಅವುಗಳನ್ನು ಚಾತುರ್ಯದಿಂದ ತಮ್ಮ ಶಿಕ್ಷಣದಲ್ಲಿ ಉಪಯೋಗಿಸಿದರೆ ವಿದ್ಯಾರ್ಥಿಗಳ ಭಾಷಾಜ್ಞಾನವೂ ವಿಷಯಜ್ಞಾನವೂ ಬೆಳೆಯುವದಕ್ಕೆ ಸಹಾಯವಾಗುವದು. ಆದರಲ್ಲಿ ಬಾಲಕರ ವರ್ಗಕ್ಕೆ ಬಡವೆಗಳ ಸಾಮಾನ್ಯ ಭಾಗಗಳನ್ನೂ ಮುಂದೆ ಕ್ರಮದಿಂದ ಮೇಲಿನ ವರ್ಗಗಳಿಗೆ ಅವುಗಳ ವಿಶೇಷ ಭಾಗಗಳನ್ನೂ ಹೇಳಬಹುದು. ಮತ್ತು ನಮ್ಮ ವ್ಯಾ

ನಾಯ ಬಂಧುಗಳು ಈ ಬಗ್ಗೆ ವಿಚಾರ ಮಾಡಿ ಕಂಡು ಬಂದ ಹೆಚ್ಚು ಕಡಿಮೆಗಳನ್ನು ತಮ್ಮ ಯೋಗ್ಯವಾದ ವಿಚಾರಗಳನ್ನೂ ತಿಳುಹಿ ಇವರಲ್ಲಿ ತಕ್ಕ ಸುಧಾರಣೆಯನ್ನು ಮಾಡುವರೆಂದು ಕೋರುತ್ತೇನೆ.

ಜೋಳದ ಪೈರಿನಲ್ಲಿ ಉಪಯೋಗಿಸುವ ಶಬ್ದಗಳು.

೧ ಬೀಜ
೨ ಮೊಳಕೆ
೩ ನಾಟಿಗೆ
೪ ಪಟು
೫ ರವದಿ
೬ ಗಣಿಕೆ
೭ ಗಣಲು
೮ ಟಿಸಿಲು
೯ ಹೊಡೆ
೧೦ ಕದರಹೊಡೆ
೧೧ ಕಪ್ಪೆಹೊಡೆ
೧೨ ತೆನೆ
೧೩ ಹೂ
೧೪ ಹಾಲಗಾಳು
೧೫ ಜೆಳಸಿ
೧೬ ಹುರಿಗಾಳು
೧೭ ಉಣಚಿ
೧೮ ಬುರಂಗಿ
೧೯ ಬೇರು
೨೦ ಕೂಯ್ಲಿ
೨೧ ಸಿವಡು
೨೨ ಪೆಂಡಿ
೨೩ ಗೂಡು
೨೪ ಕಣಿಕೆ, ಸೊಪ್ಪೆ, ಮೇನು
೨೫ ತೆನೆಗಣಿಕೆ
೨೬ ಇಕ್ಕಲ
೨೭ ಜಣಿವೆ
೨೮ ಕಂತೆ
೨೯ ಸುಂಕ
೩೦ ಸರಗು
೩೧ ಬುಟ್ಟಿ [ಣ
೩೨ ಕೊಯ್ಯೋ
೩೩ ಕೊರೆಯೋ
೩೪ ಜಿಗಿಯೋ
೩೫ ಚಂಡೀ ಆ ಡೋಣ
೩೬ ನಿಲವು
೩೭ ಪುಡ
೩೮ ರಾಶಿ
೩೯ ಹೊಟ್ಟು
೪೦ ಅಕ್ಕಡಿ, ದಿಂಡು.

ಮೇಲಿನ ಶಬ್ದಗಳ ವ್ಯಾಖ್ಯೆಗಳು.

೧. ಬಿತ್ತತಕ್ಕಂಥ ಜೋಳಕ್ಕೆ ಬೀಜವೆನ್ನುತ್ತಾರೆ.

೨. ಬೀಜವನ್ನು ಬಿತ್ತಿದ ಎರಡು ಮೂರು ದಿವಸಕ್ಕೆ ಅವರೊಳಗಿಂದ ಮೊಳಕೆಯೊಡೆಯುತ್ತದೆ.

೩. ಮೊಳಕೆಯು ನೆಲ ಹೊಡೆದು ಮೇಲಕ್ಕೆ ಬಂದರೆ ಅದಕ್ಕೆ ನಾಟಿಗೆ ಎಂಬ ಹೆಸರು.

೪. ನಾಟಿಗೆಯು ದೊಡ್ಡದಾದರೆ ಅದಕ್ಕೆ ದಂಟು ಎನ್ನುತ್ತಾರೆ.

(ಮುಂದೆ ನೋಡಿರಿ.)

ಶಾಲಾ ಪತ್ರಿಕೆ.

ಪದ್ಯಂ.

ಯವಿದ್ಯಾಗುರುವರ್ಯರುನ್ನತಿಕೆಯುಂ ಸಚ್ಛಿಕ್ಷಣೋತ್ಕರ್ಷಮುಂ ।
ಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮುಂ ಮುದ್ರಿಸಿ ॥
ಯದಿಂದಿತ್ತಪೆವೋದುವರ್ಗೆಸುಗುಣಂ ತೋರಲ್ಕೆಕ್ಕೈಕೊಂಬುದೈ ।
ಪಿಯಿಂದೋಷವತಿದ ನೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧವ ವೃತ್ತಾಂತಗಳು.

ಮೈ. ಬ್ಯಾಟಿ ಫೀಲ್ಡ ದೊರೆಗಳಿಗೆ ಬರುವ ದಿಸಂಬರ ತಿಂಗಳಲ್ಲಿ ೫೫ನೇ ವರ್ಷ ಮುಗಿಯುತ್ತದೆ. ಸರಕಾರದ ನಿಯಮಗಳಿಗನುಸರಿಸಿ ಆಗ್ಗೆ ಅವರು ತಮ್ಮ ಕೆಲಸದಿಂದ ನಿವೃತ್ತರಾಗತಕ್ಕದ್ದು. ಆದರೆ ಸರಕಾರದವರು ಅವರಿಗೆ ಇಂದಿನಿಂದ ಸುಮಾರು ೧ ವರ್ಷದ ಹೆಚ್ಚು ಮುದ್ದತ್ತು ಕೊಟ್ಟಿರುತ್ತಾರೆಂಬದನ್ನು ತಿಳಿಸಲಿಕ್ಕೆ ನಮಗ ಸಂತೋಷವಾಗುತ್ತದೆ. ಈ ದೊರೆಗಳು ಮಾರ್ಮಿಕರೂ, ಚತುರರೂ, ಅಭಿಮಾನಿಗಳೂ, ಕೈಕೆಳಗಿನವರನ್ನು ಅಂತಃಕರಣದಿಂದ ನಡಿಸಿಕೊಳ್ಳುವವರೂ, ದೀರ್ಘೋದ್ಯೋಗಿಗಳೂ ಇದ್ದದರಿಂದ ಇವರ ಆಡಳಿತೆಯಲ್ಲಿ ಶಾಲಾ ಖಾತೆಯು ಯಾವತ್ತು ಸಣ್ಣ ದೊಡ್ಡ ನೌಕರರು ಸುಖದಿಂದಿರುವರು. ಇವರು ಹಿಂದುಸ್ತಾನಕ್ಕೆ ಬಂದು ಸುಮಾರು ೩೯ ವರ್ಷಗಳಾದವು. ಇವರು ೧೮೭೫ರಿಂದ ಡೈರೆಕ್ಟರರ ಕೆಲಸವನ್ನು ನೋಡುತ್ತಿರುವರು.

ಮುಂಬಯಿ ಇಲಾಖೆಯಲ್ಲಿ ೪ ಭಾಗಗಳು ಇರುತ್ತವೆ. ಆಯಾ ಭಾಗಗಳಲ್ಲಿ ಸರಕಾರದಿಂದ ನಡೆಸಲ್ಪಡುವ ಶಾಲೆಗಳ ಮತ್ತು ವಿದ್ಯಾರ್ಥಿಗಳ ಪಟ್ಟಿಯನ್ನು ಕೆಳಗೆ ಕೊಟ್ಟಿರುತ್ತೇವೆ. ಇದರಿಂದ ಆಯಾ ಭಾಗದೊಳಗೆ ವಿದ್ಯಾಪ್ರಸಾರವು ಹ್ಯಾಗೆ ಆಗುತ್ತದೆಂಬದು ಸ್ಪಷ್ಟವಾಗಿತಿಳಿಯುವದು

ಭಾಗ.	ಕ್ಷೇತ್ರಫಲ ಮೈಲು.	† ಜನಸಂಖ್ಯೆ.	ಸರಕಾರೀ ಮತ್ತು ಏಡೇಡ್ ಶಾಲೆಗಳು.	ವಿದ್ಯಾರ್ಥಿಗಳು.	ಅನ್ಯರೇಕ ಗ್ಗೆಲಜ್ಜ ಶಾಲೆಗಳು.	ವಿದ್ಯಾರ್ಥಿಗಳು.	ಶಾಲೆಗೆ ಹೋಗಲಿಕ್ಕೆ ತಕ್ಕವರಾದ ಹು. ಜ. ಸಂ. ಶೇ. ೧೫ರಂತೆ.	ಶಾ. ಹೋಗತಕ್ಕ ಹಾಗು ಹೋಗುತ್ತಿರುವ ಹು. ಪ್ರ.
ಮಧ್ಯ ಭಾಗ.								
ಮುಂಬಯಿ.	೨೦	೪೦೧,೩೬೪	೨೪೩	೨೦೯೩೫	೧೯೬	೧೧೬೪೦	೧೨೪೦೬೪	೪೪.೬೪
ಇತರಜಿಲ್ಲೆಗಳು (೬)	೪೪,೪೯೦	೬,೨೪೩,೬೬೬	೨೨೩೦	೧೪೦೪೯	೪೪೪	೪೪೪೦	೯೪೫.೪೯೯	೧೪.೪೬
ಸಂಸ್ಥಾನಗಳು (೫)	೬೪,೪೪೩	೪೦೪,೯೯೦	೧೨೬೬	೨೪೪೦೨	೧೬	೪೪೩೦	೬೧೨೪೪.೪೫	೯.೪೧
ಉತ್ತರ ಭಾಗ.								
ಜಿಲ್ಲೆಗಳು* (೬)	೧೪೩,೪೦೪	೩,೯,೪೪೦೫೯	೧೬೦೬	೧೧೬೦೫೧	೩೫೪	೧೧೪೦೦	೫೯೧೬೦೪.೪೫	೨೧.೫೪
ಸಂಸ್ಥಾನಗಳು (೯)	೫೧,೦೪೯	೫,೫೯೫,೧೪೦	೧೫೪೩	೯೫೩೩೪೪	೪೫೧	೧೩೬೪೪೦	೪೩೯೨೨೩	೧೨.೫೪
ದಕ್ಷಿಣ ಭಾಗ.								
ಜಿಲ್ಲೆಗಳು (೬)	೨೫೩,೦೬೧	೪,೯೯೬,೫೬೬	೧೪೫೫	೧೧೧೪೦೦	೬೪೯	೧೧೮೯೯	೩೪೪೪೪.೯೯	೧೬.೪೬
ಸಂಸ್ಥಾನಗಳು (೬)	೪,೦೪೪೦	೧,೯೦೩,೪೯೧	೬೪೪	೪೯೪೪೫	೯೬೩	೫೪೦೧	೨೪೫೫೪.೬೫	೧೫.೬೪
ಸಿಂಧಪ್ರಾಂತ.								
ಜಿಲ್ಲೆಗಳು (೫)	೪೩೩,೩೪೯	೨,೪೬೧,೬೩೪	೧೬೬೧	೬೯೯೧೦೬	೪೫೬	೫೧೬೬೬	೪೪೦೧೪೬.೧	೧೫.೪
ಒಟ್ಟು ...	೧೪೪೦೦೬	೨೬೩೯೯೫೫೦	೯೪೯೯	೫೯೯೬೩೯	೨೪೪೪	೬೧೫೦೪೪	೪೦೧೪೪೪೬.೫೫	೧೬.೫೦

ಡೀಸಾ, ಅಬೂ, ಬಡೋದಾ ಕ್ಯಾಂಪ ಸಹಿತ † ಜನಸಂಖ್ಯೆಯ ಶೇಕಡಾ ೧೫ ರಂತೆ ಶಾಲೆಗೆ ಹೋಗುವ ವಯಸ್ಸಿನ ಹುಡುಗರಿರುತ್ತಾರೆಂದು ಬಲ್ಲವರ ಅಭಿಪ್ರಾಯ ಉಂಟು.

ಮುಂಬಯಿ ಜಿಲ್ಲೆಯೊಳಗಿನ ಆಯಾ ಭಾಗದಲ್ಲಿ ಪ್ರಾಥಮಿಕ ಶಾಲೆಗಳ ಸ್ಥಿತಿಯು ಹ್ಯಾಗಿರುತ್ತದೆಂಬುದನ್ನು ತಿಳಿಸುವ ಬಗ್ಗೆ
ಕೆಳಗಿನ ಪಟ್ಟಿಯನ್ನು ಕೊಟ್ಟಿರುತ್ತೇವೆ.

ಭಾಗ.	ಶಾಲೆಗಳ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ	೫ನೇ ೬ನೇ ಇಯತ್ತೆ ಕಲಿಯುವ.			೩ನೇ ೪ನೇ ಇಯತ್ತೆ ಕಲಿಯುವ.			೨ನೇ ಇಯತ್ತೆಯವರೆಗೆ ಕಲಿಯುವ.			ಅಂತೂ.		
			ಗಂಡು.	ಹೆಣ್ಣು.	ಅಂತೂ.	ಗಂಡು.	ಹೆಣ್ಣು.	ಅಂತೂ.	ಗಂಡು.	ಹೆಣ್ಣು.	ಅಂತೂ.	ಗಂಡು.	ಹೆಣ್ಣು.	ಅಂತೂ
ಪು. ಭಾಗ	೨೩೯	೧೪೦೯೫	೩೯೬೬	೨೫೪೪	೬೫೦೮೦	೪೬೭೩	೪೬೩೯	೯೩೦೭	೩೪೦೦	೪೦೦	೩೮೦೦	೧೨೪೬೨	೧೨೪೬೨	೧೪೦೯
ಉ. ಭಾಗ	೩೦೧	೧೯೪೫	೬೧೫೫	೩೯೫೪	೧೦೦೯೯	೬೩೬೦	೩೬೯೦	೧೦೦೫೦	೨೪೦೦	೧೪೦೦	೩೮೦೦	೧೪೫೦೦	೯೪೯೪	೨೩೯೪
ದ. ಭಾಗ.	೬೧೦	೧೪೬೯	೪೬೦೦	೧೬೬೯	೬೨೬೯	೩೧೧೯	೨೪೬೬	೫೬೬೫	೩೬೬೯	೨೬೬೯	೬೩೬೯	೧೦೬೪೪	೧೨೬೪೦	೨೩೬೯
ಸಿಂಧ.	೧೪೪೩	೪೬೯೪	೯೦೪೪	೩೬೪	೯೪೪೪	೨೬೦೧	೧೪೬೦	೩೬೬೧	೧೪೬೦	೪೦೪	೧೪೪೪	೬೪೦೪೪	೨೦೦೦	೪೪೯

ನೆಮ್ಮ ಹೊಸ ಜಿಲ್ಲಾಧಿಪತಿಗಳಾದ ಲಾರ್ಡ್ ಸ್ಯಾಂಡ್ಹರ್ಸ್ಟ್ ದೊರೆಗಳು ಮುಂಬಯಿಯಲ್ಲಿ ಕಾಲು ಇಟ್ಟಂದಿನಿಂದ ಬಂದಿಲ್ಲ ಬಂದು ಸಂಸ್ಥೆಯನ್ನು ನೋಡುವದರಲ್ಲಿಯೂ ತಮ್ಮ ಕೆಲಸವನ್ನು ಸ್ವತಃ ಮಾಡುವದರಲ್ಲಿಯೂ ತಮ್ಮ ಕಾಲವನ್ನು ಕಳೆಯುತ್ತಿರುವರು. ಇವರು ಬಂದಿರಡು ಸಾಲಿಗಳನ್ನು ನೋಡಿ ಅಲ್ಲಿ ಮಾಡಿದ ಸಂಭಾಷಣೆಗಳಿಂದ ಇವರ ಕಾಲಕಿರ್ದಿಯಲ್ಲಿ ಶಿಕ್ಷಣಕ್ಕೆ ತಕ್ಕ ಉತ್ತೇಜನ ಶಿಕ್ಕುವದೆಂದು ನಂಬಲಿಕ್ಕೆ ಅಸ್ಪದವಾಗುತ್ತದೆ. ಎಜ್ಯುಕೇಶನಲ ಸೊಸೈಟಿಯ ಶಾಲೆಗೆ ಹೋದಾಗ್ಗೆ ಅವರು ಮೇಳಿದ್ದೇನಂದರೆ:—" ಈ ದೇಶದಲ್ಲಿ ಶಿಕ್ಷಣವು ಅಳತೆಗಡಲಿಕ್ಕೆ ಹತ್ತಿರುವದೆಂದು ಕೆಲವರು ಪ್ರತಿಪಾದಿಸುತ್ತಾರೆ. ಆದರೆ ನನಗಿದ್ದ ಲಂಡನಸ್ಕೂಲಬೋರ್ಡದ ಅನುಭವದಿಂದ ತಿಳಿದು ನೋಡಲಾಗಿ ಈ ಮಾತು ಸಂಭವನೀಯವಾಗಿ ತೋರುವದಿಲ್ಲ. ಶಿಕ್ಷಣವು ಅಳತೆಗೆಡುವದು ಅಸಂಭವ; ಆದರೆ ಶಿಕ್ಷಣ ಪ್ರಸಾರದ ವ್ಯವಸ್ಥೆಯಲ್ಲಿ ಅಪೂರ್ಣತ್ವದ ದೋಷವು ಸಂಭವಿಸಬಹುದು. ಈ ದೋಷವನ್ನು ತೆಗೆದು ಹಾಕುವದು ಅವಶ್ಯವಾದದ್ದು. ಬರೇ ಸಾಲೆಗಳ ಸಂಖ್ಯೆಯನ್ನು ಹೆಚ್ಚಿಸುವದಕ್ಕಿಂತ ಇದ್ದ ಸಾಲೆಗಳಿಗೆ ಯಾವತ್ತೂ ಅವಶ್ಯವಾದ ಸಂಗತಿಗಳ ಅನುಕೂಲತೆಯನ್ನು ಮಾಡಿಕೊಡುವದು ವಿಹಿತವಾದದ್ದು.

ಪೋಷ್ಟ ಖಾತೆಯಲ್ಲಿ ದಿನ ದಿನಕ್ಕೆ ಸುಧಾರಣೆಯಾಗುತ್ತ ನಡೆದದೆ. ಈ ಖಾತೆಯಿಂದ ಸರಕಾರಕ್ಕೆ ಲಾಭವಿರುವದಲ್ಲದೆ ಪ್ರಜೆಗಳಿಗೂ ಬಗೆಬಗೆಯ ಪ್ರಯೋಜನಗಳು ಆಗುತ್ತವೆ. ಮನಿಆರ್ಡರ, ವ್ಯಾಲ್ಯೂಪೇಯಬಲ್ಪಾರ್ಸೆಲ, ಸೈವಿಂಗ್ಸ ಬ್ಯಾಂಕ ಮುಂತಾದ ವ್ಯವಸ್ಥೆಗಳಿಂದ ಪ್ರಜೆ

ಗಳಿಗೆ ಬಹಳ ಅನುಕೂಲವಾಗಿರುವದು. ಈ ಖಾತೆಯಲ್ಲಿ ಇನ್ನೂ ಎರಡು ಬಗೆಯ ಸುಧಾರಣೆಗಳು ಆಗುವ ಸಂಭವ ತೋರುತ್ತದೆ. ಅವು ಯಾವವೆಂದರೆ :—(೧) ಅರ್ಧ ದುಡ್ಡಿನ ಪೋಷ್ಟ ಕಾರ್ಡು.—ಮುಂಬೈ, ಮದ್ರಾಸ, ಕಲಕತ್ತೆ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವಾಸಿಸುವ ಜನರಿಗೆ ಪಟ್ಟಣದ ಬಂದು ಭಾಗದಿಂದ ಮತ್ತೊಂದು ಭಾಗಕ್ಕೆ ಹೋಗ ಬೇಕಾದರೆ ಶ್ರಮವೂ ಖರ್ಚವೂ ಬಹಳವಾಗುತ್ತದೆ. ಇಂಥ ಪಟ್ಟಣದ ಜನರ ಸೋಯಿಗಾಗಿ ಊರೊಳಗೆ ಪತ್ರವ್ಯವಹಾರ ನಡಿಸಲಿಕ್ಕೆ ಅನುಕೂಲವಾಗುವಂತೆ ಅರ್ಧ ದುಡ್ಡಿನ ಕಾರ್ಡು ನಿರ್ಮಿಸಬೇಕೆಂದು ಸೂಚನೆಯಾಗಿರುತ್ತದೆ. ಈ ವ್ಯವಸ್ಥೆಯು ಸಧ್ಯಕ್ಕೆ ಆಗದಿದ್ದರೂ ೫ ೫ ವರ್ಷಗಳೊಳಗೆ ಆಗುವದೆಂದು ನಮಗೆ ನಂಬಿಕೆಯುಂಟು. (೨) ತಂತಿಯಿಂದ ಸುದ್ದಿಯನ್ನು ಕಳಿಸುವ ದರಗಳಲ್ಲಿ ಕಡಿ ದರವು ೪ ಆಣೆ ಇರುತ್ತದೆ. ಅದನ್ನು ೪ ಆಣೆ ಮಾಡ ಬೇಕೆಂದು ಸೂಚನೆಯಾಗಿತ್ತು. ಅವರೆ ತುರ್ತಿಗೆ ಹಣದ ಕೊರತೆ ಇದ್ದದರಿಂದ ಈ ಪ್ರಕಾರ ಮಾಡಲಿಕ್ಕೆ ಅನುಕೂಲವಿಲ್ಲೆಂದು ಹಿಂದುಸ್ತಾನ ಸರಕಾರದವರು ತಿಳಿಸಿರುತ್ತಾರೆ. ಮೇಲಿನ ಎರಡು ಸುಧಾರಣೆಗಳಾದರೆ ಜನರಿಗೆ ಬಹಳ ಪ್ರಯೋಜನವಾಗುವದೆಂಬದಕ್ಕೆ ಏನೂ ಸಂದೇಹವಿಲ್ಲ.

LORD HARRIS'S CONVOCATION SPEECH.

ಹ್ಯಾರಿಸ ದೊರೆಗಳು ಪದವಿದಾನ ಕಾಲಕ್ಕೆ ಮಾಡಿದ ಉಪನ್ಯಾಸವು.

ನಾಮದಾರರು ಇರ್ವಳಿನೇ ಸಾಲಿನಲ್ಲಿ ಮೃತ್ಯುಪಟ್ಟ ಲಿಪಟಿ, ಅತಲೆ, ಜೇಕಬ ಮೊದಲಾದ ವಿದ್ಯಾಪಕ್ಷಪಾತಿಗಳನ್ನು ಹೊಗಳಿದ ತರುವಾಯ ಹೇಳಿದ್ದೇನಂದರೆ:—

I. ವಿದ್ಯಾ ಪೀಠವನ್ನು ಕುರಿತು—ಗ್ರಾಂಟ ಮೆಡಿಕಲ್ ಕ
ಲೇಜವೆಂಬ ವೈದ್ಯ ಶಾಲೆಯಲ್ಲಿ ಕಲಿತು ಕಡೆಯ ಪರೀಕ್ಷೆಯ
ಲ್ಲಿ ತೇರ್ಗಡೆ ಹೊಂದಿದವರಿಗೆ ಎಲ್. ಎಮ್. ಎಸ್. ಎಂಬ ಅಲ
ಮರ್ಯಾದೆಯ ಬಿರುದು ಕೊಡಲ್ಪಡುತ್ತದೆ. ಅದರಬದಲ
ಎಮ್, ಬಿ, ಎಂಬ ಹೆಚ್ಚು ಗೌರವವುಳ್ಳಬಿರುದನ್ನು ಕೊಡಬೇ
ಕೆಂದು ೧೫ ವರ್ಷಗಳಿಂದ ಚರ್ಚೆ ನಡೆದಿರುತ್ತದೆ. ಅದರ
ನಿರ್ಣಯವು ಷ್ಪಿಪ್ರದಲ್ಲಿಯೇ ಆದೀತೆಂದು ತೋರುತ್ತದೆ.

ಇತ್ತಲಾಗಿ ದೇಶಭಾಷೆಗಳು ವಿದ್ಯಾಪೀಠದ ಪರೀಕ್ಷೆಗಳ
ಅಭ್ಯಾಸ ಕ್ರಮದಲ್ಲಿ ಶೇರಿಸಲ್ಪಡಬೇಕೆಂದು ಬಹು ಜೋರಿ
ನಿಂದ ವಾದ ನಡೆದಿರುತ್ತದೆ. ಈ ಸಂಬಂಧದಿಂದ ಎರಡು ಸಂ
ಗತಿಗಳನ್ನು ಲಕ್ಷದಲ್ಲಿಡುವದು ನಮಗೆ ಅವಶ್ಯವಾಗಿ ತೋ
ರುತ್ತದೆ. ಅವು—(೧) ಸೊಬಗು. (೨) ಪ್ರಯೋಜನ. ಜಡ
ನದಿಂದ ಕಾದಿಡಲಿಕ್ಕೆ ತಕ್ಕಂಥ ಅನುಕರಣಾರ್ಹವಾದಂಥ
ದೇಶ ಭಾಷೆಯೊಳಗಿನ ಗ್ರಂಥಗಳ ಅಭ್ಯಾಸವನ್ನು ಜಿಳಿಸು
ವದು ಉಚಿತವಾದದ್ದೆಂಬದಕ್ಕೆ ಏನೂ ಸಂದೇಹವಿಲ್ಲ. ಆದರೆ
ಈ ಕಾಲದಲ್ಲಿ ಈ ಭಾಷೆಗಳ ಅಭ್ಯಾಸದ ಹೊರಿಯನ್ನು ಪ
ರೀಕ್ಷೆಗಳ ಮುಖಾಂತರವಾಗಿ ವಿದ್ಯಾರ್ಥಿಗಳ ಮೇಲೆ ಹೇ
ರುವದು ನಿಷ್ಪ್ರಯೋಜಕವಾಗಿಯೂ ಇಷ್ಟಹೇತುವಿಗೆ ಬಾ
ಧಕವಾಗಿಯೂ ತೋರುತ್ತದೆ. ಈ ಭಾಷೆಗಳ ಅಭ್ಯಾಸವ
ನ್ನು ಬತ್ತಾಯದಿಂದ ಮಾಡಿಸುವದರಿಂದ ಅದರಲ್ಲಿ ಪ್ರೀತಿಯು
ಪುಟ್ಟುವದಕ್ಕೆ ಬದಲಾಗಿ ಅಪ್ರೀತಿಯು ಹುಟ್ಟುವ ಸಂಭವವು
ಹೆಚ್ಚಿರುತ್ತದೆ. ದೊಡ್ಡ ದೊಡ್ಡ ಪರೀಕ್ಷೆಗಳನ್ನು ಕೊಡು
ವವರಲ್ಲಿ ಪರೀಕ್ಷೆಗಳಿಂದ ಆಗುವ ಲಾಭವನ್ನೂ ಉದರನಿ
ರ್ವಾಹದ ಸಂದರ್ಭವನ್ನೂ ಅನುಲಕ್ಷಿಸುವವರೇ ಹೆಚ್ಚು ಜ
ನರು; ಕೇವಲ ವಿದ್ಯಾಪಾರಾಂಗತರಾಗಬೇಕೆಂಬ ಹವಣಿಕೆ
ಯಿಂದ ಅಭ್ಯಾಸ ಮಾಡುವವರು ಬಹು ಕಡಿಮೆ, ಎಂಬ ಸಂ

ಗತಿಯನ್ನು ಮರೆಯಲಾಗದು. ಇಂಥವರಿಗೆ ಈ ಭಾಷಾ ಭ್ಯಾಸದ ಹೆಚ್ಚಿನ ಹೊರೆಯನ್ನು ಹೊರಿಸಲಾಗಿ ಅದರಲ್ಲಿ ಪ್ರೀತಿ ಹುಟ್ಟುವ ಬಗೆ ಎನು? ಈ ಭಾಷೆಗಳಲ್ಲಿ ಪ್ರೀತಿ ಯನ್ನು ಪುಟ್ಟಿಸುವ ಉದ್ದೇಶವಿದ್ದರೆ ಅವುಗಳನ್ನು ಎಲ್ಲ ವಿದ್ಯಾರ್ಥಿಗಳ ಮೇಲೆ ಹೇರುವದಕ್ಕಿಂತ ಕೆಲವು ಇನಾಮು ಗಳನ್ನು ಗೊತ್ತುಮಾಡಿ ಅವುಗಳ ಮುಖಾಂತರವಾಗಿ ಸ್ವಲ್ಪ ಜನರಿಗೆ ಆ ಕೆಲಸಕ್ಕೆ ಹಚ್ಚುವದು ಉಚಿತವಾಗಿ ತೋರು ತ್ತದೆ. ಈ ಪ್ರಕಾರವಾಗಿ ಇನಾಮುಗಳನ್ನು ನೇಮಿಸಿ ಜಾಣ ರಾದ ವಿದ್ಯಾರ್ಥಿಗಳಿಗೆ ಉತ್ತೇಜನ ಕೊಟ್ಟು, ಭಾಷೆಯನ್ನು ಊರ್ಜಿತ ಸ್ಥಿತಿಗೆ ತರುವದು ಉಚಿತವೆಂದು ನಮಗೆ ತೋ ರುತ್ತದೆ. ಇದರಿಂದ ಇಷ್ಟಹೇತುವು ಸಾಧ್ಯವಾಗುವದಲ್ಲದೆ ಬಹಳ ಜನರ ಗೋಳಾಟ ತಪ್ಪುವದು.

ಶಾಲಾಧ್ಯಾಪಕರ ಸರ್ಟಿಫಿಕೇಟನ್ನು ಪಡಕೊಂಡು ಮ್ಯಾಟ್ರಿಕ್ಯುಲೇಶನ್ ಫಾಯನಲ್ ಮುಂತಾದ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಹೋಗಬೇಕೆಂಬ ನಿಯಮವು ಕೆಲವು ದಿವ ಸದ ಕೆಳಗೆ ರದ್ದು ಮಾಡಲ್ಪಟ್ಟಿತ್ತು. ಅದರಿಂದ ಬಳ್ಳೇ ಪರಿಣಾಮವಾಗದೆ ಪರೀಕ್ಷೆಗೆ ತಕ್ಕವರಲ್ಲದಂಥ ವಿದ್ಯಾರ್ಥಿ ಗಳು ಶಾಲಾಧ್ಯಾಪಕರ ಅಪ್ಪಣೆಯನ್ನು ಮನ್ನಿಸದೆ ಪರೀ ಕ್ಷೆಗೆ ಕೂಡ್ರಹತ್ತಿದರೆಂತಲೂ, ಶಾಲಾ ವ್ಯವಸ್ಥೆಗೆ ಕೊರತೆ ಸಂಭವಿಸಿತೆಂತಲೂ ಶಾಲಾಧ್ಯಾಪಕರು ಗುಣಗುಟ್ಟಹತ್ತಿ ದರು. ಈ ಮಾತಿನ ವಿಚಾರವಾಗಿ ಪರೀಕ್ಷೆಯ ಎಂಟು ತಿಂ ಗಳೊಳಗೆ ಯಾವದೊಂದು ಶಾಲೆಗೆ ಹೋಗುವ ವಿದ್ಯಾರ್ಥಿ ಯು ಆ ಶಾಲಾಧ್ಯಾಪಕರ ಸರಟಿಫಿಕೇಟನ್ನು ಪಡೆಯಲೇ ಬೇಕೆಂದು ವಿದ್ಯಾಪೀಠದ ಸಭೆಯವರು ನಿರ್ಣಯಿಸಿರುತ್ತಾ ರೆ. ಇದರಿಂದ ಅಭ್ಯಾಸವಾಗದೆ ಸುಮ್ಮನೆ ಪರೀಕ್ಷೆಗೆ ಕೂ

ಡ್ಯುವಂಥ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾಗಿ ಪರೀಕ್ಷೆಯ ಪರಿಣಾಮಗಳು ಸಮಾಧಾನಕರವಾಗಬಹುದೆಂದು ನಾವು ನಂಬುತ್ತೇವೆ.

II. ವರಿಷ್ಠ ಶಿಕ್ಷಣವೂ ಸರಕಾರವೂ:—ಎರಡು ವರ್ಷಗಳ ಕೆಳಗೆ ವರಿಷ್ಠ ಶಿಕ್ಷಣಕ್ಕೆ ಸರಕಾರದವರು ತಕ್ಕಷ್ಟು ಉತ್ತೇಜನ ಕೊಡುವದಿಲ್ಲವೆಂದು ಬೊಬ್ಬಾಟವೆದ್ದಿತ್ತು. ಆದರೆ ಅವಕ್ಕೆ ಯಾವ ಅಧಾರವಿತ್ತೋ ತಿಳಿಯದು. ಹಾಯು ಸ್ಕೂಲುಗಳಿಗೂ ಕಾಲೇಜುಗಳಿಗೂ ಹೋಗಲಿಕ್ಕೆ ನಾವೆಂದೂ ಅನುಮಾನಿಸಲಿಲ್ಲ; ಮತ್ತು ವರಿಷ್ಠ ಶಿಕ್ಷಣಕ್ಕೆ ಪ್ರತಿಕೂಲವಾದ ಅಭಿಪ್ರಾಯವನ್ನೂ ಎಂದೂ ಪಡೆಯಲಿಲ್ಲ ಅಥವಾ ಆಡಿ ತೋರಿಸಲಿಲ್ಲ. ಸರಕಾರದವರು ಪ್ರಾಥಮಿಕ ಶಿಕ್ಷಣಕ್ಕೆ ಅವಶ್ಯ ಕಂಡಮೇರೆಗೆ ಹೆಚ್ಚಿನ ಉತ್ತೇಜನ ಕೊಟ್ಟಾಗ್ಯೂ ವರಿಷ್ಠ ಶಿಕ್ಷಣಕ್ಕೆ ಸಹಾಯವನ್ನು ಕಡಿಮೆ ಮಾಡಲಿಲ್ಲ, ಎಂಬ ಮಾತು ವಿದ್ಯಾಖಾತೆಯ ರಿಪೋರ್ಟುಗಳಿಂದ ಸ್ಪಷ್ಟವಾಗುವದು. ಕಳೆದ ಮೂರು ವರ್ಷಗಳ ಲಿಖ್ಖವನ್ನು ನೋಡಲಾಗಿ ಈಗ್ಗೆ ಸಾಲೆಗಳೂ ವಿದ್ಯಾರ್ಥಿಗಳ ಸಂಖ್ಯೆಯೂ ಬೆಳದಿರುವಪಲ್ಲದೆ ಸರಕಾರದ ಬೊಕ್ಕಸದಿಂದ ಶಿಕ್ಷಣಕ್ಕಾಗಿ ೮೯೦೦೦೦ ರೂಪಾಯಿಗಳು ಹೆಚ್ಚು ಖರ್ಚಾಗಿರುತ್ತವೆಂದು ತೋರುವದು.* ಈ ಹೆಚ್ಚಿನ ರಕಮಿನ ಮೂರರಲ್ಲಿ ಎರಡು ಪಾಲು ಪ್ರಾಥಮಿಕ ಶಿಕ್ಷಣಕ್ಕೆ ಖರ್ಚು ಬೀಳುತ್ತದೆಂಬ ಮಾತು ನಮಗೆ ಸಮ್ಮತವದೆ. ಈ ದೇಶದ ಪ್ರಜೆಗಳಲ್ಲಿ ಬಕ್ಕಲತನ ಮಾಡಿ ಜೀವಿಸುವವರ ಸಂಖ್ಯೆಯು

---

* ೧೮೮೯–೯೦ನೇ ಸಾಲಿನಲ್ಲಿ ಶಿಕ್ಷಣಕ್ಕೆ ಸರಕಾರದಿಂದಾದ ಖರ್ಚು ೧೬೧೦೭೬ ರೂಪಾಯಿ. ಈಗ್ಗೆ ೨೫೦೦೯೬ ರೂಪಾಯಿ.

ಸಾರಾಳವಾಗಿರುವದಲ್ಲದೆ ಆ ಜನರು ಮಿತಿಮೀರಿ ಖರ್ಚುಮಾ
ಡಿ ಸಾವಕಾರರ ಕೈಯಲ್ಲಿ ಪೂರ್ಣವಾಗಿ ಸಿಗುತ್ತಿರುವ ಸಂ
ಗತಿಯು ನಿರ್ವಿವಾದವಾಗಿರುತ್ತದೆ. ಇಂಥ ಜನರಿಗೆ ತಮ್ಮ
ಆದಾಯವೆಚ್ಚದ ಜಾಜವಿ ಲೆಖ್ಖವನ್ನಿಡಲಿಕ್ಕೆ ಕನಿಷ್ಠಪಕ್ಷಕ್ಕೆ
ಕಲಿಸಿ ಛೀ ನೀ ಪೈಸಾ, ಪೈಸಾನೀಧಿ ಈ ಪ್ರಕಾರ ಬಂದಕ್ಕೆ
ನಾಲ್ಕು ಮೂಡಿ ಸೂಲದ ಹೊರಲಾರದಂಥ ಹೊರೆಯನ್ನು ಹೊ
ರಿಸುವ ಮೂರವಾಡಿ ಮುಂತಾದ ಜನರ ಕೈಯಿಂದ ಬಿಡಿಸುವ
ದು ಸರಕಾರದವರ ಮುಖ್ಯ ಕರ್ತವ್ಯವಾಗಿದೆ ಎಂದು ನಾವು
ತಿಳಿಯುತ್ತೇವೆ. ಆದ್ದರಿಂದ ಈ ಆವ್ಯಕರ್ತವ್ಯಕ್ಕಾಗಿ ಎಷ್ಟು
ವೆಚ್ಚ ಮಾಡಿದರೂ ಸರಕಾರದವರು ದೋಷಕ್ಕೆ ಬಳಗಾಗ
ಲಾರರು. ಆದಾಗ್ಯೂ ಸರಕಾರದವರು ವರಿಷ್ಠ ಶಿಕ್ಷಣಕ್ಕೆ
ತಕ್ಕಷ್ಟು ಉತ್ತೇಜನ ಕೊಡುತ್ತಾರೆಂಬದಕ್ಕೆ ಏನೂ ಸಂ
ದೇಹವಿಲ್ಲ. ಸರಕಾರದ ಮೇಲಿರುವ ಯೂರೋಪ್ಯ ಜನಾಬದಾ
ರಿಗಳನ್ನು ವಿಚಾರಿಸಲು ಇಷ್ಟು ವೆಚ್ಚ ಮಾಡುವದೇ ಹೆಚ್ಚಾ
ಗಿರುವದೆಂದು ಯಾರಿಗೂ ಬಡಂಬಡಿಸಬಹುದು. ಇಂಗ್ಲಂ
ಡದಲ್ಲಿ ಸಹ ವರಿಷ್ಠ ಶಿಕ್ಷಣಕ್ಕೆ ಇಲ್ಲಿಯಷ್ಟು ಹಣ ಸರಕಾ
ರದವರು ವೆಚ್ಚ ಮಾಡುವದಿಲ್ಲ. ಸೂಕ್ಷ್ಮರೀತಿಯಿಂದ ವಿ
ಚಾರಿಸಿದರೆ ವರಿಷ್ಠ ಶಿಕ್ಷಣದ ಸಂಬಂಧದಿಂದ ಸರಕಾರದವರು
ವಾಜವಿಗಿಂತ ಹೆಚ್ಚು ಖರ್ಚು ಮಾಡುತ್ತಾರೆಂದು ದೋಷ
ವಿಡಲಿಕ್ಕೆ ಆಸ್ಪದ ಉಂಟೆಂದು ನಮ್ಮ ಅಭಿಪ್ರಾಯವದೆ.
ಆದ್ದರಿಂದ ಸರಕಾರದವರು ವರಿಷ್ಠ ಶಿಕ್ಷಣದ ಖಾಸಗೀ ಶಾಲೆ
ಗಳಿಗೆ ಉತ್ತೇಜನ ಕೊಡುವದು ವಿಹಿತವಾಗಿ ತೋರುತ್ತದೆ.

III. ಶಿಕ್ಷಕರ ಸಂಗತಿಯನ್ನು ಕುರಿತು:—ಖಾಸಗೀ
ಶಾಲೆಗಳಿಗೆ ಉತ್ತೇಜನ ಕೊಡುವದರಿಂದ ಬಂದು ಮಹತ್ವದ
ಲಾಭವಾಗುವ ಸಂಭವ ಉಂಟು. ಈಗ್ಗೆ ಇಂಗ್ಲಿಷ ಕಲಿ

ಯಲಕ್ಕ ವಿದ್ಯಾರ್ಥಿಗಳು ಚಿಕ್ಕ ವಯಸ್ಸಿನಲ್ಲಿ ತಮ್ಮ ತಾಯಿ ತಂದೆಗಳನ್ನಗಲಿ ಜಿಲ್ಲೆಯ ಮುಖ್ಯ ಪಟ್ಟಣಕ್ಕೆ ಹೋಗುತ್ತಾರೆ. ಅಲ್ಲಿ ಅವರ ಮೇಲ್ವಿಚಾರಕರು ಯಾರೂ ಇಲ್ಲದೆ ಹೋದ್ದರಿಂದ ಅವರು ಕೆಟ್ಟ ಸಂಗತಿಗೆ ಬಿದ್ದು ದುರ್ಗುಣಿಗಳಾಗುವ ಸಂಭವವು ಹೆಚ್ಚಿರುತ್ತದೆ. ಅವರಿಗೆ ಸರಕಾರದ ಸಾಲೆಗಳಲ್ಲಿ ನೈತಿಕ ಮತ್ತು ಸಾಮಾಜಿಕ ಶಿಕ್ಷಣವು ಎಷ್ಟು ಶಿಗುವದೋ ಅಷ್ಟೇ ಹೊರತು ಇತರ ರೀತಿಯಿಂದ ಆ ಶಿಕ್ಷಣವು ಪೂರ್ಣವಾಗುವದಿಲ್ಲ. ಶಾರೀರ ಬುದ್ಧಿ ಶಿಕ್ಷಣಗಳ ಸಂಬಂಧದಿಂದ ಪರಿಶ್ರಮವಾದಷ್ಟು ನೈತಿಕ ಶಿಕ್ಷಣ ಸಂಬಂಧದಿಂದ ಪರಿಶ್ರಮವಾಗುವದಿಲ್ಲ. ಈ ಪರಿಶ್ರಮವು ಖಾಸಗೀ ಶಾಲೆಗಳಿಂದ ಸುಲಭವಾಗಿ ಆಗುವದೆಂಬದಕ್ಕೆ ಏನೂ ಸಂದೇಹವಿಲ್ಲ. ಖಾಸಗೀ ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಬತ್ತಟ್ಟಿಗೆ ಶೇರಿಸಿ ಅವರ ಊಟ ಉಡಿಗೆ ಆಟ ನೋಟಗಳನ್ನೂ, ಅಭ್ಯಾಸವನ್ನೂ ವ್ಯಾಯಾಮವನ್ನೂ ಸರಸವಾಗಿ ಸಾಗಿಸಲಿಕ್ಕೆ ಬಹಳ ಅನುಕೂಲವಾಗುವದು. ಈ ಪ್ರಕಾರದ ಶಿಕ್ಷಣವೇ ಇಂಗ್ಲಿಷ ಜನರ ಸಾಹಸ, ಸ್ವಾವಲಂಬನ, ಆಳಿಕೆಯ ಸಾಮರ್ಥ್ಯ ಇವೇ ಮೊದಲಾದ ಸುಗುಣಗಳ ಗುಟ್ಟು ಆಗಿರುವದು. ಈ ಪ್ರಕಾರದ ವ್ಯವಸ್ಥೆಯನ್ನು ಮಾಡುವದು ಸರಕಾರಕ್ಕೆ ಸಾಧ್ಯವಲ್ಲ. ನಿಮ್ಮೊಳಗಿನ ಕೆಲವು ಜನರು ಬಟ್ಟಾಗಿ ಅಲ್ಲಲ್ಲಿಗೆ ಕೆಲವು ಖಾಸಗೀ ಸಂಸ್ಥೆಗಳನ್ನು ಸ್ಥಾಪಿಸಬಹುದು. ಅವಕ್ಕೂ ಅಡಚಣಿಗಳು ಬಹಳ ಉಂಟು. ಆದರೆ ಸರಕಾರವವರಿಗೆ ತಟ್ಟುವ ತೊಂದರೆಗಳಿಗಿಂತ ಇವಕ್ಕೆ ತೊಂದರೆಗಳು ಕಡಿಮೆ.

ಅಲ್ಲಲ್ಲಿಗೆ ಪ್ರಮುಖಜನರು ಬಟ್ಟಾಗಿ ಖಾಸಗೀ ಶಾಲೆಗಳನ್ನು ಇಡಿಸಿ ಅವುಗಳಿಗೆ ಭೋಜನವಸತಿಗೃಹಗಳನ್ನು ಜೋಡಿಸಿದರೆ ಅಲ್ಲಿಯ ವಿದ್ಯಾರ್ಥಿಗಳಲ್ಲಿ ಬಂದು ಪ್ರಕಾರದ

ಸ್ನೇಹಭಾವವನ್ನೂ ಶಾಲಾಭಿಮಾನವನ್ನೂ ಒಬ್ಬರಿಗೊ
ಬ್ಬರು ನೆರವಾಗುವ ಗುಣವನ್ನೂ ವಿಧೇಯತ್ವ ವಿನಯಾದಿ
ಗಳನ್ನೂ ಹುಟ್ಟಿಸುವದಕ್ಕೆ ಅನುಕೂಲವಾಗುವದೆಂದು
ನಮಗೆ ನಂಬಿಗೆಯುಂಟು.

ವಿದ್ಯಾರ್ಥಿಗಳು ಸೂಟಿಯ ವೇಳೆಯಲ್ಲಿ ಓದಲಿಕ್ಕೆ ತಕ್ಕಂ
ಥ ದೇಶ ಭಾಷೆಗಳೊಳಗಿನ ಪುಸ್ತಕಗಳ ಸಂಗ್ರಹವು ವಿದ್ಯಾ
ಪ್ರಸಾರಕ್ಕೆ ಅವಶ್ಯವಾಗಿರುತ್ತದೆ. ಈ ವಾಚನ ಪುಸ್ತಕಗ
ಳಿಂದ ಶಾಲೆಯ ಕೆಲಸದ ಪರಿಸ್ಥಿತಿಯು ಗೊತ್ತಾಗುತ್ತದೆ.
ಈ ಪುಸ್ತಕಗಳು ಬುದ್ಧಿಯನ್ನು ಬೆಳಸುವಂಥವೂ ನೀತಿ
ಯನ್ನು ಸುಧಾರಿಸುವಂಥವುಗಳಾಗಿದ್ದರೆ ಬಹಳ ಮಾರ್ಪಾ
ಗುವದು. ಮನಸ್ಸನ್ನು ವ್ಯಸನಗಳಿಗೆ ಎಳಸುವಂಥವಿದ್ದರೆ
ಸಾಲೆಯ ಕೆಲಸವು ಹಾಳಾಗುವದು. ಆದರೆ ತಕ್ಕ ವಾಚನ
ಪುಸ್ತಕಗಳನ್ನು ನಿರ್ಮಿಸುವದು ಸರಕಾರದವರಿಗೆ ಸಾಧ್ಯ
ವಾದ ಮಾತಲ್ಲ. ಅದನ್ನು ನಿಮ್ಮಂಥ ಪದವಿಧರರೇ ಕೈಕೊ
ಳ್ಳತಕ್ಕದ್ದು. ಇಂಗ್ಲಿಷದಲ್ಲಿ ಇಂಥ ಅನೇಕ ಪುಸ್ತಕಗಳಾಗಿ
ರುವದರಿಂದ ಇಂಗ್ಲಿಷ ಜನರ ಆಚಾರ ವಿಚಾರಗಳಲ್ಲಿಯೂ
ನಡೆ ನುಡಿಗಳಲ್ಲಿಯೂ ಬಹಳ ಸುಧಾರಣೆಯಾಗಿರುತ್ತದೆ.
ಆದ್ದರಿಂದ ನಿಮ್ಮಂಥವರು ಈ ಕೆಲಸವನ್ನು ಕೈ ಕೊಂಡು
ಉತ್ತಮಪುಸ್ತಕಗಳನ್ನು ಬರೆಯುವದು ವಿಹಿತವಾಗಿರುತ್ತದೆ.

ಈ ಪುಸ್ತಕಗಳಲ್ಲದೆ ವಿದ್ಯಾಪ್ರಸಾರದ ಮತ್ತೊಂದು
ಸಾಧನ ಉಂಟು. ಅದು ವರ್ತಮಾನ ಪತ್ರಿಕೆಗಳು. ವರ್ತ
ಮಾನ ಪತ್ರಿಕೆಗಳು ಈ ಕಾಲಕ್ಕೆ ವಿದ್ಯಾಪ್ರಸಾರದ ಕೆಲಸ
ದಲ್ಲಿ ಬಲವಾದ ಸಾಧನವಾಗಿರುತ್ತವೆಂದು ಹೇಳಿದರೂ ಸಲ್ಲು
ವದು. ಪಾಪಂಚಕ ಜನರಿಗೆ ತಮ್ಮ ಹೋರೆಯನ್ನು ಸಾ
ಗಿಸಿ ತಮ್ಮ ಸುತ್ತಲೇ ನಡೆದಿರುವ ಸಂಗತಿಗಳನ್ನು ತಿಳಿದು

ಕೊಳ್ಳಲಿಕ್ಕೂ ಶಾಸ್ತ್ರ ಕಲೆಗಳಲ್ಲಿ ಆಗುತ್ತಲಿರುವ ಸುಧಾರಣೆಗಳನ್ನೂ ರಾಜ್ಯ ವ್ಯವಹಾರದ ಸಂಗತಿಗಳನ್ನೂ ಜನರು ತಂಡ ತಂಡಾಗಿ ನಡಿಸಿರುವ ವ್ಯಾಜ್ಯಗಳನ್ನೂ ತಿಳುಕೊಳ್ಳಲಿಕ್ಕೂ ಅವಕಾಶವಿಲ್ಲ. ಆದರೆ ಈ ಕೆಲಸವು ವರ್ತಮಾತ ಪತ್ರಿಕೆಗಳಿಂದ ಸಹಜವಾಗಿ ಆಗುತ್ತದೆ. ವರ್ತಮಾನ ಪತ್ರಕರ್ತರುಮಾತ್ರ, ನಡೆದ ಸಂಗತಿಗಳನ್ನು ಎಥಾಸ್ಥಿತವಾಗಿ ತಿಳಕೊಂಡು ಅವುಗಳನ್ನು ಎಥಾರ್ಥವಾಗಿ ತಿಳಿಸುತ್ತಿರಬೇಕು. ಮತ್ತು ಕಾಲಕಾಲಕ್ಕೆ ಚರ್ಚಿಸಲ್ಪಡುವ ವಿಷಯಗಳ ಸಾಧಕ ಬಾಧಕ ಪ್ರಮಾಣಗಳನ್ನು ಯಾವ ಮಾತಿನ ಅಭಿಮಾನವನ್ನೂ ಹಿಡಿಯದೆ ಸಾವ್ಯಂತವಾಗಿ ತಿಳಿಸುತ್ತಿರಬೇಕು. ಹೀಗಿರದಿದ್ದರೆ ವರ್ತಮಾನ ಪತ್ರಿಕೆಗಳಿಂದ ಲಾಭವಾಗುವದಕ್ಕೆ ಬದಲಾಗಿ ಹಾನಿ ಸಂಭವಿಸುವದು. ಈ ದೇಶದ ವರ್ತಮಾನ ಪತ್ರಿಕೆಗಳು ಈ ಗೌರವದ ಕೆಲಸವನ್ನು ಸರಿಯಾಗಿ ನೆರವೇರಿಸಲಿಕ್ಕೆ ಸಮರ್ಥವಾಗಿರುತ್ತವೆಯೋ ಇಲ್ಲವೋ ಎಂಬ ಮಾತು ನೀವು ನಿರಭಿಮಾನದಿಂದ ವಿಚಾರಿಸಿದರೆ ನಿಮ್ಮದು ನಿಮಗೇ ತಿಳಿಯುವದು. ಈ ವರ್ತಮಾನ ಪತ್ರಿಕೆಗಳ ಸುಧಾರಣೆಯನ್ನು ಮಾಡುವದೂ ಇಂಗ್ಲಿಷ ಸರಕಾರದವರು ತಮ್ಮ ದೊಡ್ಡಸ್ತಿಕೆಗೆ ಅನುರೂಪವಾಗಿ ಕೊಟ್ಟಂಥ ಮುದ್ರಣ ಸ್ವಾತಂತ್ರ್ಯದ ಪ್ರಯೋಜನವನ್ನು ಮಾಡಿಕೊಳ್ಳುವದೂ ನಿಮ್ಮ ಕರ್ತವ್ಯವಾಗಿರುತ್ತದೆ. ಯಾವ ದೊಂದು ವಿಷಯವನ್ನು ಪೂರ್ಣವಾಗಿ ವಿಚಾರಿಸುವದೂ ಪ್ರತಿ ಪಕ್ಷದವರ ಅಭಿಪ್ರಾಯವನ್ನು ಶಾಂತರೀತಿಯಿಂದ ಕೇಳಿಕೊಳ್ಳುವದೂ ವರ್ತಮಾನ ಪತ್ರಕಾರರ ಮುಖ್ಯ ಕೆಲಸವಾಗಿರುತ್ತದೆ. ಈ ಮಾತನ್ನು ಯಾವಾಗಲೂ ಕಣ್ಣು ಮುಂದಿಟ್ಟು ನೀವು ವರ್ತಮಾನ ಪತ್ರಿಕೆಗಳ ಸುಧಾರಣೆ

ಯನ್ನು ಮಾಡಲುದ್ಯುಗನಾದಂ ದೇಶಕ್ಕೆ ಬಹಳ ದೊಡ್ಡ ಲಾಭವಾಗುವದು.

ಕೊನೆಯಲ್ಲಿ, ನಾವು ಯಾವ ಕೆಲಸವನ್ನು ಕೈಕೊಂಡರೂ ಯಾವ ಪಕ್ಷವನ್ನು ವಹಿಸಿದರೂ ಈ ಸಾಮ್ರಾಜ್ಯದ ಮರ್ಯಾದೆಯನ್ನು ಕಾಯುಲಿಕ್ಕೂ ಬೇರೆ ಬೇರೆ ಜಾತಿಗಳಲ್ಲಿ ಸ್ನೇಹವನ್ನು ಹುಟ್ಟಿಸಿ ಐಕ್ಯವನ್ನು ಬೆಳಿಸಲಿಕ್ಕೂ ಎತ್ನಿಸುವದು ನಮ್ಮೆಲ್ಲರ ಕರ್ತವ್ಯವಾಗಿರುತ್ತದೆಂಬ ಮಾತನ್ನು ನಾವು ಆಗ್ರಹಪೂರ್ವಕವಾಗಿ ತಿಳಿಸುತ್ತೇವೆ.

THE MORAL TRAINING OF CHILDREN.

ಮಕ್ಕಳ ನೀತಿ ಶಿಕ್ಷಣ—ವಿಸ್ತಾರ.

(ಗತಸಂ ಪುಟದಿಂದ ಮುಂದೆ ಸಾಗಿದ್ದು.)

ಸ್ಥೂಲಮಾನದಿಂದ ಎಲ್ಲ ಕೆಲಸಗಳಲ್ಲಿ ಮಿತವಾಗಿರಬೇಕೆಂಬ ಇದರಿಂದ ಬೋಧಿತವಾಗುತ್ತದೆ. ಆದರೆ ವ್ಯವಹಾರದಲ್ಲಿ ಅಕಸ್ಮಾತ್ ಪ್ರಸಂಗಗಳಿಗೆ ಮಾತ್ರ ಈ ಶಬ್ದವನ್ನು ಹಚ್ಚುವದುಂಟು.

ಸಾದಾ ಆಹಾರವು ಚಿಕ್ಕ ಬಾಲಕರಿಗೆ ಪ್ರಯೋಜನಕರವಾದದ್ದು. ಮಹಾಭಾಗ್ಯಶಾಲಿಯಾದ ವಿಕ್ಟೋರಿಯಾ ಮಹಾರಾಣಿಯವರ ಚಿಕ್ಕಂದಿನಲ್ಲಿ ರೊಟ್ಟಿ ಹಾಲುಗಳೇ ಅವರ ಆಹಾರದ ಮುಖ್ಯ ಪದಾರ್ಥಗಳಾಗಿದ್ದವು. ಭೋಜನ ಸಂಬಂಧದ ಜ್ಞಾನಸತನಕ್ಕೆ ಎಳ್ಳಷ್ಟು ಅಸ್ಪದ ಕೊಡಬಾರದು. ನಮ್ಮ ದೇಶದಲ್ಲಿ ಮೃಷ್ಟಾನ್ನವೇ ಹೆಚ್ಚಾಗಿ ಉಪಯೋಗಿಸಲ್ಪಡುತ್ತದೆ. ಅದರಿಂದ ಮೆತ್ತನ್ನ ಸಿಥಿಲವಾದ ಮಾಂಸವು ಬೆಳೆಯುವದಲ್ಲದೆ ಎಷ್ಟೋ ಜನರು ಮಧುಮೇಹದ ವಿಕಾರಕ್ಕೆ ಬಳಗಾಗುತ್ತಾರೆ. ಕೆಲವರು ತಿಳಿಗೇಡಿ ಹೆಂಗಸರು

ಅಚ್ಚಿಯಿಂದ ತಮ್ಮ ಮಕ್ಕಳನ್ನು ಸೊಕ್ಕಿದ ಕೂಳುಬಾಕರಾಗಿ ಮಾಡುತ್ತಾರೆ. ಮಕ್ಕಳಿಗೆ ಸಾದಾ ಆಹಾರದ ಮತ್ತು ಘಟ್ಟಿಗತನದ ರೂಢಿ ಮಾಡಬೇಕು, ವಿಧೇಯತ್ವಕ್ಕಾಗಿಯೂ ಬಳ್ಳೀ ನಡತೆಗಾಗಿಯೂ ಮೃಷ್ಟಾನ್ನದ ಆಶೆಯನ್ನು ತೋರಿಸುವದು ಎಷ್ಟು ಮಾತ್ರವೂ ಸರಿಯಲ್ಲ. ಇದರಿಂದ ಜಿವ್ಹಾಲೌಲ್ಯವು ಬೆಳೆಯುವದಲ್ಲದೆ ವಿಚಾರದ ಪಡಿಪಾಟು ಹತ್ತಲಾರದು. ಈ ಅಳತೆಗೇಡಿತನವೇ ಜಗತ್ತಿನೊಳಗಿನ ಲಂಪಟತನಕ್ಕೆ ಮೂಲ ಕಾರಣವೆಂದು ಹೇಳಬಹುದು.

ಹುಡುಗರಿಗೆ ಎಂದೂ ಬತ್ತಿ ಶೇದಗೊಡಬಾರದು. ಬತ್ತಿ ಶೇದುವ ಚಟ್ಟದಿಂದ ಬೆಳವಣಿಗೆಯು ಕಟ್ಟಾಗುತ್ತದೆ. ವಿದುಳು ದುರ್ಬಲವಾಗುತ್ತದೆ. ಕೆಲವು ಸುಧಾರಿಸಿದ ದೇಶಗಳಲ್ಲಿ ೧೬ ವರುಷಕ್ಕಿಂತಲೂ ಚಿಕ್ಕವಯಸ್ಸಿನ ಹುಡುಗರಿಗೆ ತಂಬಾಕವನ್ನು ಮಾರ ಕೂಡದೆಂದು ಕಟ್ಟು ಮಾಡಿರುತ್ತಾರೆ. ಪೆಸರಾದ ಸಾಲೆಗಳಲ್ಲಿ ಈ ಅಪಾಯಕರವಾದ ಚಟವನ್ನು ಆಗ್ರಹ ಪೂರ್ವಕವಾಗಿ ನಿಷೇದಿಸುವರು. ತಂಬಾಕಿನ ಸುದ್ದಿ ಸಹ ಅರಿಯದಂಥವನೇ ಭಾಗ್ಯವಂತನು. ಆವನು ವ್ಯಸನಾಧೀನನಾಗಿ ಕಂಗೆಡುವದಕ್ಕೆ ಬದಲಾಗಿ ನಾಲ್ಕು ದುಡ್ಡು ಉಳಿಸಿಕೊಂಡು ಆರೋಗ್ಯ ಸಂಪನ್ನನಾಗಿ ಸುಖದಿಂದ ಬಾಳುವದಲ್ಲದೆ ಜನರಿಗೆ ಒಳ್ಳೀ ಮಾರ್ಗ ದರ್ಶಕನಾಗುವನು.

ಕವಳ ಹಾಕುವದನ್ನು ಸಹ ನಿಷೇದಿಸುವದು ಒಳ್ಳೇದು. ಇದು ಹೇಸಿ ಚಟವು. ಇದರಿಂದ ಹಲ್ಲುಗಳಿಗೆ ಅಪಾಯವಾಗುವದಲ್ಲದೆ ಗಂಡವಮಾಲೆಯ ರೋಗವು ಉಗ್ಭವಿಸುವದು.

ತಾಯಿ ತಂದೆಗಳು ತಮ್ಮ ಮಕ್ಕಳಿಗೆ ಮದ್ಯದ ಗಾಳಿ ಸಹ ಸೊಂಕವಂತೆ ಎಚ್ಚರ ಪಡಬೇಕು. ಪೂರ್ವಕಾಲದಲ್ಲಿ

ಎಲ್ಲ ವರ್ಣದವರು ಮದ್ಯವನ್ನು ಸೇವಿಸುವರು. ಋಗ್ವೇದದ ಬಂದು ಅಷ್ಟಕವು ಸೋಮವೆಂಬ ಮದ್ಯದ ಸ್ತೋತ್ರದಿಂದಲೇ ತುಂಬಿರುತ್ತದೆ. ಇಂದ್ರನಿಗೆ ಇದರ ವ್ಯಸನವು ಬಹಳವಿತ್ತಂತೆ. ಆದರೆ ಮದ್ಯಪಾನದ ದುಷ್ಪರಿಣಾಮಗಳು ತಿಳಿತಿಳಿದ ಹಾಗೆ ಈ ವ್ಯಸನವು ಕಟ್ಟು ಮಾಡಲ್ಪಟ್ಟಿತು. ಶ್ರೇಷ್ಠ ವರ್ಣದವರಂತೂ ಇದನ್ನು ಮುಟ್ಟ ಕೂಡದೆಂದು ಬಿಗಿಯಾದ ಕಟ್ಟು ಮಾಡಲ್ಪಟ್ಟಿತು. ಇತ್ತಿತ್ತಲಾಗಿ ಈ ವ್ಯಸನವು ಭರದಿಂದ ಬೆಳೆಯುತ್ತ ನಡೆದದೆ. ಶ್ರೇಷ್ಠ ವರ್ಗದ ಹಿಂದೂ ಜನರು ಬಿಗಿಯಾದ ಫರ್ಮಾಜ್ಞೆಯನ್ನು ಮೂಲೆಗೊತ್ತಿ ಈ ದುರ್ವ್ಯಸನಕ್ಕೆ ಬಳಗಾಗಿರುತ್ತಾರೆ. ಮುದಿಬಾಭಕ್ತರ ಸಂಖ್ಯೆಯು ದೊಡ್ಡದೊಡ್ಡ ಪಟ್ಟಣಗಳಲ್ಲಿ ಹೆಚ್ಚಾಗಿರುತ್ತದೆ. ಕಲಕತ್ತಾ, ಮುಂಬಯಿ, ಮದ್ರಾಸ, ಲಾಹೋರ, ಅಲಾಹಾಬಾದ ಮುಂತಾದ ಪಟ್ಟಣಗಳಲ್ಲಿ ಬುದ್ಧಿವಂತರಾದ ಕೆಲವರು ತರುಣರು ಸಂಘಗಳನ್ನು ಸ್ಥಾಪಿಸಿ ಅಭಕ್ಷ ಭಕ್ಷಣವನ್ನೂ ಅಪೇಯ ಪಾನವನ್ನೂ ಎಥೇಚ್ಛ ಮಾಡುತ್ತಾರೆ. ಈ ವ್ಯಸನ ಸಂಬಂಧದಿಂದ ಕಲಕತ್ತಾದಲ್ಲಿ ಬಂದು ವರ್ತಮಾನ ಪತ್ರಿಕೆಯು ತಿಳಿಸುವದೇನಂದರೆ—ಸುರಾಪಾನವು ನಮ್ಮ ಸಮಾಜದ ಮುಖ್ಯ ಮುಖ್ಯ ಜನರನ್ನು ವ್ಯಾಪಿಸಿ ಕ್ಷಣಶಃ ಮಾಡುವ ನಷ್ಟಗಳು ನಮ್ಮ ಕಣ್ಣಿಗೆ ಬೀಳುತ್ತಲಿವೆ. ಈ ವ್ಯಸನದೊಳಗೆ ಎಷ್ಟೋ ಜನರು ಮಾನ, ಧನ, ಕುಲ ಶೀಲಗಳಿಗೆ ಎರವಾಗುವದಲ್ಲದೆ ಮೃತ್ಯುವಿನ ಬಾಯಲ್ಲಿ ಬೀಳುತ್ತಲಿದ್ದಾರೆ. ಸುರಾಪಾನದಿಂದಾಗುವ ಅಪಾಯವು ಕುಡುಕನಷ್ಟಕ್ಕೇ ತೀರದೆ, ಅವನ ಮಕ್ಕಳಿಗೂ ಬಾಧಿಸುತ್ತದೆ. ಕುಡುಕನ ಮಕ್ಕಳು ಸ್ವಭಾವತಃ ಅಶಕ್ತರಿರುತ್ತಾರೆ ಅವರು ಹಿರಿಯರ ಕೆತ್ತೆಯನ್ನು ತೀಡಿ ಮತ್ತಿಪ್ಪಟ್ಟ

ಕೆಡುತ್ತಾರೆ. ಈ ಮೇರೆಗೆ ಈ ವ್ಯಸನವು ಬಹ್ಮ ಮನ
ಶೇರಿತೆಂದರೆ ಆ ಮನೆಯವರನ್ನೆಲ್ಲ ಭಿಕ್ಷಾಪಾತ್ರೆಗಳಿಗೆ ಅಧಿ
ಕಾರಿಗಳನ್ನು ಮಾಡಿ ಪರಿಪರಿಯಿಂದ ಪೀಡಿಸುವದಲ್ಲದೆ
ಮನೆತನವನ್ನು ನಾಮ ಶೇಷವಾಗಿ ಮಾಡುತ್ತದೆ.

ತಾಯಿತಂದೆಗಳು ಎಂದಿಗೂ ಮದ್ಯವನ್ನು ತಾವು ಸ್ವತಃ
ಮುಟ್ಟಬಾರದು ಎರಡನೇಯವರಿಗೂ ಮುಟ್ಟಗೊಡಬಾರ
ದು. ಮದ್ಯಪಾನದಿಂದಾಗುವ ದುಷ್ಟ ಪರಿಣಾಮಗಳನ್ನು
ತಿಳಿಸಿ ಮಕ್ಕಳು ಅವರ ಗೋಜಿಗೆ ಹೋಗದಂತೆ ಅವರನ್ನು
ಎಚ್ಚರದಿಂದ ಕಾಯಬೇಕು.

ದೇಶಾಭಿಮಾನಿಗಳು ಅಲ್ಲಲ್ಲಿಗೆ ಸಂಘಗಳನ್ನು ಸ್ಥಾಪಿಸಿ
ಈ ವ್ಯಸನದಿಂದಾಗುವ ದುಷ್ಟ ಪರಿಣಾಮಗಳನ್ನು ಜನರಿಗೆ
ತಿಳಿಸಿ ಮದ್ಯವಂಗಡಿಗಳನ್ನು ಸರಕಾರದಿಂದ ಬಂದು ಮಾಡಿ
ಸಿ ಈ ವ್ಯಸನವು ನಿರ್ಮೂಲವಾಗುವಂತೆ ಯತ್ನಿಸುವದು
ಉಚಿತವಾವದ್ದು.

ಗಾಂಜಿ ಮತ್ತು ಅಫೀಮುಗಳು ಮದ್ಯದಷ್ಟೇ ಅಪಾಯ
ಕರವಾಗಿರುತ್ತವೆ. ಅವುಗಳಿಂದ ದೂರಿದ್ದಷ್ಟು ಒಳ್ಳೇದು.

ಆನಂದವೃತ್ತಿ.

ಮನುಷ್ಯನ ಆಯುಷ್ಯದ ಎಲ್ಲ ಅವಸ್ಥೆಗಳಲ್ಲಿಯೂ ಆ
ನಂದಕರವಾದ ಸ್ವಭಾವವಿರುವದು ಅವಶ್ಯವಾಗಿರುತ್ತದೆ.
ಅದನ್ನು ವೃದ್ಧಿಗೊಳಿಸುವದು ಮಹತ್ವದ್ದಿರುತ್ತದೆ. ಕೆಲವು
ಮನೆತನಗಳಲ್ಲಿ ಸಣ್ಣ ಹುಡುಗರು ಒಳ್ಳೇ ಮನಸಿನವರೂ
ಉಲ್ಲಾಸ ವೃತ್ತಿಯುಳ್ಳವರೂ ಇರುತ್ತಾರೆ; ಅದರಿಂದ ಎತ್ತ
ನೋಡಿದರೂ ನಗೆಮೋರೆಗಳೇ ಕಂಗೊಳಿಸುವವು. ಬೇರೆ
ಕೆಲವರಲ್ಲಿಯ ಹುಡುಗರು ನಗೆ ಮೋರೆಯವರಿರದೆ ಮು

ಬ್ಬಿಗೆ ಗಂಟಿಕ್ಕಿ ಯಾವಾಗಲೂ ಉರಿಮೂರಿಯಿಂದ ಇರುವರು. ಅದರಿಂದ ಅವರಲ್ಲಿ ಬಿಡಕುಷನ ಲಕ್ಷ್ಮೀಶಗಳು ಯಾವಾಗಲೂ ದೃಷ್ಟಿಗೆ ಬೀಳುವವು, ಈ ವೈಲಕ್ಷಣ್ಯಕ್ಕೆ ಇಂದೆತಾಯಿಗಳ ವಿಕೀಷವಾಗಿ ತಾಯಂದಿರ ಕೆಟ್ಟ ನಡತೆಗಳೇ ಕಾರಣವಾಗಿರುತ್ತವೆ.

SELECTIONS FROM THE KARNATIK GAZETTEER.

ಕನ್ನಡ ಗೆಜೆಟಿಯರದಿಂದ ಅವತರಣಿಗಳು.

(೪೪ನೇ ಪುಟದಿಂದಸೂಗಿದ್ದು)

ಬೆನಕನಕೊಂಡ—ರಾಣೆಬಿನ್ನೂರಿನ ದಕ್ಷಿಣಕ್ಕೆ ೫ ಮೈಲಿನ ಮೇಲೆ ಕಲಮೇಶ್ವರನ ಗುಡಿಯಲ್ಲಿ ೪ ಲಿಪಿಗಳಿವೆ. ಅವೆಲ್ಲ ೧೧ನೇ ಶತಕದೀಚೆಗೆ ಬರಿದಂಥವು.

ಹೂಲೀಹಳ್ಳಿ—ರಾಣೇಬಿನ್ನೂರಿನ ವಾಯವ್ಯಕ್ಕೆ ೩ ಮೈಲಿನ ಮೇಲೆ ಬಂದು ಹಾಳು ಕೋಟೆಯೂ, ಯರಡು ರಾಮೇಶ್ವರನ ಗುಡಿಗಳು ಇರುತ್ತವೆ. ಈ ಗುಡಿಗಳಲ್ಲಿ ಬಂದೊಂದು ಲಿಪಿಗಳು ೧೦ನೇ ಶತಕದವು ಇರುತ್ತವೆ.

ಮಡಲೇರಿ—ರಾಣೇಬಿನ್ನೂರಿನ ಈಶಾನ್ಯಕ್ಕೆ ೪ ಮೈಲಿನಮೇಲೆ ತುಂಗಭದ್ರೆಯ ದಂಡೆಯಲ್ಲಿ. ಜ. ಸ. (೪೧) ೦೦೪೫. ಇಲ್ಲಿಯ ಖಬೂರ್ಜಿಯ ಹಣ್ಣು ಪ್ರಸಿದ್ಧ; ಮೇಲಾದ ಕಂಬಳಿಗಳಾಗುತ್ತವೆ. ಇಲ್ಲಿ ಸರಕಾರದವರು ಭೂಮಿಗಳಿಗೆ ನೀರು ಪೂರೈಸುವದಕ್ಕಾಗಿ ದೊಡ್ಡದೊಂದು ಕೆರೆಯನ್ನು ಕಟ್ಟಿಸಿದ್ದಾರೆ.

ಮೇಲಿನಬಿನ್ನೂರ—ರಾಣೇಬಿನ್ನೂರಿನ ಈಶಾನ್ಯಕ್ಕೆ ೧೦ ಮೈಲಿನಮೇಲೆ ಜ. ಸ. (೪೧) ೦೬೦೧. ಇಲ್ಲಿ ಪೂರ್ವದಲ್ಲಿ ಶೀಗಂಧದ ವ್ಯಾಪಾರವು ಬಹಳ ಆಗುತ್ತಿತ್ತು. ಊರ ಹೊರ

ಗೆ ಬಹು ಪುರಾತನ ಕಾಲದ್ದೊಂದು ಇಮಾರತಿನ ಶೇಷವು ಇರುತ್ತದೆ. ಇಲ್ಲಿ ಅಂಡಕ ಕಲ್ಲುಗಳನ್ನು ಉದ್ದಕ್ಕೆ ನಿಲ್ಲಿಸಿ ಅವುಗಳ ಮೇಲೆ ದೊಡ್ಡ ದೊಡ್ಡ ಬಂಡೆಗಳನ್ನು ಅಡ್ಡ ಇಟ್ಟಿದ್ದಾರೆ.

ತುಮ್ಮಿನಕಟ್ಟೆ—ರಾಣೇಬಿನ್ನೂರಿನ ದಕ್ಷಿಣಕ್ಕೆ ೧೫ ಮೈಲಿನ ಮೇಲೆ ತುಂಗ ಭದ್ರೆಯ ದಂಡೆಯಲ್ಲಿ. ಜನಸಂಖ್ಯೆ (೧೧) ೪೬೦೦. ಬುಧವಾರ ಸಂತೆಯಾಗುತ್ತದೆ; ಸರಕಾರೀ ಶಾಲೆಯುಂಟು; ಮುಶಾಫರೀ ಬಂಗಲೆ ಇರುತ್ತದೆ. ಇಲ್ಲಿ ನೇಕಾರರು ಬಹಳ, ವಸ್ತ್ರಗಳ ವ್ಯಾಪಾರವು ತಕ್ಕಮಟ್ಟಿಗೆ ಆಗುತ್ತದೆ.

ಕೋಡ ತಾಲೂಕು.

ಕ್ಷೇತ್ರ—ಇದು ಜಿಲ್ಲೆಯ ನೈರುತ್ಯ ಮೂಲೆಯಲ್ಲಿ ಹಾನಗಲ್ಲ ತಾಲೂಕಿನ ದಕ್ಷಿಣಕ್ಕೆ ಇರುತ್ತದೆ. ಸರಕಾರೀ ಹಳ್ಳಿಗಳು ೧೯೩ ದುಮಾಲೀ ೧೧. ಕ್ಷೇತ್ರ ೪೦೦ ಚ. ಮೈಲು ಜನಸಂಖ್ಯೆ ೧೦೩೪೫; ಭೂಮಿಯ ಕಂದಾಯ ೧೪೬೬೩ ರೂಪಾಯಿ.

ಸ್ವರೂಪ, ಭೂಮಿ—ಈ ತಾಲೂಕಿನಲ್ಲಿ ನಡು ನಡುವೆ ಗುಡ್ಡಗಳೂ ಕೆರೆಗಳೂ ಉಂಟು; ಕೆರೆಗಳು ತುಂಬಿದಾಗ ೨೫ ಮೈಲು ಉದ್ದ ಇರುತ್ತವೆ. ಎಲ್ಲ ಕಡೆಯಲ್ಲಿಯೂ ನೀರು ಆಡುತ್ತಿರುವ ಕಾರಣ ಅಲ್ಲಲ್ಲಿಗೆ ತೋಟಗಳಾಗಿವೆ. ಹಳ್ಳಿಗಳು ದಟ್ಟ, ಸಣ್ಣವು, ಅವುಗಳಿಗೆ ಸುತ್ತು ಗೋಡೆ ಇಲ್ಲ. ಭೂಮಿಯು ಮುಖ್ಯವಾಗಿ ಕೆಂಪು; ಕರೆ ಭೂಮಿ ಅಪರೂಪ.

ಹವೆ, ಮಳೆ, ನೀರು—ನೆಲ ತೇವು ಇರುವ ಕಾರಣ ಚಳಿಗಾಲದಲ್ಲಿ ಜ್ವರೋಪದ್ರವ ಬಹಳ, ಬೇಸಿಗೆಯಲ್ಲಿ, ಆರೋಗ್ಯವು ಪೊಳಿತಾಗಿರುತ್ತದೆ. ಹಿರೇಕೆರೂರಿನಲ್ಲಿ ಮಳೆ

೧೬ ಇಂಚಿನಿಂದ ೩೫ ರವರೆಗೆ ಸರಾಸರಿ ೨೫ ಇಂಚು. ಆಗ್ನೇಯ ಮೂಲೆಯಲ್ಲಿ ತುಂಗಭದ್ರೆಯಲ್ಲದೆ ಮದಗದ ಕೆಸರಾದ ಕೆರೆಯಿಂದ ಕುಮುದ್ವತಿಯು ಹೊರಟು ತಾಲೂಕಿನೊಳಗಿಂದ ಹರಿಯುತ್ತದೆ. ಇದಲ್ಲದೆ ಈ ತಾಲೂಕಿನಷ್ಟು ದೊಡ್ಡ ದೊಡ್ಡ ಕೆರೆಗಳು ಯಾವ ತಾಲೂಕಿನಲ್ಲಿಯೂ ಇಲ್ಲ.

ಒಟ್ಟು ಜನಸಂಖ್ಯೆದಲ್ಲಿ ಶೇಕಡಾ ೯೧.೧೦ ಹಿಂದೂ ಜನರು, ೮.೯ ಮುಸಲ್ಮಾನರು. ಹಿಂದೂ ಜನರಲ್ಲಿ ಬ್ರಾಹ್ಮಣರು ೧೮೫೧, ಲಿಂಗವಂತರು ೩೫೩೭೮, ಆರೇರು ೨೧೭೩, ಕುರುಬರು ೭೦೦೩, ಬೇಡರು ೮೦೮೬, ಒಡ್ಡರು ೨೬೭೪, ಮಾದಿಗರು ೩೮೫೮ ಇತ್ಯಾದಿ.

ದೊಡ್ಡ ಊರುಗಳು.

ಹಿರೇಕೆರೂರು—ಉತ್ತರ ಅಕ್ಷಾಂಶ ೧೪, ೨೮, ಪೂರ್ವ ರೇಖಾಂಶ ೭೫, ೨೮, ಧಾರವಾಡದ ಆಗ್ನೇಯಕ್ಕೆ ೭೦ ಮೈಲಿನ ಮೇಲೆ ಜ. ಸ. (೮೧) ೨೩೪೮. ಇಲ್ಲಿ ಕೋಡ ತಾಲೂಕಿನ ಮಾಮಲೇದಾರಕಚೇರಿ ಇರುತ್ತದೆ. ಸೋಮವಾರ ಸಂತೆಯಾಗುತ್ತದೆ; ಹವೆಯು ರೋಗಕಾರಕ. ಈ ಊರಲ್ಲಿ ನಾಲ್ಕು ಬುನಾದಿಯ ಗುಡಿಗಳೂ, ೧೧ ಲಿಪಿಗಳೂ ಇರುತ್ತವೆ; ಅವೆಲ್ಲ ೧೦ನೇ ಶತಕದ ಈಚೆಯಲ್ಲಿ ಆದಂಥವು. ವಿಷಪರಿಹಾರೇಶ್ವರನ ಗುಡಿಯಲ್ಲಿ ಹಾವಿನ ವಿಷವು ಪರಿಹಾರವಾಗುತ್ತದೆಂದು ಹೇಳುತ್ತಾರೆ. ಊರ ಹೊರಗೆ ಎರಡು ಮೈಲಿನ ಮೇಲೆ ಜನಮೇಜಯನ ಕೆರೆಯೆಂಬದೊಂದು ದೊಡ್ಡ ಕೆರೆಯುಂಟು ಅದರ ನೀರು ಗದ್ದಿಗಳಿಗೆ ಬಹಳ ಉಪಯೋಗಿಸುತ್ತದೆ. ವಿಷಪರಿಹಾರೇಶ್ವರನ ಗುಡಿಯ ಬಳಿಯಲ್ಲಿ ಇರುವದೊಂದು ಲಿಪಿಯಲ್ಲಿ ಈ ಕೆರೆಯನ್ನು ಕಟ್ಟಿಸಿದ ವೃತ್ತಾಂತವೆಲ್ಲ ಬರೆದಿರುತ್ತದೆಂದು ಹೇಳುತ್ತಾರೆ.

ಕಾಗಿನೆಲ್ಲೆ—ಕೋಡದ ಈಶಾನ್ಯಕ್ಕೆ ಮೂರು ಮೈಲಿನ ಮೇಲೆ ಜ. ಸ. ೧೮೩೮. ಇದು ಪರಗಣೆಯ ಗ್ರಾಮವಿರುತ್ತದೆ. ಇಲ್ಲಿ ಆದಿಕೇಶವ ಮುಂತಾದ ಆರು ಪ್ರಾಚೀನ ಗುಡಿಗಳುಂಟು. ಆದಿಕೇಶವನ ಗುಡಿಯು ದೊಡ್ಡದುಂಟು; ಅದರ ಬಳಿಯಲ್ಲಿಯೇ ಲಕ್ಷ್ಮೀ ನರಸಿಂಹನ ಗುಡಿ ಇರುತ್ತದೆ. ಆದಿಕೇಶವನ ಮೂರ್ತಿಯನ್ನು ಬಾಡವೆಂಬ ಗ್ರಾಮದಿಂದ ಕನಕದಾಸನು (೧೫೬೪) ತಂದು ಸ್ಥಾಪಿಸಿದನೆಂದು ಹೇಳುತ್ತಾರೆ. ಈ ಗುಡಿಯಲ್ಲಿಯೂ ಬೇರೆ ಬೂನಾದಿಯ ಗುಡಿಗಳಲ್ಲಿಯೂ ಹತ್ತಕ್ಕಿಂತ ಹೆಚ್ಚು ಲಿಪಿಗಳಿರುತ್ತವೆ. ಕೆಲವು ಲಿಪಿಗಳನ್ನು ಇನ್ನೂ ಯಾರೂ ಓದಿಲ್ಲ; ಕೆಲವುಗಳ ಮಿತಿಗಳು ತಿಳಿದಿಲ್ಲ.

CORRESPONDENCE.

ಪತ್ರವ್ಯವಹಾರ.

ರಾ. ಸಾ. ಎಡಿಟರ ಕನ್ನಡ ಬಾಲಾ ಪತ್ರಿಕ
ಇವರ ಪಾದಾರವಿಂದಕ್ಕೆ.

ಸಾ. ನ. ವಿನಂತಿ ವಿ.—ಕೆಳಗೆ ಬರೆದ ೪ ಪಂಕ್ತಿಗಳಿಗೆ ಸಚ್ಚಿಷ್ಟಪೋತ್ಕರ್ಷವನ್ನು ಬಯಸುವ ಸುಂದರವಾದ ತಮ್ಮ ಬಾಲಾ ಪತ್ರಿಕದಲ್ಲಿ ಸ್ಥಳ ದೊರಿಯುವದೆಂದು ಇಚ್ಛಿಸುತ್ತೇನೆ.

ನಮ್ಮ ಪ್ರಾಚೀನ ಆರ್ಯ ಜ್ಯೋತಿಷಿಗಳ ಮತದಂತೆ, ಎಲ್ಲ ಗ್ರಹಗಳು ಪೃಥ್ವಿಯ ಸುತ್ತ ಮುತ್ತ ತಿರುಗುತ್ತವೆ. ಅವುಗಳ ಕ್ರಮವು, ಕಟ್ಟಕಡೆಯಿಂದ ಎಣಿಸಿದರೆ, ಶನಿ, ಗುರು, ಮಂಗಳ, ರವಿ, ಶುಕ್ರ, ಬುಧ, ಚಂದ್ರ ಈ ಪ್ರಕಾರ ಅದೆ. ಇವುಗಳಲ್ಲಿ ಮೊದಲು ಶನಿಯನ್ನು ಹಿಡಿದು

ಮುಂದೆ (೩) ಗ್ರಹಗಳನ್ನು ಬಿಟ್ಟು ನಾಲ್ಕನೇ ಗ್ರಹವನ್ನು ಪುನಃ ಪುನಃ ತಕ್ಕೊಂಡರೆ, ಏಳು ವಾರಗಳು ಕ್ರಮದಿಂದ ಬರುತ್ತವೆ.

ಪ್ರತ್ಯೇಕ ದಿವಸದಲ್ಲಿ 'ಹೋರಾ' ಎಂಬ ಸಂಜ್ಞೆಯುಳ್ಳ ೨೪ ಭಾಗಗಳನ್ನು ಕಲ್ಪಿಸಿ, ಒಂದೊಂದು ಹೋರಾಕ್ಕೆ ಮೇಲೆ ಬರೆದ ಗ್ರಹಗಳನ್ನು ಅನುಕ್ರಮದಿಂದ 'ಅಧಿಪತಿ' ಎಂದು ತಿಳಿಯುತ್ತಾರೆ. ಅರ್ಥಾತ್ ಒಂದು ದಿವಸದಲ್ಲಿ ಯಾವತ್ತು ಗ್ರಹಗಳು ಮೂರು ಸಾರೆ ತಿರುಗಿ, ಮತ್ತೆ ಮತ್ತೆ ಮೂರು ಗ್ರಹಗಳಾಗುತ್ತವೆ. ಅಂದರೆ ಮೊದಲನೇ ದಿವಸ ಮೊದಲನೇ ಹೋರಾದ ಅಧಿಪತಿಯು ಶನಿ ಎಂದು ತಿಳಿದರೆ, ಮರುದಿವಸ ಮೊದಲನೇಹೋರಾದ ಅಧಿಪತಿಯು ರವಿಯಾಗುತ್ತಾನೆ; ಮೂರನೇ ದಿನ ಚಂದ್ರನಾಗುತ್ತಾನೆ. ಮೊದಲನೇ ಹೋರಾದ ಅಧಿಪತಿಯೇ ಆ ವಾರದ ಸ್ವಾಮಿಯು. ಆ ಸ್ವಾಮಿಯ ಹೆಸರು ಆ ವಾರಕ್ಕೆ ಬಿದ್ದಿದೆ. ಇದೇ ಪ್ರಕಾರ ರವಿ, ಚಂದ್ರ, ಮಂಗಳ ಇತ್ಯಾದಿ ಏಳು ವಾರಗಳ ಕ್ರಮವು ಉತ್ಪನ್ನವಾಯಿತು. ಪೃಥ್ವಿಯ ಮೇಲೆ ಈಗ ಎಲ್ಲೆಲ್ಲಿ ವಾರಗಳು ನಡೆದಿವೆಯೋ ಅಲ್ಲಲ್ಲಿ ಇದೇ ಕ್ರಮವು ನಡೆದಿರುತ್ತದೆ; ಇಷ್ಟೇ ಅಲ್ಲ, ನಮ್ಮ ದೇಶದಲ್ಲಿ ಈ ಹೊತ್ತು ಇದ್ದ ವಾರವೇ ಪೃಥ್ವಿಯ ಮೇಲಿನ ಎಲ್ಲಾ ದೇಶಗಳಲ್ಲಿ ಇರುತ್ತದೆ. ಆ ವಾರಗಳ ಹೆಸರುಗಳಾದರೂ ಬೇರೆ ಭಾಷೆಯಲ್ಲಿ ಬಂದೇ ಅರ್ಥವಿರುತ್ತವೆ.

ಇದರ ಮೇಲಿಂದ, ನಮ್ಮ ದೇಶದಲ್ಲಿ ಜ್ಯೋತಿಷ ಶಾಸ್ತ್ರವು ಸಾಮಾನ್ಯತಃ ರೂಢಿಯಲ್ಲಿರುವಾಗ ಈಗಿನ ಅತ್ಯಂತ ಸುಧಾರಿಸಿದ ಪಾಶ್ಚಿಮಾತ್ಯ ದೇಶಗಳಲ್ಲಿ ಅದರ ವಾರ್ತೆಯಾದರೂ ಇದ್ದಿಲ್ಲವೆಂದು ತೋರುತ್ತದೆ.

ಆರ್ಯಾಜೀನ ಏತದ್ದೇಶೀಯ - ಪಾಶ್ಚಿಮಾತ್ಯ ಜ್ಯೋತಿಃಶಾಸ್ತ್ರವಿಪಶ್ಚಿತರ ಕೃತಕ ಕಾಚ ವೃಷ್ಟಿ ಯಂತ್ರ ಮೊದಲಾದ ಉಪಲಬ್ಧವಾದ ಉಪಕರಣಗಳಿಂದ, ನಮ್ಮ ಪ್ರಾಚೀನ ಪೂರ್ವಜರ - ಆರ್ಯರ - ಈ ಭೂಮಾಲಾ ಸಿದ್ಧಾಂತದ ಮಿಥ್ಯತ್ವವು ಸಪ್ರಮಾಣ ಸಿದ್ಧವಾದಾಗ್ಯೂ, ಅವರಿಂದ ಉಪಕ್ರಮಿಸಲ್ಪಟ್ಟ ವಾರಗಳ ಹೆಸರಗಳಲ್ಲಿ ನ್ಯೂನಾಧಿಕವನ್ನು ಮಾಡಿದರೆ, ಅದಕ್ಕೆ ಈಗ ಬಹುತರ ಯಾರೂ ಅನುಮತಿಸಲಾರರೆಂದರೆ ದೊಡ್ಡ ತಪ್ಪಾಗಲಿಕ್ಕಿಲ್ಲ; ಇಷ್ಟೇ ಅಲ್ಲ ನಮ್ಮ ಭಾರತೀಯ ಆರ್ಯ - ಪೂರ್ವಜರ ತತ್ಕಾಲೀನ ಜ್ಯೋತಿಷ ಶಾಸ್ತ್ರದ ಶೋಧವು, ವಾರಗಳ ರೂಪದಿಂದ, ಧರಣಿ ಮಂಡಲದೊಳಗಣ ವಿದ್ಯಾಚಾರ ಸಂಪನ್ನ ರಾಷ್ಟ್ರಗಳಲ್ಲಿ ಪ್ರಚಲಿತವಾಗಿರುತ್ತದೆಂದು ಅಭಿಮಾನ ಪಡಲಿಕ್ಕೆ ಅಸ್ಪದವಿರುತ್ತದೆ.

ಇದು ಅನುಷಂಗಿಕ ವಿಷಯವಿರದೆ ಹೋದಾಗ್ಯೂ ವ್ಯವಹಾರದೊಳಗಿನ ಸಂಗತಿಯ ಕಾರಣವನ್ನು ಉಲ್ಲೇಖಿಸಿರುವದರಿಂದ ಈ ಪತ್ರವನ್ನು ಮುದ್ರಿಸುವಿರೆಂದು ಕೋರುತ್ತೇನೆ. ಪತ್ರ ವಿಸ್ತಾರಕ್ಕಾಗಿ ಕ್ಷಮೆ ಬೇಡಿ ಪುನರ್ದರ್ಶನಕೊಳ್ಳುವರ ಅಭಿವಚನವನ್ನು ಅಶಿಸುವ.

ಕಲ್ಲೋಳ, ತಾ॥ ಚಿಕ್ಕೋಡಿ
ತಾ॥ ೧೨—೩—೯೫.

ತಮ್ಮ ಪ್ರಶಿಷ್ಯ
ವಿಷ್ಣುಬಾವಾಜಿರಾವ,
ಕುಲಕರ್ಣಿ ಕಲ್ಲೋಳ.

DHARWAR TRAINING COLLEGE CERTIFICATE EXAMINATION.—1894

ಕಾಲೇಜಿನ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು.

ಮೂನೇ ವರ್ಷದ ವರ್ಗ.

ಭಾಷಾವಿಷಯ—ವ್ಯಾಕರಣ.

ಬಲಕ್ಕೆ ಬರಿದ ಅಂಕಿಗಳು ಪ್ರಶ್ನೆಗಳ ಪೂರ್ಣ ಗುಣಗಳು.

೧. "ಒಂದೇ ಅರ್ಥವನ್ನು ಹೇಳುವ ಅಕ್ಷರಗಳ ಗುಂ ಪು" ಎಂದು ಶಬ್ದಕ್ಕೆ ಲಕ್ಷಣ ಹೇಳಿದರೆ ಯಾಕೆ ತಪ್ಪು?

(b) ಶಾಲಾ ವ್ಯಾಕರಣವು ಶಬ್ದಗಳಲ್ಲಿ ಜಾತಿವಾಗ ರ್ಥ ರೂಪ ಎಂಬ ಮೂರು ಭೇದಗಳನ್ನು ಹೇಳುತ್ತದೆ. ವಿಶೇಷಣಗಳು ಇವುಗಳಲ್ಲಿ ಯಾ ವ ಭೇದಗಳಲ್ಲಿ ಏನು ಕಾರಣ ಬರುತ್ತವೆ?

(c) ವಿಭಕ್ತಿಯೆಂದರೇನು? ಲಕ್ಷಣವನ್ನು ಹೇಳಿ ಅದರ ಅರ್ಥವನ್ನು ಸ್ಪಷ್ಟೀಕರಿಸು.

೨. ಸೊಕ್ಕು ನುಗು ಧೇನು ಉಗುರು ಮೂಗು ಇವು ಗಳಲ್ಲಿ ನಿತ್ಯ ಉಕಾರಾಂತ ಶಬ್ದಗಳು ಯಾವವು ಅನಿತ್ಯದ ವು ಯಾವವು: ನಿಯಮವನ್ನು ಹೇಳಿ ವಿಂಗಡಿಸು.

೩. ಚತುರ್ಥಿ ಸಪ್ತಮಿ ವಿಭಕ್ತಿಗಳು ಹೇಳು ವ ಕಾಲ ಕಾರಕಾರ್ಥದಲ್ಲಿರುವ ಅರ್ಥ ವೈಲಕ್ಷಣ್ಯವನ್ನು ಉದಾಹರ ಣೆಯಿಂದ ತೋರಿಸು. "ಹೆಂಡತಿಯಿಂದ ಮನೆ, ಮೂಗಿ ನಿಂದ ಮೋರೆ" ಇಂಥಾ ವ್ಯಾಕ್ಯಗಳಲ್ಲಿ ತೃತೀಯೆಯ ಕಾರ ಕಾರ್ಥವನ್ನು "ಕುವರಂ ವಂಶಕೆ ಭೂಷಣಂ" "ದುರ್ಜ ನರಿಗೆ ದಾರಿದ್ರ್ಯವೇ ಮದ್ದು" ಈ ವಾಕ್ಯಗಳಲ್ಲಿ ಚತುರ್ಥಿ ಯ ಕಾರಕಾರ್ಥವನ್ನು ನಿರ್ಣೈಸು.

೪. "ಕೈಕೆಯ" ಮೈಮಯ" "ಐದು" "ಅಯ್ದು" ಈ ನ್ವಿವಿಧ ಪ್ರಯೋಗಗಳಲ್ಲಿ ಧಾತು ಯಾವದು? ಕಾರಣ ಸಹಿ ತ ಉತ್ತರ ಬರಿ.

(b) "ದೊಡ್ಡವರಲ್ಲಿ ನಿಂದ್ಯ ಹಾಗೂ ನೀಚ ಗುಣಗ

ಳು ಇರಬಾರದು" ಈ ವಾಕ್ಯದಲ್ಲಿ "ನಿಂದ್ಯ ಹಾಗೂ ನೀಚ ಈ ಸಮುಚ್ಚಯದ ಯುಕ್ತಾ ಯುಕ್ತತೆಯನ್ನು ಸ್ಥಾಪಿಸು.

೫. ಸಜ್ಜೆ ಬೆಜ್ಜಂ ಹರಣಂ ಬಿಯಳಂ ಈ ಶಬ್ದಗಳ ತತ್ಸಮಗಳನ್ನೂ ಪ್ರಾಕೃತಂ ಝಟಿತಿ ಪಾಲಂ ಧಾನ್ಯಂ ಇವುಗಳ ತದ್ಭವವನ್ನು ಬರಿ.

೬. ದಾಸರ ಪದಗಳಿಗೆ ಛಂದಶಾಸ್ತ್ರದ ಪ್ರತಿಬಂಧವು ಎಷ್ಟರಮಟ್ಟಿಗೆ ಇರುತ್ತದೆ? ಕನ್ನಡ ಪದ್ಯದಲ್ಲಿ ಪ್ಲುತಾಕ್ಷರ ಪ್ರಯೋಗವು ಯಾವ ಸ್ಥಳದಲ್ಲಿ ಬರುತ್ತದೆ ಉದಾಹರಣೆ ಕೊಡು. ಸರ್ವಜ್ಞನ ನುಡಿಗಳ ವೃತ್ತದ ಹೆಸರು ಲಕ್ಷಣಗಳನ್ನು ಬರಿ. ಭುಜಂಗ ಪ್ರಯಾತ ಇಂದ್ರ ವಜ್ರಾ ಇವುಗಳ ಪ್ರಸ್ತಾರವನ್ನು ಶರ ಷಟ್ಪದಿಯ ಲಕ್ಷಣವನ್ನು ಬರಿ.

೭. ಅರ್ಥಾಂತರನ್ಯಾಸ ಉತ್ಪ್ರೇಕ್ಷೆ ಇವುಗಳ ಲಕ್ಷಣಗಳನ್ನು ಬರೆದು ಓದಿದ ಪದ್ಯ ಗ್ರಂಥದೊಳಗಿನ ಉದಾಹರಣೆ ಕೊಡು.

೮. ನೋ ನ್ಯಥನಿ ಬೇಡಾಹೆ ಈ ಧಾತುಗಳು ಕಾಲಾಗಮಗಳಾದ ದದಪಕಾರಗಳು ಪರವಾಗಲು ಯಾವ ವಿಧಿಯನ್ನು ಹೊಂದುತ್ತವೆ ಸೂತ್ರ ಹೇಳಿ ಉದಾಹರಣೆ ಕೊಡು.

೯. ಮಾ ಧಾತುವಿನ ಸ್ವಾರ್ಥ ಭೂತದ ಯಾವತ್ತು ರೂಪಗಳನ್ನು ಕೊಡು. ಯಾವತ್ತು ಅಂದರೆ ಮೂರು ಪುರುಷ ಮೂರು ಲಿಂಗ ಎರಡೂ ವಚನ.

೧೦. "ನೀನರೆಸಂಖ್ಯೇಯದಸಂ। ಖ್ಯಾನದ ದೊರೆವೆತ್ತ ಭಾವದೇಕತೆಬಹುತ್ವ ॥ ಧೀನಂ ವಿಶೇಷಣಂ ಬಹು। ತಾನ ತಮೆ ವಿಶೇಷ್ಯಮೇಕ ವಚನಮಿಯಕ್ಕುಂ" ಈ ಸೂತ್ರಾರ್ಥವನ್ನು ಬರೆದು ಒಂದೊಂದು ವಿಧಿಗೆ ಒಂದೊಂದು ಉದಾಹರಣೆ ಕೊಡು.

೧೧. "ಗಳ" "ದಿರ" ಆಗಮುಗಳು ಎಂಥಾ ಶಬ್ದಗಳಿಗೆ ಪರವಾದರೆ ಆ ಶಬ್ದಾಗಮುಗಳ ನಡುವೆ ಬಿಂದು ವಿಧಿಯು ಬರುತ್ತದೆ. ಸೂತ್ರಗಳನ್ನು ಹೇಳು.

ಕಲಾಪತ್ರಕ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ
ಬಯಸುತ್ತಂ ಪ್ರತಿಮಾಸವಾದಿಗೊಲವಿಂದೀಪತ್ರಮುಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗಸುಗುಣಂ ತೋರಲ್ಕೆ ಕೈಕೊಂಬುಮೈ
ವಯಿಂ ಸೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥

ಪುಸ್ತಕ ೩ನೆಂ.] ಜೂನು ೧೮೬೮. [ಸಂಜಿಕೆ ೬.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ನಮ್ಮ ಜನರು ಬಹು ಪ್ರಾಚೀನಕಾಲದಿಂದ ಪೃಥ್ವಿ, ಅಪ್, ತೇಜ, ವಾಯು, ಆಕಾಶ ಈ ಪ್ರಕಾರ ಐದು ಸ್ವತಂತ್ರ ಮೂಲತತ್ವಗಳಿರುತ್ತವೆಂದು ತಿಳಿದಿದ್ದರು. ಅವರೆ ಇತ್ತಲಾಗಿ ವಾಯುವಿನಲ್ಲಿ ೩ ಜೇರೆ ಜೇರೆ ಮೂಲ ಪದಾರ್ಥಗಳಿರುತ್ತವೆಂಬ ಸಂಗತಿಯು ಸೂಲೆಯ ವಿದ್ಯಾರ್ಥಿಗಳಿಗೆ ಕೂಡ ತಾ ಗೊತ್ತಾಗಿರುವದು. ಈಗ ಅವರಲ್ಲಿ ಜೇರೆ ಮತ್ತೊಂದು ಮೂಲ ತತ್ವವು ಇರುವದೆಂದು ತಿಳಿವದೆ. ಅದಕ್ಕೆ ಆರ್ಗಾಂವ ಎನ್ನುತ್ತಾರೆ. ಕ್ಯಾವೆಂಡಿಷನೆಂಬ ಶೋಧಕನು ಪವೆಯಲ್ಲಿ ಆಕ್ಸಿಜನ ನೈಟ್ರೋಜನ ಕಾರಬೊನ್ನುಗಳಲ್ಲದೆ ೪ನೇದೊಂದು ತತ್ವವಿರುತ್ತದೆಂಬ ಸಂಗತಿಯನ್ನು ೧೭೮೫ರಲ್ಲಿ ಪ್ರಸ್ತಾಪಿಸಿದನು. ಆದರೆ ಆ ಮಾತು ಹಾಗೇ ಉಳಿಯಿತು. ಈಗ ಅವರ ವಿಚಾರವಾಗಿ ಈ ತತ್ವವನ್ನು ಶೋಧಿಸಿರುವರು. ಇದು ಪವೆಯಲ್ಲಿ ಬಹಳ ಸೂಕ್ಷ್ಮ ಪ್ರಮಾಣದಿಂದಿರುತ್ತದೆ. ಅಂದರೆ ೧೦೦ ಪಾಲು ನೈಟ್ರೋಜನ್ನಿಗೆ ಇದು ಸುಮಾರು ಪಾಲು ಮಾತ್ರ ಇರುವದಕ್ಕೆ

ಮುಂಬಯಿ ಹಾಯ ಕೋರ್ಟಿನ ಚೀಫ ಜಸ್ಟೀಸ ಸರ ಚಾರ್ಲಸ ಸಾರ್ಜಂಟ ಸಾಹೇಬರವರು ಪೆನಶನ ತೆಗಿದು ಕೊಂಡು ಸ್ವದೇಶಕ್ಕೆ ತೆರಳಿದರು. ಅವರು ಹೋಗುವಾಗ್ಗೆ ಎಲ್. ಎಲ್. ಬೀ. ಜನರ ಸಂಬಂಧದಿಂದ ಬಂದು ಹೊಸ ನಿಯಮವನ್ನು ಮಾಡಿರುವದೇನೆಂದರೆ:— "ಯಾವನಾದ ರೊಬ್ಬ ವಕೀಲನು ಬಂದೇ ಸವನೇ ಹತ್ತು ವರ್ಷ ವಕೀಲನ ಕೆಲಸ ಮಾಡಿ ಮುಂದೆಂ ವರ್ಷದ ವರೆಗೆ ಆ ಕೆಲಸವನ್ನು ನಡಿಸದೆ ಹೋದರೆ* ಅವನಿಗೆ ಪರೀಕ್ಷೆಯನ್ನು ತೆಗಿದು ಕೊಳ್ಳದೆ ಅಡ್ವೋಕೇಟನೆಂದು ತಿಳಿದು ಹಾಯ ಕೋರ್ಟಿನ ಮೂಲ ಶಾಖೆಯಲ್ಲಿ ಕೆಲಸ ಮಾಡಗೊಡಬೇಕು." ಈ ನಿಯಮದಿಂದ ೧೧ ವರ್ಷದ ಮೇಲಾದರೂ ಹಾಯ ಕೋರ್ಟಿನ ಮೂಲ ಶಾಖೆಯಲ್ಲಿ ನಮ್ಮ ಜನರಿಗೆ ಕೆಲಸ ಮಾಡಲಿಕ್ಕೆ ಬರಬಹುದು. ಇದು ಆನಂದದ ಸಂಗತಿಯೇ ಸರಿ.

ಬ್ರಿಟಿಶ ರಾಜ್ಯಕ್ಕೆ ಸೇರಿದ ಹಿಂದುಸ್ತಾನದ ಯಾವತ್ತಾ ಭಾಗಗಳೊಳಗಿನ ವಿದ್ಯಾ ಖಾತೆಗಳ ರಿಪೋರ್ಟುಗಳನ್ನು ಬಟ್ಟಿಗೂಡಿಸಿ ತಮ್ಮ ಅಭಿಪ್ರಾಯ ಸಹಿತವಾಗಿ ಇಂಡಿಯಾ ಸರಕಾರದವರು ಛಾಪಿಸಿದ ರಿಪೋರ್ಟು ಫೆಬ್ರುವರಿ ಸನ್ ೧೮೯೩ ಇಸವೀದು ಹೊರಬಿದ್ದಿದೆ ಅದರಿಂದ ತಿಳಿಯುವ ಸಂಗತಿಗಳು ಯಾವವೆಂದರೆ :—

---

* ಈ ಅವಧಿ ಯಾಕೆ ನಿಯಮಿಸಿರುವರೋ ತಿಳಿಯದು. ಅದರ ಅವರಲ್ಲಿ ಹೆಚ್ಚಿನ ಅಭ್ಯಾಸವನ್ನು ಮಾಡುವದು ಬೇರೆ ಬೇರೆ ಕೋರ್ಟುಗಳಲ್ಲಿ ಕೆಲಸ ಹ್ಯಾಗೆ ನಡಯುತ್ತದೆ ನೋಡುವದು ಮುಂತಾದ ಕೆಲಸಗಳ

ವಿಚಿತ್ರ ಧಾರಿಯುದರೊಳಗಿನ ಯಾವುದು? ಸ್ವಾ ಕಾಲದ ನಿಜಾಸ್ಥಿ ಎಲ್ಲಿ ಬಳಸುವ ಸಂಖ್ಯೆಗಳು ಸಮಾನ ಎಂದರ್ಥ.

ಯಾವ ಸ್ವಾ ಕಾಲದ ನಿಜಾಸ್ಥಿ ಎಲ್ಲಿ.

ನಿಜಾಸ್ಥಿಯಲ್ಲಿನ ಸಂಖ್ಯೆ.	ನಿಜಾಸ್ಥಿ-ಸಂಖ್ಯೆ	ನಿಜಾಸ್ಥಿಯಲ್ಲಿನ ಸಂಖ್ಯೆ.	ನಿಜಾಸ್ಥಿ-ಸಂಖ್ಯೆ
ಸಂಖ್ಯೆ ಸಂಖ್ಯೆ ಸಂಖ್ಯೆ	ಸಂಖ್ಯೆ ಸಂಖ್ಯೆ ಸಂಖ್ಯೆ	ಸಂಖ್ಯೆ ಸಂಖ್ಯೆ ಸಂಖ್ಯೆ	ಸಂಖ್ಯೆ ಸಂಖ್ಯೆ ಸಂಖ್ಯೆ

ಬ್ರಿಟಿಶ್ ಇಂಡಿಯದೊಳಗಿನ ವಿದ್ಯಾಖಾತೆಯ ಒಟ್ಟು ಖರ್ಚಿನ ವಿವರ:—

ಹೆಸರು.	೧೯೧೦—೧೧	೧೯೧೧—೧೨
	ರೂಪಾಯಿ.	ರೂಪಾಯಿ.
ಪ್ರತ್ಯಕ್ಷ ವಿದ್ಯಾಭ್ಯಾಸಕ್ಕೆ ...	೨೯೦೪೯೩೪೪	೨೯೪೧೯೧೯೦೪
ಪ್ರೊಫೆಸನಲ್ ಕಾಲೇಜಗಳಿಗೆ ...	೬೯೩೬೪೨೩	೪೨೨೪೬೬
ಅಪ್ಪರ್ ಕಾಲೇಜಗಳಿಗೆ ...	೬೧೧೦೨೦೪	೬೨೧೩೯೩೪
ಮಧ್ಯಮ ರೀತಿಯ ಶಾಲೆಗಳಿಗೆ ...	೧೦೩೮೯೪೪೦	೧೦೨೪೬೨೧೪
ಕನಿಷ್ಠ ಪ್ರತಿಯ ಶಾಲೆಗಳಿಗೆ ...	೯೯೩೬೧೧೩೩	೧೦೪೩೨೯೬೩
ಟ್ರೇನಿಂಗ ಸ್ಕೂಲುಗಳಿಗೆ ...	೩೪೨೨೪೦	೩೦೨೨೪೩
ವಿಶೇಷ ಪ್ರತಿಯ ಶಾಲೆಗಳಿಗೆ ...	೧೧೩೧೨೦೪	೧೧೪೪೪೬೪
ಅಪ್ರತ್ಯಕ್ಷ (ಇತರ) ಖರ್ಚು ...	೩೩೧೧೪೩೩	೩೪೨೪೧೦೬
ಒಟ್ಟು ಖರ್ಚು ರೂಪಾಯಿ ...	೩೧೩೩೬೨೪೩	೩೨೨೬೬೩೦೩

ಮೇಲಿನ ಕೋಷ್ಟಕದೊಳಗೆ ತೋರಿಸಿದಂತೆ ಹಿಂದುಸ್ಥಾನದಲ್ಲಿ ವಿದ್ಯಾಖಾತೆಯ ಒಟ್ಟು ಖರ್ಚು ೩೨೨೬೬೩೦೩ ರೂಪಾಯಿ ಇರುತ್ತದೆ. ಇದರೊಳಗೆ ಖುದ್ದ ಸರಕಾರಕ್ಕೆ ಸುಮಾರು ೪೬,೪೦೪೪೪೪ ರೂಪಾಯಿ ಮಾತ್ರ ಖರ್ಚು ಬೀಳುತ್ತದೆ. ನಮ್ಮ ದೇಶದ ಒಟ್ಟ ಕಂದಾಯವು ಸುಮಾರು ೪೩ ಕೋಟಿ ರೂಪಾಯಿ ಇರುತ್ತದೆ. ಅಂದರೆ ಕಂದಾಯದ ಸುಮಾರು $\frac{1}{100}$ ನೇ ಪಾಲು ವಿದ್ಯಕ್ಕೆ ಖರ್ಚು ಮಾಡಿದಂತೆ ಆಯಿತು! ಆದರೆ ಇಂಗ್ಲಂಡದಲ್ಲಿ ಕಂದಾಯದ $\frac{1}{5}$ ನೇ ಪಾಲು ವಿದ್ಯಕ್ಕೆ ಖರ್ಚು ಆಗುತ್ತದೆ

ಬ್ರಿಟಿಶ್ ಇಂಡಿಯದೊಳಗೆ ೧೦೪೯೧೬೪೪೩ ಗಂಡಸರೂ, ೧೦೪೬೧೬೪೦೬ ಹೆಂಗಸರೂ ಕೂಡಿ ಒಟ್ಟಿಗೆ ೨೯೨೪೩೪೪೯೦೪ ಜನಸಂಖ್ಯೆಯುಂಟು. ಇನ್ನು ಜನಸಂಖ್ಯೆ ನೂರು ಇದ್ದರೆ, ಅವರಲ್ಲಿ ಸಾಧಾರಣವಾಗಿ ಹದಿನೈದು ಮಂದಿ ಸಾಲಗೆ ಹೋಗುವ ವಯಸ್ಸಿನವರಿರುತ್ತಾರೆಂದು ಗೊತ್ತು ಮಾಡಲ್ಪಟ್ಟಿದೆ.

ಈ ಲೆಕ್ಕಾಚಾರದಿಂದ ನೋಡಿದರೆ ಶಾಲೆಗೆ ಹೋಗುವ ವಯಸ್ಸಿನ ಬಿಟ್ಟ ಗಂಡು ಹುಡುಗರಷ್ಟು ನೂರಕ್ಕೆ ೬೦.೪೦ ಮಂದಿ ಶಾಲೆಯಲ್ಲಿ ಅಭ್ಯಾಸ ಮಾಡುತ್ತಾರೆಂದು ತಿಳಿಯುತ್ತದೆ. ಹೆಣ್ಣು ಹುಡುಗರ ಸಂಬಂಧದಿಂದ ಈ ಪ್ರಮಾಣವು ನೂರಕ್ಕೆ ೨೦.೧೯ ಮಾತ್ರ ಹೊರಡುತ್ತದೆ. ಇದರಿಂದ ಸ್ತ್ರೀ ಶಿಕ್ಷಣವು ನಮ್ಮ ದೇಶದಲ್ಲಿ ಎಷ್ಟು ಹಿಂದೆ ಇರುತ್ತದೆಂಬುದು ಸ್ಪಷ್ಟವಾಗುತ್ತದೆ. ಗಂಡು ಹೆಣ್ಣು ಹುಡುಗರ ಸಂಖ್ಯೆಗಳನ್ನು ಕೂಡಿಸಿ ಬಿಟ್ಟಗೆ ಸರಾಸರಿ ತೆಗೆದರೆ, ಈ ಪ್ರಮಾಣವು ನೂರಕ್ಕೆ ೧೧.೬೩ ಹೊರಡುತ್ತದೆ. ಇದರಿಂದ ನೂರು ಹುಡುಗರಲ್ಲಿ ೧೧ ಮಂದಿ ಓದಬಲ್ಲ ಕಲಿಯುವರು, ೮೯ ಹುಡುಗರು ಅಕ್ಷರ ಕೂಸ್ಯರು ಎಂದು ಸ್ಪಷ್ಟವಾಗುತ್ತದೆ.

ನಮ್ಮ ದೇಶದೊಳಗೆ ಶಾಲೆಗೆ ಹೋಗುವ ಬಿಟ್ಟ ವಿದ್ಯಾರ್ಥಿಗಳ ಜಾತಿಧರ್ಮವನ್ನು ಅನುಲಕ್ಷಿಸಿ ಸರ್ಕಾರದವರು ಕೊಡಿಸಿರುವ ಲೆಕ್ಕಗಳು ಹಿಂದೂ ಜಾತಿಯ ವಿದ್ಯಾರ್ಥಿಗಳು ೮೨.೩೦ ಮುಸಲ್ಮಾನರು ೯೦.೫೦, ಯುರೋಪಿಯನ್ನರು ಮತ್ತು ಯುರೇಜಿಯನ್ನರು ೮೯.೫೦. ನೇಟಿವ್ ಕ್ರಿಶ್ಚಿಯನ್ನರು ೯೯೪೦ ಇತರ ಧರ್ಮದವರು ೫೦೬೦ ಇರುತ್ತಾರೆ.

ಇವರಿಂದ ಯುರೋಪಿಯನ್ನ ಯುರೇಜಿಯನ್ನರು ವಿದ್ಯೆಯಲ್ಲಿ ಮುಂದರಿಸಿರುತ್ತಾರೆಂತಲೂ, ಅವರ ತರುವಾಯ ಮುಸಲ್ಮಾನ ಜನರ ಸಂಖ್ಯೆಯು ಹೆಚ್ಚಿರುತ್ತದೆಂತಲೂ ಉಳಿದ ಹಿಂದು ಮುಂತಾದ ಜಾತಿಯವರು ವಿದ್ಯೆಯ ಕೆಲಸದಲ್ಲಿ ಜನ ಸಂಖ್ಯೆಯ ಮಾನದಿಂದ ಹಿಂದೆ ಇರುತ್ತಾರೆಂತಲೂ ಸ್ಪಷ್ಟವಾಗಿ ತೋರುತ್ತದೆ. ಹಿಂದು ಎಂಬ ಹೆಸರಿಗೆ ಸರಿಯಾಗಿ ನಮ್ಮ ಜನರು ಹಿಂದೆ ಉಳಿದದ್ದು ಆಶ್ಚರ್ಯವೇ?

ವಿದ್ಯಾ ಖಾತೆಯ ಯಾವತ್ತು ಖರ್ಚಿನೊಳಗಿಂದ ಫೀಜಿನ ರೂಪಾಯಿ ವರ್ಗಣೆ ಮುಂತಾದ ಬಾ

ಬುಗೆಳಿಂದ ಬರುವ ಉತ್ಪನ್ನ ೬೪೧೦೦೦೦ ರೂಪಾಯಿ ಸರಕಾರದಪೆ ೧ ಕೊಟ್ಟ ೪೯೪೦೦೦೦೦ ರೂಪಾಯಿ ಪಜಾ ಹೋಗಲಾಗಿ, ಲೋಕಲ ಫಂಡಿಗೆ ೧೧೧೦೦೦೦ ರೂಪಾಯಿ; ಮ್ಯುನಿಸಿಪಾಲಿಟಿಗೆ ೧೪೩೦೦೦೦ ರೂಪಾಯಿ ಖರ್ಚು ಬಿದ್ದಿರುತ್ತದೆ. ಇದರಿಂದ ಮ್ಯುನಿಸಿಪಾಲಿಟಿ ಮತ್ತು ಲೋಕಲ ಬೋರ್ಡುಗಳು ಪ್ರಾಥಮಿಕ ಶಿಕ್ಷಣದ ಬಗ್ಗೆ ತಕ್ಕಷ್ಟು ಹಣ ವೆಚ್ಚ ಮಾಡುವದಿಲ್ಲೆಂದು ಗವ್ಹರ್ನರ ಜನರಲ್ ಸಾಹೇಬರು ತಮ್ಮ ಅಭಿಪ್ರಾಯವನ್ನು ಬರೆದಿರುತ್ತಾರೆ. ಮ್ಯುನಿಸಿಪಾಲಿಟಿಯವರು ಬಹುತರವಾಗಿ ಈ ಅಭಿಪ್ರಾಯವನ್ನು ಲಕ್ಷ್ಯಕ್ಕೆ ತಂದು ಹೆಚ್ಚು ಹಣವನ್ನು ಸ್ಕೂಲ ಫಂಡಿಗೆ ಕೊಟ್ಟು ಪ್ರಾಥಮಿಕ ಶಿಕ್ಷಣದ ಮಾಸ್ತರರಸ್ಥಿತಿಯನ್ನು ತೀವ್ರವೇ ಸುಧಾರಿಸುವರೆಂದು ನೆನಸುತ್ತೇವೆ.

ಚೀನ ಜಪಾನಗಳ ಯುದ್ಧವು ಸಮಾಪ್ತವಾಗಿ ೮ ರಾಷ್ಟ್ರಗಳ ನಡುವೆ ಒಪ್ಪಂದವಾಯಿತು. ೮ ಒಪ್ಪಂದದಂತೆ ಫೊರಮೊಸಾ ದ್ವೀಪವೂ ಪೇಕಿನ ಶಹರದ ಈಶಾನ್ಯಕ್ಕಿರುವ ಲೇವೊಟೆಂಗ ದ್ವೀಪಕಲ್ಪವೂ ಜಪಾನದವರ ವಶವಾದವು. ಇದಲ್ಲದೆ ವ್ಯಾಪಾರಕ್ಕೆ ಅನುಕೂಲವಾದ ಅನೇಕ ಹಕ್ಕುಗಳನ್ನು ಜಪಾನದವರು ಚೀನದವರ ಕಡಿಯಿಂದ ಸಂಪಾದಿಸಿದರು. ಆದರೆ ಈ ಒಪ್ಪಂದವು ರಶಿಯಾ, ಫ್ರಾನ್ಸ ಮತ್ತು ಜರ್ಮನಿಯವರ ಮನಸ್ಸಿಗೆ ಬಂದಿಲ್ಲ. ಆದದರಿಂದ ಇದೆಲ್ಲ ಜಪಾನದವರಿಗೆ ದಕ್ಕುತ್ತದೋ ಇಲ್ಲವೋ ಎಂಬ ಸಂಶಯವಿರುತ್ತದೆ.

ವೇದಾಂಗ.

ವೇದಾಂಗಗಳು ಆರು ಇರುತ್ತವೆ. ಅದರಿಂದಲೇವೇದಕ್ಕೆ 'ಷಡಂಗವೇದ' ವೆಂದೆನ್ನುತ್ತಾರೆ. ಆ ಅಂಗಗಳು ಯಾವವೆಂದರೆ:— (೧) ಪಾಣಿನಿಕೃತ ಶಿಕ್ಷಾ. (೨) ವ್ಯಾಕರಣ. (೩) ಯಾಸ್ಕ ಕೃತ ನಿರುಕ್ತ ಅಥವಾ ವೇದ ಶಬ್ದಗಳ ಕೋಶ. (೪) ಪಿಂಗಲ ಕೃತ ಛಂದಸ್ಸು (೫) ಗರ್ಗ ಮೊದಲಾವ ಹದಿನೆಂಟು ಋಷಿಗಳು ಮಾಡಿದ ಸಂಹಿತಾ—ಜ್ಯೋತಿಃಶಾಸ್ತ್ರ. (೬) ಕಲ್ಪಶಾಸ್ತ್ರ. ಈ ಆರು, ವೇದಕ್ಕೆ ಅನುಕ್ರಮವಾಗಿ (೧) ನಾಸಿಕ, (೨) ಮುಖ, (೩) ಕರ್ಣ, (೪) ಪಾದ, (೫) ನೇತ್ರ, (೬) ಕರ ಮುಂತಾದ ಅವಯವಗಳಾಗಿರುತ್ತವೆ. ಈ ಸಂಬಂಧದಿಂದ ಪಾಣಿನಿಯ ಶಿಕ್ಷೆಯಲ್ಲಿ ಕೆಳಗಿನಶ್ಲೋಕವಿದೆ.

छन्दः पादौतुवेदस्य हस्तौ कल्पोथ पठ्यते ।
ज्योतिषामयनंचक्षुः निरुक्तं श्रोत्रमुच्यते ॥
शिक्षाघ्राणंतु वेदस्य मुखं व्याकरणं स्मृतम् ।
तस्मात्सांगमधीत्यैव ब्रह्मलोके महीयते ॥१॥

ಎಲ್ಲ ವೇದಗಳ ಸಂಬಂಧದ ಸೂತ್ರಗಳಿಗೆ ಸಮುದಾಯದಿಂದ ಸಾಧಾರಣವಾಗಿ ಕಲ್ಪ ಶಾಸ್ತ್ರವೆನ್ನುತ್ತಾರೆ; ಆ ಕಲ್ಪ ಶಾಸ್ತ್ರವು ವೇದದ ಬಂದು ಅಂಗವಿರುವದೆಂದು ಹೇಳಲ್ಪಟ್ಟದೆ. ಇವರಂತೆ ಅತ್ಯಂತ ಪ್ರಾಚೀನತ್ವದಿಂದ ಅಥವಾ ಶ್ರೇಷ್ಠತ್ವದಿಂದ ವೇದ ತುಲ್ಯವಾದ ಇನ್ನೂ ಕೆಲವು ಗ್ರಂಥಗಳುಂಟು. ಅವುಗಳಿಗೆ ಉಪವೇದವೆನ್ನುತ್ತಾರೆ. ಈ ಉಪವೇದಗಳು ನಾಲ್ಕು ಇರುತ್ತವೆ. ಅವು ಯಾವವೆಂದರೆ:—

ಉ ಪ ವೇ ದ.

೧ ಧನ್ವಂತರಿ ಪ್ರಣೀತ—ಆಯುರ್ವೇದ.
೨ ವಿಶ್ವಾಮಿತ್ರ ಪ್ರಣೀತ—ಧನುರ್ವೇದ.
೩ ಭರತ ಮುನಿ ಪ್ರಣೀತ—ಗಂಧರ್ವವೇದ.
೪ ಅನೇಕ ಮುನಿ ಪ್ರಣೀತ—ಅರ್ಥಶಾಸ್ತ್ರ ಅಥವಾ ವೇದ.

ದರ್ಶನಗಳು.

ದರ್ಶನವೆಂದರೆ ನೋಡತಕ್ಕ ಪದ್ಧತಿಯು. ಎಲ್ಲ ವಿಚಾರ ವುಳ್ಳ ಮನುಷ್ಯಜಾತಿಗೆ ಅತ್ಯಂತ ಮಹತ್ವವಾದ್ದು ಅಧ್ಯಾತ್ಮ ವಿಷಯವು. ಇದರ ಬಗ್ಗೆ ಬೇರೆ ಬೇರೆ ಋಷಿಗಳು ಬೇರೆ ಬೇರೆ ತರದಿಂದ ವಿಚಾರ ಮಾಡಿರುತ್ತಾರೆ. ಅಂದರೆ ಒಂದೇ ಅತ್ಯಂತ ಗೂಢತತ್ವದ ಕಡಿಗೆ ಬೇರೆ ಬೇರೆ ದೃಷ್ಟಿಯಿಂದ ನೋಡಿ ತಮ್ಮ ಅನುಭವ ವಿಚಾರಗಳನ್ನು ಬರದಿಟ್ಟಿರುತ್ತಾರೆ. ಈ ಗ್ರಂಥಗಳಿಗೆ ದರ್ಶನಗಳೆಂದೆನ್ನುವರು. ಇವು ಆರು ಇರುತ್ತವೆ.

೧. ಕಪಿಲ ಕೃತ—ಸಾಂಖ್ಯ ದರ್ಶನ.
೨. ಪತಂಜಲಿ ಕೃತ—ಯೋಗ ದರ್ಶನ.
೩. ಗೌತಮ ಕೃತ—ನ್ಯಾಯ ದರ್ಶನ.
೪. ಕಣಾದ ಕೃತ—ವೈಶೇಷಿಕ ದರ್ಶನ.
೫. ಜೈಮಿನಿ ಕೃತ—ಪೂರ್ವ ಮೀಮಾಂಸಾ ದರ್ಶನ.
೬. ವ್ಯಾಸ ಅಥವಾ ಬಾದರಾಯಣ ಕೃತ ಉತ್ತರ ಮೀಮಾಂಸಾ ಅಥವಾ ವೇದಾಂತ ದರ್ಶನ.

ಈ ಆರು ದರ್ಶನಗಳು ಬಹಳ ಪ್ರಾಚೀನ ಕಾಲದವು. ಇವುಗಳ ಹೊರ್ತು ರಾಮಾನುಜ, ಪಾಶುಪತ, ಮಧ್ವ ಮುಂತಾದ ಹೊಸ ದರ್ಶನಗಳು ಅನೇಕವಿರುತ್ತವೆ.

ಸ್ಮೃತಿ.

ಸಮಾಜದಲ್ಲಿ ಒಬ್ಬನು ಮತ್ತೊಬ್ಬನ ಕೂಡ ಹ್ಯಾಗೆ

ನೆಡೆಯಬೇಕು; ಪ್ರತಿ ಒಬ್ಬನ ಆಚರಣವು ಹ್ಯಾಗಿರಬೇಕು, ಎಂಬದನ್ನು ಕುರಿತು ಕೆಲವರು ಋಷಿಗಳು ನಿಯಮಗಳನ್ನು ಮಾಡಿರುವರು. ಅವರೇ ಧರ್ಮಶಾಸ್ತ್ರಕಾರರು. ಅವರು ಹಾಕಿ ಕೊಟ್ಟ ನಿಯಮಗಳು ಧರ್ಮ ಶಾಸ್ತ್ರವೆಂಬ ಹೆಸರಿನಿಂದ ಪ್ರಸಿದ್ಧವಿರುತ್ತವೆ. ಇವುಗಳಿಗೆ ಸ್ಮೃತಿ ಎಂತಲೂ ಹೆಸರುಂಟು. ಸ್ಮೃತಿಕಾರರಲ್ಲಿ ಇಪ್ಪತ್ತು ಜನ ಋಷಿಗಳು ಮುಖ್ಯ; ಅವರ ಸ್ಮೃತಿಗಳು ಬಹು ಮಾನ್ಯವಿರುತ್ತವೆ. ಕೆಳಗಿನ ಎರಡು ಶ್ಲೋಕಗಳಲ್ಲಿ ಈ ಋಷಿಗಳ ಹೆಸರುಗಳುಂಟು.

मन्वात्रिविष्णुहारीतयाज्ञवल्क्योऽशनोऽङ्गिराः
यमापस्तम्बसंवर्ताः कात्यायनबृहस्पती ॥
पराशरव्यासशंखलिखिता दक्षगौतमौ ।
शातातपो वशिष्ठश्च धर्मशास्त्रप्रयोजकाः ॥

(೧) ಮನು, (೨) ಅತ್ರಿ (೩) ವಿಷ್ಣು, (೪) ಹಾರೀತ, (೫) ಯಾಜ್ಞವಲ್ಕ್ಯ, (೬) ಉಶನ, (೭) ಅಂಗಿರಾ (೮) ಯಮ, (೯) ಆಪಸ್ತಂಬ, (೧೦) ಸಂವರ್ತ, (೧೧) ಕಾತ್ಯಾಯನ, (೧೨) ಬೃಹಸ್ಪತಿ, (೧೩) ಪರಾಶರ, (೧೪) ವ್ಯಾಸ, (೧೫) ಶಂಖ, (೧೬) ಲಿಖಿತ, (೧೭) ದಕ್ಷ, (೧೮) ಗೌತಮ, (೧೯) ಶಾತಾತಪ, (೨೦) ವಶಿಷ್ಠ. ಇವರು ಧರ್ಮಶಾಸ್ತ್ರಗಳ ಮುಖ್ಯ ಉತ್ಪಾದಕರಿರುತ್ತಾರೆ. ನಾರದಾದಿ ಅನೇಕ ಮುನಿಗಳು ಧರ್ಮ ಗ್ರಂಥಗಳನ್ನು ಬರೆದಿರುವರು.

THE MORAL TRAINING OF CHILDREN.

ಮಕ್ಕಳ ನೀತಿ ಶಿಕ್ಷಣ—ವಿವರಣೆ.

(೧೧೪ನೇ ಪುಟದಿಂದ ಮುಂದೆ ಸಾಗಿದ್ದು.)

ತಾಯಂದಿರ ವರ್ತನೆಯು—ಚಿಕ್ಕ ಮಕ್ಕಳು ಎಲ್ಲ ಕೆಲ

ಸಗಳಲ್ಲಿ ತಮ್ಮ ತಾಯಂದಿರನ್ನು ಅನುಕರಿಸುತ್ತವೆ. ಆದ ದರಿಂದ ತಾಯಂದಿರ ಗುಣಗಳೇ ಮಕ್ಕಳಿಗೆ ಹತ್ತುವವು. ಹುಡುಗನಿಗೆ ಬಳ್ಳೀ ನಡತೆಯು ಸಾವಿರ ನೀತಿಗಳನ್ನು ಕಲಿ ಸುವದಕ್ಕಿಂತ ತಾಯಿಯ ಪ್ರತ್ಯಕ್ಷ ಉದಾಹರಣವೇ ಬಹಳ ಪ್ರಯೋಜನಕರವಾಗಿರುವದು. ತಾಯಂದಿರು ಶಿಟ್ಟಿಗೇಳದೆ ಯಾವಾಗಲೂ ಆನಂದ ಉಳ್ಳವರಾಗಿಯೂ, ನಗೆಮೋರೆಯವರಾಗಿಯೂ ಇದ್ದರೆ ಸಾಕು; ಮಕ್ಕಳಲ್ಲಿ ಬಳ್ಳೀ ಸ್ವಭಾವವು ನೆಲೆಗೊಳ್ಳುವದು.

ತಾಯಂದಿರು ಯಾವಾಗಲೂ ಮೆಲ್ಲಗೆ ಮಂಜುಳ ಸ್ವರದಿಂದ ಮಾತಾಡುತ್ತಿರಬೇಕು. ಧ್ವನಿಯು ದೊಡ್ಡದಾದಂತೆ ಶಿಟ್ಟು ಬಲಪಡುವದು. ಕೆಲವು ಮನೆತನಗಳಲ್ಲಿ ಪ್ರಾತಃಕಾಲದಿಂದ ಸಾಯಂಕಾಲದ ವರೆಗೆ ಕರ್ಕಶವಾದಂಥ ಮರ್ಮಭೇದಕವಾದಂಥ ಕಟು ಶಬ್ದಗಳೇ ಕೇಳಬರುತ್ತವೆ. ತಾಯಿಯು ಕಿತ್ತಾಡಿಕೊಡುತ್ತಾಳೆ, ಮಕ್ಕಳು ಅದನ್ನು ತೀಡುತ್ತವೆ. ಈ ಗುಣವು ಅವರಲ್ಲಿ ಸ್ಥಿರವಾಗಿ ನಿಲ್ಲುವದು. ಇಂಥಲ್ಲಿ ಮಕ್ಕಳಿಗೆ ಯಾವಾಗಲೂ ಶಿಟ್ಟು ಮಾಡಿಸಿಕೊಳ್ಳುವೆವೆಂಬ ಅಂಜಿಕೆಯು ಇದ್ದೇಇರುತ್ತದೆ; ಆದರೆ ತಾಯಂದಿರು ಮೆಲ್ಲಗೆ ಸ್ಥಿರಧ್ವನಿಯಿಂದ ಮಾತಾಡುವಂಥ ಮನೆಗಳಲ್ಲಿ ಕಣ್ಣಸನ್ನೆ ಬಾಯಿಸನ್ನೆಯಿಂದಲೇ ಮಕ್ಕಳು ತಾಯಂದಿರು ಹೇಳುವ ಮಾತನ್ನು ತಿಳಕೊಂಡು ಕೂಡ್ಲೆ ಹೇಳಿದಂತೆ ಮಾಡುವರು.

ಹೆಂಗಸರು ಬೇರೆಯವರು ಎಷ್ಟು ಛೇಡಿಸಿದಾಗ್ಯೂ ಮನಸ್ಸಿನ ಸಮತೆಯನ್ನು ಕೆಡಗೊಡಬಾರದು. ಹುಡುಗರಾಗಲಿ, ಆಳುಗಳಾಗಲಿ ಕೆಟ್ಟ ರೀತಿಯಿಂದ ನಡಿದರೆ ತಮ್ಮ ಪ್ರೀತಿಯ ಮುಖಮುದ್ರೆಯಿಂದ ತೋರಿಸಬೇಕಲ್ಲದೆ ಶಿಟ್ಟಗೆವ್ವ ದೊಡ್ಡ ಧ್ವನಿಯಿಂದ ಬೈದಾಡಲಿಕ್ಕೆ ಹತ್ತಬಾರದು. ಶಿಡುಕುತನ, ಉರಿಮೂರಿತನ, ಚಂಡಿತನಗಳ

ನ್ನು ಬಿಟ್ಟಿಪ್ಪಕ್ಕೆ ಕೆಲಸವಾಗದು, ಮುಖವ್ಯವಾ
ಗಲೂ ಪ್ರಸನ್ನವಾಗಿರಬೇಕು. ಹುಡುಗರು ಆಡುವಾಗ
ನಡುವೆ ತಾಯಿಯು ಕಡಿಗೆ ನೋಡಿದರೆ ಅವಳ ಮುಖ
ದಲ್ಲಿ ಮುಗುಳು ನಗೆಯು ತಾಗೊಳಿಸಬೇಕು. ಚಿಕ್ಕ
ಬಾಲಕನು ತನ್ನ ತಾಯಿಯ ತೊಡೆಯಮೇಲೆ ಕೂಡಲೆ
ಕ್ಕೂ ಚಲ್ಲಾಟದಿಂದ ಅವಳ ಕೊರಳ ಸುತ್ತಲೂ ತನ್ನ ನ
ಣ್ಣಿ ಕೈಗಳನ್ನು ಹಾಕಲಿಕ್ಕೂ ಉಲ್ಲಾಸಪಡಬೇಕು. ಮು
ಡುಗರು ಸಾಲೆಯಿಂದ ಇಲ್ಲವೆ ಆಟದಿಂದ ಬಂದಕೂಡಲೆ ತಾ
ಯಿಯು ಅವರನ್ನು ಅನಂದದ ವೃಷ್ಟಿಯಿಂದಲೂ ಶಬ್ದಗ
ಳಿಂದಲೂ ಉಮೇದಗೊಳಿಸಬೇಕು.

ಶಿಶುಗಳು ಮಾತಾಡಲರಿಯುವು. ಅವಕ್ಕೆ ಅಳುವದೊಂ
ದೇ ಗೊತ್ತು. ಅವು ಅಳಹತ್ತಿದ ಕೂಡಲೇ ಕಾರಣವ
ನ್ನು ತಿಳಕೊಳ್ಳದೆ ಎಷ್ಟೋ ತಾಯಂದಿರು ಮೊಲೆಯನ್ನು
ಣಿಸುವರು. ಶಿಶುಗಳು ಹಸಿವೆಗಾಗಿಯೇ ಅಳುವವೆಂಬ
ನಿಯಮವಿಲ್ಲ. ಹೆಚ್ಚು ಉಂಡು ಅಗುವ ಅಸಹ್ಯಾಧಾನದಿಂ
ದಲೂ ಅಳಬಹುದು. ಅಂಥ ಪ್ರಸಂಗದಲ್ಲಿ ಮೊಲೆ ಉಣ
ಸುವದರಿಂದ ಅಪಾಯ ತಪ್ಪದು. ಶಿಶುಗಳು ಚಳಿಯ ಕಾ
ರಣದಿಂದ, ಇಲ್ಲವೆ ಗಮ್ಮನೆ ಕುದಿಸುವದರಿಂದ, ಇಲ್ಲವೆ
ನೋವಿನಿಂದ, ಇಲ್ಲವೆ ಭೀತಿಯಿಂದ ಅಳಬಹುದು. ಆದ್ದ
ರಿಂದ ಶಿಶುಗಳು ಅಳಹತ್ತಿದಾಗ ಅವರ ಕಾರಣವನ್ನು ಗೊ
ತ್ತು ಹಚ್ಚಿ ಅವನ್ನು ದೂರ ಮಾಡುವದೇ ಬುದ್ಧಿಲಕ್ಷಣವು
ಶಿಶುಗಳಿಗೆ ಪೀಡಿಸುವಂಥ ಹೊಟ್ಟಬೇನೆ, ಚಳಿ ಉಷ್ಣತೆ
ಮುಂತಾದ ಸಂಗತಿಗಳನ್ನು ಅವು ಅಳುವದಕ್ಕೆ ಪೂರ್ವದಲ್ಲಿ
ಯೇ ತಿಳುಕೊಂಡು ಅವುಗಳನ್ನು ದೂರ ಮಾಡುವದರಿಂದ
ಬಹಳ ಪ್ರಯೋಜನ ಉಂಟು. ಅಂಗಿಯಲ್ಲಿ ಏನಾದರೂ
ಶಿಕ್ಕು ಬತ್ತಹತ್ತಿದರೆ ಅವು ಅಳುವವು. ಆ ಕಾಲಕ್ಕೆ ಆ
ದನ್ನು ಹುಡಿಕಿ ತೆಗಿದು ಸುಖವಾಗುವಂತೆ ಮಾಡಿದರೆ ಅವು

ಸುಮ್ಮನಾಗುವವು. ಇದೇ ಮೇರೆಗೆ ನಳಗಳು ಉಬ್ಬಿ ಅ
ಕಮ್ಮಾನದಿಂದ ಬಳಲಹತ್ತಿದಾಗ ತಾಯಂದಿರು ಅವನ್ನು
ಸೊಲಮೇಲೆ ಹಾಕಿಕೊಂಡು ಚಪ್ಪರಿಸಿದರೆ ಸುಖಪಡಿಯು
ವವು. ಇಂಥ ಪ್ರಸಂಗದಲ್ಲಿ ಎಷ್ಟು ಮೊಲೆ ಉಣಿಸಿದರೂ
ಬೇರೆ ಉಪಾಯದಿಂದ ಶ್ರಮಬಟ್ಟು ಸಮಾಧಾನಗೊಳಿಸಿದ
ರೂ ಅವು ಸುಮ್ಮನಾಗದೆ ತಾಯಿಮಕ್ಕಳಿಗೂ ಶ್ರಮವೇ
ಹೆಚ್ಚಾಗುವದಲ್ಲದೆ ಸುಖವಾಗಲರಿಯದು.

ಕೆಲವರು ತಾಯಂದಿರೂ ದಾಯಿಗಳೂ ಶಿಶುಗಳು ಅಳ ಹ
ತ್ತಿದಕೂಡಲೆ ದೊಡ್ಡ ಶಬ್ದ ಮಾಡಿ ಅವುಗಳನ್ನು ಗಪ್ಪ
ಮಾಡಲಿಕ್ಕೆ ಯತ್ನಿಸುತ್ತಾರೆ, ಇದು ಸರಿಯಲ್ಲ. ಶಿಶುಗ
ಳು ಅವರನ್ನು ಅನುಕರಿಸಿ ಹೆಚ್ಚಿಚ್ಚು ದೊಡ್ಡ ಧ್ವನಿಯಿಂದ
ಅಳಹತ್ತುವವು. ಸಣ್ಣ ಶಬ್ದದಿಂದ ಸಮಾಧಾನಗೊಳಿಸಲಿ
ಕ್ಕೆ ಯತ್ನಿಸುವದು ವಿಹಿತವು. ಶಿಶುಗಳನ್ನು ತೂರುವದೂ
ಭರದಿಂದ ಚಪ್ಪರಿಸುವದೂ ಎಳಿದಾಡುವದೂ ಸರಿಯಲ್ಲ.

ಹುಡುಗನ ಆರೋಗ್ಯವನ್ನು ಬಹಳ ಜತನದಿಂದ ಕಾ
ಯುತಕ್ಕದ್ದು. ಆರೋಗ್ಯವೇ ಆನಂದವೃತ್ತಿಯ ಮೂಲವು.
ಬೇನೆಕೊಳಕರಾದ ಹುಡುಗರು ಒಳ್ಳೇ ಸ್ವಭಾವದವರಾ
ಗುವದು ಅಪರೂಪ.

ಅಳುವ ಚಟವು ಮಕ್ಕಳಿಗೆ ಹ್ಯಾಗೆ ಪತ್ತುತ್ತದೆಂಬದ
ನ್ನು ಕುರಿತು;--ಮಕ್ಕಳಿಗ ಮೇಲೆ ಮೇಲೆ ಎರಿಯುವ ಸಾಂ
ಪ್ರದಾಯವು ನಮ್ಮಲ್ಲಿ ಉಂಟು. ಅದರಿಂದ ಹುಡುಗರಿಗೆ
ಏನೂ ಅಪಾಯವಾಗದೆ ಆರೋಗ್ಯಕ್ಕೆ ಸಹಾಯವಾಗುವ
ದೆಂಬದು ನಿಜವು ಆದರೆ ಸುಖದಿಂದ ಎರಕೊಳ್ಳುವಂಥ ಹು
ಡುಗರ ಸಂಖ್ಯೆಯು ಬಹು ಕಡಿವು ಎರಕೊಳ್ಳುವಾಗ ಅ
ತ್ತು ಕರೆವು ತಾಯಂದಿರಿಗೆ ಪೀಡಿಸುವಂಥ ಹುಡುಗರ ಸಂಖ್ಯೆ
ಯೇ ಹೆಚ್ಚು, ಇದಕ್ಕೆ ತಾಯಂದಿರೇ ಕಾರಣ. ಕೆಲವರು,
ಮಕ್ಕಳು ಅಳಹತ್ತಿದ ಕೂಡಲೆ ಎರಿಯುವದನ್ನೇ ಬಿಟ್ಟು

ಬಿಡುವರು. ಕೆಲವರು ಬತ್ತಾಸು ಮೊದಲಾದ ಪದಾರ್ಥಗಳನ್ನು ತೋರಿಸಿ ಮೋಸಮಾಡಿ ಎರಿಯಲಿಕ್ಕೆ ಹಾಕುವರು; ಅದರಿಂದ ಪ್ರೀತಿಯಿಂದ ಮಕ್ಕಳನ್ನು ಎರೆದರೆ ಈ ಪ್ರಕಾರದ ದೋಷವು ತಪ್ಪುವದು.

ಒಂದು ಪ್ರಸಂಗದಲ್ಲಿ ಒಬ್ಬ ಹೆಣ್ಣು ಮಗಳು ಕರ್ಜೀಕಾಯಿಗಳನ್ನು ಮಾಡುತ್ತ ಕುಳಿತಿದ್ದಳು. ಆಗ ಅವಳ ಮಗನು ಹತ್ತರ ಬಂದು ತನಗೆ ಒಂದು ಕೊಡು ಎಂದು ಬೇಡಿದನು. ಅದಕ್ಕೆ ಅವಳು 'ಸುಮ್ಮನಿರು, ಅವುಗಳನ್ನು ಬೇಡಬಾರದೆಂದು ಹೇಳಿದಳು. ಹುಡುಗನು ಸುಮ್ಮನಿರದೆ ಮತ್ತಿಷ್ಟು ಘಟ್ಟಯಾಗಿ 'ನನಗೆ ಒಂದು ಕೊಡು' ಎಂದು ಮತ್ತೇ ಬೇಡಿದನು. ಅವು ನಿನಗೆ ಶಿಗಲಿಕ್ಕೆಲ್ಲ ಸುಮ್ಮನೇ ಆಡಹೋಗು ಎಂದು ಅಕೆ ಹೇಳಿದಳು. ಹುಡುಗನು ತಿರಿಗಿ ದೊಡ್ಡ ಧ್ವನಿಯಿಂದ ತನಗೊಂದು ಕೊಡೆಂದು ಬೇಡಿದನು. ತಾಯಿಯು—ಎಂ ಸಾರೆ ಹೇಳಿದರೂ ನೀನು ಕೇಳಲೊಲ್ಲಿ, ನಿನಗೆ ಶಿಗಲಾತದು ಹೋಗು ಎಂದಳು. ಹುಡುಗನು ಅದನ್ನು ಲೆಕ್ಕಿಸದೆ ನೆಲದಮೇಲೆ ಬಿದ್ದು ಹೊಳ್ಳಾಡಿ ದೊಡ್ಡ ಧ್ವನಿಯಿಂದಬೇತಹತ್ತಿದನು. ತಾಯಿಯು ಇಂಥ ಕೆಡಿಗೇಡಿ ಪೋರನನ್ನು ಯಾರು ಎಂದೂ ಕಂಡಿರಲಿಕ್ಕಿಲ್ಲ ಎಂದು, ಇದನ್ನು ತೆಗಿದುಕೋ ಸುಮ್ಮನೇ ಹೋಗು ಎಂದು ಹೇಳಿ ಒಂದು ಕರ್ಜಿಕಾಯಿಯನ್ನು ಕೊಟ್ಟಳು. ಈ ಪ್ರಕಾರದ ನಡತೆಯಿಂದ ಹುಡುಗರಲ್ಲಿ ಅತ್ತರೆ ಬೇಕಾದದ್ದು ಶಿಗುವದೆಂಬ ಭಾವನೆಯು ಪುಟ್ಟುವದು ಆಶ್ಚರ್ಯವೇ? ಹಟದಿಂದ ಅಳುತ್ತನೆಂಬ ಕಾರಣದಿಂದಲೇ ಹುಡುಗರಿಗೆ ಯಾವದೊಂದು ಪದಾರ್ಥವನ್ನು ಕೊಡುವದು ಸರಿಯಲ್ಲ. ಹಾಡಿಕೆಯಾಗಿ ಪಟ ಮಾಡಿದರೆ ಬೇಡಿದ್ದನ್ನು ಕೊಡದೆ ಇರುವದೇ ವಿಹಿತವು. ಅಳುವದರಿಂದ ಏನೂ ಪ್ರಯೋಜನವಿಲ್ಲೆಂದು

ಹುಡುಗರು ಮನೆಗಂಡರೆ ಅವರು ಎಂದಿಗೂ ಅಳಲಿಕ್ಕಿಲ್ಲ. ಸುಮ್ಮನಾದರೆ ಬೇಕಾದ್ದನ್ನು ಕೊಡುತ್ತೇನೆಂದು ಆಶೆ ಹುಟ್ಟಿಸುವದೂ ಒಳ್ಳೇದಲ್ಲ. ಕಟ್ಟಕಟಿ ಮಾಡಿದರೆ ಬೇಡಿದ್ದು ಶಿಗುತ್ತದೆಂಬ ನಂಬಿಗೆಯನ್ನು ಹುಟ್ಟಿಗೊಡಬಾರದು. ಹುಡುಗರು ಏನಾದರೂ ಬೇಡಿದಕೂಡಲೆ ತಾಯಂದಿರು ಅದನ್ನು ಕುರಿತು ವಿಚಾರಿಸಿ ಕೊಡುವದಿದ್ದರೆ ಬೇಡಿದ್ದನ್ನು ಕೂಡಲೇ ಕೊಟ್ಟುಬಿಡಬೇಕು; ಕೊಡಬಾರದೆಂದಿದ್ದರೆ ಬಮ್ಮಲೇ ಖಂಡಿತವಾಗಿ ಕೊಡುವದಿಲ್ಲೆಂದು ಹೇಳಿಬಿಡಬೇಕು, ಮತ್ತು ಅದನ್ನು ಸರ್ವಥಾ ಕೊಡಬಾರದು. ಈ ಉಪಾಯವೇ ಬಹಳ ಹಿತಕರವಾದದ್ದು. ಇದರಿಂದ ತಾಯಂದಿರ ಗೋಳಾಟ ತಪ್ಪುವದಲ್ಲದೆ ಮಕ್ಕಳಿಗೂ ಕೆಟ್ಟ ಚಟ ಹತ್ತಲಾರದು.

ಕೆಲವರು ತಾಯಿತಂದೆಗಳು ನಗೆಚಾಟಿಕೆಯಿಂದ ಮಕ್ಕಳನ್ನು ಬಹಳ ಛೇಡಿಸುವರು. ಇದರಿಂದ ಮಕ್ಕಳಿಗೆ ತತ್ಕಾಲಕ್ಕೆ ಅಸಮಾಧಾನವಾಗುವದಲ್ಲದೆ ಅವರ ಸ್ವಭಾವದಲ್ಲಾದರೂ ಕೊಂಕು ಹುಟ್ಟುವದು.

SELECTIONS FROM THE KARNATIK GAZETTEER.

ಕನ್ನಡ ಗರೆಟಿಯರದಿಂದ ಅವತರಣಿಗಳು.

(೧೯೭೫ನೇ ಪುಟದಿಂದ ಸಾಗಿದ್ದು)

ಚಿಕ್ಕೇರೂರು:—ಕೋಡದ ಪಶ್ಚಿಮಕ್ಕೆ ೧೦ ಮೈಲಿನ ಮೇಲೆ; ಜನ ಸಂಖ್ಯೆ (೪೧) ೧೫೫೦. ಈ ಊರಲ್ಲಿ ಹಿರೆ ಕೆರೆಯು ದೊಡ್ಡದಿರುತ್ತದೆ. ಆ ಕೆರಿಯ ಮೇಲೂ ಬನಶಂಕರಿ, ಹನುಮಂತ, ಸೋಮೇಶ್ವರ ಎಂಬ ಗುಡಿಗಳಲ್ಲಿಯೂ, ಬೇರೆ ಕಡೆಯಲ್ಲಿಯೂ ಕೂಡಿ ೭ ಲಿಪಿಗಳೂ, ಎರಡು ಲಿಪಿಯುಳ್ಳ ವೀರಗಲ್ಲುಗಳೂ ಇರುತ್ತವೆ. ಅವೆಲ್ಲ ೧೦ನೇ ಶತಕದ ಈಚೆಯಲ್ಲಿ ಬರಿದಂಥವು.

ಚಿನ್ನಮಯಗುಂಡ :—ಕೋಡದ ವಾಯವ್ಯಕ್ಕೆ ೬ ಮೈಲಿನ ಮೇಲೆ; ಜನ ಸಂಖ್ಯೆ (೧೯೧) ೧೫೪೪. ಚಿಕ್ಕೇಶ್ವರನ ಬುನಾದಿಯು ಗುಡಿಯು ದೊಡ್ಡದಿರುತ್ತದೆ. ಅದರಲ್ಲಿಯೂ ಮತ್ತೊಂದು ಈಶ್ವರನ ಗುಡಿಯಲ್ಲಿಯೂ ಬಂದೊಂದು ಲಿಪಿಗಳಿವೆ. ಊರ ಹೊರಗೆ ಶಿದ್ಧೇಶ್ವರವೆಂಬದೊಂದು ಸ್ವಯಂಭು ಲಿಂಗವಿರುತ್ತದೆಂದು ಹೇಳುತ್ತಾರೆ. ಅದರ ಸಮೀಪದಲ್ಲಿ ನೆಲದೊಳಗೆ ಬಂದು ಗವಿಯುಂಟೆಂತಲೂ ಹೇಳುವರು.

ಹಾವಸಭಾವಿ;—ಕೋಡದ ಈಶಾನ್ಯದಲ್ಲಿ ೬ ಮೈಲಿನ ಮೇಲೆ; ಜನಸಂಖ್ಯೆ (೧೯೧) ೧೦೬೩. ಇಲ್ಲಿ ಬಂದು ವೀರಗಲ್ಲಿನ ಮೇಲೆ ಲಿಪಿಯುಂಟು.

ಕಬಿಪಿ;—ಕೋಡದ ಈಶಾನ್ಯಕ್ಕೆ ೧೫ ಮೈಲಿನ ಮೇಲೆ ರಾಮೇಶ್ವರನ ಗುಡಿಯು ಎದುರಿಗೆ ಬಂದು ವೀರಗಲ್ಲಿನ ಮೇಲೆ ಲಿಪಿಯುಂಟು. ಗಣಪತಿಯ ಗುಡಿಯಲ್ಲಿ ಬೇರೊಂದು ಲಿಪಿಯುಂಟು. ಇವೆರಡೂ ೧೦೫೪ನೇ ವರ್ಷ ಅದಂಥವು.

ಕಣವೀ ಸಿದ್ದಗೇರಿ;—ಕೋಡದ ಆಗ್ನೇಯಕ್ಕೆ ೧೦ ಮೈಲಿನ ಮೇಲೆ; ಕಣವೀ ಸಿದ್ದೇಶ್ವರನ ಗುಡಿಯಲ್ಲಿ ನಾಲ್ಕು ಲಿಪಿಗಳಿರುತ್ತವೆ. ಅವೆಲ್ಲ ೧೧ನೇ ಶತಕದ ಈಚೆಯಲ್ಲಿ ಅದಂಥವು.

ಕೋಡ;—ಹಿರೇಕೆರೂರಿನ ಈಶಾನ್ಯಕ್ಕೆ ೬ ಮೈಲಿನ ಮೇಲೆ; ಜ. ಸಂ. (೧೯೧) ೧೦೫೨. ಇದೇ ಊರಿನಿಂದ ಕೋಡ ತಾಲೂಕೆಂಬ ಹೆಸರು ಬಂದದೆ. ಅಕ್ಕಿ, ಮೆಣಸಿನ ಕಾಯಿ ಇವುಗಳ ವ್ಯಾಪಾರವು ತಿಂಗಳಿಗೆ ಸುಮಾರು ೨೦೦೦ ರೂಪಾಯಿದಾಗುತ್ತದೆ. ಹನುಮಂತನ ಗುಡಿಯಲ್ಲಿ ಕನ್ನಡ ಲಿಪಿಯೊಂದು ಇರುತ್ತದೆ.

ಕೋಡ ವೂಗಿ;—ಕೋಡದ ದಕ್ಷಿಣಕ್ಕೆ ೧೧ ಮೈಲಿನ ಮೇಲೆ ಬೈಲಪ್ಪನ ಗುಡಿಯಲ್ಲಿಯೂ ಸಿದ್ದರಾಮೇಶ್ವರ ಗುಡಿಯಲ್ಲಿಯೂ ಕೂಡಿ ಮೂರು ಲಿಪಿಗಳಿರುತ್ತವೆ.

ಮೊಸೂರು—ಹಿರೇಕೆರೂರಿನ ಆಗ್ನೇಯಕ್ಕೆ ೩ ಮೈಲಿನ ಮೇಲೆ; ಜ. ಸಂ. (೧೧) ೨೯೯೬. ರವಿವಾರ ಸಂತೆಯಾಗುತ್ತದೆ. ಈ ಊರಿಗೆ ಬಂದು ಹಾಳು ಕೋಟೆಯುಂಟು. ಅದನ್ನು ವಿಜಾಪುರದ ಬಾದಶಹನ ನೌಕರನಾದ ಮುಹಮ್ಮದಖಾನ ರಾಜಾ ಫರೀದನೆಂಬವನು ಸನ್ನ ೧೬೫೫ ರಲ್ಲಿ ಕಟ್ಟಿಸಿದನೆಂದು ಹೇಳುವದೊಂದು ಫಾರ್ಶೀ ಶಿಲಾಲಿಪಿಯು ಕೆರೆಯ ಕಾವಲಿಯಲ್ಲಿ ಇರುತ್ತದೆ. ಮೊಸೂರಿನ ಕೆರೆಯು ಮುಂಬಯಿ ಇಲಾಖೆಯಲ್ಲಿ ಹೆಸರಾದದ್ದಿರುತ್ತದೆ. ಇದನ್ನು ವಿಜಯನಗರದ ಅರಸನು ಕಟ್ಟಿಸಿದನೆಂದು ಹೇಳುತ್ತಾರೆ. ಈ ಕೆರೆಯು ಊರಿನ ನೈರುತ್ಯಕ್ಕೆ ಮೂರು ಮೈಲಿನ ಮೇಲೆ ಮೈಸೂರ ಇಲಾಖೆಯ ಹದ್ದಿನೊಳಗೆ ಇರುತ್ತದೆ.

ಮೇಡೂರು;—ಕೋಡದ ದಕ್ಷಿಣಕ್ಕೆ ೧೧ ಮೈಲಿನ ಮೇಲೆ; ಜ. ಸಂ. (೧೧) ೧೧೦೦. ನೀಲಮ್ಮ, ಬಲ್ಲೇಶ್ವರ, ಬಸಪ್ಪ ಎಂಬ ಗುಡಿಗಳವೆ; ಎರಡನೇ ಗುಡಿಯಲ್ಲಿ ಎರಡು ಶಿಲಾಲಿಪಿಗಳೂ, ಮೂರನೇದರಲ್ಲಿ ಬಂದು ವೀರಗಲ್ಲೂ ಉಂಟು.

ಮುತ್ತೂರು;—ಕೋಡದ ವಾಯವ್ಯಕ್ಕೆ ೯ ಮೈಲಿನ ಮೇಲೆ; ಇಲ್ಲಿ ಬುನಾದಿಯ ಈಶ್ವರನ ಗುಡಿಯು ತಕ್ಕಮಟ್ಟಿಗೆ ದೊಡ್ಡದು, ಚಿತ್ರಗಳುಳ್ಳದ್ದು ಇರುತ್ತದೆ. ಈ ಗುಡಿಗೆ ಇನಾವು ನಡಿಯುತ್ತದೆ. ಗುಡಿಯ ಎಮರಿಗೆ ೧೧ ಕಲ್ಲುಗಳನ್ನೂ ನಿಲ್ಲಿಸಿದ್ದಾರೆ. ಅವುಗಳಲ್ಲಿ ಬಂದು ವೀರಗಲ್ಲಿನ ಮೇಲೆ ಲಿಪಿಯುಂಟು.

ರಟ್ಟಿಹಳ್ಳಿ;—ಕೋಡದ ಆಗ್ನೇಯಕ್ಕೆ ೧೦ ಮೈಲಿನ ಮೇಲೆ; ಜ. ಸಂ. (೧೧) ೨೩೩೦. ಹಾಳು ಕೋಟೆಯುಂಟು. ಕದಂಬೇಶ್ವರನ ಗುಡಿಯು ದೊಡ್ಡದಿರುತ್ತದೆ. ಆ ಗುಡಿಯಲ್ಲಿ ನಾಲ್ಕು, ಬೇರೆ ಕಡೆಯಲ್ಲಿ ಮೂರು ಶಿಲಾಲಿಪಿಗಳಿವೆ. ಅವೆಲ್ಲ ೧೧ನೇ ಶತಕದ ಈಚೆಯಲ್ಲಿ ಆದಂಥವ

ಇಲ್ಲಿಯ ಕೋಟೆಯನ್ನು ವಿಜಯನಗರದ ಅರಸು ಕಟ್ಟಿಸಿದನೆಂದು ಅದರ ಆಗಸೆಯ ಮೇಲಿನ ಲಿಪಿಯಿಂದ ತಿಳಿಯುತ್ತದೆ. ರಟ್ಟೀಹಳ್ಳಿಯಲ್ಲಿ ಹೈದರನಿಗೂ ಪೇಶವೆ ಮಾಧವರಾಯನಿಗೂ ಸನ್ನ ೧೭೬೪ರಲ್ಲಿ ದೊಡ್ಡ ಯುದ್ಧವಾಗಿ ಅದರಲ್ಲಿ ಹೈದರನು ಸೋತನು.

ಸಾತೆನಹಳ್ಳಿ;—ಕೋಡದ ವಾಯವ್ಯಕ್ಕೆ ೧೦ ಮೈಲಿನ ಮೇಲೆ; ಇಲ್ಲಿ ೫ ಗುಡಿಗಳಿವೆ; ಅವುಗಳಲ್ಲಿ ರಾಮಲಿಂಗನ ಗುಡಿಯು ಎಲ್ಲಕ್ಕೂ ದೊಡ್ಡದು. ಈ ಊರಲ್ಲಿ ಬಟ್ಟಗೆ ೮ ಲಿಪಿಗಳಿವೆ; ಅವೆಲ್ಲ ೧೦ನೇ ಶತಕದ ಈಚೆಯಲ್ಲಿ ಅದಂಥವು.

ವಡೆನಪುರ—ಕೋಡದ ಉತ್ತರಕ್ಕೆ ೫ ಮೈಲಿನ ಮೇಲೆ, ಸಣ್ಣ ಹಳ್ಳಿ. ಇಲ್ಲಿ ಶಕೆ ೧೪೦೦ನೇ ದುಂದುಭಿ ಸಂವತ್ಸರದ ಕಾರ್ತೀಕ ಶುದ್ಧ ದ್ವಾದಶೀ ಸೋಮವಾರ ದಿವಸ ಲಿಂಗಕುಂಟೆಯ ನಾಯಕನೆಂಬವನು ಕಪಿತೆ ಎಂಬ ಹೆಂಗಸನ್ನು ಕೊಂದ ಪಾಪದ ಪ್ರಾಯಶ್ಚಿತ್ತಕ್ಕಾಗಿ ಮೇಪುರವೆಂಬ ಹಳ್ಳಿಯನ್ನು ಜಂಗಮರಿಗೆ ದಾನ ಮಾಡಿದಲೇಖವು ಬಂದು ಕಲ್ಲಿನ ಮೇಲೆ ಇರುತ್ತದೆ.

ವರಾಹ;—ಕೋಡದ ವಾಯವ್ಯಕ್ಕೆ ೧೦ ಮೈಲಿನ ಮೇಲೆ, ಕಲ್ಲೀಶ್ವರನ ಗುಡಿಯಲ್ಲಿ ಬಂದು ವೀರಗಲ್ಲು, ಬಂದು ಹೊಲದೊಳಗೆ ಬಂದು ಮಹಾಗತೀಕಲ್ಲು ಇರುತ್ತವೆ. ಈ ಎರಡುಗಳ ಮೇಲೆಯೂ ಲಿಪಿಗಳುಂಟು.

CORRESPONDENCE.

ಪತ್ರವ್ಯವಹಾರ.

(೯೬ನೇ ಪುಟದಿಂದ ಮುಂದೆ ಸಾಗಿದ್ದು.)

೫. ದಂಟಿನಿಂದ ಹೊರಡುವ ಎಲೆಗಳಿಗೆ ರವದಿ ಎನ್ನುವರು.

೬. ದಂಟಿನಲ್ಲಿ ಸಾಲ್ಗೊಂಡ ಅದರ ಭಾಗಗಳಿಗೆ ಗಣಿಕೆ ಎನ್ನುವರು.

೬. ಗಣಿಕೆಗಳು ಬಂದಕ್ಕೊಂದು ಜೋಡಿಸಲ್ಪಟ್ಟಿರುವ ಸಂಯೋಗ ಸ್ಥಾನಗಳಿಗೆ ಗಣಲು ಎನ್ನುತ್ತಾರೆ.

೮. ದಂಟಿನಲ್ಲಿ ಶಾಖೆಗಳೊಡೆದರೆ ಅವುಗಳಿಗೆ ಟಸಿಲು ಅನ್ನುತ್ತಾರೆ.

೯. ದಂಟಿನ ತುದಿಗೆ ಹೊಡೆಯು ಆಗುತ್ತದೆ.

೧೦. ಹೊಡೆಯೊಳಗೆ ತೆನೆಯು ಮುಚ್ಚಿಕೊಂಡಿರುವಾಗ ಅದಕ್ಕೆ ಕದರ ಹೊಡೆ ಅನ್ನುತ್ತಾರೆ.

೧೧. ಹೊಡೆಯು ಸ್ವಲ್ಪ ದೊಡ್ಡದಾಗಿ ತೆನೆಯು ಅದರೊಳಗಿಂದ ತಲೆದೋರಿತೆಂದರೆ ಅದಕ್ಕೆ ಕಪ್ಪೆ ಹೊಡೆ ಅನ್ನುತ್ತಾರೆ.

೧೨. ಹೊಡೆಯೊಡೆದು ಅದರೊಳಗಿಂದ ತೆನೆಯು ಹೊರಡುತ್ತದೆ.

೧೩. ಹೊಡೆಯೊಡೆದ ಮೇಲೆ ಅದಕ್ಕೆ ಹೂವಾಗುತ್ತದೆ.

೧೪. ಎಳೆ ಕಾಳುಗಳಿಗೆ ಹಾಲಗಾಳು ಅನ್ನುತ್ತಾರೆ.

೧೫. ಕಾಳುಗಳು ಸ್ವಲ್ಪ ಬಲಿತು ಉದರಿಸಲಿಕ್ಕೆ ಬರುವಂತಾದರೆ ಅವುಗಳಿಗೆ ಬೆಳಸು ಅನ್ನುತ್ತಾರೆ.

೧೬. ಕಾಳು ಬಹಳ ಬಲಿತು ರುಚಿಯು ಕಡಿಮೆಯಾದರೆ ಅವಕ್ಕೆ ಹುರಿಗಾಳು ಅನ್ನುತ್ತಾರೆ.

೧೭. ತೆನೆಗೆ ಹತ್ತಿರುವ ದಂಟಿನ ಕೊನೆಯ ಗಣಿಕೆಗೆ ಊಣಚೆ ಎನ್ನುತ್ತಾರೆ.

೧೮. ದೇಟಿನ ಬುಡಕ್ಕೆ ನೆಲದ ಮೇಲ್ಭಾಗದಲ್ಲಿ ಬಿಟ್ಟಿರುವ ಬೇರಿನಂಥ ಅವಯವಕ್ಕೆ ಬಾರಂಗಿ ಅನ್ನುತ್ತಾರೆ.

೧೯. ನೆಲದೊಳಗೆ ಇಳಿದ ಅವಯವಕ್ಕೆ ಬೇರು ಎನ್ನುತ್ತಾರೆ.

೨೦. ದಂಟು ಕೊಯ್ದ ಮೇಲೆ ಉಳಿಯುವ ಅದರ ಬುಡ ಭಾಗಕ್ಕೆ ಕೊಯ್ಲಿ ಅನ್ನುತ್ತಾರೆ.

೨೧. ಹತ್ತೆಂಟು ದಂಟುಗಳನ್ನು ಕೂಡಿಸಿ ಕಟ್ಟಿದ್ದಕ್ಕೆ ಸಿವಡು ಅನ್ನುತ್ತಾರೆ.

೨೦. ಮೂರು ಮೂರು ಸಿವಡುಗಳನ್ನು ಕೂಡಿಸಿ ಕಟ್ಟಿದ್ದಕ್ಕೆ ಪೆಂಡಿ ಅನ್ನುತ್ತಾರೆ.

೨೨. ಪೆಂಡಿಗಳನ್ನೆಲ್ಲ ಹೊಲದಲ್ಲಿ ಬಂದೆಡೆಯಲ್ಲಿ ಕೂಡ ಹಾಕಿದರೆ ಅದಕ್ಕೆ ಗೂಡು ಅನ್ನುತ್ತಾರೆ.

೨೪. ಅಳತೆಯ ಉದ್ದೇಶವೇನೂ ಇಲ್ಲದೆ ಇರುವ ಕೆಲವು ದಂಟುಗಳ ಸಮೂಹಕ್ಕೆ ಕಣಿಕೆ, ಸೊಪ್ಪಿ, ಮೇವು ಎಂಬ ಹೆಸರುಗಳು.

೨೫. ತೆನೆಗಳುಳ್ಳ ಕಣಿಕೆಗೆ ತೆನೆಗಣಿಕೆ ಎನ್ನುತ್ತಾರೆ.

೨೬. ತೆನೆಗಳನ್ನು ಕೊಯ್ದು ಬಿಟ್ಟ ಕಣಿಕೆಯ ಗುಂಪಿಗೆ ಇಕ್ಕಲ ಅನ್ನುತ್ತಾರೆ.

೨೭. ಕಣಿಕೆಯನ್ನು ಹೆಚ್ಚು ವ್ಯವಸ್ಥೆಯಿಂದ ಎತ್ತರವಾಗಿ ಬಿಟ್ಟದರೆ ಬಣಿವೆ ಅನ್ನುತ್ತಾರೆ.

೨೮. ಕಾಳುಗಳು ಉದರಿ ಹೋದ ಮೇಲೆ ಉಳಯುವ ತೆನೆಗೆ ಕಂಕಿ ಅನ್ನುತ್ತಾರೆ.

೨೯. ತೆನೆಯೊಳಗಿಂದ ಉದುರುವ ಪ್ರಡಿಗೆ ಸುಂಕ ಎನ್ನುತ್ತಾರೆ.

೩೦. ಕಾಳನ್ನು ಕಚ್ಚಿಕೊಂಡು ಅದರ ಹಿಂಭಾಗದಲ್ಲಿರುವ ಕೆಂಪು ಭಾಗಕ್ಕೆ ಸರಗು ಅನ್ನುತ್ತಾರೆ.

೩೧. ಹಸಿ ಮೇವಿಗೆ ಬಾಟ ಎನ್ನುತ್ತಾರೆ.

೩೨. ಬೆಳೆದ ದಂಟುಗಳನ್ನು ಕೊಯ್ದರೆ ಅದಕ್ಕೆ ಕೊಯ್ಯೋಣವೆನ್ನುತ್ತಾರೆ.

೩೩. ಸಿವಡುಗಳನ್ನು ನಡುವೆ ಎರಡು ಮೂರು ತುಂಡುಗಳಾಗಿ ಕೊಯ್ದರೆ ಅದಕ್ಕೆ ಕೊರೆಯೋಣವೆನ್ನುತ್ತಾರೆ.

೩೪. ದಂಟುಗಳನ್ನು ಕಿತ್ತರೆ ಅದಕ್ಕೆ ಜಿಗಿಯೋಣವೆನ್ನುತ್ತಾರೆ.

೩೫. ಪೈರಿನೊಳಗಿಂದ ಬರೆ ತೆನೆಗಳನ್ನು ಕೊಯ್ದುಕೊಂಡರೆ ಅದಕ್ಕೆ ಚಂಡೀ ಆಡೋಣ ಅನ್ನುತ್ತಾರೆ.

೩೬. ಜೋಳದ ಬೆಳೆಯು ಬೆಳೆದು ನಿಂತಾಗ್ಗೆ ಅದಕ್ಕೆ ನೀ
ವು ಏನನ್ನುತ್ತಾರೆ.

೩೭. ತೆನೆಗಳನ್ನು ತುಳಿಸಿ ಪುಡಿ ಪುಡಿಯಾದ ಮೇಲೆ ಅದಕ್ಕೆ
ಮುದ ಅನ್ನುತ್ತಾರೆ.

೩೮. ತೂರಿ ಕಾಳು ಬೇರೆ ಮಾಡಿ ದೊಡ್ಡ ಗುಂಪೇ ಹಾಕಿ
ದರೆ ಅದಕ್ಕೆ ರಾಶಿ ಅನ್ನುತ್ತಾರೆ.

೩೯. ಕಾಳು ತೂರಿ ತೆಗೆದುಕೊಂಡ ಬಳಿಕ ಉಳಿವ ಸರಗು
ರವದಿ ಮುಂತಾವದ್ದನ್ನು ಕೂಡಿಸಿದ ಪುಡಿಗೆ ಹೊಟ್ಟು
ಅನ್ನುತ್ತಾರೆ.

೪೦. ಜೋಳದ ಪೈರಿನ ಎಂಟು ಸಾಲುಗಳಿಗೆ ಅಕ್ಕಡಿ ಎಂ
ತಲೂ, ಅದರ ಅರ್ಧಕ್ಕೆ ದಿಂಡು ಎಂತಲೂ ಹೆಸರು.

ಗೋದಿಯ ಪೈರಿನಲ್ಲಿ ಉಪಯೋಗಿಸುವ ಶಬ್ದಗಳು.

೧. ನಾಟಿಗೆ ೪ ಊಬು ೫ ಮುಂಡಲ ೧೦ ರಾಶಿ.

೨. ಹುಲ್ಲು ೫ ಹಾಲಗಾಳು ೮ ಬೊರಡ ೧೧ ಹೊಟ್ಟು

೩. ತೆನೆ ೬ ಉಮ್ಮಿಗೆ ೯ ಕುಟಸ, ತೂನಸಿ

ಮೇಲಿನ ಶಬ್ದಗಳ ವ್ಯಾಖ್ಯೆಗಳು.

೧. ಗೋದಿಯು ಮೊಳಕೆಯು ನೆಲವೊಡೆದು ಮೇಲಕ್ಕೆ
ಬಂದರೆ ಅದಕ್ಕೆ ನಾಟಿಗೆ ಅನ್ನುತ್ತಾರೆ.

೨. ನಾಟಿಗೆಯು ದೊಡ್ಡದಾಯಿತೆಂದರೆ ಅದಕ್ಕೆ ಹುಲ್ಲು
ಅನ್ನುತ್ತಾರೆ.

೩. ಹುಲ್ಲಿನ ತುದಿಯಲ್ಲಿ ತೆನೆಗಳು ಹಾಯುತ್ತವೆ.

೪. ತೆನೆಯೊಳಗಿನ ಸೂಜಿಯಂಥ ಅವಯವಕ್ಕೆ ಊಬು
ಅನ್ನುತ್ತಾರೆ.

೫. ಎಳೆಕಾಳುಗಳಿಗೆ ಹಾಲಗಾಳು ಅನ್ನುತ್ತಾರೆ.

೬. ಕಾಳುಗಳು ತಿನ್ನಲಿಕ್ಕೆ ತಕ್ಕಷ್ಟು ಬಲಿತರೆ ಉಮ್ಮಿಗೆ
ಅನ್ನುತ್ತಾರೆ.

೫. ಹುಲ್ಲು ಕಿತ್ತು ಪೆಂಡೀ ಕಟ್ಟಿ ಬತ್ತಕ್ಕೆ ಕೂಡ ಹಾಕಿದರೆ ಅವಕ್ಕೆ ಮುಂಡಲ ಅನ್ನುತ್ತಾರೆ.

೮. ತುಳಿಸಿ ಕೂಡ ಹಾಕಿದ್ದಕ್ಕೆ ಪೊರಡಿ ಅನ್ನುತ್ತಾರೆ.

೯. ಕಾಳಿನ ಮೇಲಿನ ಆಚ್ಛಾದನಕ್ಕೆ ಕುಬಸ ಅಥವಾ ತೊನಸಿ ಅನ್ನುತ್ತಾರೆ.

೧೦. ಕಾಳು ಮಾಡಿ ಕೂಡ ಹಾಕಿದರೆ ಅವಕ್ಕೆ ರಾಶಿ ಅನ್ನುತ್ತಾರೆ.

೧೧. ಕಾಳು ತೂರಿಕೊಂಡ ಬಳಿಕ ಉಳಿಯುವದಕ್ಕೆ ಹೊಟ್ಟು ಅನ್ನುತ್ತಾರೆ.

ಕಡಲಿಯ ಪೈರಿನಲ್ಲಿ ಉಪಯೋಗಿಸುವ ಶಬ್ದಗಳು.

೧. ಗಿಡ ೩ ಜಟ್ಟಿ ೫ ಪಲ್ಯ

೨. ಕಾಯಿ, ಬುಡ್ಡಿ ೪ ಸುಲಿಗಾಯಿ ೬ ಉಡಿಯೋಣ

ಮೇಲಿನ ಶಬ್ದಗಳ ವ್ಯಾಖ್ಯೆಗಳು.

೧. ಕಡಲಿಯ ನಾಟಿಗೆಯು ದೊಡ್ಡದಾದರೆ ಅದಕ್ಕೆ ಗಿಡ ಅನ್ನುತ್ತಾರೆ.

೨. ಗಿತಕ್ಕೆ ಕಾಯಿಗಳಾಗುತ್ತವೆ. ಅವುಗಳಿಗೆ ಬುಡ್ಡಿಗಳೆಂತಲೂ ಅನ್ನುತ್ತಾರೆ.

೩. ಕಾಯಿಯಲ್ಲಿ ಕಾಳು ಇಲ್ಲದಿದ್ದರೆ ಅವಕ್ಕೆ ಜಟ್ಟಿ ಅನ್ನುತ್ತಾರೆ.

೪. ಕಾಯಿಗಳು ಸುಲಿಯುಲಿಕ್ಕೆ ತಕ್ಕಷ್ಟು ಬಲಿತರೆ ಸುಲಿಗಾಯಿ ಅನ್ನುತ್ತಾರೆ.

೫. ಕಡಲಿಯ ಎಲೆಗಳಿಗೆ ಪಲ್ಯವೆನ್ನುತ್ತಾರೆ.

೬. ಪಲ್ಯವನ್ನು ಮರಿಯುವವಕ್ಕೆ ಉಡಿಯೋಣವೆನ್ನುತ್ತಾರೆ.

ಹತ್ತಿಯ ಪೈರಿನಲ್ಲಿ ಉಪಯೋಗಿಸುವ ಪದ್ಧಗಳು.

೧ ಗಿಡ ೫ ಹತ್ತಿ ೯ ಕಟ್ಟಿಗೆ

ಎ. ಉರಲು ೬ ತೊಳೆ ೧೦ ಅರಳಿ

೩. ಹೂವು ೭ ಅಟ್ಟೆ ೧೧ ಹತ್ತೀಕಾಳು

೪. ಕಾಯಿ ೮ ತೊಪ್ಪಲ

ಮೇಲಿನ ಶಬ್ದಗಳ ವ್ಯಾಖ್ಯೆಗಳು.

೧. ಹತ್ತಿಯು ನಾಟಿಯು ದೊಡ್ಡದಾಯಿತೆಂದರೆ ಅದಕ್ಕೆ ಗಿಡವೆನ್ನುತ್ತಾರೆ.

೨. ಗಿಡಕ್ಕೆ ಮೊಗ್ಗೆಗಳು ಬಿಟ್ಟರೆ ಅವಕ್ಕೆ ಉರಲು ಅನ್ನುತ್ತಾರೆ.

೩. ಉರಲು ಅರಳಿದರೆ ಅದಕ್ಕೆ ಪೂ ಅನ್ನುತ್ತಾರೆ.

೪ ಹೂವಿನಿಂದ ಕಾಯಿಗಳು ಆಗುತ್ತವೆ.

೫ ಕಾಯೊಡೆದು ಒಳಗಿನಿಂದ ಹೊರಟದ್ದಕ್ಕೆ ಹತ್ತಿ ಅನ್ನುತ್ತಾರೆ.

೬. ಒಂದೊಂದು ಕಾಯೊಳಗಿನ ಹತ್ತಿಗೆ ತೊಳೆ ಅನ್ನುತ್ತಾರೆ.

೭. ತೊಳೆಗಳನ್ನು ತೆಗೆದುಕೊಂಡ ಬಳಿಕ ಉಳಿಯುವ ಬಣಕಾಯಿಗೆ ಅಟ್ಟೆ ಎನ್ನುತ್ತಾರೆ.

೮. ಗಿಡದ ಎಲೆಗಳಿಗೆ ತೊಪ್ಪಲವೆನ್ನುತ್ತಾರೆ.

೯. ಹತ್ತಿಯ ಗಿಡವನ್ನು ಕೆತ್ತಿದ ಮೇಲೆ ಅದಕ್ಕೆ ಕಟ್ಟಗ ಅನ್ನುತ್ತಾರೆ.

೧೦. ಹತ್ತಿಯೊಳಗಿನ ಕಾಳುಗಳನ್ನು ತೆಗೆದ ಮೇಲೆ ಉಳಿದದ್ದಕ್ಕೆ ಅರಳಿ ಅನ್ನುತ್ತಾರೆ.

೧೧. ಹತ್ತಿಯೊಳಗಿಂದ ಬೇರೆ ಮಾಡಿದ ಕಾಳುಗಳಿಗೆ ಹತ್ತೀಕಾಳು ಅನ್ನುತ್ತಾರೆ.

ಚಕ್ಕಡಿಯು ಅನಯುವ ವಾಚಕಗಳಾದ ಶಬ್ದಗಳು.

೧. ಗಾಲಿ ೫ ಪಲ್ಲು ೯ ಚಟ್ಟು ೧೩ ಮೂಕ ೧೭ ಕೊಲ್ಲಾರಿ

೨. ಗಡ್ಡಿ ೬ ಹಳಿ ೧೦ ಎರಕಲ್ಲು ೧೪ ಕೀಲ

೩. ಗಡ್ಡೀಬಳಿ ೪ ಇರಸು ೧೧ ನೊಗ ೧೫ ಕಳಗ
೪. ಪುಟ್ಟೆ ೪ ಓಟಿ ೧೦ ಜತ್ತಿಗಿ ೧೬ ಡಂಬರಿಗಿ

ಮೇಲಿನ ಶಬ್ದಗಳ ವ್ಯಾಖ್ಯೆಗಳು,

೧. ಚಕ್ಕಡಿಯ ಚಕ್ರಗಳಿಗೆ ಗಾಲಿ ಎನ್ನುತ್ತಾರೆ.

೨. ಗಾಲಿಯ ಮಧ್ಯ ಭಾಗದಲ್ಲಿರುವ ಅವಯವಕ್ಕೆ ಗಡ್ಡಿ ಎನ್ನುತ್ತಾರೆ.

೩. ಗಡ್ಡಿಗೆ ಹಾಕಿದ ಕಬ್ಬಿಣದ ಪಟ್ಟಿಗಳಿಗೆ ಗಡ್ಡೀಬಳಿ ಎನ್ನುತ್ತಾರೆ.

೪. ಗಾಲಿಯ ಸುತ್ತಲು ಚಕ್ರಾಕಾರವಾಗಿ ಜೋಡಿಸಿದ ಕಟ್ಟಿಗೆಯ ಪಟ್ಟಿಗಳಿಗೆ ಪುಟ್ಟೆ ಅನ್ನುತ್ತಾರೆ.

೫. ಗಡ್ಡಿಯಿಂದ ಪುಟ್ಟೆಯವರೆಗೆ ಇರುವ ಕಟ್ಟಿಗೆಯ ತೇ ಜಿಗಳಿಗೆ ಹಲ್ಲು ಅನ್ನುತ್ತಾರೆ.

೬. ಪುಟ್ಟೆಯ ಮೇಲೆ ಹಾಕಿದ ಕಬ್ಬಿಣದ ಪಟ್ಟಿಗೆ ಪಳಿ ಎನ್ನುತ್ತಾರೆ.

೭. ಎರಡೂ ಗಾಲಿಗಳ ನಡುವೆ ಇರುವ ಅಚ್ಚಿಗೆ ಇರಸು ಅನ್ನುತ್ತಾರೆ.

೮. ಇರಸಿನ ಮೇಲಿರುವ ಕಟ್ಟಿಗೆಯ ಅವಯವಕ್ಕೆ ಓಟಿ ಅನ್ನುತ್ತಾರೆ.

೯. ಓಟಿಯ ಮೇಲೆ ಹೇರಿರುವದಕ್ಕೆ ಚಟ್ಟಿ ಅನ್ನುತ್ತಾರೆ.

೧೦. ಚಟ್ಟಿನ ಬುಡದಿಂದ ಹೊರಟು ಕಡೆ ತನಕ ಹಾಯ್ದು ಮುಂದಕ್ಕೆ ಹೋಗಿರುವದಕ್ಕೆ ಎರಕಲ್ಲು ಎನ್ನುತ್ತಾರೆ.

೧೧. ಎತ್ತುಗಳನ್ನು ಹೂಡುವಲ್ಲಿರುವ ಕಟ್ಟಿಗೆಯ ತುಂಡಿಗೆ ನೊಗವೆನ್ನುತ್ತಾರೆ.

೧೨. ನೊಗವಲ್ಲಿ ಎತ್ತುಗಳ ಕೊರಳಿಗೆ ಕಟ್ಟುವ ತೊಗಲಿನ ಅಥವಾ ನೂಲಿನ ಪಟ್ಟಿಗಳಿಗೆ ಜತ್ತಿಗೆ ಎನ್ನುತ್ತಾರೆ.

೧೩. ಚಟ್ಟಿನ ಮುಂದೆ ಹಾಯಿರುವ ಎರಕಲ್ಲಿನ ಭಾಗಕ್ಕೆ

೧೪. ಗಾಲಿಗಳು ಉಚ್ಚ ಬಾರದೆಂದು ಇರಿಸಿನ ತುದಿಯಲ್ಲಿರು
ವ ತೂತಿನಲ್ಲಿ ಹಾಕಿದ ಗಣಿಗಳಿಗೆ ಕೀಲಗಳೆನ್ನುತ್ತಾರೆ.

೧೫. ಜಟ್ಟಿನಲ್ಲಿ ಎರಡೂ ಬದಿಗೆ ನಡಿಸಿದ ಕಟ್ಟಿಗೆಗಳಿಗೆ
ಕಳಗ ಎನ್ನುತ್ತಾರೆ.

೧೬. ಕಳಗಗಳ ಮೇಲೆ ಹಾಕಿದ ಕಟ್ಟಿಗೆಗೆ ಡಂಬರಿಗೆ ಅ
ನ್ನುತ್ತಾರೆ.

೧೭. ಚಕ್ಕಡಿಯ ಮೇಲೆ ಸಿರಳು ಮಾಡುವದಕ್ಕಾಗಿ ಬಿಲ್ಲು
ಗಳನ್ನು ಕಟ್ಟಿ ಮೇಲೆ ಏನಾದರೊಂದು ಅಚ್ಛಾದನ
ವನ್ನು ಹಾಕಿದರೆ ಅದಕ್ಕೆ ಕೊಲ್ಲಾರಿ ಅನ್ನುತ್ತಾರೆ.

ಧಾರವಾಡ, } ಬಸಪ್ಪಾ ಅಡಿವೆಪ್ಪಾ ಹೆಬ್ಬಳ್ಳಿ,
ತಾ॥ ೧೪–೫–೧೪ } ಹೆ. ಮಾ. ಳನೇ ನಂ. ಶಾಲೆ ಧಾರವಾಡ.

DEPARTMENTAL NOTICE.

ನೋಟೀಸು.

ಈ ನೋಟೀಸಿನಿಂದ ಪ್ರಸಿದ್ಧಪಡಿಸುವದೇನಂದರೆ:—

ಮಿ. ಧೊಂಡೋ ನರಸಿಂಹ ಮುಳಬಾಗಲ ಕನ್ನಡ ಟೀಚ
ರ ಟ್ರೇನಿಂಗಕಾಲೇಜ ಧಾರವಾಡ ಇವರಿಂದ ರಚಿತವಾದ
'ನುಡಿಗಟ್ಟಿಂಬ' ಕನ್ನಡ ವ್ಯಾಕರಣದ ಒನೇ ಆವೃತ್ತಿ
ಯನ್ನು ಮೆ. ಡೈರೇಕ್ಟರ ಆಪ ಪಬ್ಲಿಕ ಇನ್ಸ್ಟ್ರಕ್ಶನ
ಸಾಹೇಬರವರು ಕನ್ನಡ ಜಿಲ್ಲೆಗಳೊಳಗಿನ ಶಾಲೆಗಳ ಉ
ಪಯೋಗಕ್ಕಾಗಿ ಮಂಜೂರ ಮಾಡಿರುತ್ತಾರೆ, ಮತ್ತು
ಮುಳಬಾಗಲಕೃತ 'ಕನ್ನಡಕೈಪಿಡಿ' ಯೆಂಬ ವ್ಯಾಕರ
ಣದ ಒನೇ ಭಾಗವನ್ನೂ ಮೈಸೂರ ಗ್ರಾಜುಏಟ್ಸ ಟ್ರೇಡಿಂ
ಗ ಅಸೊಸಿಯೇಶನದವರು ತೂಪಿಸಿದ 'ಪ್ರಾಣಿಶಾಸ್ತ್ರ'
ವೆಂಬ ಪುಸ್ತಕವನ್ನೂ ಶಾಯಬ್ರರಿಗಳಿಗಾಗಿಯೂ ಇನಾಮಿ
ಗಾಗಿಯೂ ಮಂಜೂರ ಮಾಡಿರುತ್ತಾರೆ.

ತಾ॥ ೮ನೇ ಮೇ ೧೮೯೫ ಇಸವಿ.

B. R. SAHASRABUDHE,

ಶಾಲಾಪತ್ರೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ।
ಭಯಸುತ್ತಂ ಪ್ರತಿವಾಸವಾದಿಗೊಲವಿಂದೀಪತ್ರಮಂ ಮುದ್ರಿಸಿ॥
ನಯದಿಂದಿತ್ತಪೆವೋದುವರ್ಗೆಸಗುಣಂ ತೋರಲ್ಕೆಯ್ಕೊಂಬುದೈ।
ಜಯಮಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೩ನೇ.] ಜುಲ್ಯೈ ೧೮೬೫ನೇ. [ಸಂಚಿಕೆ ೭ನೇ.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಸರ್ಕಾರ್ ೧೮೬೫ನೇ ಇಸವಿಯ ೨ನೇ ೩ನೇ ಗ್ರೇಡ ಮುಲ್ಕೀ ಸರ್ಟಿಫಿಕೇಟಿನ ಪರೀಕ್ಷೆಗಳು, ೧೮೬೫ನೇ ಇಸವಿಯ ಜನವರಿ ೧೫ನೇ ತಾರೀಖಿನ ಮುಂಬಯಿ ಗವರ್ನಮೆಂಟ ಗ್ಯಾಝೆಟಿನ ೧ನೇ ಭಾಗದ ೪೯ನೆಯ ಮತ್ತು ತದುತ್ತರದ ಪುಟಗಳಲ್ಲಿ ಪ್ರಸಿದ್ಧಿಸಲ್ಪಟ್ಟ ನಿಯಮಗಳ ಅ, ಬ, ಕಡ್ಯೂಲಗಳಿಗೆ ಸರಿಯಾಗಿ ಸಪ್ಟಂಬರ ೧೫ನೇ ತಾರೀಖಿನ ದಿವಸ ದಕ್ಷಿಣ ಭಾಗದ ಎಲ್ಲ ಸೆಂಟರುಗಳಲ್ಲಿ ಪ್ರಾರಂಭವಾಗುವವು. ಉಮೇದವಾರರು ತಮ್ಮ ಅರ್ಜಿಗಳನ್ನು ಆಯಾ ಸೆಂಟರುಗಳ ಪರೀಕ್ಷಾ ಕಮಿಟಿಯ ಪ್ರೆಸಿಡೆಂಟರ ಕಡೆಗೆ ಅಗಷ್ಟ ೧ನೇ ತಾರೀಖಿನ ಬಳಿಗಾಗಿ ಕಳಿಸಿಕೊಡತಕ್ಕದ್ದೆಂದು ಅಧಿಕಾರಸ್ಥರು ವಿಧಿಸಿರುತ್ತಾರೆ.

ಹಿಂದುಸ್ಥಾನ ಸರಕಾರದ ಆದಾಯ ವೆಚ್ಚಗಳ ಪಟ್ಟಿಯನ್ನು ಕೆಳಗೆ ಕೊಟ್ಟಿರುತ್ತೇವೆ. ಇದರಿಂದ ಹಿಂದುಸ್ಥಾನದ ಸ್ಥಿತಿಯು ಸ್ವಲ್ಪ ಮಟ್ಟಿಗೆ ತಿಳಿಯುವದು. ಅಫ್ಘಾನಿ

ನಿಂದ ಆಗುವ ಉತ್ಪನ್ನವು ಇಲ್ಲದಂತೆ ಮಾಡುವ ಪಟಪಟಿಯನ್ನು ಕೆಲವರು ನಡಿಸಿದ್ದರು. ಆದರೆ ಸದ್ಯದಲ್ಲಿ ಹೊರಬಿದ್ದ ಓಪಿಯಮ್ ಕಮಿಶನದ ರಿಪೋರ್ಟ್‌ನಿಂದ ಆ ಭೀತಿಯು ದೂರಾಗಿರುತ್ತದೆ.

ಉತ್ಪನ್ನ.

ಬಾಬು	೧೪೯೩–೯೪.	೧೪೯೪–೯೫.
ಜವಿಾನ	೨೫೫೪೯೬೦೯೦	೨೬೪೫೬೬೨೦೦೦
ಅಫು	೬೬೦೩೫೫೭೧೦೦	೬೪೬೦೬೦೦೦
ಉಪ್ಪು	೪೨೦೪೪೩೬೦	೪೬೯೪೭೩೦೦೦
ಸ್ಟಾಂಪ	೪೫೧೦೯೫೧೫೧೦	೪೬೪೪೪೨೦೦೦
ಎಕ್ಸಾಯಿಜ್	೫೭೩೪೪೫೭೫೦	೫೫೭೩೫೫೫೧೦
ಕಸ್ಟಮ್	೧೬೪೨೯೭೬೦	೪೪೧೪೭೩೦೦೦
ಇತರ ಖಾತೆ	೪೧೬೭೦೪೭೭೦	೪೭೦೭೫೦೦೦
ಬಡ್ಡಿ	೪೬೫೪೪೪೭೦	೪೦೫೧೦೦೦
ಪೋಷ್ಟ ವಗೈರೆ	೨೭೪೪೬೭೬೧೪೦	೨೭೪೧೦೦೦೦೦
ಸಿವಿಲ್ ಉ.	೧೬೫೧೦೨೦೦೦	೧೬೫೦೨೦೦೦
ಕಿರುಕುಳ	೯೯೯೧೪೯೯೦	೯೫೫೯೯೦೦೦
ರೇಲ್ವೆ	೨೦೦೯೯೬೯೭೫೦	೨೧೫೫೭೪೪೦೦೦
ಇರಿಗೇರ್ಷ	೨೦೯೯೬೪೪೦೯೦	೨೪೪೪೪೭೦೦೦
ಇಮಾರತ್ತ್ರೀ	೬೭೪೪೫೫೪೦	೬೫೯೨೪೦೦೦
ಲಷ್ಕರೀ	೪೫೦೨೨೬೦	೪೫೧೬೦೦೦
ಒಟ್ಟು ಜೇರಿಜು.	೯೦೫೬೫೧೧೪೪೦	೯೬೯೨೬೬೭೦೦೦

ಖಿಬರ್ಚು.

ಪ್ರತ್ಯಕ್ಷ ಖರ್ಚು	೯೪೬೫೫೭೬೦	೧೧೨೪೦೫೭೦೦
ಬಡ್ಡಿ	೪೪೪೬೭೬೯೯೦	೪೧೧೫೫೫೦೦೦
ಪೋಷ್ಟ ವಗೈರೆ	೨೫೫೦೬೬೦೦	೨೭೫೭೬೫೦೦೦
ಸಿವಿಲ್	೧೪೬೭೪೪೪೪೪೦೦	೧೫೫೪೯೯೫೦೦೦
ಸಿವಿಲ್ ಕಿ.	೫೬೪೬೭೪೪೭೬೦	೬೧೦೪೭೦೦೧೦

ನಿಂದ ಆಗುವ ಉತ್ಪನ್ನವು ಇಲ್ಲದಂತೆ ಮಾಡುವ ಪಟಪಟಿಯನ್ನು ಕೆಲವರು ನಡಿಸಿದ್ದರು. ಆದರೆ ಸದ್ಯದಲ್ಲಿ ಹೊರಬಿದ್ದ ಓಪಿಯಮ್ ಕಮಿಶನದ ರಿಪೋರ್ಟಿನಿಂದ ಆ ಭೀತಿಯು ದೂರಾಗಿರುತ್ತದೆ.

ಉತ್ಪನ್ನ.

ಬಾಬು	೧೪೯೩–೯೪.	೧೪೯೫–೯೬.
ಜವಿಾನ	೨೫೫೪೬೦೯೦	೨೬೭೫೬೨೦೦೦
ಅಫ್ಘು	೬೬೦೩೫೫೩೧೦೦	೬೪೬೦೬೦೦೦
ಉಪ್ಪು	೪೨೦೪೪೫೬೦	೪೬೯೪೩೦೦೦
ಸಪ್ಪಂಪ	೪೫೧೦೯೭೫೧೦	೪೬೪೪೨೦೦೦
ಎಕ್ಸಾಯಿಜ್	೫೩೩೪೫೫೭೬೦	೫೫೫೩೪೫೫೭೬೦
ಕಸ್ಟಮ್	೧೬೪೨೦೭೬೦	೪೪೧೪೪೦೦೦
ಇತರ ಬಾತೆ	೪೧೦೬೦೪೪೪೦	೪೩೦೬೭೦೦೦
ಬಡ್ಡಿ	೪೬೫೪೪೪೦	೪೦೫೧೦೦೦
ಪೋಷ್ಟ ವಗೈರೆ	೨೬೪೪೬೩೬೧೪೦	೨೬೪೧೦೦೦೦
ಸಿವ್ಹಿಲ್ ಉ.	೧೬೭೧೦೨೦೨೦	೧೬೭೦೨೦೦೦
ಕೆರುಕುಳ	೯೯೯೧೪೪೯೦	೯೫೭೯೦೦೦
ರೇಲ್ವೆ	೨೦೨೯೬೬೯೬೭೦	೨೧೫೭೬೪೪೦೦೦
ಇರಿಗೇರ್ಶ	೨೫೯೬೪೪೦೯೦	೨೪೪೪೪೭೦೦೦
ಇಮಾರತ್ತ್ರೀ	೬೬೪೪೭೫೭೪೦	೬೫೭೨೪೦೦೦
ಲಷ್ಕರೀ	೪೫೭೦೨೨೬೦	೪೫೧೬೬೦೦೦
ಒಟ್ಟು ಬೇರಿಜು.	೯೦೫೬೫೭೧೧೪೦	೯೬೯೨೬೬೭೦೦೦

ಖರ್ಚು.

ಪ್ರತ್ಯಕ್ಷ ಖರ್ಚು	೯೪೬೫೭೭೬೦	೧೧೨೪೦೫೭೦೦೦
ಬಡ್ಡಿ	೪೪೪೬೭೬೯೯೦	೪೧೧೭೫೫೦೦೦
ಪೋಷ್ಟ ವಗೈರೆ	೨೫೫೭೦೬೬೦೦	೨೭೫೭೬೫೭೦೦೦
ಸಿವ್ಹಿಲ್	೧೪೬೬೭೭೪೪೦೦	೧೭೫೭೬೯೭೦೦೦
ಸಿವ್ಹಿಲ್ ಕಿ.	೫೬೦೬೪೪೭೬೦	೬೧೦೭೬೦೦೦

ಪುಸ್ತಕಗಳ ಸಂ.	೧೧೧೩೪೮೭೦೦	೫೫೦೦೦೦
ರೇಲ್ವೆ ಕಟ್ಟೋಣ.	೬೫೯೦೫೦	೯೪೦೦೦
ರೇಲ್ವೆ ಲೆಖ್ಖ	೭೧೪೫೫೦೬೦	೭೫೬೫೦೦೦೦
ಇರಿಗೇಶನ್	೭೪೬೪೬೬೦	೬೮೫೦೫೦೦೦
ಇಮಾರತಿ ಖಾ.	೫೪೯೦೪೯೦೦	೫೪೯೦೬೦೦೦
ಲಷ್ಕರೀ ಖಾ.	೭೬೦೫೪೬೪೯೬೦	೭೫೯೦೯೬೦೦೦
ರಕ್ಷಣ ಕೆಲಸ	೬೭೪೯೯೬೪೦	೧೫೪೬೦೦೦
ಬಟ್ಟೆ	೯೨೪೭೦೬೬೦೬೦	೯೬೫೦೧೪೯೦೦೦
ಶಿಲಕು	೧೦೦೬೬೬೦	
ಪ್ರಾವಿಷ್ಶನ್ಸ್ ಆಲ್ ತೂಟ	೪೧೭೦೦೬೪೯೦	೬೮ ೦೦೦
ಒಟ್ಟು ಜೇರಿಜು.	೯೭೦೧೧೭೭೦೧೦	೯೬೪೪೪೧೦೦೦

ಕಸಕಡ್ಡಿಗಳೊಳಗಿನ ಜೀನಸುಗಳು—ಲಂಡನ್ ಶಹರದಲ್ಲಿ ಕಸಕಡ್ಡಿಗಳಲ್ಲಿ ಶಿಕ್ಕುವ ಜೀನಸುಗಳಿಂದ ಪ್ರತಿ ವರ್ಷ ಅಲ್ಲಿಯ ಮ್ಯುನಸಿಪಾಲಿಟಿಗೆ ಅಜಮಾಸು ೧೧೦೦೦ ರೂಪಾಯಿಗಳ ಉತ್ಪನ್ನವದೆ; ಅದರ ವಿವರವು ಅಲ್ಲಿಯ ಒಂದು ಪತ್ರದಲ್ಲಿ ಛಾಪಿಸಿ ಪ್ರಸಿದ್ಧವಾಗಿದೆ. ಅದು ಹ್ಯಾಗಂದರೆ:—ಬಡೆವ ಸಿನೆಗಳ ಕಾಜಿನಿಂದ ೧೧೬೦ ರೂ., ಎರಡನೆಯ ತರದ ಕಾಜಿನ ಚೂರುಗಳಿಂದ ೧೦೫೦ ರೂ., ಸಿನೆಗಳ ಬೆಣ್ಣೆಗಳಿಂದ ೭೨೦ ರೂ., ಹಳೆ ಕಬ್ಬಿಣದಿಂದ ೧೯೦೦ ರೂ., ಕಾಗದ ಮಾಡುವ ಅರಿವೆಯ ಚೂರುಗಳಿಂದ ೯೨೦ ರೂ., ಮುರುಕ ಚಾಕು, ಕತ್ತರಿಗಳಿಂದ ೬೬೦ ರೂ., ಎರಡನೆಯ ಧಾತುಗಳ ಮುರುಕ ಜೀನಸುಗಳಿಂದ ೪೭೭೦ ರೂ., ಮತ್ತು ಕಾಗದವ ಚೂರುಗಳಿಂವ ೪೯೦ ರೂಪಾಯಿ. ನಮ್ಮಲ್ಲಿ ಕಸದೊಳಗೆ ಎಷ್ಟೋ ಜೀನಸುಗಳು ಹಾಳಾಗಿ ಹೋಗುತ್ತವೆ. ಇದಕ್ಕೆ ನಮ್ಮ ಜನರ ಅಜ್ಞಾನ ದುರ್ಲಕ್ಷ್ಯಗಳೇ ಕಾರಣ. ಅಜ್ಞಾನದಿಂದ ಏನು ಮಾಡಬೇಕು, ಇದು ತಿಳಿಯುವದಿಲ್ಲ, ಲಂದನ ಪಟ್ಟಿ

ಣದಲ್ಲಿ ರಸ್ತೆಗಳಿಗೆ ಹಲಿಗೆಗಳನ್ನು ಹಾಕಿರುತ್ತಾರೆ, ಆ ಹಲಿಗೆಗಳ ಮೇಲಿಂದ ಬೂಟುಗಳನ್ನು ಹಾಕಿ ಓಡ್ಯಾಡುವದರಿಂದ ಬೂಟುಗಳು ಸವಿಯುತ್ತವೆ. ಕೆಲವರು ಆ ಧೂಳಿಯನ್ನು ಕ್ರಯಕ್ಕೆ ತಕ್ಕೊಂಡು ಅದರಿಂದ ಸರೀಸನ್ನು ಮಾಡಿ ಅದರ ವ್ಯಾಪಾರದಿಂದ ಜೀವಿಸುತ್ತಾರೆ. ಇಂಥ ಕೆಲಸಗಳನ್ನು ಮಾಡುವಷ್ಟು ನಮ್ಮ ಜನರಿಗೆ ಜ್ಞಾನವಿಲ್ಲ. ರಸಾಯನ ಶಾಸ್ತ್ರಾಭ್ಯಾಸದಿಂದಲೂ ಉದ್ಯೋಗಶಿಕ್ಷಣದಿಂದಲೂ ಈ ಜ್ಞಾನವು ಬಂದಾಗುವದು. ಆದರೆ ದುರ್ಲಕ್ಷಕ್ಕೆ ಉಪಾಯವೇನು? ಚಿಂದಿಗಳನ್ನು ಕೂಡಿಸಿಟ್ಟು, ಕಾಗದದ ಕಾರಖಾನೆಗಳಿಗೆ ಕಳುಹಿಸಿದರೆ ಲಾಭವಾಗುವಂತಿದೆ. ಆದರೆ ಈ ಕೆಲಸವನ್ನು ಯಾರೂ ಮನಸ್ಸುಗೊಟ್ಟು ಮಾಡುವದಿಲ್ಲ. ಇದರಿಂದ ಊರಿಗೆ ಬಬ್ಬಿಬ್ಬರ ಚರಿತಾರ್ಥ ಸಾಗಬಹುದು.

ಬಹು ಪ್ರಾಚೀನ ಕಾಲದಲ್ಲಿ ನಡಿಯುತ್ತಿದ್ದ ನಾಣ್ಯಗಳು—ವಿಲಾಯತಿಯ ಬಬ್ಬ ಹೆಸರಾದ ವರ್ತಮಾನ ಪತ್ರ ಕರ್ತನು ಪೂರ್ವಕಾಲದಲ್ಲಿ ನಾಣ್ಯಗಳು ನಡೆಯುತ್ತಿದ್ದ ಕ್ರಮವನ್ನು ಬರೆಯುತ್ತಾನೆ. ಅದು ಹ್ಯಾಗಂದರೆ:—ಸ್ವಿತ್ಸರ್ಲಂಡ ಸ್ಕಾಟಲಂಡ ದೇಶಗಳಲ್ಲಿ ಕಬ್ಬಿಣದ ಚೂರುಗಳು, ನ್ಯೂಫೌಂಡಲಂಡದಲ್ಲಿ ಬಣಗಿದ ಮೀನದ ಚೂರುಗಳು, ಫಿನ್‌ಲಂದವಲ್ಲಿ ಮೊಸಳೆಯ ಹಲ್ಲುಗಳ ಚೂರುಗಳು, ಅಂಗೋಲಾದಲ್ಲಿ ಬತ್ತದ ಪುಲ್ಲಿನ ಪೆಂಡಿಗಳು, ಅಬಿಸೀನಿಯಾದಲ್ಲಿ ಉಪ್ಪಿನ ಹರಳುಗಳು, ಸುಮಾತ್ರಾ ದ್ವೀಪದಲ್ಲಿ ಜೇನ ಪುಟ್ಟನೊಳಗಿನ ಮೇಣದ ಗುಳಿಗೆಗಳು, ಪಾಸಿಫಿಕ ಮಹಾ ಸಾಗರದೊಳಗಿನ ಎಲ್ಲ ನಡುಗಡ್ಡೆಗಳಲ್ಲಿ ಕೆಂಪು ಬಣ್ಣದ ಗರಿಗಳು, ತಾರ್ತರಿ ದೇಶದಲ್ಲಿ ಹಸಿ ಚಹದ ಎಲೆಗಳು, ಮೊದಾಗಾಸ್ಕರದಲ್ಲಿ ಕಬ್ಬಿಣದ ಚೂರುಗಳು, ಪರ್ಜರ್ಸಿ

ಯೂದಲ್ಲಿ ತಂಬಾಕದ ಬಣಗಿದ ಎಲೆಗಳು. ಎಲ್ಲಿ ನಯಾ
ದೊಳಗೆ ಲಗ್ನದಲ್ಲಿ ತಂಬಾಕದ ಎಲೆಗಳನ್ನೇ ಉಡುಗರೆ
ಯಾಗಿ ಕೊಡಕೊಳ್ಳುವರು. ಪ್ರತಿಯೊಬ್ಬ ಮದಿಮಗನು
ಮದಿಮಗಳಿಗೆ ೧೦೦ ರಿಂದ ೧೫೦ ರ ವರೆಗೆ ಈ ಪ್ರಕಾರದ
ಎಲೆಗಳ ಉಡುಗರೆಗಳನ್ನು ಕೊಡಬೇಕಾಗುತ್ತಿತ್ತು.

ಇತ್ತಿತ್ತಲಾಗಿ ಹಿಂದುಸ್ಥಾನ ದೇಶವನ್ನೂ ಇಲ್ಲಿಯ ಜನ
ರ ಸ್ಥಿತಿಯನ್ನೂ ಕುರಿತು ಬ್ರಿಟಿಷ್ ಪಾರ್ಲಮೆಂಟಿನ ಸಭಿ
ಕರಲ್ಲಿ ಅನೇಕರು ವಿಚಾರಿಸುತ್ತಿರುವರು. ಕೆಲವೆರು
ಮಹಾತ್ಮರು ಈ ದೇಶದ ಬಡತನವನ್ನು ಕೇಳಿ ಕಳವಳ
ಗೊಂಡು ಅದರ ಕಾರಣಗಳನ್ನೂ ನೀಗುವ ಉಪಾಯಗಳ
ನ್ನೂ ತಿಳಿಸುವದಕ್ಕಾಗಿ ಬಂದು ರೊಯಲ್ ಕಮಿಷನವು
ನಿಯಮಿಸಲ್ಪಡಲಿಕ್ಕೆ ಬೇಕೆಂದು ಆಗ್ರಹಪೂರ್ವಕವಾಗಿ ಪ್ರ
ತಿಪಾತಿಸಿದ್ದರಿಂದ ಬಂದು ಕಮಿಶನವು ನಿಯಮಿಸಲ್ಪಟ್ಟಿತು.
ಇದೊಂದು ಆನಂದದ ಸಂಗತಿಯೇ ಸರಿ. ಆದರೆ ಇಷ್ಟರಲ್ಲಿ
ಮತ್ತೊಂದು ಹೆಚ್ಚಿನ ಆನಂದದ ಸುದ್ದಿಯು ಬಂದಿದೆ. ಅದೇ
ನೆಂದರೆ, ಹಿಂದುಸ್ಥಾನದ ಆಡಳಿತವನ್ನು ವಿಚಾರಿಸುವ ಅಧಿ
ಕಾರವುಳ್ಳ ಸೆಕ್ರೆಟರಿ ಆಫ್ ಸ್ಟೇಟ ಫಾರ ಇಂಡಿಯಾ ಎಂಬ
ಮಂತ್ರಿಯು ಆಲೋಚನಾ ಸಭೆಯ ಆದರೆ ಇಂಡಿಯಾ
ಕೌನ್ಸಿಲದ ೫ ಮಂದಿ ಸಭಿಕರು ಪೆನ್ಶನ್ ತೆಗದುಕೊಂಡು
ಸ್ವದೇಶದಲ್ಲಿ ಕೆಲಸದಿಂದ ನಿವೃತ್ತರಾಗತಕ್ಕವರಿರುತ್ತಾರೆ. ಅವ
ರ ಬದಲಾಗಿ ಹಿಂದುಸ್ಥಾನದ ಕೆಳಗೆ ಕಾಣಿಸಿದ ಮೂರು
ಜನ ಮುಖಂಡರನ್ನು ನೇಮಿಸಬೇಕೆಂಬ ಆಲೋಚನೆಯು
ನೆಡೆದಿರುತ್ತದೆಂದು ಬಂದು ವರ್ತಮಾನಪತ್ರದಿಂದ ತಿಳಿಯು
ತ್ತದೆ. ಬಂಗಾಲ ಇಲಾಖೆಯಿಂದ ಉಮೇಶಚಂದ್ರ ಬಾನ
ರ್ಜಿ ಎಂಬವರನ್ನು. ನಮ್ಮ ಇಲಾಖೆಯಿಂದ ಬಮ್ಬಾಯೀನ

ತಯಬಜಿ ಎಂಬವರನ್ನೂ, ಮಂಜ್ಯಾಸ ಅಲಾಖೆಯಿಂದ ಶಂಕರನಾಯರ ಎಂಬವರನ್ನೂ ನೇಮಿಸುವರೆಂತಲೂ ಪ್ರಸಿದ್ಧನಾಗಿದೆ. ಈ ಸುದ್ದಿಯು ನಿಜವಾದರೆ ಹಿಂದುಸ್ಥಾನದ ದೈವವು ತೆರೆಯಿತೆಂದು ಅನ್ನಲಿಕ್ಕೆ ಏನೂ ಬಾಧಕವಿಲ್ಲ.

ಹೊಲಿಗೆಯ ಕೆಲಸವನ್ನು ಕಲಿಸಿದ್ದರಿಂದ ಹೊಟ್ಟೆ ಹೊರಕೊಳ್ಳಲಿಕ್ಕೆ ಬಂದು ಅನುಕೂಲವಾದ ಹೋರೆಯನ್ನು ಕಲಿಸಿದಂತಾಗುವದಲ್ಲದೆ ಸ್ವಚ್ಛತನ ಬರಣಿಗಳ ಚಟಿಗಳು ಹತ್ತುತ್ತವೆ. ಉದ್ಯೋಗದ ಹಂಬಲವು ನೆಲೆಗೊಳ್ಳುತ್ತದೆ. ಮಿತವ್ಯಯದ ಸ್ವಭಾವವು ಬೆಳೆಯುತದೆ. ಎಲ್ಲ ಜೊಟ್ಟುಗಳಿಗೂ ಕೆಲಸ ಶಿಕ್ಕು ಅವು ಹಗುರಾಗಿ ಬೇಕಾದ ಕೆಲಸಕ್ಕೆ ಬರುತ್ತವೆ. ವಿಚಾರದ ಪಾಠಗಳು ಬಂದೇ ಸವನೇ ಸಾಗಿಸುವದರಿಂದ ಬುದ್ಧಿಯ ಮಾಂದ್ಯವು ಹುಟ್ಟುವದು, ಆದರೆ ನಡು ನಡುವೆ ಈ ಶಾರೀರಶ್ರಮದ ಪಾಠಗಳನ್ನು ಇಡುವದರಿಂದ ಮಾಂದ್ಯ ದೂರಾಗುವದಲ್ಲದೆ ಶಿಕ್ಷಕರಿಗೂ ಶಿಷ್ಯರಿಗೂ ಪ್ರೇಮದ ವ್ಯವಹಾರವು ಬೆಳೆಯುವದು, ಎಂದು ಬಬ್ಬ ಗ್ರಂಥಕಾರನು ತಿಳಿಸುತ್ತಾನೆ.

METHODS OF TEACHING-OBJECT LESSON-CLAY.

ಶಿಕ್ಷಣದ ಪದ್ಧತಿಗಳು.—ಒಡವೆ ಪಾಠ.

ಜಿಗಟುಮಣ್ಣು.

ಒಡವೆ ಪಾಠಗಳಿಂದ ಎಷ್ಟು ಪ್ರಯೋಜನವುಂಟೆಂಬದನ್ನು ಸರ್ವರಿಗೂ ಇಸವಿಯ ಅಕ್ಟೋಬರ ತಿಂಗಳ ಪಾಲಾ ಪತ್ರಕದ ಸಂಚಿಕೆಯಲ್ಲಿ ತಿಳಿಸಿರುತ್ತೇವಷ್ಟೇ. ಈಗ ಇದರಿಯಲ್ಲಿ ಜಿಗಟು ಮಣ್ಣಿನ ವಿಷಯವಾಗಿ ಬಂದು ಪಾಠವನ್ನು ಬರೆದಿರುತ್ತೇವೆ. ಈ ಪಾಠವನ್ನು ಶಿಕ್ಷಕರು ಕಲಿಸಿ ಅದನ್ನು ಕುರಿತು ತಮ್ಮ ಅಭಿಪ್ರಾಯವನ್ನು ಬರೆದು ತಿಳಿಸುವರೆಂದು ಕೋರುತ್ತೇವೆ.

ಜಿಗಟು ಮಣ್ಣು

ಸಲಕರಿತ್ಯ—ಹಸಿಮಣ್ಣು, ಒಣಮಣ್ಣು ಬೇರೆ ಬೇರೆ ಬಣ್ಣದ್ದು, ಸುಟ್ಟ ಮಣ್ಣಿನ ಹೆಂಟೆಗಳು, ನೀರು ತುಂಬಿದ ಎರಡು ಕಾಜಿನ ಪಾತ್ರೆಗಳು, ಹಂಚು, ಇಟ್ಟಂಗಿ ಮುಂತಾದ ಮಣ್ಣಿನ ಸಾಮಾನುಗಳು; ಬರಣಿ, ಕೊಡ ಮುಂತಾದ ಪಾತ್ರೆಗಳು, ಸುತ್ತಿಗೆ, ಉಣ್ಣೆ, ರೇಶಿಮೆ ವಸ್ತ್ರ, ಸ್ಪಂಜ ಇ.

ಶಿಕ್ಷಕ—(ಜಿಗಟು ಮಣ್ಣು ತೋರಿಸಿ) ನನ್ನ ಕೈಯಲ್ಲಿರುವದೇನು?

ವಿದ್ಯಾರ್ಥಿ—ಜಿಗಟು ಮಣ್ಣು.

ಶಿ—ಇದು ಎಲ್ಲಿ ಶಿಗುತ್ತದೆ?

ವಿ—ನೆಲದೊಳಗೆ. ನೆಲದೊಳಗಿಂದ ಇದನ್ನು ಅಗಿದು ತೆಗೆಯುತ್ತಾರೆ.

ಶಿ—ನೆಲದೊಳಗೆ ಮತ್ತೆ ಏನೇನು ಶಿಗುತ್ತವೆ?

ವಿ—ಕಲ್ಲು, ಕಬ್ಬಿಣ, ತಾಮ್ರ ಮುಂತಾದವು.

ಶಿ—ಇವು ನೆಲದೊಳಗೆ ಶಿಗುವ ಪದಾರ್ಥಗಳು. ಭೂಮಿಯೊಳಗೆ ಮಾಡಿದ ತಗ್ಗುಗಳಿಗೆ ಖನಿ ಎಂದೆನ್ನುವರು. ಈ ಪದಾರ್ಥಗಳು ಖನಿಗಳೊಳಗೆ ಹುಟ್ಟುವದರಿಂದ ಇವಕ್ಕೆ "ಖನಿಜ" ವೆಂಬ ಹೆಸರು. ಮಣ್ಣು ಎಂಥ ಪದಾರ್ಥವು?

ವಿ—ಮಣ್ಣು ಖನಿಜ ಪದಾರ್ಥವು.

ಶಿ—ಎಷ್ಟೋ ಮೈಲು ಉದ್ದವಾದ ಮಣ್ಣಿನ ಥರಗಳು ನೆಲಕ್ಕೆ ಹೊಂದಿ ಪಸರಿಸಿರುವವು. ಅದರಿಂದ ಮಣ್ಣನ್ನು ಸಹಜವಾಗಿ ಅಗಿದು ತೆಗೆಯಬಹುದು. ಇಗೋ, ನನ್ನ ಮುಂದಿರುವ ಮಣ್ಣಿನ ಹೆಂಟೆಗಳೆಲ್ಲ ಒಂದೇ ಬಣ್ಣದವಿರುವವೋ?

ವಿ—ಇಲ್ಲ, ಅವು ಬೇರೆ ಬೇರೆ ಬಣ್ಣದವಿವೆ.

ಶಿ—ಆ ಬಣ್ಣಗಳನ್ನು ಹೇಳಿರಿ.

ವಿ—ನೀಲಿ, ಊದಿ, ಬದಾಮಿ, ಸಾದಗಪ್ಪು, ಕೆಂದ.

ಶಿ—ಶುದ್ಧವಾದ ಮಣ್ಣಿನ ಬಣ್ಣವು ಬಿಳದಿರುವದು. ಕಬ್ಬಿಣದ ಜಂಗು ಕೂಡಿ ಬೇರೆ ಬೇರೆ ಬಣ್ಣದ ಮಣ್ಣಾಗುವದು. ಮಣ್ಣು ವಿಪುಲವಾಗಿ ಶಿಗುತ್ತದೆ. ಇದು ಬಹು ಪ್ರಯೋಜನಕರವಾದ ಪದಾರ್ಥವು. ಇದರಿಂದ ಏನೇನು ಮಾಡುತ್ತಾರೆ ಹೇಳರಿ ನೋಡುವ.

೧ನೇ ವಿ—ಮನೆಯನ್ನು ಹೊಚ್ಚಲಿಕ್ಕೆ ಬೇಕಾದ ಪಂಚುಗಳನ್ನು ಮಾಡುತ್ತಾರೆ.

೨ನೇ ವಿ—ಇಟ್ಟಂಗಿಗಳನ್ನೂ, ಹೆಂಡೆಗಳನ್ನೂ ಮಾಡುತ್ತಾರೆ.

೩ನೇ ವಿ—ಬಲೆಗಳನ್ನು ಹಾಕುತ್ತಾರೆ.

೪ನೇ ವಿ—ಪಣತಿ, ಹರಿವಾಣ, ಮುಗಿ, ಕೊಡ, ಗಡಿಗಿ ಮುಂತಾದ ಪಾತ್ರೆಗಳನ್ನು ಮಾಡುತ್ತಾರೆ.

೫ನೇ ವಿ—ಉಪ್ಪಿನ ಕಾಯಿಯ ಬರಣಿಗಳನ್ನು, ಚಹ ಕುಡಿಯುವ ಪಾತ್ರೆಗಳನ್ನು ದೌತಿ ಮುಂತಾದವುಗಳನ್ನು ಮಾಡುತ್ತಾರೆ.

ಶಿ—ಮಣ್ಣಿನಿಂದ ನಮಗೆ ಬಹಳ ಪ್ರಯೋಜನ ಉಂಟು. ಮಕ್ಕಳಿರಾ! ಇಷ್ಟು ಪ್ರಯೋಜನಕರವಾದ ಬಡವೆಯ ಗುಣಗಳನ್ನು ನೀವು ತಿಳಕೊಳ್ಳಬೇಕೆಂದು ನಾನು ಬಯಸುತ್ತೇನೆ. ಈ ಮಣ್ಣಿನ ಹೆಂಟೆಯನ್ನು ನೀವು ಎಚ್ಚರದಿಂದ ಪರೀಕ್ಷಿಸಿದರೆ ನಿಮಗೆ ಬಹಳ ಸಹಾಯವಾಗುವದು. ಇಕ್ಕೊಳ್ಳಿರಿ, ಈ ಹೆಂಟೆಯ ತುಂಡನ್ನು ಮೊದಲನೇ ಎರಡನೇ ಬೊಟ್ಟುಗಳ ನಡುವೆ ಬತ್ತಿ ನೋಡಿರಿ, ಯಾವ ಗುಣವು ನಿಮಗೆ ತೋಚುತ್ತದೆ?

ವಿ—ಇದರಿಂದ ಮಣ್ಣು ಮೆತ್ತಗುಂಟೆಂದು ನಮಗೆ ಕಾಣುತ್ತದೆ.

ಶ್ರೀ—ಅಹುದು. ಇನ್ನು ಹೆಂಟೆಯನ್ನು ನಾನು ಕೆಳಗೆ ಒಗೆಯುತ್ತೇನೆ. ಏನಾಯಿತು ಹೇಳಿರಿ.

ವಿ—ಪುಡಿ ಪುಡಿಯಾಯಿತು.

ಶ್ರೀ—ಮಣ್ಣಿನಲ್ಲಿ ಮತ್ತೆ ಯಾವ ಗುಣ ಉಂಟು?

ವಿ—ಬೇಗ ಬಡಿಯುವ ಗುಣ.

ಶ್ರೀ—ಇಗೋ ಈ ಮಣ್ಣಿನ ಹೆಂಟೆಯ ಮೇಲೆ ನಾಲ್ಕು ಕಾಳು ನೀರು ಎಚ್ಚುತ್ತೇನೆ. ನೋಡಿರಿ, ನೀರು ಏನಾಯಿತು? ನೆಲದ ಮೇಲಂತು ಬಿದ್ದಿಲ್ಲ. ನೆಲ ಹಸಿ ಯಾಗಿಲ್ಲ. ಹೆಂಟೆಯ ಮೇಲೂ ಕಾಣುವದಿಲ್ಲ.

ವಿ—ನೀರು ಇಂಗಿತು, ಅಥವಾ ಹೆಂಟೆಯು ನೀರನ್ನು ಕುಡಿಯಿತು.

ಶ್ರೀ—ಹಾಗಾದರೆ ಮಣ್ಣಿನಲ್ಲಿ ಯಾವ ಗುಣ ಉಂಟು?

ವಿ—ನೀರು ಹೀರುವ ಅಥವಾ ಕುಡಿಯುವ ಗುಣ.

ಶ್ರೀ—ಈ ಗುಣವುಳ್ಳ ಬೇರೆ ಪದಾರ್ಥಗಳು ಯಾವವು?

ವಿ—ಸ್ಪಂಜು, ಅರಿವೆ.

ಶ್ರೀ—ಈ ಸ್ಪಂಜು ನೋಡಿರಿ, ಇದು ಹ್ಯಾಗೆ ಕಾಣುತ್ತದೆ?

ವಿ—ಇದು ಜೇನ ಹುಟ್ಟಿನಂತೆ ಕಾಣುತ್ತದೆ. ಇದರ ಮೈ ತುಂಬ ತೂತುಗಳಿರುವವು.

ಶ್ರೀ—ನೀರಿನಲ್ಲಿ ಸ್ಪಂಜು ಹಾಕಿದ ಕೂಡಲೆ ಇದರ ಛಿದ್ರ ಗಳಲ್ಲಿ ನೀರು ಶೇರುತ್ತದೆ. ಈ ಛಿದ್ರಗಳಲ್ಲಿ ಹಿಡಿಸುವಷ್ಟು ನೀರಿಗಿಂತ ಹೆಚ್ಚು ನೀರು ಈ ಸ್ಪಂಜಿದಲ್ಲಿ ಹಿಡಿಸಲಾರದು. ಅದೇ ಹಾಡು ಈ ಹೆಂಟೆಯದು. ಈ ಹೆಂಟೆಯ ಮೇಲೆ ಮತ್ತಿಷ್ಟು ನೀರು ಹಾಕುತ್ತೇನೆ. ಈಗ ನೀರು ಹೊರಗೆ ಪರಿಯುವದು. ಹೀಗೆ ಯಾಕೆ?

ವಿ—ಹೆಂಟೆಯು ಪೂರಾ ನೆನೆದು ನೀರು ಹಿಡಿಸದಂತಾದ್ದ ರಿಂದ ನೀರು ಹೊರಗೆ ಹರಿಯುತ್ತವದು.

ಶ—ಮೊದಲು ನೀರು ಯಾತರಲ್ಲಿ ನಿಂತು ಕಾಣದಹಾಗಾಗಿತ್ತು?

ವಿ—ಹೆಂಟೆಯೊಳಗಿನ ಛಿದ್ರಗಳೊಳಗೆ ನಿಂತು ಕಾಣದ ಹಾಗಾಗಿತ್ತು.

ಶ—ಹಾಗಾದರೆ ಮಣ್ಣಿನಲ್ಲಿ ಯಾವ ಗುಣವುಂಟು?

ವಿ—ಅದು ತೂತು ತೂತುಳ್ಳದ್ದಾಗಿರುವದು.

ಶ—ತೂತುಳ್ಳದ್ದಕ್ಕೆ ಛಿದ್ರಮಯ ಅಥವಾ ಸಚ್ಛಿದ್ರವೆನ್ನುತ್ತಾರೆ. ಬಹುತರ ಎಲ್ಲ ಪದಾರ್ಥಗಳಲ್ಲಿ ತೂತುಗಳಿರುತ್ತವೆ. ನೀರಿನಲ್ಲಿಯೂ ಈ ಪ್ರಕಾರ ತೂತುಗಳುಂಟು. ನೀರಿನಲ್ಲಿ ಸ್ವಲ್ಪು ಸಕ್ಕರೆ ಹಾಕಿದರೆ ಅದು ಕಾಣದಹಾಗಾಗುತ್ತದೆ. ಸಕ್ಕರೆಯು ನೀರಿನ ಛಿದ್ರಗಳಲ್ಲಿ ಅಡಗಿ ನಿಲ್ಲುತ್ತದೆ. ಛಿದ್ರವುಳ್ಳ ಪದಾರ್ಥಗಳಿಗೆ ಸಚ್ಛಿದ್ರ ಪದಾರ್ಥಗಳೆನ್ನುವರು.

ಶ—ಮಣ್ಣಿನೊಳಗಿನ ತೂತುಗಳು ನಮಗೆ ಕಾಣಿಸುತ್ತವೋ?

ವಿ—ಇಲ್ಲ.

ಶ—ಹಾಗಾದರೆ ಇದು ತೂತುಳ್ಳದ್ದೆಂದು ಹ್ಯಾಗೆ ಅನ್ನಬಹುದು,

ವಿ—ಇದು ನೀರನ್ನು ಹೀರಿಕೊಳ್ಳುವದರಿಂದ ಹೀಗೆನ್ನಬಹುದು.

ಶ—ಬಣ ಮಣ್ಣಿನಲ್ಲಿ ನೀರನ್ನು ಹೀರಿಕೊಳ್ಳುವ ಆತುರವು ಹೆಚ್ಚು ಉಂಟು. ಈ ಮಣ್ಣಿನ ಪುಡಿಯನ್ನು ನಾಲಿಗೆಯ ಮೇಲೆ ಹಾಕಿರಿ, ಏನಾಗುತ್ತದೆ ನೋಡಿರಿ.

ವಿ—ಅದು ನಾಲಿಗೆಗೆ ಅಂಟಿಕೊಳ್ಳುವದು.

ಶ—ಬಣ ಮಣ್ಣು ನಾಲಿಗೆಯ ಹಸಿಯನ್ನು ಹೀರಿಕೊಳ್ಳುವದು ಮತ್ತು ಹಸಿಯಾಗಿ ಅದು ಜಿಗಟಾಗುವದು. ಈ ಜಿಗಟುತನವೇ ಬಹಳ ಗೌರವದ ಗುಣವು.

SELECTIONS FROM THE KARNATIK GAZETTEER.

ಕನ್ನಡ ಗೆಜೆಟಿಯರ್‌ದಿಂದ ಅವತರಣಿಗಳು.

(೧೩೭ನೇ ಪುಟದಿಂದ ಸಾಗಿದ್ದು)

ಬೆಳಗಾವ ಜಿಲ್ಲೆಯ ವರ್ಣನೆ.

ತಾಲೂಕುಗಳು.

ಬೆಳಗಾವಿಯ ತಾಲೂಕು.

ಕ್ಷೇತ್ರ—ಇದು ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಕೊಲ್ಲಾಪೂರ ಇಲಾಖೆಯ ದಕ್ಷಿಣಕ್ಕೆ ಇರುತ್ತದೆ. ಇದರಲ್ಲಿ ಸರಕಾರೀ ಹಳ್ಳಿಗಳು ೧೨೨, ದುಮಾಲೀ ಗ್ರಾಮಗಳು ೪೧ ಇರುತ್ತವೆ. ಕ್ಷೇತ್ರಫಲ ೬೬೩ ಚ. ಮೈಲು, ಜನಸಂಖ್ಯೆ ೧೨೪೪೩೩, ಭೂಮಿಯ ಕಂದಾಯ ೧೫೦೪೧೦ ರೂಪಾಯಿ.

ಸ್ವರೂಪ ಭೂಮಿ—ಪಶ್ಚಿಮದಲ್ಲಿ ಸಹ್ಯಾದ್ರಿಯ ಸೆತ್ತಿಯ ವರೆಗ ಈ ತಾಲೂಕು ಹೋಗಿರುತ್ತದೆ. ಅಲ್ಲಿ ಗುಡ್ಡಗಳು ಬಹಳ; ಅವುಗಳ ಬುಡದಲ್ಲಿ ಒಕ್ಕಲತನಕ್ಕೆ ಬರುವಂಥ ಬೆಳೆಯುಳ್ಳ ಭೂಮಿಯು ಅಲ್ಲಲ್ಲಿಗ ಇರುತ್ತದೆ. ಆಗ್ನೇಯದಿಕ್ಕಿನ ಭೂಮಿಯು ತಕ್ಕಮಟ್ಟಿಗೆ ಸವನೆಲದ್ದಿಂಟು. ಮಾಲಪಹಾರಿ, ಮಾರ್ಕಂಡೆಯಿ ಎಂಬ ಹೊಳೆಗಳ ಧಡದ ಭೂಮಿಯು ಬೆಳೆಯುಳ್ಳದ್ದುಂಟು. ಪೂರ್ವ, ದಕ್ಷಿಣಗಳ ಭೂಮಿ ಮುಖ್ಯವಾಗಿ ಯೆರೆ, ಪಶ್ಚಿಮ ಉತ್ತರಗಳ ಭೂಮಿಯು ಮುಖ್ಯವಾಗಿ ಕೆಂಪು ಬಡ ಭೂಮಿಯು, ಗುಡ್ಡಗಳ ಪ್ರದೇಶಗಳಲ್ಲಿ ಕುಮ್ರಿ ಹೈರು ಮಾತ್ರ ಬರುತ್ತದೆ.

ಹವೆ, ಮಳೆ, ನೀರು—ಪಶ್ಚಿಮ ಭಾಗದ ಹವೆ ಶೀತ; ಮಳೆಗಾಲದಲ್ಲಿಯೂ, ಚಳಿಗಾಲದಲ್ಲಿಯೂ ಜ್ವರ ಬರುವದು. ಪೂರ್ವ ಭಾಗದ ಹವೆಯು ಅಷ್ಟು ಶೈತ್ಯವುಳ್ಳದ್ದಿಲ್ಲ; ಅಲ್ಲಿ ಜ್ವರೋಪದ್ರವ ಕಡಿಮೆ. ಪಶ್ಚಿಮದಲ್ಲಿ ಮಳೆ ಬಹಳ, ಪೂರ್ವದಲ್ಲಿ ಕಡಿಮೆ. ಬೆಳಗಾವಿಯಲ್ಲಿ ೩೩ರಿಂದ ೫೧ ಇಂಚಿ

ನವರೆಗೆ, ಸರಾಸರಿ ೫೦ ಇಂಚು ಮಳೆ ಬೀಳುವದು. ಸಣ್ಣ ಸರವುಗಳಲ್ಲಿಯೂ ಕೆರೆ ಬಾವಿಗಳಲ್ಲಿಯೂ ಕುಡಿಯುವ ನೀರು ವಿಪುಲವಾಗಿದೊರಿಯುತ್ತದೆ.

ಜನರು—ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೮೮.೪ ಹಿಂದೂ ಜನರು, ೮.೬ ಮುಸಲ್ಮಾನರು, ೨.೭ ಕ್ರಿಸ್ತಿಯನ್ನರು ಉಂಟು. ಹಿಂದೂ ಜನರಲ್ಲಿ ಬ್ರಾಹ್ಮಣರು ೬೦೩, ಜೈನರು ೨೭೭, ಲಿಂಗವಂತರು ೪೯೮೦, ಕುರುಬರು ೧೬೪೦, ಬೇಡರು ೫೩೪೬, ಹೊಲಿಯರು ೬೭೦೭ ಇತ್ಯಾದಿ.

ಗ್ರಾಮಗಳು.

ಬೆಳಗಾವಿ—ಉತ್ತರ ಅಕ್ಷಾಂಶ ೧೫, ೫೦ ಪೂರ್ವ ರೇಖಾಂಶ ೭೪, ೪೦ ಧಾರವಾಡದ ಉತ್ತರದಲ್ಲಿ ೪೮ ಮೈಲಿನ ಮೇಲೆ ಅದೆ. ಊರಿನ ಕ್ಷೇತ್ರವು ೨೮೯ ಯೆಕರು, ಜನ ಸಂಖ್ಯೆ (೧೯) ೨೫೦೦೦ ಅಂದರೆ ಎಕರಿಗೆ ೭೯ ಜನವಾಯಿತು. ಇದರ ಹೊರ್ತು ಯುರೋಪಿಯನ ವಸ್ತಿಯು ಜನಸಂಖ್ಯೆ ೯೫೮೨ ಬೇರೆ ಉಂಟು. ಬೆಳಗಾವಿಯು ಸಮುದ್ರ ತೀರದಿಂದ ಸರಳ ರೇಖೆಯಿಂದ ೫೦ ಮೈಲು ದೂರ ಇರುತ್ತದೆ; ಸಮುದ್ರದ ಪೃಷ್ಠಭಾಗದಿಂದ ಸುಮಾರು ೨೦೦೦ ಫೂಟು ಎತ್ತರ ಉಂಟು.

ಸ್ವರೂಪ—ಬೆಳಗಾವಿಯ ಪಶ್ಚಿಮಕ್ಕೆ ಸಹ್ಯಾದ್ರಿಯ ನತ್ತಿಯು ೨೫ ಮೈಲು ದೂರ ಇರುತ್ತದೆ; ನಡುವೆ ಬಹುತರ ಗುಡ್ಡಗಾಡು ಭೂಮಿಯೇ ಉಂಟು. ಎಳ್ಳೂರಗಡ, ಬೆಳಗುಂದೀ ಗುಡ್ಡ, ವೈಜನಾಥನ ಗುಡ್ಡ ಮುಂತಾದ ಗುಡ್ಡಗ

ಳು ಬೆಳಗಾವಿಯ ನೆರೆಯಲ್ಲಿ ಇರುತ್ತವೆ. ಊರ ದಕ್ಷಿಣಕ್ಕೆ ಅರ್ಧ ಮೈಲಿನ ಮೇಲೆ ಶಹಾಪೂರ, ಹೊಸೂರು, ಹೊಸಹಟ್ಟಿ ಎಂಬ ಸೊಂಗಲೀ ಸಂಸ್ಥಾನದ ಗ್ರಾಮಗಳಿರುತ್ತವೆ. ಊರ ಸುತ್ತು ಮುತ್ತು ನಾನಾ ಪ್ರಕಾರದ ಬನಗಳು ನಿಬಿಡವಾಗಿ ಬೆಳೆದದ್ದರಿಂದ ದೂರಿಂದ ಬೆಳಗಾವಿಯು ನಿಬಿಡವಾದ ಅಡವಿಯು ಹಾಗೆ ಕಾಣುತ್ತದೆ.

ಭೂವರ್ಣನೆ—ಬೆಳಗಾವಿಯ ನೆಲದೊಳಗೆ ಜಂಬೂರಿ ಇಟ್ಟಂಗಿಯೆಂಬ ಮಿಮುವಾದ ಕಲ್ಲಿನಂಥ ಥರವಿರುತ್ತದೆ. ಈ ಇಟ್ಟಂಗಿಗಳನ್ನು ಕೊರೆದು ತೆಗೆದು ಅವುಗಳಿಂದ ಮನೆಗಳನ್ನು ಕಟ್ಟುವರು. ಕೆಲವು ಕಡೆಯಲ್ಲಿ ನೆಲದೊಳಗೆ ಕರೇ ಕಲ್ಲುಗಳೂ ದೊರಿಯುತ್ತವೆ.

ನೀರು—ಬಹುತರ ಮನೆಮನೆಗೆ ಬಾವಿಗಳಿರುವದಲ್ಲದೆ, ಮ್ಯುನಿಸಿಪಾಲಿಟಿಯವರು ನಾಲ್ಕೈದು ದೊಡ್ಡ ದೊಡ್ಡ ಬೇದುವ ಬಾವಿಗಳನ್ನು ಬೇರೆ ಬೇರೆ ಭಾಗಗಳಲ್ಲಿ ಕಡಿಸಿ ಕಟ್ಟಿದ್ದಾರೆ. ಈ ಬಾವಿಗಳ ನೀರು ಶೀ ಇರುತ್ತದೆ. ನೈಋತ್ಯ ಮೂಲೆಯಲ್ಲಿ ನೀರು ಹೆಚ್ಚು ಸಾಳು ಇರುತ್ತದೆ. ಇವಲ್ಲದೆ ಊರ ಸುತ್ತು ಮುತ್ತು ೫೫ ಕೆರೆಗಳಿರುತ್ತವೆ. ಕಿಲ್ಲೆಯ ಕೆರೆಯು ಕೋಟೆಯ ಒಳಯಲ್ಲಿ ಇರುತ್ತದೆ. ಇದು ಎಲ್ಲಕ್ಕೂ ದೊಡ್ಡದು, ಕ್ಷೇತ್ರವು ಸುಮಾರು ೬೦ ಎಕರು ಇರುತ್ತದೆ. ಕಪಿಲೇಶ್ವರನ ಎರಡು ಸಣ್ಣ ಹೊಂಡಗಳು ಅದೇ ಗುಡಿಯ ಬಳಿಯಲ್ಲಿ ಶಹಾಪೂರಕ್ಕೆ ಹೋಗುವ ಮಾರ್ಗದ ಎಡ ಬಲಗಳಲ್ಲಿ ಇರುತ್ತವೆ. ಅರಗನ ಕೆರೆಯು ನೆಗುಲೆರಿಯ ಮಾರ್ಗದ ಮೇಲೆ ಇರುತ್ತದೆ. ಜಕೀರ ಹೊಂಡವು ಖಾನಾಪುರದ ಮಾರ್ಗದ ಮೇಲೆ ಇರುತ್ತದೆ. ಈ ಕೆರೆಗಳು ಬೇಸಿಗೆಯಲ್ಲಿ ಬತ್ತುತ್ತವೆ. ಇವುಗಳ ನೀರು ಯಾರೂ ಕುಡಿಯುವದಿಲ್ಲ; ದನಗಳಿಗೂ ಭೂಮಿಗೂ ಮಾ

ತ್ರ ಕೆಲಸಕ್ಕೆ ಬರುತ್ತದೆ. ಕೋಟೆಯು ಕಂದಕದಲ್ಲಿಯೂ ನೀರು ಬೇಸಿಗೆಯವರೆಗೆ ಇರುತ್ತದೆ.

ಯುರೋಪಿಯರ್ನ ವಸ್ತಿಯು ದಕ್ಷಿಣಕ್ಕೆ ನಾಗಪುರಿಯೆಂ ಬದೊಂದು ಸಣ್ಣ ಜರಿಯು ಹರಿಯುತ್ತದೆ. ಈ ಜರಿಯು ಚೌಕೋನಾಕೃತಿಯಾಗಿ ಕಟ್ಟದ್ದೊಂದು ಸಣ್ಣ ಹೊಂಡದೊಳಗಿಂದ ಹನ್ನೆರಡು ತಿಂಗಳೂ ಹೆರಿಯುತ್ತದೆ. ಇದರ ನೀರು ಅತಿ ನಿರ್ಮಲವೂ ಆರೋಗ್ಯಕರವೂ ಇರುತ್ತದೆ. ತುಡಿಯು ಎಂಬ ಪಳ್ಳಿಯಿಂದ ಬೆಳಗಾವಿಗೆ ನೀರು ತರುವ ಆಲೋಚನೆಯುಂಟು.

ಹವೆ, ಮಳೆ—ಊರಿನ ಸುತ್ತು ಮುತ್ತು ಗುಡ್ಡಗಳಿರುವದರಿಂದ ಮಳೆಯು ಬಹಳ ಆಗುತ್ತದೆ; ಸರಾಸರೀ ವಾರ್ಷಿಕದಿಂದ ವರ್ಷದೊಳಗೆ ೫೦ ಇಂಚು ಮಳೆ ಬೀಳುತ್ತದೆಂದು ಹೇಳಬಹುದು. ಬೇಸಿಗೆಯಲ್ಲಿ ಹವೆಯು ಆರೋಗ್ಯದ್ದಿರುತ್ತದೆ. ಮಳೆಗಾಲದ ಆರಂಭದಲ್ಲಿ ಚಳಿ ಜ್ವರದ ಉಪದ್ರವ ಬಹಳ. ಚಳಿಗಾಲದಲ್ಲಿ ಬೆಳಿಗ್ಗೆ ಸಂಜೆಗೂ ಮಂಜು ಬೀಳುತ್ತದೆ. ಹೊರಗಿಂದ ಬಂದವರಿಗೆ ಹವೆಯು ಮಾನಿಸುವದಿಲ್ಲ. ಪಟಕಿಯ ಉಪದ್ರವವು ಬಹು ಕಡಿಮೆ.

ಕೋಟೆಯು—ಊರಿನ ಪೂರ್ವಕ್ಕೆ ಬಂದು ಗುಂಡಿನ ಅಳತೆಯೊಳಗೆ ಇರುತ್ತದೆ. ಈ ಕೋಟೆಯನ್ನು ಸರಕಾರದವರು ದುರಸ್ತು ಇಟ್ಟಿದ್ದಾರೆ. ಇದು ವರ್ತುಳಾಕೃತಿಯಾಗಿರುತ್ತದೆ; ಪರಮಾವಧಿ ಉದ್ದಳತೆ ೧೦೦೦ ಯಾರ್ಡು, ಅಗಲು ೮೦೦ ಯಾರ್ಡು, ಕ್ಷೇತ್ರ ೧೦೦ ಎಕರು. ಇದರ ಸುತ್ತು ಮುತ್ತು ನೀರು ತುಂಬಿದ ಕಂದಕವೂ, ಎತ್ತರವಾದ ಗೋಡೆಗಳೂ ಭದ್ರವಾಗಿರುತ್ತವೆ; ಅಗಸೆಗಳು ಎರಡುಂಟು. ಕೋಟೆಯ ಗೋಡೆಯೊಳಗೆ ಹಾಳಾದ ಗುಡಿಗಳಿಂದ ತಂದಂಥ ಚಿತ್ರಗಳುಳ್ಳ ಕಲ್ಲುಗಳೂ, ಶಿಲಾಲಿಪಿಗಳೂ, ವೀರಗಲ್ಲು

ಗಳೂ, ಮಹಾಸತಿ ಕಲ್ಲುಗಳೂ ಕಾಣುತ್ತವೆ. ಕೋಟೆಯ ಗೋಡೆಯಲ್ಲಿ ಮೂರು ಕಡೆಯಲ್ಲಿ ಫಾರ್ಸೀ ಲಿಪಿಗಳಿವೆ. ಈಶಾನ್ಯದಿಕ್ಕಿನ ಗೋಡೆಯ ಮೇಲೆ ಸ್ಥಳದಲ್ಲಿ ಯಾಕೂಬ ಅಲ್ಲೀಖಾನನೆಂಬುವನು ಈ ಗೋಡೆಯನ್ನು ಕಟ್ಟಿಸಿದನೆಂದು ಲೇಖವದೆ. ಆಗ್ನೇಯದಿಕ್ಕಿನ ಗೋಡೆಯ ಮೇಲೆ ಇಂಥಾದೇ ಬಂದು ಲಿಪಿಯು ಸ್ಥಳದಲ್ಲಿ ಅಬದುಲ್ಲ ಹುಸೇನನ ಕಾಲದಲ್ಲಿ ಈ ಕೋಟೆಯನ್ನು ದುರಸ್ತು ಮಾಡಿ ಯಾವತ್ತು ಬಹುತರ ಹೊಸದಾಗಿ ಕಟ್ಟಿಸಿದಂತೆ ಭದ್ರ ಮಾಡಲ್ಪಟ್ಟತೆಂದು ಹೇಳುತ್ತದೆ. ಕೋಟೆಯ ಅಗಸೆಯನ್ನು ಇದೇ ಕಾಲಕ್ಕೆ ಖಾಂದೇ ಅಲ್ಲೀ ಎಂಬವನು ಕಟ್ಟಿಸಿದನೆಂದು ಲೇಖವದೆ. ಅಗಸೆಯ ಬಳಮ್ಯೆಯಲ್ಲಿ ದುರ್ಗಯ ಗುಡಿಯುಂಟು. ಈ ಕೋಟೆಗೂ ಎಳ್ಳೂರಗಡ್ಡಳ್ಳಿ ನೆಲದೊಳಗಿಂದ ಮಾರ್ಗವನ್ನು ಕಟ್ಟಿದ್ದಾರೆಂದು ಹೇಳುತ್ತಾರೆ.

DEPARTMENTAL NOTICES.

ನೋಟೀಸುಗಳು.

ಈ ನೋಟೀಸಿನಿಂದ ಪ್ರಸಿದ್ಧ ಪಡಿಸುವದೇನಂದರೆ:— ಮಿ. ವಿರುಪಾಕ್ಷಪ್ಪ ಚಿನ್ನಪ್ಪ ಹೂಲಿ ಕನ್ನಡ ಬಾಲಾ ಮಾಸ್ತರ ಸಿಗ್ನಾಂವ ಇವರಿಂದ ರಚಿತವಾದ "ಜಮಾಖರ್ಚಿನ ಪದ್ಧತಿ" ಎಂಬ ಕನ್ನಡ ಪುಸ್ತಕವನ್ನು ಮೆ. ಡೈರೆಕ್ಟರ ಆವ್ ಪಬ್ಲಿಕ್ ಇನಸ್ಟ್ರಕ್ಶನ್ ಸಾ॥ ರವರು ಲಾಯಬ್ರೆರಿಗಳಿಗಾಗಿಯೂ, ಇನಾಮಿಗಾಗಿಯೂ ಮಂಜೂರ ಮಾಡಿರುತ್ತಾರೆ.

ತಾ॥ ೭ನೇ ಮೇ ೧೮೭೫ ಇಸವಿ.

B. R. SAHASRABUDHE,
ಎಜ್ಯುಕೇಶನಲ್ ಇನಸ್ಪೇಕ್ಟರ, ದ ಭಾಗ.

ಸರ್ ಎಲ್.ಎಲ್.ಬಿ. ಇಸವಿಯ ಮುಂಬೈ ಸರಕಾರದ ಗ್ಯಾ ಝಿಟಿನ ಎನೇ ಭಾಗದ ಕ.ಎ.ಎಸ್. ನೇ ಪುಟಗಳಲ್ಲಿ ಛಾಪಿಸಿದ ನಿಯಮಗಳ ಅ, ಬ, ಪರಿಶಿಷ್ಟಗಳ ಎನೇ ಭಾಗಕ್ಕೆ ಸರಿಯಾಗಿ ಸರ್ ಎಲ್.ಎಲ್.ಟಿ.ನೇ ಸಾಲಿನ ಪಬ್ಲಿಕ್ ಸರ್ವಿಸ ಸರಟಿಫಿಕೇಟಿನ ಪರೀಕ್ಷೆಗಳು ಧಾರವಾಡದಲ್ಲಿ ಸೋಮವಾರ ತಾ॥ ೧೬ನೇ ಸಪ್ಟಂಬರ ಸರ್ ಎಲ್.ಎಲ್.ಬಿ. ಇಸವಿಯ ದಿವಸ ಮತ್ತು ತದುತ್ತರ ದಿವಸಗಳಲ್ಲಿ ತೆಗೆದುಕೊಳ್ಳಲ್ಪಡುವವು.

೨. ಮರಾಠಿ ಭಾಷೆಯಲ್ಲಿ ಪರೀಕ್ಷೆಯನ್ನು ಕೊಡಲಿಚ್ಛಿಸುವ ಉಮೇದವಾರರು ಬೆಳಗಾವಿಯಲ್ಲಿ ಆಗತಕ್ಕ ಪರೀಕ್ಷೆಗ ಹೋಗತಕ್ಕದ್ದು.

೩. ಪರೀಕ್ಷೆಗೆ ಕೂಡ್ಲಿಕ್ಕೆ ಬೇಕಾದ ಪರವಾನಗಿಯನ್ನು ಕುರಿತು ಅರ್ಜಿಗಳನ್ನು ಪರೀಕ್ಷಾ ಕಮಿಟಿಯ ಅಧ್ಯಕ್ಷರಾದ ಧಾರವಾಡ ಹೈಸ್ಕೂಲ ಹೆಡ್ ಮಾಸ್ತರರ ಕಡೆಗೆ ಬರುವ ಅಗಷ್ಟ ಎನೇ ತಾರೀಖಿಗೆ ಅಥವಾ ತತ್ಪೂರ್ವದಲ್ಲಿ ಮಾಡಬೇಕು. ಪ್ರತಿ ಬಂದು ಅರ್ಜಿಯಲ್ಲಿ ಉಮೇದವಾರನ ಹೆಸರು ಪೂರ್ಣವಾಗಿ ಬರೆಯುವದಲ್ಲದೆ, ಅವನು ಯಾವ ಸಾಲೆಯಿಂದ ಪರೀಕ್ಷೆಗೆ ಬರುವನೋ ಆ ಸಾಲೆಯ ಹೆಸರೂ ಅವನು ಕೂಡತಕ್ಕ ಪರೀಕ್ಷೆಯ ಹೆಸರೂ ನಮೂದ ಮಾಡಿರಬೇಕು.

೪. ಬಂದು ಜಿಲ್ಲೆಯಲ್ಲಿ ಪರೀಕ್ಷೆಗೆ ಕೂತಂಥ ಉಮೇದವಾರನು ಅದೇ ವರ್ಷದಲ್ಲಿ ಬೇರೆ ಜಿಲ್ಲೆಯಲ್ಲಿ ಪರೀಕ್ಷೆಗೆ ಕೂಡ್ಲಾಗದು.

೫. ಪ್ರತಿಯೊಬ್ಬ ಉಮೇದವಾರನು ತಾನು ವಾಸಿಸುವ ಜಿಲ್ಲೆಯಲ್ಲಿಯೇ ಆಗುವ ಪರೀಕ್ಷೆಗೆ ಕೂಡ್ಲಿಕ್ಕೆ ಬೇಕು ಮತ್ತು ಆ ಜಿಲ್ಲೆಯಲ್ಲಿ ೬ ತಿಂಗಳು ವಾಸವಾಗಿದ್ದ ಬಗ್ಗೆ

ಶಾಲಾಮಾಸ್ತರನದಾಗಲಿ, ಪಾಟೀಲನದಾಗಲಿ ಸರ್ಟಿಫಿಕೇಟನ್ನು ಹಾಜರ ಮಾಡಬೇಕು.

೬. ಉಮೇದವಾರರ ವಯಸ್ಸು, ಅವರು ಕೊಡತಕ್ಕ ಫೀ ಮುಂತಾದ ಸಂಗತಿಗಳ ಸಂಬಂಧದ ಹೆಚ್ಚಿನ ಮಾಹಿತಿಯನ್ನು ಮತ್ತು ಪರೀಕ್ಷಾ ವಿಷಯಗಳ ತಪಶೀಲನ್ನು, ಮೇಲೆ ಕಾಣಿಸಿದ ನಿಯಮಗಳಿಂದ ತಿಳಕೊಳ್ಳತಕ್ಕದ್ದು. ಈ ನಿಯಮಗಳ ನಕಲುಗಳು ದಕ್ಷಿಣ ಭಾಗದ ಎಜ್ಯುಕೇಶನಲ್ ಇನಸ್ಪೇಕ್ಟರರ ಕಡೆಗಾಗಲಿ ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡೆಗಾಗಲಿ ಅರ್ಜ ಮಾಡಿಕೊಂಡರೆ ಮುಪ್ಪತ್ತಿಗುವವು.

೭. ಈ ವರ್ಷದ ಪರೀಕ್ಷೆಗಳಿಗಾಗಿ ನಿಯಮಿಸಿದ ಪುಸ್ತಕಗಳು ಸರ್ ೧೮೯೪ನೇ ಇಸವಿಯ ಮುಂಬೈ ಸರಕಾರದ ಗ್ಯಾಝಿಟಿನ ೨ನೇ ಭಾಗದ ೧೪೩೬ | ೩೭ನೇ ಪುಟಗಳಲ್ಲಿ ನಮೂದಿಸಲ್ಪಟ್ಟಿರುತ್ತವೆ.

ಹುಬ್ಬಳ್ಳಿ,
ಮೇ ೨೦–೫–೯೫. }

J. Fairlie Muir,
ಕಲೆಕ್ಟರ ಧಾರವಾಡ.

III.

ಆರು ಮಿಡಲ್ ಸ್ಕೂಲ ಸ್ಕಾಲರಷಿಪ್‌ಗಳ ಸಂಬಂಧದ ಪರೀಕ್ಷೆಯು ಸೋಮವಾರ ತಾ॥ ೨ನೇ ಸಪ್ಟಂಬರ ಸರ್ ೧೮೯೫ನೇ ಇಸವಿಯ ದಿವಸ ಕೆಳಗೆ ನಮೂದಿಸಿದ ಪ್ರತಿಯೊಂದು ಸೆಂಟರಿನಲ್ಲಿ ಪ್ರಾರಂಭವಾಗುವದು. ಸೆಂಟರುಗಳು ಯಾವವೆಂದರೆ:–

೧. ಧಾರವಾಡ ಹೈಸ್ಕೂಲು.
೨. ಕಾರವಾರ ಹೈಸ್ಕೂಲು.
೩. ಬೆಳಗಾವ ಹೈಸ್ಕೂಲು.
೪. ಅಲಿಬಾಗ ಜಾನ ಎಲ್ ಫಿನ್‌ಸ್ಟನ್ ಮಿಡನ ಹೈಸ್ಕೂಲು.
೫. ವಿಜಾಪೂರ ಹೈಸ್ಕೂಲು.

೮. ಈ ಆರು ಸ್ಕಾಲರಷಿಪ್ಪುಗಳಲ್ಲಿ ಎರಡು ಎಲ್ಲ ಉಮೇದವಾರರಲ್ಲಿ ಮೇಲಾದವರಿಗೆ ಶಿಗುವವು. ಎರಡು ಇಂಗ್ಲಿಷ ಅಭ್ಯಾಸದಲ್ಲಿ ಹಿಂದುಳಿದ ಬೇನಿ ಇಸ್ರಾಯಲ, ಕುಣಬಿ, ಕೂಲಿಕಾರ ಮುಂತಾದ ಜಾತಿಯವರಿಗಾಗಿ ಕಾದಿಡಲ್ಪಡುವವು. ಎರಡು ಮುಸಲ್ಮಾನ ಜಾತಿಯವರಿಗಾಗಿ ಕಾದಿಡಲ್ಪಡುವವು.

೯. ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಯು ಕನ್ನಡ ಹಾಗೂ ಮರಾಠಿ ಭಾಷೆಗಳ ಮುಖಾಂತರವಾಗಿ ತೆಗಿದುಕೊಳ್ಳಲ್ಪಡುವದು. ಧಾರವಾಡ, ವಿಜಾಪುರ ಮತ್ತು ಕಾರವಾರ ಸೆಂಟರುಗಳಲ್ಲಿ ಕನ್ನಡ ಭಾಷೆಯ ಮುಖಾಂತರವಾಗಿ, ರತ್ನಾಗಿರಿ, ಅಲಿಬಾಗ ಸೆಂಟರುಗಳಲ್ಲಿ ಮರಾಠಿ ಭಾಷೆಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು.

೪. ಪ್ರತಿ ಬಂದು ಸೆಂಟರಿನಲ್ಲಿ ಪರೀಕ್ಷೆಯು ಕಮಿಟಿಯ ಮುಖಾಂತರವಾಗಿ ತೆಗಿದುಕೊಳ್ಳಲ್ಪಡುವದು. ಅಲಿಬಾಗ ಪರೀಕ್ಷಾ ಕಮಿಟಿಯು ಅಧ್ಯಕ್ಷರು ಅಲ್ಲಿಯ ಡೆಪುಟಿ ಎಜ್ಯುಕೇಶನಲ್ ಇನಸ್ಪೇಕ್ಟರರು. ಉಳಿದ ಕಡೆಯಲ್ಲೆಲ್ಲ ಅಲ್ಲಲ್ಲಿಯಾ ಹೈಸ್ಕೂಲಿನ ಹೆಡ್ಡ ಮಾಸ್ತರರು ಪರೀಕ್ಷಾಕಮಿಟಿಯ ಅಧ್ಯಕ್ಷರಿರುವರು. ಈ ಪರೀಕ್ಷೆಗೆ ಕೂಡ್ರಲಿಕ್ಕೆ ಪರವಾನಗಿಯನ್ನು ಕುರಿತು ಮಾಡುವ ಅರ್ಜಿಗಳನ್ನೆಲ್ಲ ಭಾಪಿಸಿದ ನಮೂನೆಗಳ ಮೇಲೆ ಮಾಡತಕ್ಕದ್ದು. ಅರ್ಜಿಯ ನಮೂನೆಗಳು ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡಿಗಾಗಲಿ, ನಮ್ಮ ಕಡಿಗಾಗಲಿ ಶಿಗುವವು. ಅವಕ್ಕೆ ಕ್ರಯ ಬೀಳುವದಿಲ್ಲ. ಉಮೇದವಾರರು ಅರ್ಜಿಗಳನ್ನು ಎನೇ ಆಗಪ್ಪ ಸರ್ ೧೯೨೩ನೇ ಇಸವಿಯ ಜುಲಿಗಾಗಿ ತಮ್ಮ ತಮ್ಮ ಜಿಲ್ಲೆಯ ಕಮಿಟಿಯ ಅಧ್ಯಕ್ಷರ ಕಡಿಗೆ ಮಾಡಿಕೊಳ್ಳಬೇಕು. ಆ ತಾರೀಖಿನ ನಂತರ ಬಂದ ಅರ್ಜಿಗಳು ಹಿಡಿಯಲ್ಪಡಲಿಕ್ಕಿಲ್ಲ.

೫. ಉಪೇದವಾರರ ವಯಸ್ಸು, ಪರೀಕ್ಷಾ ವಿಷಯಗಳು, ಸ್ಕಾಲರಶಿಪ್ಪಿನ ರಕಮು, ಅವಧಿ, ಮತ್ತು ಪರೀಕ್ಷೆಯ ಫೀ ಮುಂತಾದ ಸಂಗತಿಗಳ ಸಂಬಂಧದ ಹೆಚ್ಚಿನ ಮಾಹಿತಿಯು ೧೩ನೇ ಮೇ ಸನ ೧೮೮೪ನೇ ಇಸವಿಯ ಮುಂಬೈ ಸರಕಾರದ ಗ್ಯಾಝಿಟಿನ ೧ನೇ ಭಾಗದ ೪೫೧ನೇ ಪುಟದಲ್ಲಿ ಛಾಪಿಸಿದ ನಿಯಮಗಳಿಂದ ತಿಳಿಯುವದು. ಈ ನಿಯಮಗಳು ಬಾಂಬೆ ಎಜ್ಯುಕೇಶನಲ್ ರಿಕಾರ್ಡದ ೧೮೮೪ನೇ ಇಸವಿಯ ಜುಲೈ ತಿಂಗಳ ಸಂಚಿಕೆಯ ೧೬೯ನೇ ಪುಟದಲ್ಲಿಯೂ ಛಾಪಿಸಲ್ಪಟ್ಟಿರುತ್ತವೆ. ಈ ನಿಯಮಗಳ ನಕಲು ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡಿಗಾಗಲಿ, ನಮ್ಮ ಕಡಿಗಾಗಲಿ ಅರ್ಜ ಮಾಡಿದರೆ ಮುಫ್ತ ಶಿಗುವವು.

ಧಾರವಾಡ,
ತಾ॥ ೧೦ನೇ ಮೆ ೧೮೮೫. } B. R. SAHASRABUDHE,
ಎಜ್ಯುಕೇಶನಲ್ ಇನಸ್ಪೇಕ್ಟರ, ದ. ಭಾ.

IV.

ಮೂರು ಹಾಯಿಸ್ಕೂಲ ಸ್ಕಾಲರಶಿಪ್ಪುಗಳ ಸಂಬಂಧದ ಪರೀಕ್ಷೆಯು ಸೋಮವಾರ ತಾ॥ ೨೦ನೇ ಸಪ್ಟಂಬರ ಸನ ೧೮೮೫ನೇ ಇಸವಿ ದಿವಸ ಮದ್ರಾಸ ಕಾಲಮಾನದ ೧೧ ಘಂಟೆಕ್ಕೆ ಸರಿಯಾಗಿ ಕೆಳಗೆ ನಮೂದಿಸಿದ ಪ್ರತಿಯೊಂದು ಸೆಂಟರಿನಲ್ಲಿ ಪ್ರಾರಂಭವಾಗುವದು. ಸೆಂಟರುಗಳು ಯಾವವೆಂದರೆ:—

೧. ಧಾರವಾಡ ಹೈಸ್ಕೂಲು.
೨. ಬೆಳಗಾವ ಹೈಸ್ಕೂಲು.
೩. ಕಾರವಾರ ಹೈಸ್ಕೂಲು.
೪. ರತ್ನಾಗಿರಿ ಹೈಸ್ಕೂಲು.
೫. ವಿಜಾಪುರ ಹೈಸ್ಕೂಲು.
೬. ಅಲಿಬಾಗ ಜಾನ್ ಎಲ್ಫಿನಸ್ಟನ್ ಮಿಶನ್ ಹೈಸ್ಕೂಲ.

೩. ಈ ಮೂರು ಸ್ಕೂಲರಶಿಪ್ಪುಗಳಲ್ಲಿ ಬಂದು ಎಲ್ಲ ಉ ಮೇದವಾರರಲ್ಲಿ ಮೇಲಾದವರಿಗೆ ಶಿಗುವದು. ಬಂದು ಇಂ ಗ್ಲಿಷ ಅಭ್ಯಾಸದಲ್ಲಿ ಹಿಂದೆ ಉಳಿದ ಬೇನಿ ಇಸ್ರಾಯಲ್, ಕು ಣಬಿ, ಕೂಲಿಕಾರ ಮುಂತಾದ ಜಾತಿಯವರಿಗಾಗಿ ಕಾದಿಡಲ್ಪ ಡುವದು, ಮೂರನೇದು ಮುಸಲ್ಮಾನ ಜಾತಿಯವರಿಗಾಗಿ ಕಾದಿಡಲ್ಪಡುವದು.

೪. ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಯು ಕನ್ನಡ ಹಾ ಗೂ ಮರಾಠಿ ಭಾಷೆಗಳ ಮುಖಾಂತರವಾಗಿ ತೆಗೆದುಕೊಳ್ಳ ಲ್ಪಡುವದು. ಧಾರವಾಡ, ವಿಜಾಪುರ ಮತ್ತು ಕಾರವಾರ ಸೆಂ ಟರುಗಳಲ್ಲಿ ಕನ್ನಡ ಭಾಷೆಯು ಮುಖಾಂತರವಾಗಿ ರತ್ನಾ ಗಿರಿ, ಅಲಿಬಾಗ ಸೆಂಟರುಗಳಲ್ಲಿ ಮರಾಠಿ ಭಾಷೆಯು ಮು ಖಾಂತರವಾಗಿ ತೆಗೆದುಕೊಳ್ಳಲ್ಪಡುವದು.

೫. ಪ್ರತಿಯೊಂದು ಸೆಂಟರಿನಲ್ಲಿ ಪರೀಕ್ಷೆಯು ಕಮಿಟಿಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಅಲಿಬಾಗ ಪರೀಕ್ಷಾ ಕಮಿಟಿಯ ಅಧ್ಯಕ್ಷರು ಅಲ್ಲಿಯ ಡೆಪುಟಿ ಎಜ್ಯು ಕೇಶನಲ್ ಇನಸ್ಪೇಕ್ಟರರು ಉಳಿದ ಕಡೆಯಲ್ಲೆಲ್ಲ ಅಲ್ಲಲ್ಲಿಯ ಹೈಸ್ಕೂಲಿನ ಹೆಡ್ ಮಾಸ್ತರರು ಪರೀಕ್ಷಾ ಕಮಿಟಿಯ ಅಧ್ಯಕ್ಷರಿರುವರು. ಈ ಪರೀಕ್ಷೆಗೆ ಕೂಡ್ರಲಿಕ್ಕೆ ಪರವಾನ ಗಿಯನ್ನು ಕುರಿತು ಮಾಡುವ ಅರ್ಜಿಗಳೆಲ್ಲ ಫಾರೀ ನಮೂ ನೆಗಳ ಮೇಲೆ ಮಾಡತಕ್ಕದ್ದು. ಅರ್ಜಿಯು ನಮೂನೆಗಳು ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡಿಗಾಗಲಿ, ನಮ್ಮ ಕಡಿ ಗಾಗಲಿ ಶಿಗುವವು. ಅವಕ್ಕೆ ಕ್ರಯ ಬೀಳಲಿಕ್ಕಿಲ್ಲ. ಉಮೇ ದವಾರರು ಅರ್ಜಿಗಳನ್ನು ಎನೇ ಅಗಷ್ಟ ಸರ್ ೧೪ನೇ ತಾರೀಖಿನೇ ತಿಸವಿ ಬಳಗಾಗಿ ತಮ್ಮ ತಮ್ಮ ಜಿಲ್ಲೆಯ ಕಮಿಟಿಯ ಅಧ್ಯಕ್ಷರ ಕಡೆಗೆ ಮಾಡಿಕೊಳ್ಳಬೇಕು. ಆ ತಾರೀಖಿನ ನಂ ತರ ಬಂದ ಅರ್ಜಿಗಳು ಹಿಡಿಯಲ್ಪಡಲಿಕ್ಕಿಲ್ಲ.

೫. ಉಮೇದವಾರರ ವಯಸ್ಸು, ಪರೀಕ್ಷಾ ವಿಷಯಗಳು, ಸ್ಕಾಲರಶಿಪ್ಪಿನ ರಕಮು ಮತ್ತು ಅವಧಿ, ಪರೀಕ್ಷೆಯು ಫೀ ಮುಂತಾದ ಸಂಗತಿಗಳ ಸಂಬಂಧದ ಹೆಚ್ಚಿನ ಮಾಹಿತಿಯು ೫ನೇ ಎಪ್ರಿಲ ಸನ ೧೮೮೮ನೇ ಇಸವಿಯ ಮುಂಬೈ ಸರಕಾರದ ಗ್ಯಾಝಿಟಿನ ೩೦೪ನೇ ಪುಟದಲ್ಲಿ ಛಾಪಿಸಿದ ನಿಯಮಗಳಿಂದ ತಿಳಿಯುವದು. ಈ ನಿಯಮಗಳು ಬಾಂಬೆ ಎಜ್ಯುಕೇಶನಲ್ ರಿಕಾರ್ಡದ ೧೮೮೮ನೇ ಇಸವಿಯ ಜುಲೈ ತಿಂಗಳ ಸಂಚಿಕೆಯ ೧೬೬ನೇ ಪುಟದಲ್ಲಿ ಛಾಪಿಸಿರುತ್ತವೆ. ಈ ನಿಯಮಗಳ ನಕಲು ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡಿಗಾಗಲಿ ನಮ್ಮ ಕಡಿಗಾಗಲಿ ಅರ್ಜ ಮಾಡಿದರೆ ಹಣದ ಪೆಚ್ಚವಿಲ್ಲದೆ ಶಿಗುವವು.

ಧಾರವಾಡ,
ತಾ॥ ೧೦ನೇ ಮೆ ೧೮೮೩. } B. R. SAHASRABUDHE,
ಎಜ್ಯುಕೇಶನಲ್ ಇನಸ್ಪೇಕ್ಟರ, ದ. ಭಾ.

CORRESPONDENCE.

ಪತ್ರವ್ಯವಹಾರ.

ರಾವ ಸಾ॥ ಕನ್ನಡ ಶಾಲಾಪತ್ರಕದ ವ್ಯವಸ್ಥಾಪಕರ ಚರಣಾಸನ್ನಿಧಾನಕ್ಕೆ—

ಶಿರಸಾ॥ ನಮಸ್ಕಾರ ವಿ. ವಿ. ಕೆಳಗೆ ಬರೆದ ಪತ್ರವ್ಯವಹಾರಕ್ಕೆ ತಮ್ಮ ಶಾಲಾಪತ್ರಕದಲ್ಲಿ ಸ್ಥಲ ದೊರಿಯ ಬೇಕೆಂದು ಬೇಡಿಕೊಳ್ಳುತ್ತೇನೆ.

ಸನ ೧೮೮೪ನೇ ಇಸವಿಯ ಸಪ್ಟೆಂಬರ ತಿಂಗಳ ಶಾಲಾಪತ್ರಕದಲ್ಲಿ (ಮೃಗ) ಈ ಶಬ್ದಕ್ಕೆ ನಾನು (ಮಕರರಾಶಿ) ಅಂತ ಅರ್ಥವನ್ನು ಬರೆದದ್ದಕ್ಕೆ ಏನೂ ಆಧಾರ ಕೊಟ್ಟಿಲ್ಲವೆಂದು ರಾ॥ ರಾ॥ ಎಡಪ್ಪಾ ಇವರು ಸನ ೧೮೮೪ನೇ ಇ॥ ನವಂಬರ ತಿಂಗಳ ಶಾಲಾಪತ್ರಕದಲ್ಲಿ ದೂಷಣೆಯನ್ನು ಕೊಟ್ಟರು. ಆವರೆ ಮೃಗ ಶಬ್ದಕ್ಕೆ ಮಕರರಾಶಿ ಅಂತ ಅರ್ಥ ಮಾಡಿದ್ದಕ್ಕೆ ಆಧಾರ ಕೆಳಗೆ ಬರೆದಂತೆ.—

अजनृषभमृगांगनाकुलीराझषवाणिजौचांदेवाकरादेतुगाः ॥
दशरिखिमनुयुक्तिथींद्रियांशैस्त्रिनवकविंशतिभिस्तदस्तनीचाः
(ಬೃಹಜ್ಜಾತಕ)

ಈ ಮೇಲಿನ ಪದ್ಯದಲ್ಲಿ ಕೆಳಗೆ ಅಡ್ಡ ಗೆರೆಯನ್ನು ತೆಗೆದ ಮೃಗ ಶಬ್ದಕ್ಕೆ ಮಕರವೆಂದು ಅರ್ಥವಾಗುತ್ತದೆ. ಈ ಬಗ್ಗೆ ಮತ್ತೂ ಅನೇಕ ಆಧಾರಗಳುಂಟು. ಪತ್ರವಿಸ್ತಾರದ ದೆಸೆಯಿಂದ ಅವುಗಳನ್ನೆಲ್ಲ ಇಲ್ಲಿ ಬರೆಯುವದು ಅಸಾಧ್ಯ. ಇಂತಿ ಶಿರಸಾ॥ ನಮಸ್ಕಾರ. ತಾ॥ ೧೬—೬—೯೫ ಇಸವಿ.

ಧೋಂಡೋ ಗಂಗಾಧರ ಲಿವಂಯೆ,
ಶಾಲಾಮಾಸ್ತರ ವಿಜ್ರಿಕೊಪ್ಪ.

DHARWAR TRAINING COLLEGE CERTIFICATE EXAMINATION.—1894.

ಕಾಲೇಜಿನ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು.

ಮೂನೇ ವರ್ಷದ ವರ್ಗ.

ಅಂಕಗಣಿತ ಮತ್ತು ಬೀಜಗಣಿತ.

ಬಲಕ್ಕೆ ಬರಿದ ಅಂಕಿಗಳು ಪ್ರಶ್ನೆಗಳ ಪೂರ್ಣ ಗುಣಗಳು.

(ರೀತಿಯು ಹೊರ್ತು ಬರೀ ಉತ್ತರಕ್ಕೆ ಜೆಲೆ ಇಲ್ಲ)

ಅಂಕಗಣಿತ.

೧. ಲಘುತಮ ಸಾಧಾರಣ ಭಾಜ್ಯದ ಸೂತ್ರವನ್ನು ಬರೆದು ಅದರ ಉಪಪತ್ತಿಯನ್ನು ಬರೆಯಿರಿ. ೪

೨. (ಅ) ವ್ಯವಹಾರಿ ಅಪೂರ್ಣಾಂಕದ ವರ್ಗಮೂಲ ತೆಗೆಯುವ ಮೂರು ರೀತಿಗಳನ್ನು ಬರೆಯಿರಿ. ೪

(ಬ) ವ್ಯವಹಾರಿ ಅಪೂರ್ಣಾಂಕದ ದೃಢಭಾಜಕವನ್ನು ತೆಗೆಯುವ ರೀತಿ ಹ್ಯಾಗೆ? $\frac{೧೨೧}{೪೦೦}$, $\frac{೨೦೦}{೧೫೦}$ ಇವುಗಳ ದೃಢ ಭಾಜಕವನ್ನು ತೆಗೆಯಿರಿ. ೪

೩. ನನ್ನಿಬ್ಬೆಗೆ ಕೆಲವು ಭಿಕ್ಷುಕರು ಬಂದರು. ನಾನು ಆ ಭಿಕ್ಷುಕರ ಸಂಖ್ಯೆಯ ಅರ್ಧದಷ್ಟು ಪೈಸೆಗಳನ್ನು ಪ್ರತಿ ಒಬ್ಬನಿಗೆ ಕೊಟ್ಟೆನು. ಅದರಿಂದ ನನಗೆ ಒಟ್ಟು ೬ ಪೌಂಡು

೧ ಶಿ. ೬ ಪೆ. ಖರ್ಚು ಹತ್ತಿತು. ಆದರೆ ಭಿಕ್ಷುಕರ ಸಂಖ್ಯೆ ಎಷ್ಟು?

೪. ಅ ಆ ಕೂಡಿ ೨೦ ದಿವಸಗಳಲ್ಲಿ, ಆ ಆ ೫೦ ದಿವಸಗಳಲ್ಲಿ, ಅ ಈ ೪೦ ದಿವಸಗಳಲ್ಲಿ ಒಂದು ಕೆಲಸವನ್ನು ಮಾಡುತ್ತಾರೆ. ಅ ಒಬ್ಬನೇ ಆ ಕೆಲಸವನ್ನು ೨೦ ದಿವಸಗಳವರೆಗೆ ಮಾಡಿದ ಬಳಿಕ ಆ ಒಬ್ಬನೇ ೧೦ ದಿವಸಗಳ ತನಕ ಮಾಡಿದನು. ಆ ಮೇಲೆ ಈ ಮತ್ತು ಆ ಕೂಡಿ ೧೫ ದಿವಸಗಳವರೆಗೆ ಮಾಡಿದ ಬಳಿಕ ಎಲ್ಲರೂ ಬಿಟ್ಟು ಹೋದರು. ಬಳಿಕ ಈ ಎಂಬವನೊಬ್ಬನೇ ಉಳಿದ ಕೆಲಸವನ್ನು ೨ ದಿವಸಗಳಲ್ಲಿ ಮುಗಿಸಿದನು. ಆದರೆ ಈ ಒಬ್ಬನೇ ಯಾವತ್ತು ಕೆಲಸ ಎಷ್ಟು ದಿವಸಗಳಲ್ಲಿ ಮಾಡುವನು?

೫. ಒಬ್ಬ ಸಾವುಕಾರನು ೧೫೦೦ ಪೌಂಡುಗಳನ್ನು ಕೊಟ್ಟು ಕೆಲವು ಠೇವನ್ನು ನೂರಕ್ಕೆ ೬ ದರದ ೩೦ ಭಾವದಂತೆ ಮತ್ತು ಕೆಲವು ನೂರಕ್ಕೆ ೪ ದರದ ೧೦೦ ಭಾವದಂತೆ ಖರೀದಿ ಮಾಡುತ್ತಾನೆ. ಅದರಿಂದ ಅವನಿಗೆ ವರ್ಷಕ್ಕೆ ೬೪ ಪೌ. ಉತ್ಪನ್ನ ವಾಗುತ್ತದೆ. ಆದರೆ ಅವನು ಎಷ್ಟು ಠೇವನ್ನು ಕೊಂಡಿರಬೇಕು?

ಬೀಜಗಣಿತ.

೧. (ಅ) ಯಾವದಾದರು ಪದದ ಮೂಲವೆಂದರೇನು? ಬೀಜಗಣಿತದಲ್ಲಿ ವರ್ಗಮೂಲ ತೆಗೆಯುವ ರೀತಿಯನ್ನು ಬರೆಯಿರಿ. ಈ ಈದರ ವರ್ಗಮೂಲ ಹೊರಡುವದೋ ಹ್ಯಾಗೆ? ಇಲ್ಲದಿದ್ದರೆ ಹೊರಡದೆ ಇರುವದಕ್ಕೆ ಕಾರಣವೇನು

(ಬ) $\frac{ಅ}{ಬ} - ೨ + \frac{ಬ}{ಅ} + \frac{೨ಅ}{ಬ} - ೨ಬ + ಅ^೨$ ಇದರ ವರ್ಗಮೂಲ ತೆಗೆಯಿರಿ.

೨. $ಬ = \frac{೨ಆ}{ಆ+೧}$ ಇರುವಾಗ್ಗೆ $\frac{\sqrt{೧+ಬ} + \sqrt{೧-ಬ}}{\sqrt{೧+ಬ} - \sqrt{೧-ಬ}}$ ಇದರ ೧೫ ಕಿಮ್ಮತ್ತು ತೆಗೆಯಿರಿ ಮತ್ತು $\frac{\left(ಗ+\frac{೧}{ಕ}\right)^{ಗ}\left(ಗ-\frac{೧}{ಕ}\right)^{ಕ}}{\left(ಕ+\frac{೧}{ಗ}\right)^{ಗ}\left(ಕ-\frac{೧}{ಗ}\right)^{ಕ}}$ ಇದಕ್ಕೆ ಸರಳ ರೂಪವನ್ನು ಕೊಡಿರಿ.

೩. $೨ಕ್ಷ+(೬ಅ-೧೦ಬ)ಕ್ಷ-೫೦ಅಬ$ ಮತ್ತು $೫ಕ್ಷ-(೯ಅ+೧೫ಬ)ಕ್ಷ+೪೫ಅಬ$ ಇವುಗಳ ಲಘುತಮ ಸಾಧಾರಣ ಭಾಜ್ಯವನ್ನು ದೃಢಭಾಜಕವನ್ನು ತೆಗೆಯಿರಿ. ೧೦

೪. ಕೆಳಗಿನ ಸಮೀಕರಣಗಳನ್ನು ಬಿಡಿಸಿರಿ. ೧೦

(೧) $\frac{\sqrt{ಕ್ಷ+ಅ}}{\sqrt{ಕ್ಷ-ಬ}} = \frac{\sqrt{ಕ್ಷ-ಅ}}{\sqrt{ಕ್ಷ}}$;

(೨) $(ಅ-ಬ)ಕ್ಷ=(ಅ+ಬ)ಯ$

$ಕ್ಷ+ಯ=ಕ$

೫. ಅ ಬ ಇವರಿಬ್ಬರಲ್ಲಿ ಕೂಡಿ ೫೦ ಆಕಳುಗಳಿರುತ್ತವೆ. ಅವರು ಬೇರೆ ಬೇರೆ ದರದಿಂದ ತಮ್ಮ ಆಕಳುಗಳನ್ನು ಮಾರಿದರು. ಅದರಿಂದ ಅವರಿಬ್ಬರಿಗೂ ಸಮಾನ ಹಣ ಬಂದಿರಿಯಿತು. ಅ ಎಂಬವನು ಬ ಮಾರಿದ ದರದಿಂದ ಮಾರಿದ್ದರೆ, ಅವನಿಗೆ ೪೦೦ ರೂಪಾಯಿ, ಮತ್ತು ಬನು ಅ ಮಾರಿದ ದರದಿಂದ ಮಾರಿದ್ದರೆ ಅವನಿಗೆ ೬೪೫ ರೂ- ದೊರೆಯುತ್ತಿದ್ದವು. ಆದರೆ ಅವರ ಬಳಿಯಲ್ಲಿ ಎಷ್ಟೆಷ್ಟು ಆಕಳುಗಳಿದ್ದವು? ೧೦

೬. ಗ ಊರಿಂದ ಕ ಊರು ೬೫೦ ಮೈಲು ದೂರು ಇರುತ್ತದೆ. ಗ ಊರಿಂದ ಒಂದು ಹೊಗೆಬಂಡಿ ಹೊರಟು ಒಂದೇಸವನೆ ಕ ಊರಿಗೆ ಹೋಯಿತು. ಮೊದಲನೇ ಬಂಡಿ ಹೊರಟ ಬಳಿಕ, ಒಂದು ತಾಸಿನ ಮೇಲೆ, ಎರಡನೇ ಬಂಡಿ ಗ ಊರಿಂದ ಹೊರಟಿತು. ಅದು ಎರಡು ತಾಸು ನಡೆದು, ಒಂದು ಸ್ಟೇಶನಕ್ಕೆ ಮುಟ್ಟಿ, ಅಲ್ಲಿ ವಿಚಾರಿಸಲು, ಮೊದಲನೇ ಬಂಡಿ ಆ ಸ್ಟೇಶನ ಬಿಟ್ಟು ೪೫ ಮಿನುಟವಾಗಿತ್ತು. ಆ ಮೇಲೆ ಅದು ಮೊದಲಿಗಿಂತ ತಾಸಿಗೆ ೫ ಮೈಲು ವೇಗ ಹೆಚ್ಚು ಮಾಡಿ ನಡೆಯಲಾಗಿ ಎರಡೂ ಬಂಡಿಗಳು ಏಕ ಕಾಲಕ್ಕೆ ಕ ಊರು ಶೇರಿದವು. ಆದರೆ ಮೊದಲು ಆ ಎರಡೂ ಬಂಡಿಗಳ ವೇಗ ಎಷ್ಟು ಇತ್ತು ೧೫

ಶಾಲಾ ಪತ್ರಕ

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ।
ಭಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ॥
ನಯದಿಂದಿತ್ತಪೆವೋದುವರ್ಗೆಸುಗುಣಂ ತೋರಲ್ಕೆಕೈಕೊಂಬುದೈ।
ದಯೆಯಿಂದೋಷವತಿದ್ದಪೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧।

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

"ಸಂಘೇಶಕ್ತಿಃ ಕಲೌಯುಗೆ" ಈ ಮಾತಿನ ನಿಜತ್ವವು ಪದೇ ಪದೇ ತಲೆದೋರುತ್ತದೆ. ಈ ಮಂತ್ರವನ್ನು ಚನ್ನಾಗಿ ಜಪಿಸಿದ್ದರಿಂದ ನಮ್ಮ ರಾಜ್ಯಕರ್ತೃಗಳ ವೈಭವವು ಪ್ರತಿದಿನ ಬೆಳೆಯುತ್ತ ನಡೆದದೆ. ಈ ತತ್ವವನ್ನು ಇಂಗ್ಲಿಷ ಜನರು ಕೇವಲ ರಾಜಕಾರ್ಯದಲ್ಲಿಯೇ ಅನುಸರಿಸುವರೆಂಬಂತಿಲ್ಲ. ಪ್ರತಿ ಬಂದು ಸಣ್ಣ ಪುಟ್ಟ ಮಾತಿನಲ್ಲಿ ಸಹ ಅವನ್ನು ಪಾಲಿಸುವರು. ಇಂಗ್ಲಂಡದೊಳಗೆ ಪ್ರಾಥಮಿಕ ಶಾಲೆಯಲ್ಲಿ ಕೆಲಸ ಮಾಡುವ ಶಿಕ್ಷಕರು ಬಂದು ಶಿಕ್ಷಕ ಸಮಾಜವನ್ನು ಸ್ಥಾಪಿಸಿರುವರು. ಈ ಸಭೆಯು ಸ್ಥಾಪನೆಯಾಗಿ ಸುಮಾರು ೫೫—೪೦ ವರ್ಷಗಳಾದವು. ಈ ಸಮಾಜವು ವರ್ಷಕ್ಕೊಮ್ಮೆ ಏಪ್ರಿಲ ತಿಂಗಳಲ್ಲಿ "ಈಸ್ಟರ" ಹಬ್ಬದ ಸೂಟಿಯ ದಿವಸಗಳಲ್ಲಿ ಸಭಾಸದರು ಗೊತ್ತು ಮಾಡಿದ ಮಧ್ಯಸ್ಥಲದಲ್ಲಿ ಕೂಡುತ್ತದೆ. ಈ ಸಭೆಯಲ್ಲಿ ಶಿಕ್ಷಕರ ಪರಸ್ಪರ ಭೇಟಿಯಾಗುವದಲ್ಲದೆ ಶಿಕ್ಷಣದ ಬಿಗಿಯಾದ ಸಂಗತಿಗಳ ಹಾಗೂ ಶಿಕ್ಷಕರ ಅನುಕೂಲ-ಪ್ರತಿಕೂಲಗಳ ಚರ್ಚೆ ನಡಿಯುತ್ತದೆ. ಸಭಿಕರು ಶಿಕ್ಷಕರ ಸುಖವನ್ನು

ಹೆಚ್ಚಿಸುವಂಥ ದುಃಖವನ್ನು ಪರಿಹರಿಸುವಂಥ ಉಪಾಯಗಳನ್ನು ಕುರಿತು ಊಹಾಪೋಹ ನಡಿಸಿ ಐದು ಜನರ ಬುದ್ಧಿಗೆಯುಳ್ಳಂಥವುಗಳನ್ನು ಕೈಕೊಂಡು ಕಡೆಮುಟ್ಟಿಸುವರು.

೨೫ ವರ್ಷಗಳ ಕೆಳಗೆ ಈ ಸಮಾಜದವರು ೩೦೦೦ ಜನರಿದ್ದರು. ಆದರೆ ಈಗ್ಗೆ ಸಭಿಕರ ಸಂಖ್ಯೆಯು ೨೬೦೦ ಇರುತ್ತದೆ. ಈ ಸಮಾಜದ ಬಂಡವಲವು ೩೨೦೦೦ ಪೌಂಡು ಉಂಟು. ಸಭಿಕರಲ್ಲಿ ಕೆಲವರು ಎಷ್ಟೋ ಸಾಲೆಗಳಲ್ಲಿಯೂ ಪಾಠಶಾಲೆಗಳಲ್ಲಿಯೂ ದೊಡ್ಡ ದೊಡ್ಡ ಅಧಿಕಾರಗಳನ್ನು ಹೊಂದಿರುವವಲ್ಲದೆ ಈ ಸಮಾಜದ ಸೆಕ್ರಟರಿಯು ಶಿಕ್ಷಣ ಪ್ರಸಾರದ ವಿಚಾರಣೆಯ ಬಗ್ಗೆ ಸರಕಾರದವರು ನೇಮಿಸಿದ ರಾಯಲ್ ಕಮಿಶನನ ಸಭಾಸದನಾಗಿರುತ್ತಾನೆ. ಇಬ್ಬರು ಸಮಾಜದವರು ಹೌಸ ಆಫ್ ಕಾಮನ್ಸ್ ಎಂಬ ಪ್ರಜಾಪ್ರತಿನಿಧಿ ಸಭೆಯು ಸಭಿಕರಾಗುವ ಯತ್ನ ನಡಿಸಿರುತ್ತಾರೆ. ಅವರ ಯತ್ನ ಸಫಲವಾಗುವ ಲಕ್ಷಣಗಳು ತೋರುತ್ತಲಿವೆ. ಈ ಸಮಾಜದವರ ಅಭಿಪ್ರಾಯದ ಮೇರೆಗೆ ಸರಕಾರದ ಇನಸ್ಪೇಕ್ಟರರು ತಕ್ಕೊಳ್ಳುತ್ತಿದ್ದ ವಾರ್ಷಿಕ ಪರೀಕ್ಷೆಗಳು ಕಟ್ಟಾಗಿ ಅವುಗಳ ಬದಲು ತಪಾಸಣೆಯ ಕ್ರಮವು ಏರ್ಪಟ್ಟಿರುವದು; ಇನಸ್ಪೇಕ್ಟರರ ನಿರಂಕುಶತ್ವವೆಲ್ಲ ನಷ್ಟವಾಗಿ ನೆತ್ತಿಯ ಮೇಲಿನ ಕಣ್ಣು ಯಥಾಸ್ಥಾನಕ್ಕೆ ಬಂದಿರುವವು; ಅಭ್ಯಾಸಕ್ರಮದಲ್ಲಿ ತಕ್ಕ ಸುಧಾರಣೆಯಾಗಿರುವದು; ಸರಕಾರದವರು ಕಣ್ಣು ತೆರೆದು ಎಲ್ಲ ಸಂಗತಿಗಳನ್ನು ಕುರಿತು ಸರಿಯಾಗಿ ವಿಚಾರಿಸಿ ವ್ಯವಸ್ಥೆ ಮಾಡುತ್ತಿರುವರು. ಈ ಸುಧಾರಣೆಯು ಒಬ್ಬಿಬ್ಬರಿಂದ ಆಗುವದು ಅಸಂಭವವು. ಸಮಾಜದವರಿಂದಲೇ ಇಂಥ ಕೆಲಸಗಳ ನಿರ್ವಾಹವಾಗುತ್ತದೆ. ಹನಿ ಹನಿಯಿಂದ ಹಳ್ಳವಾಗುತ್ತದೆ. ಅದರಿಂದ ಅದಕ್ಕೆ ವಿಚಾರಣೀಯ ಸ್ವರೂಪ ಬರುತ್ತದೆ.

ನಮ್ಮ ದೇಶದಲ್ಲಿ ಪ್ರಾಥಮಿಕ ಶಾಲಾಗುರೂಪಗುರುಗಳ ಸ್ಥಿತಿಯು ಸಮಾಧಾನಕರವಾಗಿಲ್ಲ. ಇಂಗ್ಲಂಡದ ಶಿಕ್ಷಕ ಸಮಾಜದಂಥ ಸಮಾಜವು ಸ್ಥಾಪಿತವಾಗದೆ ಈ ಸ್ಥಿತಿಯು ಸುಧಾರಿಸುವ ಲಕ್ಷಣವು ತೋರುವದಿಲ್ಲ. ಸವ್ಯಕ್ಕೆ ಶಿಕ್ಷಕರಿಗೆ ಸ್ವಾಭಿಮಾನವಿಲ್ಲ. ಮಾನವಂತೂ ದೂರತೋವಾಸ್ತವೇ. ಶಿಕ್ಷಣವಲ್ಲಿ ಹುರಳಿಲ್ಲ. ಈ ಹೋರೆಯನ್ನು ಶ್ರಮಬಟ್ಟು ಸಮಾಧಾನಕರವಾಗಿ ಸಾಗಿಸುವಂಥ ಜನರನ್ನು ಕಾಣುವದೇ ಅಪರೂಪ. ಈ ಹೋರೆಯನ್ನು ಮಾಡುವದಕ್ಕೆ ಬುದ್ಧಿವಂತರು ಹವಣಿಸುವದು ಕಡಿಮೆ. "न भिक्षे भीक्षतरं पंतोजपिणा शीक्ष" "ಭಿಕ್ಷ ಹುಟ್ಟದವನೇ ಶಿಕ್ಷಕನಾಗತಕ್ಕದು" ಈ ಮಾತಿನಿಂದ ಅತಿ ನಿಕೃಷ್ಟ ಸ್ಥಿತಿಯು ಧ್ವನಿತವಾಗುತ್ತದೆ.

ಈ ದುಃಸ್ಥಿತಿಗೆ ಶಿಕ್ಷಕರೇ ಜಬಾಬದಾರರು. ಅವರು ತಮ್ಮ ಕೆಲಸವನ್ನು ಸರಿಯಾಗಿ ಮಾಡುತ್ತಾ, ಉನ್ನತಾಶೆಯನ್ನು ಬಿಟ್ಟುಕೊಟ್ಟು ಇದ್ದ ಸ್ಥಿತಿಯನ್ನು ತಕ್ಕಮಟ್ಟಿಗೆ ಸುಧಾರಿಸುವ ಪ್ರಯತ್ನವನ್ನು ಜಾಗ್ರತೆಯಿಂದಲೂ ನಿರ್ದಾಕ್ಷಿಣ್ಯದಿಂದಲೂ ಕೈಕೊಳ್ಳುತ್ತಾ, ತಮಗಾಗುವ ತೊಂದರೆಗಳನ್ನು ಕುರಿತು ನಾಲ್ಕು ಜನರು ಬತ್ತಟ್ಟಿಗೆ ಸೇರಿ ಸಮಾಧಾನದಿಂದಲೂ ನಿರಭಿಮಾನದಿಂದಲೂ ವಿಚಾರಿಸುತ್ತಾ, ಯೋಗ್ಯ ಉಪಾಯಗಳನ್ನು ವಿನಯದಿಂದಲೂ ತಕ್ಕ ಮಾರ್ಗದಿಂದಲೂ ಅಧಿಕಾರಿಗಳಿಗೆ ತಿಳಿಸುತ್ತಾ ನಡಿದರೆ ಇದು ನಿಃಸಂದೇಹವಾಗಿ ತಪ್ಪುವದು. ಇಷ್ಟೇ ಅಲ್ಲ, ಶಿಕ್ಷಕರ ಸ್ವಾಭಿಮಾನ ಬೆಳೆಯುವದು, ಶಿಕ್ಷಣವು ಸುಧಾರಿಸುವದು, ಇತರ ಹೋರೆಗಳಂತೆ ಈ ಹೋರೆಗೆ ಕಳೆ ಏರುವದು, ವೇತನವು ಹೆಚ್ಚು ಶಿಕ್ಕುವದು, ಅಭ್ಯಾಸಕ್ರಮವು ದೇಶ ಕಾಲ ಸ್ಥಿತಿಗ

ಳಿಗನುರೂಪವಾಗಿ ಸುಧಾರಿಸುವದು. ಶಿಕ್ಷಕರ ಸಮಾಜದಿಂ
ದ ಇಷ್ಟೆಲ್ಲ ಅನುಕೂಲಗಳಾಗುವವೆಂಬದಕ್ಕೆ ನಮಗಂತೂ
ಸಂಶಯವಿಲ್ಲ. ಆರಂಭದಲ್ಲಿ ಈ ಸಮಾಜದವರಿಗೆ ಅನೇಕ
ತೊಂದರೆಗಳು ಸಂಭವಿಸಬಹುದು. ಅಲ್ಪ ಸಂಬಳದೊಳಗೆ
ಈ ರೀತಿಯ ಖರ್ಚು ಮಾಡುವದು ಬಹು ಕಷ್ಟವು.
ಆದರೂ ಕೆಲವರು ಇದಕ್ಕೆ ಸೊಂಟಾ ಕಟ್ಟಿ ನಿಲ್ಲಲಿಕ್ಕೇ
ಬೇಕು. ದೀವಳಿಗೆ ಹಬ್ಬದಲ್ಲಿ ಈ ಸಮಾಜದ ಕೆಲಸ
ವನ್ನು ಸಾಗಿಸಬಹುದು. ಆಗ ಅನನುಕೂಲವಾದರೆ ಹೋ
ಳೀಪುಣ್ಣಿವೆಯ ಸೂಟಿಯಲ್ಲಿ ನೆರವೇರಿಸಬಹುದು. ಅನು
ಭವದಿಂದ ಈ ಸೂಟಿಯು ಸಾಲುವದಿಲ್ಲೆಂದು ತೋರಿ
ದರೆ ಎಲ್ಲರಿಗೆ ಅನುಕೂಲವಾದ ಕಾಲ ಗೊತ್ತು ಮಾಡಬ
ಹುದು. ಸವ್ಯಕ್ಕೆ ಬಂದು ಜಿಲ್ಲೆಯ ತಾಲೂಕ ಮಾಸ್ತರರು
ಪ್ರಮುಖ ಸಾಲಿಗಳ ಮಾಸ್ತರರು ಅಷ್ಟೇ ಜಟ್ಟುಗೂಡಿ
ಮೇಲೆ ನಿರ್ದೇಶಿಸಿದ ಕೆಲಸವನ್ನು ಕೈಕೊಳ್ಳಬೇಕೆಂದು ನಾ
ವು ಆಗ್ರಹಪೂರ್ವಕವಾಗಿ ಸೂಚಿಸುತ್ತೇವೆ. ಈ ಕೆಲಸಕ್ಕೆ
ನಮ್ಮ ಕೈಲಾದಮಟ್ಟಿಗೆ ಸಹಾಯವನ್ನು ಮಾಡುವ ಅಭಿವ
ಚನವನ್ನು ಕೊಡುತ್ತೇವೆ. ಧಾರವಾಡ ಜಿಲ್ಲೆಯ ಶಿಕ್ಷಕರು
ಈ ಮಾತಿನ ವಿಚಾರ ಮಾಡಿ ದೀವಳಿಗೆಯ ಹಬ್ಬದಲ್ಲಿ ಅಲ್ಪಾ
ರಂಭವನ್ನಾದರೂ ಮಾಡುವರೆಂಬ ನಂಬಿಗೆಯಿಂದ ಈ
ಮಹತ್ವದ ಲೇಖವನ್ನು ಮುಗಿಸುತ್ತೇವೆ.

ಪಾರ್ಸಲಿನ ದರಗಳು— ಛಾಪಿಸಿದ ಪುಸ್ತಕಗಳನ್ನು
ವರ್ತಮಾನಪತ್ರಗಳನ್ನು ಛಾಪಿಸಿದ ಕಾಗದಗಳನ್ನು ಬೆಳ್ಳಿ
ಹಾಸಿಲು ಕೊಟ್ಟಂಥ ಹಳೇ ಕಾಗದ ಪತ್ರಗಳನ್ನು
ವ್ಯಾಕೆಟ್ ಪೋಷ್ಟ (ಬುಕ್‌ಪೋಷ್ಟ) ದಿಂದ ಕಳುಹಿಸುವ ನಿಯ

ಮುವುಂಟು. ಅದರ ದರಗಳು ಪ್ರತಿ ಬಂದು ೧೦ ತೊಲಿ ತೂಕಕ್ಕೆ ೫೬. ಇತರ ಸಾಮಾನುಗಳನ್ನು ಇಪ್ಪು ದಿವಸ ಬ್ಯಾಂಗಿ ಅಥವಾ ಪಾರ್ಸಲ್ ಪೋಷ್ಟ್‌ನಿಂದ ಕಳುಹುವ ನಿಯಮವಿತ್ತು. ಅದಕ್ಕೆ ದರ ೧ ರಿಂದ ೩೦ ತೊಲಿವರೆಗೆ ೫೪, ೩೦ ರಿಂದ ೪೦ ತೊಲಿವರೆಗೆ ೫೮, ಮುಂದೆ ಪ್ರತಿಯೊಂದು ೪೦ ತೊಲಿ ತೂಕಕ್ಕೆ ೫೪. ಆದರೆ ಪೋಷ್ಟಖಾತೆಯವರು ಇದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಮಾಡಿರುತ್ತಾರೆ. ಹಿಂದು ಸ್ತಾನದೊಳಗೆ ಯಾವದೊಂದು ಸ್ಥಳಕ್ಕೆ ಕಳುಹಿಸಲ್ಪಡುವ ೪೦ ತೊಲಿಗಿಂತ ಕಡಿಮೆ ತೂಕದ ಪಾರ್ಸಲಿನ ಹಾಸಿಲು ಪೂರ್ಣವಾಗಿ ಕೊಟ್ಟು ಪಾವತಿಯನ್ನು ಅಪೇಕ್ಷಿಸದಿದ್ದರೆ ಅದಕ್ಕೆ ಕೆಳಗೆ ಬರೆದ ದರದಂತೆ ಹಾಸಿಲು ಕೊಡಬೇಕೆಂದು ಗೊತ್ತು ಮಾಡಿರುತ್ತಾರೆ. ಆ ದರಗಳು ಹ್ಯಾಗಂದರೆ:—

೧ ರಿಂದ ೩೦ ತೊಲಿಗಳವರೆಗೆ ೫೦, ೩೦ ರಿಂದ ೪೦ ತೊಲಿಗಳ ವರೆಗೆ ೫೪, ಮುಂದೆ ಪ್ರತಿ ಬಂದು ೪೦ ತೊಲಿ ತೂಕಕ್ಕೆ ೫೪.

(೧೬೯ ಪುಟದಿಂದ ಸೂಚಿಸಿದ್ದು.)

ಇತಿಹಾಸ.

ರಾಮಾಯಣ ಮತ್ತು ಮಹಾಭಾರತ ಇವೆರಡು ಗ್ರಂಥಗಳು ಇತಿಹಾಸಗ್ರಂಥಗಳಲ್ಲಿ ಶ್ರೇಷ್ಠವಾದವು. ಬೇರೆ ಎಷ್ಟೋ ಇತಿಹಾಸಗಳಿರುವವು, ಆದರೆ ಸವ್ಯಕ್ಕೆ ಅವೆಲ್ಲ ಪುರಾಣದಲ್ಲಿ ಕೂಡಿ ಹೋಗಿರುತ್ತವೆ. ಇತಿಹಾಸಕ್ಕೂ ಪುರಾಣಕ್ಕೂ ಅಂತರವಿರುತ್ತದೆ.

ಪುರಾಣಗಳು.

ಪುರಾಣಗಳಲ್ಲಿ, ೧ ಮಹಾಪುರಾಣಗಳು, ೭ ಉಪಪುರಾಣಗಳು ಎಂಬ ಎರಡು ಪ್ರಕಾರಗಳುಂಟು. ಇವೆರಡೂ ಪ್ರಕಾ

ರವ ಪುರಾಣಗಳು ೧೪ ಇರುತ್ತವೆ. ಮಹಾಪುರಾಣಗಳು ಯಾವವೆಂದರೆ:—(೧) ಬ್ರಹ್ಮ, (೨) ಪದ್ಮ, (೩) ವಿಷ್ಣು, (೪) ವಾಯು, (೫) ಲಿಂಗ, (೬) ಗರುಡ, (೭) ಗಾರ್ಗೀಯ, (೮) ಭಾಗವತ, (೯) ಅಗ್ನಿ, (೧೦) ಸ್ಕಂದ, (೧೧) ಭವಿಷ್ಯ, (೧೨) ಬ್ರಹ್ಮವೈವರ್ತ, (೧೩) ಮಾರ್ಕಂಡೇಯ, (೧೪) ವಾಮನ, (೧೫) ವರಾಹ, (೧೬) ಮತ್ಸ್ಯ, (೧೭) ಕೂರ್ಮ, (೧೮) ಬ್ರಹ್ಮಾಂಡ; ಇವೆಲ್ಲ ಪುರಾಣಗಳು ಧ್ಯಾನದಲ್ಲಿ ಇರಬೇಕೆಂದು ಒಬ್ಬ ಕವಿಯು ಕೆಳಗಿನ ಶ್ಲೋಕವನ್ನು ಮಾಡಿರುತ್ತಾನೆ:—

मद्वयं भद्वयं चैव ब्रत्रयं वचतुष्टयं ।
नालिपाग्नि तथा कूस्कं गारुडमेवच ॥

ಮ, ಕಾರದಿಂದ ಆರಂಭವಾಗುವಂಥವು ಎರಡು. ಭ, ದಿಂದ ಆರಂಭವಾಗುವಂಥವು ಎರಡು. ಬ್ರ, ದಿಂದ ಆರಂಭವಾಗುವಂಥವು ಮೂರು. ವ, ಕಾರದಿಂದ ಪ್ರಾರಂಭಿಸುವಂಥವು ನಾಲ್ಕು ಮತ್ತು ಗಾ, ಲಿಂ, ಪ, ಕೂ, ಸ್ಕ, ಇವುಗಳಿಂದ ಆರಂಭವಾಗುವಂಥವೂ ಅಗ್ನಿ ಗರುಡ ಪುರಾಣಗಳೂ ಈ ಪ್ರಕಾರ ಎಲ್ಲ ಪುರಾಣಗಳನ್ನು ಒಂದು ಶ್ಲೋಕದಲ್ಲಿ ಸಂಗ್ರಹಿಸಿರುತ್ತಾರೆ.

ಉಪ ಪುರಾಣಗಳು.

ಇವು ಯಾವವೆಂದರೆ:—(೧) ಆದಿತ್ಯ, (೨) ಔಶನಸ, (೩) ಕಲ್ಕಿ, (೪) ಕಪಿಲ, (೫) ಕಾಲಿಕಾ, (೬) ದೂರ್ವಾಸಸ, (೭) ನಂದಿ, (೮) ನಾರದೀಯ ಅಥವಾ ಬ್ರಹನ್ನಾರದೀಯ, (೯) ನೈಸಿಂಹ, (೧೦) ಪಾರಾಶರ, (೧೧) ಭಾರ್ಗವ, (೧೨) ಮಾಹೇಶ್ವರ, (೧೩) ವಾರುಣ, (೧೪) ವಾಸಿಷ್ಠ, (೧೫) ಶಾಂಬ, (೧೬) ಶಿವ, (೧೭) ಸನತ್ಕುಮಾರ, (೧೮) ಸಾರ

ಇವಲ್ಲದೆ ಆದಿ, ಮಾನವ, ಮುದ್ಗಲ, ಭವಿಷ್ಯೋತ್ತರ, ಗಣೇಶ, ಬೃಹದ್ಧರ್ಮ ಮುಂತಾದ ಅನೇಕ ಉಪಪುರಾಣಗಳಿರುತ್ತವೆ. ಅವುಗಳಲ್ಲಿಯು ಎಷ್ಟೋ ಹೆಸರುಗಳನ್ನು ಮೇಲೆ ಹೇಳಿದ ಹದಿನೆಂಟು ಉಪಪುರಾಣಗಳಲ್ಲಿ ಜೋಡಿಸಿ ಉಳಿದವುಗಳನ್ನು ಬಿಟ್ಟು ಬಿಡುತ್ತಾರೆ. ಕಾಲಿಕಾ ಪುರಾಣದಲ್ಲಿ ೧೮ ಉಪಪುರಾಣಗಳ ಹೆಸರುಗಳುಂಟು. ಅವುಗಳಲ್ಲಿ, ಮಾರೀಚ, ಬ್ರಹ್ಮಾಂಡ, ವಾಮನ ಮತ್ತು ಕಾರ್ತಿಕೇಯ ಇವು ಪುರಾಣಗಳೆಂದು ಲೇಖ ಉಂಟು. ಈ ಪುರಾಣೋಪಪುರಾಣಗಳನ್ನು ರಚಿಸುವದಕ್ಕಿಂತ ಮೊದಲು ಪುರಾಣಸಂಹಿತೆಗಳೆಂದು ಸಂಹಿತೆಗಳಿದ್ದವು. ಅವು (೧) ಸ್ವತಃ ವ್ಯಾಸ ಋಷಿಯು ಬರೆದ ಸಂಹಿತೆ, (೨) ಲೋಮಹರ್ಷಣಪ್ರಣೀತ ಸಂಹಿತೆ, (೩–೫) ಕಶ್ಯಪ, ಸಾಯರ್ಣ, ಮತ್ತು ಶಂಶಪಾಯನ ಈ ಋಷಿಗಳು ಬರೆದ ಸಂಹಿತೆಗಳು. ಈ ಪುರಾಣ ಸಂಹಿತೆಗಳ ಆಧಾರದಿಂದ ಬೇರೆ ಬೇರೆ ಪುರಾಣಗಳು ರಚಿಸಲ್ಪಟ್ಟವು. ಅವರೆ ಯಾವ ಸಂಹಿತೆಯಿಂದ ಯಾವ ಪುರಾಣವು ರಚಿತವಾಯಿತೆಂಬದನ್ನು ಹೇಳುವದು ಅಸಾಧ್ಯವಾಗಿರುತ್ತದೆ.

ತಂತ್ರಗ್ರಂಥ.

ಪುರಾಣಗಳಂತೆ ತಂತ್ರಗಳಾದರೂ ಅನೇಕವಿರುತ್ತವೆ. ಅವುಗಳಲ್ಲಿ ಮಹಾರ್ಣವ, ಕುಲಾರ್ಣವ, ಜ್ಞಾನ ಸಂಕಲಿನೀ, ಕುಲಕುಂಡಲಿನೀ, ರುದ್ರಯಾಮಲ, ಬ್ರಹನ್ನೀಲ, ವಾರಾಹೀ, ಗೌತಮೀಯ, ಮಾತೃಕಾಭೇದ, ಕಾಮುಧೇನು, ವಿಶ್ವಸಾರ, ಕಾಮಾಖ್ಯ, ಮಂತ್ರಕೋಷ ಮೊದಲಾದವು ಶ್ರೇಷ್ಠವಿರುತ್ತವೆ.

ಟ್ರೇನಿಂಗ ಕಾಲೇಜದ ಸರ್ಟಿಫಿಕೇಟ ಪರೀಕ್ಷೆಯು ಎಸ್ಟೇ ಸಪ್ಟಂಬರಕ್ಕೆ ಆಗುವದು.

METHODS OF TEACHING-OBJECT LESSON-CLAY.

ಶಿಕ್ಷಣದ ಪದ್ಧತಿಗಳು.—ಒಡವೆ ಪಾಠ.

(ಗಿಳಿಯನ್ನೇ ಪುಟದಿಂದ ಮುಂದೆ ಸಾಗಿದ್ದು.)

ಶಿ—(ನೀರಿನಿಂದ ನೆನೆದ ಹೆಂಟೆಯನ್ನು ತೋರಿಸಿ) ಈ ಹೆಂಟೆಯು ಪೂರಾ ನೆನೆದಿರುವದು. ಇದನ್ನು ಬೊಟ್ಟಿನಿಂದ ಬತ್ತಿ ಇದರಲ್ಲಿ ಸ್ವಲ್ಪ ತಗ್ಗು ಮಾಡುತ್ತೇನೆ. ಅದರಲ್ಲಿ ನೀರು ಹಾಕುತ್ತೇನೆ, ಏನಾಗುವದು ಹೇಳಿರಿ.

ವಿ—ನೀರು ಹಾಗೇ ನಿಲ್ಲುವದು.

ಶಿ—ಮೊದಲಿನಂತೆ ನೀರು ಯಾಕೆ ಇಂಗಲಿಲ್ಲ?

ವಿ—ಛಿದ್ರಗಳು ತುಂಬಿದ ಕಾರಣ ನೀರು ಇಂಗಲಿಲ್ಲ.

ಶಿ—ನೀರು ನಿಲ್ಲುವದಕ್ಕೆ ಮತ್ತೆಯಾವ ಕಾರಣವು? ಪಾತೇಲಿಯೊಳಗೆ ನೀರು ಯಾಕೆ ನಿಲ್ಲುತ್ತದೆ? ಮಣಿಯ ಮೇಲಿನ ನೀರು ಯಾಕೆ ಹರಿದು ಹೋಗುತ್ತದೆ?

ವಿ—ನೀರು ಹರಿಯುವ ಪದಾರ್ಥವು; ತಗ್ಗಿನ ಕಡೆಗೆ ಹರಿಯುವದು. ಪಾತೇಲಿಯ ಬದಿಗಳು ಅಡ್ಡಾಗುವದರಿಂದ ಅದರೊಳಗಿನ ನೀರು ಹರಿಯದೆ ನಿಂತಲ್ಲೇ ನಿಲ್ಲುವದು. ಮಣಿಯ ಮೇಲಿನ ನೀರಿಗೆ ಏನೂ ಅಡ್ಡಾಗುವದಿಲ್ಲ; ಅದರಿಂದ ಅದು ಹರಿದು ಹೋಗುವದು.

ಶಿ—ಶಾಬಾಸ! ಅದೇ ಮೇರೆಗೆ ಈ ತಗ್ಗಿನ ಬದಿಗಳು ನೀರಿಗೆ ಅಡ್ಡಾಗುತ್ತವೆ. ಅವು ಜಿಗಟಾಗಿರುವದರಿಂದ ನೀರನ್ನು ಹರಿಯಗೊಡುವದಿಲ್ಲ. ಹಸಿ ಮಣ್ಣಿನೊಳಗಿಂದ ನೀರು ಬಸಿದು ಹೋಗುವದಿಲ್ಲ. ನೀರು ಇಂಗದೆ ಮೇಲೇ ಉಳಿಯಬೇಕೆಂಬ ಉದ್ದೀಶದಿಂದ ಕೆರೆ ಕಾಲವೆಗಳ ಬುಡಕ್ಕೆ ಜಿಗಟು ಮಣ್ಣು ಹಾಕುವರು, ಬದಿಗಳನ್ನು ಜಿಗಟು ಮಣ್ಣಿನಿಂದ ಮೆಪ್ಪುವರು. ಹಸಿ ಮಣ್ಣಿನಲ್ಲಿ ಯಾವ್ಯಾವ ಗುಣಗಳಿರುತ್ತವೆ ಹೇಳಿರಿ ನೋಡುವ.

ವಿ—ಹಸಿ ಮಣ್ಣು ಜಿಗಟಾಗಿಯೂ, ನೀರು ಹೀರದಂಥಾ ದ್ದಾಗಿಯೂ ಇರುವದು. ಬಣ ಮಣ್ಣಿನಂತೆ ಅದು ಪುಡಿ ಪುಡಿಯಾಗುವದಿಲ್ಲ.

ಶ್ರೀ—ಬಂದು ಕೈಯಲ್ಲಿ ಈ ಹಸಿ ಮಣ್ಣು ತಕ್ಕೊಳ್ಳಿರಿ; ಮತ್ತೊಂದು ಕೈಯಲ್ಲಿ ಚಂಡಿನಾಕಾರದಿಂದ ಸುತ್ತಿದ ರೇಸಿ ಮೆಯ ವಸ್ತ್ರವನ್ನಾಗಲಿ, ಉಣ್ಣೆಯನ್ನಾಗಲಿ, ಸ್ಪಂಜವನ್ನಾ ಗಲಿ ತೆಗೆದುಕೊಂಡು ಕೈಗಳನ್ನು ಫಟ್ಟಯಾಗಿ ಮುಚ್ಚಿ ತೆರೆ ಯಲು ಏನಾಗುತ್ತದೆ, ಪರೀಕ್ಷಿಸಿ ಹೇಳಿರಿ.

ವಿ—ಕೈ ಮುಚ್ಚಿದಾಗ ಎರಡೂ ಬತ್ತಲ್ಪಟ್ಟಾಗ್ಯೂ ತೆರೆದ ಕೂಡಲೆ ಬಂದು ಕೈಯೊಳಗಿನ ರೇಸಿಮೆಯ ವಸ್ತ್ರ ಮುಂ ತಾವನ್ನು ಮೊದಲಿದ್ದಂತೆ ಆದವು. ಆದರೆ ಎರಡನೇ ಕೈಯೊ ಳಗಿನ ಹಸಿ ಮಣ್ಣು ಬತ್ತಲ್ಪಟ್ಟು ಬೊಮ್ಮಿಯ ಆಕಾರದ್ದಾದ ದ್ದು ಹಾಗೇ ಉಳಿಯಿತು.

ಶ್ರೀ—ಶಾಬಾಸ, ಹೌದು. ಹಸಿ ಮಣ್ಣು ಕೊಟ್ಟ ಆಕಾರ ವನ್ನು ತಾಳಿ ಹಾಗೇ ಉಳಿಯಿತು. ರೇಸಿಮೆಯ ವಸ್ತ್ರ ಮುಂತಾದವು ಆ ಆಕಾರವನ್ನು ಕಾಯ್ದು ಕೊಳ್ಳಲಿಲ್ಲ.

ಶ್ರೀ—ಇನ್ನು ಹಸಿ ಮಣ್ಣಿನೊಳಗೆ ಮತ್ತೆ ಯಾವ ಗುಣ ವುಂಟು ಹೇಳಿರಿ?

ವಿ—ಕೊಟ್ಟ ಆಕಾರವನ್ನು ಧರಿಸುವ ಗುಣ.

ಶ್ರೀ—ಈ ಗುಣ ಬೇರೆ ಯಾವ ಒಡವೆಯಲ್ಲಿ ಉಂಟು?

ವಿ—ನಾದಿದ ಕಣಕ, ಮೇಣ ಮುಂತಾದವುಗಳಲ್ಲಿರುತ್ತದೆ.

ಶ್ರೀ—ನಾದಿದ ಕಣಕದಿಂದ ನಿಮ್ಮವ್ವ ಏನು ಮಾಡು ತ್ತಾಳೆ?

ವಿ—ರೊಟ್ಟಿಗಳನ್ನೂ ಬಿಚ್ಚಗಡಬುಗಳನ್ನೂ ಮಾಡು ತ್ತಾಳೆ.

ಶ್ರೀ—ಹಿಟ್ಟಿನಲ್ಲಿ ನೀರು ಹಾಕಿ ಮಾಡಿದಂತೆ ಬಣ ಮಣ್ಣಿ

ನಲ್ಲಿ ನೀರು ಹಾಕಿ ಅಲ್ಲಾ ಮಾಡಿ ಅದರಿಂದ ಪಾತ್ರೆಗಳನ್ನೂ ಹಂಚು ಇಟ್ಟಂಗಿ ಮೊದಲಾದವುಗಳನ್ನೂ ಗೊಂಬೆಗಳನ್ನೂ ಮಾಡುತ್ತಾರೆ. ಈ ಪದಾರ್ಥಗಳ ಮೇಲೆ ನೀರು ಸುರುವಿದರೆ ಅಥವಾ ಇವನ್ನು ಮಳೆಯಲ್ಲಿಟ್ಟರೆ ಏನಾಗುವದು?

ವಿ—ಇವು ಕರಗಿ ಹೋಗುವವು.

ಟಿ.—ಮಣ್ಣಿನ ಪಾತ್ರೆಯಂದರೇನು? ಈ ಹೆಸರು ಯಾಕೆ ಬಂತು? ಮುಂತಾದ ಪ್ರಶ್ನೆಗಳನ್ನು ಶಿಕ್ಷಕರು ಕೇಳಬಹುದು.

ಶಿ—ಮಣ್ಣಿನ ಪಾತ್ರೆಗಳು ಈ ಪ್ರಕಾರ ಕರಗಿದರೆ ನಮಗೆ ಅವುಗಳಿಂದ ಏನೂ ಪ್ರಯೋಜನವಾಗಲಾರದು. ಮನೆಯ ಮೇಲಿನ ಹಂಚುಗಳೂ, ಜನರು ನೀರು ತರುವ ಮಣ್ಣಿನ ಕೊಡಗಳೂ ಮುಂತಾದ ಪದಾರ್ಥಗಳು ಕೆಲಸಕ್ಕೆ ಬರಬೇಕಾದರೆ ಏನು ಮಾಡುತ್ತಾರೆ?

ವಿ—ಮಣ್ಣಿನ ಪಾತ್ರೆಗಳನ್ನು ಸುಡುತ್ತಾರೆ. ಅದರಿಂದ ಅವು ಗಟ್ಟಿಯಾಗಿ ಕೆಲಸಕ್ಕೆ ಬರುತ್ತವೆ.

ಶಿ—ಸುಟ್ಟ ಪಾತ್ರೆಗಳಲ್ಲಿ ಯಾವ ಗುಣಗಳು ಬರುತ್ತವೆಂಬದನ್ನು ಈ ಸುಟ್ಟ ಇಟ್ಟಂಗಿಯ ಜೊರನ್ನು ಪರೀಕ್ಷಿಸಿ ಹೇಳಿರಿ.

೧೨ನೇ ವಿ—ಸುಟ್ಟ ಪಾತ್ರೆಗಳು ಗಟ್ಟಿಯಾಗುತ್ತವೆ. ಒಣ ಮಣ್ಣಿನ ಹೆಂಟೆಯಲ್ಲಿ ತುಂಡು ಮಾಡಲಿಕ್ಕೆ ಬಂದಂತೆ ಇವು

---

* ಶಿಕ್ಷಕರು ವಿದ್ಯಾರ್ಥಿಗಳ ಕೈಯಲ್ಲಿ ಹಸಿ ಮಣ್ಣು ಕೊಟ್ಟು ಉರುಳಿಯಾಕಾರದ ಉಂಡಿಗಳನ್ನು ಮಾಡಿಸಿ ಅವುಗಳಿಗೆ ಅಂಚು ಮಾಡಲಾಗಿ ಪರಾತಗಳಾಗುವವೆಂತಲೂ, ಅಂಚುಗಳನ್ನು ಸ್ವಲ್ಪ ಎತ್ತಿಸಿದರೆ ಬಟ್ಟಲಗಳಾಗುವವೆಂತಲೂ, ಅಂಚು ಮುಚ್ಚಿಸಿದರೆ ಪಾತ್ರೆಲಿಗ ಆಗುವವೆಂತಲೂ ತೋರಿಸಿದರೆ ವ್ಯುತ್ಪಾದಾಂತರವಾಗಿ ಹುಡುಗರಿಗೆ ಹೊಗಸಾಗುವದು.

ಗಳಲ್ಲಿ ಬರುವದಿಲ್ಲ. ಅಷ್ಟಬೇಗ ಇವು ಬೇರೆಯಾಗುವದಿಲ್ಲ.

ಎನೇ ವಿ—ಬಣ ಮಣ್ಣು ಮೆತ್ತಗಿರುವದು. ಸುಟ್ಟ ಪಾತ್ರೆಗಳು ಬಿರುಸಾಗುವವು. ಇವು ನೆಲಕ್ಕೆ ಬಿದ್ದ ಕೂಡಲೆ ಬಡೆಯುವವು.

ಇನೇ ವಿ—ಹಸಿ ಮಣ್ಣಿನ ಪಾತ್ರೆಗಳು ನೀರಿನಲ್ಲಿ ಕರಗುತ್ತವೆ. ಸುಟ್ಟ ಪಾತ್ರೆಗಳು ಕರಗುವದಿಲ್ಲ.

ಶನೇ ವಿ—ಸುಟ್ಟ ಪಾತ್ರೆಗಳು ತಮ್ಮ ಆಕಾರವನ್ನು ಕಾಯ್ದುಕೊಳ್ಳುತ್ತವೆ. ಅವಕ್ಕೆ ಬೇರೆ ಆಕಾರ ಕೊಡುವದು ಅಸಾಧ್ಯ.

ಶಿ—ಇಕೋ ನೋಡಿರಿ, ಇವೆರಡು ನೀರು ತುಂಬಿದ ಪಾತ್ರೆಗಳುಂಟು. ನೀರು ಎಷ್ಟು ಇರುತ್ತದೆಂಬದನ್ನು ತಿಳಿಯುವದಕ್ಕೆ ಗುರುತು ಮಾಡಿರಿ. ಇದೊಂದು ಸುಟ್ಟ ಇಟ್ಟಂಗಿಯ ಚೂರು ಉಂಟು; ಇದು ಅದೇ ಆಕಾರದ ಕಲ್ಲುಂಟು. ಇನ್ನು ಈ ಇಟ್ಟಂಗಿಯ ತುಂಡನ್ನು ಬಂದು ಪಾತ್ರೆಯೊಳಗೆ ಕಲ್ಲನ್ನು ಬಂದು ಪಾತ್ರೆಯೊಳಗೆ ಹಾಕುತ್ತೇನೆ. ನಿಮಗೆ ಏನು ತೋರುತ್ತದೆ, ಹೇಳಿರಿ.

ವಿ—ಕಲ್ಲು ಹಾಕಿದ ಪಾತ್ರೆಯೊಳಗಿನ ನೀರು ಹೆಚ್ಚಾಯಿತು, ಇಟ್ಟಂಗಿಯ ತುಂಡನ್ನು ಹಾಕಿದ ಪಾತ್ರೆಯೊಳಗಿನ ನೀರು ಅಷ್ಟು ಹೆಚ್ಚಾಗಲಿಲ್ಲ.

ಶಿ—ಹೀಗೆ ಯಾಕಾಗಿದ್ದೀತು? ಆಲೋಚಿಸಿ ಹೇಳಿರಿ ನೋಡುವ.

ವಿ—ಇಟ್ಟಂಗಿಯು ಸಚ್ಛಿದ್ರವಾದವರಿಂದ ನೀರನ್ನು ಹೀರಿಕೊಂಡಿತು. ಕಲ್ಲು ಹೀರಿಕೊಳ್ಳಲಿಲ್ಲ. ಅದರಿಂದ ಇಟ್ಟಂಗಿ ಹಾಕಿದ ಪಾತ್ರೆಯೊಳಗಿನ ನೀರು ಏರಲಿಲ್ಲ.

ಶಿ—ಬಣ ಮಣ್ಣಿಗೂ ಸುಟ್ಟ ಮಣ್ಣಿಗೂ ಏನು ಹೆಚ್ಚು ಕಡಿಮೆ? ಇಕೋ ನೋಡು, ಇದು ಬಣ ಮಣ್ಣು, ಇದು

ಸುಟ್ಟ ಹೆಂಟೆಯ ತುಂಡು. ಎರಡರ ಮೇಲೆಯೂ ನೀರು ಹಾಕಿ ಪರೀಕ್ಷಿಸು.

ವಿ—ಬಣ ಮಣ್ಣಿನಲ್ಲಿ ನೀರು ಕಲಿತು ಅದರ ಸಚ್ಛಿದ್ರತ್ವವು ಅಡಗಿ ನೀರು ಹೊರಬೀಳುವದಿಲ್ಲ. ಆದರೆ ಇಟ್ಟಂಗಿ ಉಂಡ ನೀರು ಇಟ್ಟಂಗಿಯನ್ನು ಹೊರ ತೆಗೆದ ಕೂಡಲೇ ಹೊರಬೀಳುತ್ತದೆ. ಅದು ನೀರನ್ನು ಹಿಡಿಯುವದಿಲ್ಲ. ನೀರಿನಿಂದ ಬಣ ಮಣ್ಣು ಹಸಿಯೂ ಮೆತ್ತಗೂ ಕೊಟ್ಟ ಆಕಾರವನ್ನು ಧರಿಸುವ ಗುಣವುಳ್ಳದೂ ಆಗುತ್ತದೆ. ಇಟ್ಟಂಗಿಯು ತುಂಡಿನಲ್ಲಿ ಆ ಗುಣಗಳು ಹುಟ್ಟಲಾರವು.

ಶ್ರೀ—ಸಣ್ಣ ಸಣ್ಣ ಹಾದಿಗಳಿಗೆ ಇಟ್ಟಂಗಿ ತುಂಡುಗಳನ್ನು ಹಾಕುತ್ತಾರೆ. ಇದರ ಕಾರಣವನ್ನು ನೀವು ಆಲೋಚಿಸಿ ಹೇಳುವಿರೋ?

ವಿ—ಶೀಳ ಹಾದಿಗಳಿಗೂ ಸಣ್ಣ ಹಾದಿಗಳಿಗೂ ಮಣ್ಣು ಹಾಕಿದರೆ ನೀರು ಬಿದ್ದು ಕೆಸರಾಗುತ್ತದೆ. ಇಟ್ಟಂಗಿ ತುಂಡುಗಳನ್ನು ಹಾಕಿದರೆ ಅವುಗಳಲ್ಲಿ ನೀರು ನಿಲ್ಲಲಾರದು, ಅದು ಬಸಿದು ಹೋಗಿ ನೆಲದೊಳಗೆ ಇಂಗುವದು. ಇಟ್ಟಂಗಿಯ ತುಂಡುಗಳು ಯಾವಾಗಲೂ ಗಟ್ಟಿಯಾಗಿಯೂ ಬಣವಾಗಿಯೂ ಛಿದ್ರಮಯವಾಗಿಯೂ ಇರುವವು. ಅದರಿಂದ ಹಾದಿಗಳು ಬಹಳ ನೆಟ್ಟಗಾಗುವವು.

ಶ್ರೀ—ಸುಟ್ಟ ಪಾತ್ರೆಗಳು ಛಿದ್ರಮಯವಾಗಲು ಅವುಗಳಲ್ಲಿ ಪ್ರವಾಹಿ ಪದಾರ್ಥಗಳನ್ನು ಸಂಗ್ರಹಿಸಿ ಇಡುವ ಬಗೆ ಏನು? ಸಂಗ್ರಹಿಸಲಿಕ್ಕೆ ಬಾರದಿದ್ದರೆ ಅವುಗಳಿಂದ ಲಾಭವೇನು? ಪ್ರವಾಹಿ ಪದಾರ್ಥಗಳು ಬಸಿದು ಹೋದರೆ ಇವುಗಳ ಪ್ರಯೋಜನವೇನು? ಇಕೋ ನೋಡು, ಈ ಚಹಾದ ಪಾತ್ರೆಗಳು, ಉಪ್ಪಿನ ಕಾಯಿಯ ಬರಣಿಗೆಗಳು, ಇಟ್ಟಂಗಿಗಳು, ಹೂವಿನ ಕುಂಡಗಳು ಇವುಗಳಲ್ಲಿ ಏನು ಹೆಚ್ಚು ಕಡಿಮೆ ತೋರುತ್ತದೆ ಹೇಳು?

ವಿ—ಇಟ್ಟಂಗಿಗಳು, ಹೂವಿನ ಕುಂಡಗಳು, ಆದೇ ಸುಟ್ಟ ಮಣ್ಣಿನ ಪಾತ್ರೆಗಳು ಪುರಬರಕಾಗಿರುತ್ತವೆ. ಚಹಾದ ಪಾತ್ರೆಗಳು, ಬರಣಿಗಳು ಮುಂತಾದ ಮನೆಯ ಕೆಲಸಕ್ಕೆ ಬರುವ ಪದಾರ್ಥಗಳು ನುಣಪಾಗಿರುತ್ತವೆ.

ಶ್ರೀ—ಇಟ್ಟಂಗಿಗಳನ್ನೂ, ಪಂಚುಗಳನ್ನೂ, ಹೂವಿನ ಕುಂಡಗಳನ್ನೂ ಸಾಧಾರಣ ತರದ ಮಣ್ಣಿನಿಂದ ಮಾಡುತ್ತಾರೆ. ಆದರೆ ಪಾತ್ರೆಗಳಿಗಾಗಿ ಹೆಚ್ಚು ಶುದ್ಧವಾದಂಥ ಬಿಳೇ ಮಣ್ಣನ್ನು ಉಪಯೋಗಿಸುತ್ತಾರೆ. ಭಟ್ಟಿಯೊಳಗೆ ಬಳಿತಾಗಿ ಕಾಸಿ ಪುಡಿ ಪುಡಿ ಮಾಡಿದಂಥ ಗಾರುಗಲ್ಲಿನ ಪುಡಿಯನ್ನೂ ಮಣ್ಣನ್ನೂ ಕೂಡಿಸಿ ಆವ ಮಿಶ್ರಣದಿಂದಲೂ ಪಾತ್ರೆಗಳನ್ನು ಮಾಡುತ್ತಾರೆ. ಚಹಾದ ಚಿನಾಯಿ ಮಣ್ಣಿನ ಪಾತ್ರೆಗಳನ್ನು ಅತಿ ಶುದ್ಧವಾದಂಥ ಬಿಳೇ ಮಣ್ಣಿನಿಂದ ಮಾಡುತ್ತಾರೆ. ಈ ಮಣ್ಣಿನಿಂದ ಮಾಡಿದ ಪಾತ್ರೆಗಳನ್ನು ಆವಿಗೆಯೊಳಗೆ ಹಾಕಿ ಸುಡುತ್ತಾರೆ.

ಇಟ್ಟಂಗಿ, ಪಂಚು, ಕುಂಡ ಮುಂತಾದವುಗಳನ್ನು ಬಮ್ಮೆ ಸುಡುತ್ತಾರೆ. ಬರಣಿ, ಕೊಡ ಮುಂತಾದವುಗಳನ್ನು ಸುಟ್ಟು ಹಾಗೆ ಬತ್ತಟ್ಟಿಗೆ ಆರಗೊಡುತ್ತಾರೆ. ಬಳಿಕ ಒಪ್ಪಿನ ಮಿಶ್ರಣ ಹಾಕಿ ಮತ್ತೆ ಸುಡುತ್ತಾರೆ. ಆದರಿಂದ ಆ ಮಿಶ್ರಣವು ಆ ಪಾತ್ರೆಯ ಸುತ್ತೆಲ್ಲ ಪಸರಿಸಿ ನುಣುಪಾದಂಥ ಹೊಳಪುಳ್ಳಂಥ ಮೈಯ್ಯನ್ನು ಹುಟ್ಟಿಸುತ್ತದೆ. ಈ ಮೈಯು ಛಿದ್ರಮೆಯವಾಗಿರುವದಿಲ್ಲ. ಆದರಿಂದ ಈ ಪಾತ್ರೆಗಳಲ್ಲಿ ಪ್ರವಾಹಿ ಪದಾರ್ಥಗಳನ್ನು ಹಾಕಲಾಗಿ ಅವು ಬಸಿದು ಹೋಗುವದಿಲ್ಲ. ಹರಿಗಳ ಕೊಳೆವೆಗಳಿಗೆ ಹಚ್ಚುವ ಜೆಲಾಯಿನ ಮಿಶ್ರಣವಲ್ಲಿ ಉಪ್ಪನ್ನು ಹೆಚ್ಚಾಗಿ ಕೂಡಿಸುತ್ತಾರೆ. ಚಹಾದ ಪಾತ್ರೆಗಳಿಗೆ ಹಚ್ಚುವ ಮಿಶ್ರಣವಲ್ಲಿ ವಜ್ರದುಂಡಿಯ ಕಲ್ಲು, ಕಾಜು, ವ್ಹಂಮಿಟೆಲೇಡ, ಈ ಪದಾರ್ಥಗಳು ಕೂಡಿ

ರುತ್ತವೆ. ಕೆಲವು ಮಣ್ಣಿನ ಪಾತ್ರೆಗಳಿಗೆ ಜಿಲಾಯಿಯಾ ಇರುವದಲ್ಲದೆ ಅದರ ಮೇಲೆ ಚಿತ್ರಗಳು ಕಿಣ್ವದಿಂದ ಬರೆದಿರುತ್ತವೆ. ಈ ಚಿತ್ರಗಳನ್ನು ಜಿಲಾಯಿಯಾ ಕೊಟ್ಟ ಮೇಲೆ ಬರೆದು ಆ ಪಾತ್ರೆಗಳನ್ನು ಮತ್ತೆ ಸುಡುತ್ತಾರೆ.

SELECTIONS FROM THE KARNATIK GAZETTEER.

ಕನ್ನಡ ಗರೆಹುಟಿಯರಿಂದ ಅವತರಣಿಗಳು.

(ಗಾರ್ನೇ ಪುಟದಿಂದ ಸಾಗಿದ್ದು)

ಕೋಟೆಯೊಳಗೆ ಆಸದಖಾನನು ಕಟ್ಟಿಸಿದ್ದೊಂದು ಬಹು ಸುಂದರವಾದ ದೊಡ್ಡ ಮಸೀದಿಯುಂಟು; ಅದಕ್ಕೆ ಸೋವಾ ಮಸೀದಿ ಎನ್ನುವರು. ಈ ಮಸೀದಿಯೊಳಗೆ ಆಸದಖಾನನ ಚಿಲಕತ್ತು, ಕಬ್ಬಿಣ ಸೀಸುಗಳಿಂದ ಮಾಡಿದ ಕಾಲುಜೋಡುಗಳು, ಅವನು ಓದುತ್ತಿದ್ದ ಕುರಾಣದ ಪುಸ್ತಕ ಇರುತ್ತವೆ. ಅವನ ಕತ್ತಿಯೂ ಬಂದು ಇತ್ತು. ಆದರೆ ಅದನ್ನು ಸರ್ ಗಾರ್ಗೀರರಲ್ಲಿ ಬಬ್ಬ ಸೋಜರನು ಕದ್ದನು. ಸರ್ ಗಾರ್ಗೀರರ ಬಂಧಾಯದ ವರೆಗೆ ಮುಸಲ್ಮಾನರು ಈ ಮಸೀದಿಗೆ ಪಾರ್ಥನೆಗೆ ಹೋಗುತ್ತಿದ್ದರು; ಆ ವರ್ಷ ಸರಕಾರದ ಹುಕುಮಿನಿಂದ ಮಸೀದಿಯ ಬಾಗಿಲು ಇಕ್ಕಿಸಿದರು.

ಕೋಟೆಯೊಳಗೆ ಮೂರು ಜೈನರ ಗುಡಿಗಳಿವೆ. ಕಮಿಸರೀ ಅವಾರಿನ ಬಳಿಯರುವ ಗುಡಿಯ ಗರ್ಭಾಗಾರವು ಪೂರಾ ಹೋಗಿರುತ್ತದೆ. ಅದರ ಮುಂಟಪದಲ್ಲಿ ಚಲುವಾದ ಚಿತ್ರಗಳನ್ನು ಕಲ್ಲಿನೊಳಗೆ ಕೊರಿದಿದ್ದಾರೆ. ಎರಡನೇ ಗುಡಿಯು ಕಮಿಸರೀ ಅವಾರಿನೊಳಗೆ ತಕ್ಕಮಟ್ಟಿಗೆ ದೊಡ್ಡದಿರುತ್ತದೆ. ಇದರಲ್ಲಿಯೂ ಮನೋಹರವಾದ ದೇವಾದಿಗಳ ಚಿತ್ರಗಳನ್ನು ಕೊರಿಸಿದ್ದಾರೆ. ಮೂರನೇ ಗುಡಿಯಲ್ಲಿ ಸೋಜರರು ಇರುತ್ತಾರೆ; ಅದರ ಗುರ್ತು ಹತ್ತು

ಹಾಗಿಲ್ಲ. ಈ ಗುಡಿಗಳಲ್ಲಿ ಸವದತ್ತಿಯ ರಟ್ಟ ಅರಸರು ೧೦ನೇ ೧೨ನೇ ಶತಕಗಳಲ್ಲಿ ಬರಿಸಿದ ಲಿಪಿಗಳಿದ್ದವು. ಅವ ಷ್ಟು ಈಗ ಮುಂಬಯಿಗೆ ಬಯಿದಿದ್ದಾರೆ.

ಊರು—ಕೋಟೆಯ ಪಶ್ಚಿಮಕ್ಕೆ ಸುಮಾರು ಅರ್ಧ ಮೈಲಿನ ಮೇಲೆ ಬೆಳಗಾವಿಯ ಊರಿನ ವಸ್ತಿ ಇರುತ್ತದೆ. ಊರೊಳಗೆ ಮೂರುತಿಗಲ್ಲಿ, ಅನಂತಶಯನಗಲ್ಲಿ ಇವೆರಡು ಮುಖ್ಯ ಓಣಿಗಳಿರುತ್ತವೆ. ಈ ಓಣಿಗಳಲ್ಲಿ ಬ್ರಾಹ್ಮಣರೇ ಮುಖ್ಯವಾಗಿ ವಾಸಿಸುತ್ತಾರೆ. ಮೂರುತಿಗಲ್ಲಿಯಲ್ಲ ಹನು ಮಂತ ದೇವರ ಗುಡಿಯು ವಿಸ್ತಾರವಾಗಿದ್ದಿರುತ್ತದೆ. ಅದ ರಲ್ಲಿ ಮೂರ್ಗಸ್ಥರಿಗೆ ಇಳಿಯಲಿಕ್ಕೆ ಸರಸಾದ ಧರ್ಮಶಾಲೆಗ ಳಿವೆ. ಊರು ಬೆಳಿಗೆಯ ಸ್ಥಿತಿಯಲ್ಲಿದೆ. ಪ್ರತಿವರ್ಷ ನೂ ರಾರು ಹೊಸ ಹೊಸ ಮನೆಗಳಾಗುತ್ತವೆ. ಪೂರ್ವದ ಹಳೆ ಮನೆಗಳಿಗಿಂತ ಈಗಾಗುವ ಮನೆಗಳು ಹೆಚ್ಚು ಚಂದವಾಗಿ ಯೂ ಆರೋಗ್ಯಕರವಾಗಿಯೂ ಇರುತ್ತವೆ. ಹೊಗೆಬಂಡಿ ಬಂದಾಗಿನಿಂದ ಊರಿನ ವಸ್ತಿಯು ಬಳಿತಾಗಿ ಬೆಳಿದರೆ.

ಯುರೋಪಿಯನ್ ವಸ್ತಿಯು—ಇದು ಊರಿನ ಉತ್ತ ರಕ್ಕೆ ಬಹುತರ ಊರಿಗೆ ಹೊಂದಿದ ಹಾಗೇ ಇರುತ್ತದೆ. ಈ ವಸ್ತಿಯ ಪ್ರದೇಶವು ಊರಿಗಿಂತ ಹೆಚ್ಚಾಗಬಹುದು. ಅದರೆ ಜನರ ಸಂಖ್ಯೆವು ೧೪೪೦ರಲ್ಲಿ ೨೫೪೦ ಇತ್ತು. ಬೆಳಗಾವಿ ಯು ಜಿಲ್ಲೆಯು ಯುರೋಪಿಯನ್ ಜನರಿಗೆ ಬಳಿತಾಗಿ ಮೂನಿ ಸುವದರಿಂದ ಪೆನಶನರರು ಮುಂತಾದ ಬಹು ಜನ ಯು ರೋಪಿಯರ್ ಸುಖ ವಸ್ತುಗಳು ಇಲ್ಲಿ ಮನೆ ಮಾಡಿದ್ದಾರೆ. ಪ್ರಾಣೆಯಿಂದ ಬೆಂಗಳೂರಿನ ವರೆಗೆ ಬೆಳಗಾವಿಯಷ್ಟು ಯು ರೋಪಿಯನ ಜನರ ವಸ್ತಿಯು ಎಲ್ಲಿಯೂ ಇಲ್ಲ. ಈ ವಸ್ತಿಯಲ್ಲಿ ಸೇಂಟ ಮೇರೀಜ ಚರ್ಚ ಎಂಬ ಪ್ರಾಟೆಸ್ಟೆಂಟ ಪ್ರಾರ್ಥನಾಲಯವು ಬಹು ಭವ್ಯವಾಗಿಯೂ ಎತ್ತರವಾಗಿ

ಯೂ ಇರುತ್ತದೆ. ದೂರಿಂದ ಊರ ಸುತ್ತಮುತ್ತಲಿನ ಬ
ಗಳೊಳಗಿಂದ ಈ ಚರ್ಚ್ ಬಂದೇ ಮಾತ್ರ ಕಾಣಿಸುತ್ತದೆ
ಈ ವಸ್ತಿಯಲ್ಲಿ ಸದರ ಬಾಜಾರೆಂಬ ಭಾಗವು ಹೆಚ್ಚು ದಟ್ಟ
ದ ವಸ್ತಿಯುಳ್ಳದ್ದಿರುತ್ತದೆ.

ಲಷ್ಕರವು—ಇದು ಊರಿನ ಪಶ್ಚಿಮಕ್ಕೆ ಸುಮಾರು
ಅರ್ಧ ಮೈಲಿನ ಮೇಲೆ ಯುರೋಪಿಯರ್ಕ ವಸ್ತಿಗೆ ಸಮೀಪ
ವಾಗಿ ಇರುತ್ತದೆ. ಲಷ್ಕರದೊಳಗೆ ಬಂದು ಯುರೋಪಿಯರ್ಕ
ರೆಜಿಮೆಂಟು, ಎರಡು ನೇಟಿವ ರೆಜಿಮೆಂಟುಗಳು; ಬಂದು
ತೋಪಖಾನೆಯ ಬ್ಯಾಟರಿ, ಕೆಲವರು ರಾಹುತರು ಇರು
ತ್ತಾರೆ. ಸೋಲ್ಜರರ ಬರಾಕುಗಳನ್ನು ಬಹಳ ಹಣ ವೆಚ್ಚ
ಮಾಡಿ ಕಟ್ಟಿದ್ದಾರೆ.

ಶಾಲೆಗಳು—ಸರದಾರರ ಹಾಯಸ್ಕೂಲೆಂಬ ಇಂಗ್ಲಿಷ
ಶಾಲೆಯು ದೊಡ್ಡದಿರುತ್ತದೆ. ಊರವರು ಸ್ಥಾಪಿಸಿದ್ದೊಂದು
ಹೆಣ್ಣು ಮಕ್ಕಳ ಶಾಲೆಯು ಮಾರುತಿಯ ಗಲ್ಲಿಯಲ್ಲಿ ಇರು
ತ್ತದೆ. ಈ ಶಾಲೆಯು ಬಳಿತಾಗಿ ನಡಿಯುತ್ತದೆ. ಇವಲ್ಲದೆ
ಬಂದು ಮರಾಠೀ ಶಾಲೆಯೂ, ಒ ಕನ್ನಡ ಶಾಲೆಗಳೂ,
ಎರಡು ಹಿಂದುಸ್ತಾನಿ ಸಾಲಿಗಳೂ, ಬಂದು ಮಿಶನ ಹೈಸ್ಕೂ
ಲೂ ಇರುತ್ತವೆ.

ಪುಸ್ತಕಾಲಯಗಳು— ಬಂದು ಪುಸ್ತಕಾಲಯವು ಈ
ಜಿಲ್ಲೆಯಲ್ಲಿ ಎಲ್ಲಕ್ಕೂ ಹಳೇದಿರುತ್ತದೆ. ಮ್ಯುನಸಿಪಾಲಿ
ಟಿಯಿಂದ ಇದಕ್ಕೆ ಆಗಾಗ್ಗೆ ಸಹಾಯ ದೊರಿಯುವ ಕಾರಣ
ಇದು ಬಳಿತಾಗಿ ನಡಿಯುತ್ತದೆ.

ಕೈಗಾರಿಕೆಗಳು—ಮುಖ್ಯ ಕೈಗಾರಿಕೆಯು ಹೋರೆಯು
ಟಟ್ಟಿಗಳನ್ನು ನೇಯ್ಯುವದಿರುತ್ತದೆ. ಧಡೋತಿಯು ಶೀರಿ
ಗಳೂ, ಧೋತ್ರಗಳೂ, ಬೆಲೆಯುಳ್ಳ ರೇಶಿಮೆಯ ಶೀರೆಗ
ಳೂ ಮುಂತಾದ ವಸ್ತ್ರಗಳು ಬಳಿತಾಗಿ ಹುಟ್ಟುತ್ತವೆ. ಪ್ರತಿ

ವರ್ಷ ಸುಮಾರು ೧ ಲಕ್ಷ ೧೫ ಸಾವಿರ ರೂಪಾಯಿಯ ವಸ್ತ್ರಗಳ ವ್ಯಾಪಾರವಾಗುತ್ತದೆ. ಗಾಣಿಗರ ಜೋಳಿಯೂ ವರ್ಷಕ್ಕೆ ಬಳಿತಾಗಿ ನಡಿಯುತ್ತದೆ. ಇಲ್ಲಿಯ ಗಾಣಿಗರಪ್ಪ ಸುಖಿಯಾದವರು ಬೇರೆ ಕಡೆಯಲ್ಲಿ ದೊರಿಯುವದು ಅಪರೂಪವು. ನೀಲಗಾರರೂ ಕುಸಂಬಿಯ ಬಣ್ಣ ಕೊಡುವ ರಂಗಾರಿಗಳೂ ಪಲ ಕೆಲವರುಂಟು. ಚರ್ಮಕ್ಕೆ ಕರಿ ಹಾಸುವ ಹೋರಿಯು ಶೋರರೊಳಗೆ ಬಳಿತಾಗಿ ನಡಿಯುತ್ತದೆ.

ವ್ಯಾಪಾರ—ಬೆಳಗಾವಿಯಲ್ಲಿ ಒಟ್ಟಿಗೆ ೨೫೦ ಜನ ವ್ಯಾಪಾರಸ್ಥರಿರುತ್ತಾರೆ. ಇವರ ಬಂಡವಲು ೫೦೦೦ ದಿಂದ ೨೦೦೦೦೦ ದ ವರೆಗೆ. ಇವರು ವಸ್ತ್ರ, ತೊಲೆ, ಕಬ್ಬಿಣದ ಸಾಮಾನು, ಕಾಜಿನ ಪಾತ್ರೆಗಳು, ತಾಮ್ರ ಹಿತ್ತಾಳಿಗಳ ಪಾತ್ರೆಗಳು, ಕಾಳು, ಕಿರಾಣಿ, ತೆಂಗಿನಕಾಯಿ, ಉಪ್ಪು ಮುಂತಾದ ಸರಕುಗಳ ಕೊಡಕೊಳ್ಳುವ ವ್ಯವಹಾರ ಮಾಡುತ್ತಾರೆ. ಮ್ಯುನಿಸಿಪಾಲಿಟಿಯವರು ೭೬೦೦ ರೂಪಾಯಿ ವೆಚ್ಚ ಮಾಡಿ ಸರ್ ೧೮೭೬ ರಲ್ಲಿ ಊರಿನ ನಡುವೆ ಮಾರ್ಕೇಟು ಕಟ್ಟಿಸಿದ್ದಾರೆ. ಅಲ್ಲಿ ಪಲ್ಲೆಗಳು, ಫಲಗಳು, ಕಾಳು, ಮಣ್ಣಿನ ಪಾತ್ರೆಗಳು, ಹುಲ್ಲು, ಉರವಲು ಮುಂತಾದವುಗಳ ವ್ಯಾಪಾರವು ಶನಿವಾರದ ಸಂತೆಯಲ್ಲಿಯೂ, ಪ್ರತಿ ದಿವಸ ಬೆಳಿಗ್ಗೆ ಸಂಜೆಗೂ ಬಹಳ ನಡಿಯುತ್ತದೆ. ಸಂತೆಯಲ್ಲಿ ದನಗಳ ವ್ಯಾಪಾರವಾದರೂ ಬಳಿತಾಗಿ ಆಗುತ್ತದೆ. ಈ ಮಾರ್ಕೇಟಲ್ಲದೆ ಮ್ಯುನಿಸಿಪಾಲಿಟಿಯವರು ಕಟ್ಟಿಸಿದ ಮಾಂಸದ ಮಾರ್ಕೇಟು, ಮೀನುಗಳ ಮಾರ್ಕೇಟು ಪಶುವಧಗೃಹ, ಮುಂತಾದವುಗಳು ಬೇರೆಯುಂಟು. ಊರಿಗೆ ಭೆಂಡೀಬಾಜಾರ, ಖಡೇಬಾಜಾರ, ಆದಿತ್ಯವಾರಪೇಟೆ ಎಂಬ ಮೂರು ಪೇಟೆಗಳುಂಟು. ಮೊದಲಿನ ಎರಡು ಬಾಜಾರುಗಳಲ್ಲಿ ಮುಖ್ಯವಾಗಿ ವಸ್ತ್ರದ ವ್ಯಾಪಾರವಾಗುತ್ತದೆ; ಆದಿತ್ಯವಾರ ಪೇಟೆಯಲ್ಲಿ ಕಾಳಿನ ವ್ಯಾಪಾರವಾಗುತ್ತದೆ.

ಮ್ಯುನಿಸಿಪಾಲಿಟಿ— ಬೆಳಗಾವಿಯ ಮ್ಯುನಿಸಿಪಾಲಿಟಿಯನ್ನು ಸರ್ ಎಲ್ಫಿನ್‌ಸ್ಟನ್‌ರಲ್ಲಿ ಸ್ಥಾಪಿಸಿದರು. ಸರ್ ಎಲ್ಫಿನ್‌ಸ್ಟನ್‌ರಲ್ಲಿ ಮ್ಯುನಿಸಿಪಾಲಿಟಿಯ ಆದಾಯವು ೩೬೦೦೦ ರೂ ಪಾಯಿ ಇತ್ತು. ಜಕಾತಿ, ಭಂಗೀಪಟ್ಟಿ, ಮಾರ್ಕೇಟ ಫೀ, ಭಕಡೀ ಪಟ್ಟಿ ಇವೇ ಆದಾಯದ ಮುಖ್ಯ ಬಾಬುಗಳು.

ಹೊಗೆ ಬಂಡಿಯ ಸ್ಟೇಶನು—ಇದು ಊರ ದಕ್ಷಿಣಕ್ಕೆ ಅತಿ ಸಮೀಪದಲ್ಲಿ ಇರುತ್ತದೆ. ಹೊಗೆ ಬಂಡಿಯ ಮಾರ್ಗವು ಶಹಾಪುರಕ್ಕೆ ಹೋಗುವ ಮಾರ್ಗದ ಮೇಲೆ ಅಡ್ಡ ಹಾಯುತ್ತದೆ.

ಅಸದಖಾನನ ದರ್ಗಾ— ಇದು ಯುರೋಪಿಯರ್ ವಸ್ತಿಗೆ ಹೊಂದಿ ಇರುತ್ತದೆ. ಪೂರ್ವದಲ್ಲಿ ಬಹು ಪರಾಕ್ರಮಿಯೆಂತಲೂ, ಕಸುವುಳ್ಳವನೆಂತಲೂ ಧಾರ್ಮಿಕನೆಂತಲೂ, ವಿದ್ವಾಂಸನೆಂತಲೂ ಕೀರ್ತಿಯನ್ನು ಪಡಿದ ಬೆಳಗಾವಿಯ ಕಿಲ್ಲೇದಾರನಾಗಿದ್ದ ಅಸದಖಾನನ ಗೋರಿಯು ಈ ದರ್ಗಾದಲ್ಲಿ ಇರುತ್ತದೆ. ಈ ದರ್ಗಾದ ಮುಂದೆ ನಿಬಿಡವಾದ ವೃಕ್ಷಗಳ ಬನವಿರುವದರಿಂದ ಸುತ್ತಲಿನ ಸ್ಥಳವು ರಮಣೀಯವಾಗಿ ತೋರುತ್ತದೆ. ಈ ದರ್ಗಾಕ್ಕೆ ಬೆಳಗಾವಿಯ ಮುಸಲ್ಮಾನರೂ ಹಿಂದೂ ಜನರೂ ಬಹಳ ಮಾನ ಕೊಡುತ್ತಾರೆ.

ಇತಿಹಾಸವು—ಕ್ರಿಸ್ತೀಶಕದ ೧೨ನೇ ಶತಕದಲ್ಲಿ ಗೋವೆಯ ಕದಂಬ ಅರಸರು ಬರಿಸಿದ್ದೊಂದು ಲಿಪಿಯಲ್ಲಿ "ವೇಳುಗ್ರಾಮ" ವೆಂಬ ಹೆಸರಿನಿಂದ ಬೆಳಗಾವಿಯು ಉಲ್ಲೇಖವಿರುತ್ತದೆ. ಆದರೆ ಆ ಕಾಲದ ಊರು ಈಗಿನ ಊರಿನ ಆಗ್ನೇಯಕ್ಕೆ ಇತ್ತು. ಅವರ ಕುರುಪು ಈಗ ಬಹು ಸ್ವಲ್ಪ ಮಾತ್ರ ಕಾಣಬಹುದು. ಈಗಿನ ಕೋಟೆಯನ್ನು ಬಬ್ಬ ಜೈನ ಅರಸನು ಕಟ್ಟಿಸಿದನೆಂದು ತಿಳಿಯುತ್ತದೆ. ಆದರೆ ಯಾವ ಅರಸು ಯಾವಾಗ ಕಟ್ಟಿಸಿದನೆಂಬ ಬಗ್ಗೆ ಆಧಾರವೇನೂ ಇದ್ದಂ

ತ ತೋರುವದಿಲ್ಲ. ಸ್ಕ ೧೧೬೦ ರಲ್ಲಿ ಬೆಳಗಾವಿಯು ೭೧ ಹಳ್ಳಿಗಳ ಮುಖ್ಯ ಗ್ರಾಮವಾಗಿ ಗೋವೆಯ ಕದಂಬರ ರಾಜ್ಯಕ್ಕೆ ಸೇರಿತ್ತು. ಮುಂದೆ ೫೦ ವರ್ಷದೊಳಗೆ ಸವದತ್ತಿಯ ರಟ್ಟ ರಾಜರು ಅದನ್ನು ತಕ್ಕೊಂಡರು. ೧೩೩೫ನೇ ವರ್ಷದಲ್ಲಿ ಈ ಊರು ವಿಜಯನಗರದ ರಾಜ್ಯಕ್ಕೆ ಸೇರಿತ್ತು. ೧೪೭೦ ರಲ್ಲಿ ಬೆಳಗಾವಿಯ ಕೋಟೆಯು ವಿಕ್ರಮರಾಯನೆಂಬ ವಿಜಯನಗರದವರ ಕಿಲ್ಲೇದಾರನ ವಶದಲ್ಲಿ ಇತ್ತು. ಮುಂದೆ ಸ್ವಲ್ಪ ದಿವಸದೊಳಗೆ ಕಲಬುರ್ಗಿಯ ಬಾಮನೀ ಮಹಮ್ಮದಶಹನು ಶೌರ್ಯದಿಂದ ಕಾದಿ ಬೆಳಗಾವಿಯನ್ನು ತಕ್ಕೊಂಡನು. ಬಾಮನೀ ರಾಜ್ಯದಲ್ಲಿ ಸ್ಕ ೧೪೯೮ ರಲ್ಲಿ ಹೊಸ ಸುಭೆಗಳಾಗಿ, ಬೆಳಗಾವಿಯು ವಿಜಾಪುರದ ಸುಭೆಗೆ ಸೇರಿತು. ೧೫೧೦ ರಲ್ಲಿ ವಿಜಾಪುರದ ದರ್ಬಾರಿನಲ್ಲಿ ಪೆಸರು ಪಡಿದವನಾದ ಅಸದಖಾನನು ಬೆಳಗಾವಿಯ ಬಡಿಯನಾದನು, ಮುಂದೆ ೪೪ ವರ್ಷ (ಅಸದಖಾನನು ೧೫೫೯ ರಲ್ಲಿ ಮರಣ ಹೊಂದುವವರೆಗೆ) ಅವನ ವಶದಲ್ಲಿಯೇ ಇತ್ತು. ೧೫೫೦ ರಲ್ಲಿ ಶೇರಖಾನನೆಂಬ ಸರದಾರನು ಬೆಳಗಾವಿಯ ಕೋಟೆಗೆ ಹೊಸದೊಂದು ಪೇಟೆಯನ್ನು ಮಾಡುವದಕ್ಕೋಸ್ಕರ ಶಹಾಪುರವನ್ನು ಕಟ್ಟಿಸಿದನು. ಅಲ್ಲಿ ಮೊದಲು ಶಹಾ ಪೇಟೆ ಎಂಬ ಸಣ್ಣ ಹಳ್ಳಿ ಇತ್ತು. ೧೫೪೯ ರಲ್ಲಿ ಬೆಳಗಾವಿಯ ಬಾಜಾರಿನಲ್ಲಿ ವಜ್ರ, ಮಾಣಿಕ, ನೀಲ ಮುಂತಾದ ಹರಳುಗಳ ವ್ಯಾಪಾರವು ಬಳಿತಾಗಿ ನಡಿಯುತ್ತಿತ್ತೆಂದು ಒಬ್ಬ ಇಂಗ್ಲಿಷ ಪ್ರಯಾಣಸ್ಥನು ಬರದು ಇಟ್ಟಿದ್ದಾನೆ. ವಿಜಾಪುರದ ಬಾದಶಾಹಿಯು ನಷ್ಟವಾದ ಬಳಿಕ ಬೆಳಗಾವಿಯು ದಿಲ್ಲಿಯ ಮೊಗಲರ ರಾಜ್ಯಕ್ಕೆ ಸೇರಿದ್ದರಿಂದ ದಕ್ಷಿಣದ ಸುಭೇದಾರನಾದ ನಿಜಾಮು ಉಲ್ಮುಲ್ಕನು ಅದನ್ನು ಸವಣೂರಿನ ನವಾಬನ ವಶಕ್ಕೆ ಕೊಟ್ಟನು ೧೭೨೦ ಮುಂದೆ ೧೭೫೪ ರಲ್ಲಿ ಪೇಶವನ ದಂಡಿನವರು ಇದನ್ನು ತಕ್ಕೊಂ

ಡ ಬಳಿಕ ಇದು ಕಡೆತನಕ ಪೇಶವನ ರಾಜ್ಯಕ್ಕೆ ಶೇರಿತ್ತು. ಮುಂದೆ ಜನರಲ್ ಮನ್ರೋನು ಬೆಳಗಾವಿಯನ್ನು ಯುದ್ಧ ಮಾಡಿ ತಕ್ಕೊಂಡನು. ೧೪೦೦ ರಲ್ಲಿ ಬೆಳಗಾವಿಯ ವಸ್ತಿಯು ೭೬೫೦ಕ್ಕಿಂತ ಹೆಚ್ಚು ಇದ್ದಿಲ್ಲ.

DEPARTMENTAL NOTICE.

ನೋಟೀಸು.

ಧಾರವಾಡ ಜಿಲ್ಲೆಯೊಳಗಿನ ಯಾವತ್ತು ಸೂಳ್ಕ ಮಾಸ್ತರರಿಗೆ—

ತಿಳಿಸುವದೇನಂದರೆ:—ಸನ ೧೪೯೬ನೇ ಇಸವಿಯಲ್ಲಿ ಆಗತಕ್ಕ ಧಾರವಾಡ ಟ್ರೇನಿಂಗ ಕಾಲೇಜದ ಸರಟಿಫಿಕೇಟ ಪರೀಕ್ಷೆಗೆ ಹೋಗಲಪೇಕ್ಷಿಸುವವರು ಮುಂದಿನ ಸಪ್ಟಂಬರ ತಿಂಗಳ ೧ನೇ ತಾರೀಖಿಗೆ ತಮ್ಮ ಅರ್ಜಿಗಳನ್ನು ನಮ್ಮ ಕಡಿಗೆ ಕಳಿಸಿಕೊಡತಕ್ಕದ್ದು.

ಟ್ರೇನಿಂಗ ಕಾಲೇಜದಲ್ಲಿ ನಿಂತು ಅಭ್ಯಾಸ ಮಾಡಿ ೧ನೇ ಅಥವಾ ೨ನೇ ವರ್ಷದ ಸರ್ಟಿಫಿಕೇಟನ್ನು ಪಡೆದಂಥ ಮಾಸ್ತರರು ಶಾಲಾಖಾತೆಯಲ್ಲಿ ಎರಡು ವರ್ಷ ಉತ್ತಮ ರೀತಿಯಿಂದ ಕೆಲಸ ಮಾಡಿದ್ದರೆ ಅವರಿಗೆ ೨ನೇ ಇಲ್ಲವೆ ೩ನೇ ವರ್ಷದ ಸರ್ಟಿಫಿಕೇಟ ಪರೀಕ್ಷೆಗೆ ಹೊರಗಿನಿಂದ ಕೂಡ್ಸಲಕ್ಕೆ ಅಪ್ಪಣೆಯು ದೊರೆಯುವ ಕುರಿತು ವಿಚಾರ ಮಾಡುವದು. ಆದರೆ ೩ನೇ ವರ್ಷದ ಸರ್ಟಿಫಿಕೇಟ ಪರೀಕ್ಷೆಗೆ ಕೂಡ್ಸುವವರಿಗೆ ಕಾಲೇಜದ ಶಿಕ್ಷಣವು ೧ನೇ ವರ್ಷದ ಪೂರ್ತಿ ಮಾತ್ರ ದೊರೆದಿದ್ದರೆ, ಅವರಿಗೆ ಪರವಾನಗಿಯು ದೊರಿಯಲಿಕ್ಕಿಲ್ಲ. ಅವರು ೨ನೇ ವರ್ಷದ ಅಭ್ಯಾಸವನ್ನು ಕಾಲೇಜದಲ್ಲಿ ಮಾಡಿ ಸರ್ಟಿಫಿಕೇಟು ಪಡೆದಿರಲಿಕ್ಕೆ ಬೇಕು.

ಧಾರವಾಡ,
ತಾ॥ ೨೫।೬।೯೫.

S. K. Rodda,
ಡಿ. ಎ. ಇ. ಧಾರವಾಡ.

CORRESPONDENCE.
ಪತ್ರವ್ಯವಹಾರ.

ಕ್ಷಯ ಸಂವತ್ಸರವು.

ನಮ್ಮ ದೇಶದೊಳಗಿನ ಯಾವದೊಂದು ಪಂಚಾಂಗವನ್ನು ತಕ್ಕೊಂಡು, ಅದರ ಮುಖಪೃಷ್ಠವನ್ನು ನೋಡಿದರೆ, ಅದರ ಮೇಲೆ ಸಂವತ್ಸರದ ಎರಡು ಹೆಸರುಗಳು ದೃಷ್ಟಿಗೋಚರವಾಗುವವು. ನರ್ಮದೋತ್ತರ ದಕ್ಷಿಣ ಪ್ರದೇಶಗಳಲ್ಲಿ ವಿಕ್ರಮಶಾಲಿವಾಹನ ಶಕಾಬ್ದಗಳು ಬೇರೆ ಬೇರೆ ಇದ್ದಂತೆಯೇ ಸಂವತ್ಸರದ ಹೆಸರುಗಳಾದರೂ ಸ್ಥಾನಭೇದದಿಂದ ಬೇರೆ ಬೇರೆ ಉಂಟೋ ಹ್ಯಾಗೆ? ಎಂದು ಸಂಶಯ ಬರಬಹುದು.

ಬೃಹಸ್ಪತಿಗೆ ಮಧ್ಯಮ ಮಾನದಿಂದ ಒಂದು ರಾಶಿಯನ್ನು ಕ್ರಮಿಸಲಿಕ್ಕೆ ೩೬೧ ದಿವಸಗಳು ಹಿಡಿಯುವವು. ಸಂವತ್ಸರಗಳು ಬಾರ್ಹಸ್ಪತ್ಯಮಾನದವಿದ್ದದರಿಂದ, ಇಷ್ಟು ದಿವಸಗಳಿಗೆ ಒಂದು ಸಂವತ್ಸರವಾಗುವದು. ನಮ್ಮ ವರ್ಷಗಳು ಸೌರಮಾನದವು ಅಂದರೆ ೩೬೫ ದಿವಸದವು. ಒಂದು ವರ್ಷಕ್ಕೆ ಒಂದು ಸಂವತ್ಸರದ ಮೇಲೆ ೪ ದಿವಸಗಳು ಆಗುತ್ತಿದ್ದು, ಒಂದೇ ಸಂವತ್ಸರವನ್ನು ಹಿಡಿದ ಮೂಲಕ, ೮೫ ವರ್ಷಗಳಲ್ಲಿ ಒಂದು ಸಂವತ್ಸರವನ್ನು ಹೆಚ್ಚು ಹಿಡಿದಂತಾಗುವದು. ಅಂದರೆ ಈ ಅವಧಿಯಲ್ಲಿ ೮೬ ಸಂವತ್ಸರಗಳು ಆಗುತ್ತಿದ್ದು, ಹೆಸರುಗಳು ಮಾತ್ರ ೮೫ ಬಂದವು. ಈ ತಪ್ಪನ್ನು ಬಾಯಿಗೂಡಿಸುವದಕ್ಕಾಗಿ, ೮೬ ನೇ ಸೌರವರ್ಷದಲ್ಲಿ ೮೬ ನೇ ಸಂವತ್ಸರವನ್ನು ತಕ್ಕೊಳ್ಳುವದು, ಅಂದರೆ ಒಂದು ಸಂವತ್ಸರವನ್ನು ಬಿಟ್ಟು ಅದರ ಮುಂದಿನದನ್ನು ತಕ್ಕೊಳ್ಳುವದು ಯುಕ್ತವು. ಅದರಂತೆ ಉತ್ತರ ಹಿಂದುಸ್ಥಾನದಲ್ಲಿ ಪ್ರಚಾರವಾದರೂ ಇರುತ್ತದೆ. ಆರ್ಥಾತ್ ಒಂದು ಸಂವತ್ಸರವು ಕ್ಷಯವಾದೆಂತಾಯಿತು.

ಟೀಪು:—ಸೌರ ವರ್ಷಕ್ಕೆ ಇಸವಿಯನ್ನು ಸೂಕ್ಷ್ಮರೀತಿಯಿಂದ ಬಾಯಿಗೂಡಿಸುವದಕ್ಕಾಗಿ ೪೦೦ ದಿಂದ ಭಾಗ ಹೋಗದಂಥ ಕಡೆಗೆ ಎರ

ನೆಮ್ಮ ದಕ್ಷಿಣ ದೇಶವಲ್ಲಾದರೂ ಒಂದೇ ಶಕದವರೆಗೆ ಉತ್ತರ ಹಿಂದುಸ್ಥಾನದಂತೆಯೇ ಕ್ಷಯ ಸಂವತ್ಸರವ್ಯವಹಾರವು ಇತ್ತು. ಮುಂದೆ ಈ ರೀತಿಯು ನಿಂತು ಹೋಯಿತು. ಈಗ ಸುಮಾರು ೧೦೦೦ ವರ್ಷಗಳಿಂದಿತ್ತಲಾಗಿ, ಕ್ಷಯ ಸಂವತ್ಸರವನ್ನು ಹಿಡಿಯುವ ಮೂಲಕ ಉತ್ತರ ದಕ್ಷಿಣ ಹಿಂದುಸ್ಥಾನಗಳ ಸಂವತ್ಸರಗಳಲ್ಲಿ ೧೦ ಸಂವತ್ಸರವ ಅಂತರ ಬಿತ್ತು. ವಸ್ತುತಃ ಸಂವತ್ಸರಗಳು ಬೇರೆ ಬೇರೆ ಹೆಸರಿನವಲ್ಲ.

ಎಷ್ಟೋ ಜನರ ಕೊಡಕೊಳ್ಳುವ ವ್ಯವಹಾರಗಳು ಬರೇ ಸಂವತ್ಸರಗಳ ಎಣಿಕೆಯಿಂದಲೇ ನಡೆಯುತ್ತವೆ. ಇಂಥವರಿಗೆ ಕ್ಷಯ ಸಂವತ್ಸರದಿಂದ ಅನೇಕ ತೊಂದರೆಗಳು ತಟ್ಟುವವೆಂತಲೂ, ಜ್ಯೋತಿಷಶಾಸ್ತ್ರದ ಗಣಿತದಲ್ಲಿ ಸಂವತ್ಸರಗಳ ಉಪಯೋಗವು ಬಹು ಸ್ವಲ್ಪ ಉಂಟೆಂತಲೂ ತಿಳಿದು ದಾಕ್ಷಿಣಾತ್ಯ ಜ್ಯೋತಿಷಿಗಳು ಇವರ ಗಣನೆಯನ್ನು ಬಿಟ್ಟುಬಿಟ್ಟರೆಂದು ತೋರುತ್ತದೆ.

ಕಲ್ಲೋಳ ತಾ॥ ಬೆಳ್ಗಾಂ,
೧–೪–೧೮೯೫.

} ವಿಷ್ಣು ಬಾಬಾಜಿರಾವ ಕುಲಕರ್ಣಿ, ಕಲ್ಲೋಳ.

DHARWAR TRAINING COLLEGE CERTIFICATE EXAMINATION.—1894.

ಕಾಲೇಜಿನ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು.

ಎನೇ ವರ್ಷದ ವರ್ಗ.

ಅಂಕಗಣಿತ ಮತ್ತು ಬೀಜಗಣಿತ.

(ರೀತಿಯು ಹೊರ್ತು ಬರೇ ಉತ್ತರಕ್ಕೆ ಬೆಲೆ ಇಲ್ಲ)

(ಬಲಕ್ಕೆ ಬರಿದ ಅಂಕಿಗಳು ಪ್ರಶ್ನೆಗಳ ಪೂರ್ಣ ಗುಣಗಳು.)

೧. ಭಾಗಾಕಾರದ ರೀತಿಗಳೆಷ್ಟು? ಮತ್ತು ಅವು ಯಾವ

ಡು ಶೂನ್ಯಗಳುಳ್ಳ ೧೯೦೦, ೨೦೦೦, ೩೦೦೦ ಇತ್ಯಾದಿ ಇಸವಿಗಳನ್ನು ೧೯ (ಫೆ. ೯) ವರ್ಷಗಳೆಂದು ಎಣಿಸುವದಿಲ್ಲ. ಇಷ್ಟು ಸೂಕ್ಷ್ಮವಿಚಾರವು ಮೇಲಿನ ಸಂಗತಿಯಲ್ಲಿ ಇಲ್ಲೆಂದು ಹೇಳುವದು ಇಲ್ಲಿ ಅವಶ್ಯವದೆ.

ವು? ಭಾಜ್ಯದ ಕಡೇ ಅಂಕಿ, ಭಾಗಾಕಾರದ ಕಡೇ ಅಂಕಿ ಮತ್ತು ಬಾಕಿ ಇವುಗಳ ಮೇಲಿಂದ ಭಾಜಕದ ಕಡೇ ಅಂಕಿ ಇಂಥಾದ್ದೆಂದು ಹೇಳುವದು ಹ್ಯಾಗೆ? ನಿಮ್ಮ ಉತ್ತರಗಳನ್ನು ಉದಾಹರಣೆಗಳಿಂದ ಸ್ಪಷ್ಟೀಕರಿಸಿರಿ.

೨. (ಅ) ವಿದ್ಯಮಾನದೊಳಗೆ ಎರಡೂ ಯುಗ್ಮಗಳು ಬೇರೆ ಬೇರೆ ಜಾತಿಯವು ಇದ್ದಲ್ಲಿ, ಅದ್ಯಂತಪದಗಳ ಗುಣಾಕಾರವು ಮಧ್ಯಪದಗಳ ಗುಣಾಕಾರದಷ್ಟೆಂಬುವದು ಶುದ್ಧವೇ ಹ್ಯಾಗೆ? ಶುದ್ಧ ಆಗದೆ ಇದ್ದಲ್ಲಿ ಪ್ರಮಾಣದೊಳಗಿನ ಳನೇ ಪದ ತೆಗೆಯುವ ಬಗೆ ಹ್ಯಾಗೆ, ಮತ್ತು ಆ ಹೊಸಪದ ಯಾವ ಜಾತೀದು ಹೊರಡುವದು? ೫

(ಬ) ಸಮಶ್ರೇಢಿ ಮಾಡದೆ ಒಂದು ವ್ಯವಹಾರಿ ಅಪೂರ್ಣಾಂಕವು ಎರಡನೇಬದ್ದಿಂತ ಸಣ್ಣದು ಅಥವಾ ದೊಡ್ಡದೆಂದು ತಿಳಿಯುವ ಹಂಚಿಕೆಗಳು ಯಾವವು? ೫

೩. ಎರಡು ಸಂಖ್ಯೆಗಳ ವಜಾಬಾಕಿ ೨ ಇದ್ದು ಅವುಗಳ ಗುಣಾಕಾರ ೨೫೩೭೬೯೪೮೪ ಇದ್ದರೆ ಆ ಸಂಖ್ಯೆಗಳು ಯಾವವು? ೮

೪. ಒಂದು ಪಾತ್ರೆಯಲ್ಲಿ ೪ ಪಾಲು ಹಾಲು ಮತ್ತು ಒಂದು ಪಾಲು ನೀರು ಇದ್ದವು. ಅದರಲ್ಲಿ ೧೦ ಕ್ಕೇರು ನೀರು ಹಾಕಿದರೆ ೯ ಪಾಲು ಹಾಲೂ ೨ ಪಾಲು ನೀರೂ ಆಗುವದು. ಆದರೆ ಮೊದಲಿನ ಮಿಶ್ರಣದಲ್ಲಿ ನೀರೆಷ್ಟು? ೪

೫. ಬಂಗಾರ ಒಂದು ಔನ್ಸಕ್ಕೆ ೬ ಪೌಂಡು ೧೬ ಶಿ. ೧೦ ೧೦ನ್ತಿ ಪೇ. ಬೆಳ್ಳಿಯ ಕಿಮ್ಮತ್ತು ೪ ಶಿ. ೬ ಪೇ., ಆದರೆ ಒಂದು ಪೌಂಡು ಮಿಶ್ರಣದಲ್ಲಿ ಎಷ್ಟೆಷ್ಟು ಸ್ವಮಾಣದಿಂದ ಎರಡೂ ಧಾತುಗಳನ್ನು ಕೂಡಿಸಿದರೆ, ಅದರ ಕಿಮ್ಮತ್ತು ೩೦ ಪೌಂ. ೪ ಶಿ. ಆಗುವದು? ೧೦

೬. ಒಂದು ಕುದುರೆಯ ಕಿಮ್ಮತ್ತು ಅದರ ಜೀನಿನ ಕ್ರಯದ ೪ ಪಾಲು ಇರುತ್ತದೆ. ಕುದುರೆಗೆ ೧೦೦ಕ್ಕೆ ೧೦ ರಂತೆ, ಜೀನಿಗೆ ೧೦೦ ಕ್ಕೆ ೧೫ ರಂತೆ ಕಿಮ್ಮತ್ತು ಕಡಿಮೆ ಮಾಡಿದರೆ ಎರಡಕ್ಕೂ ಕೂಡಿ ೧೯ ರೂಪಾಯಿ ಕೆಡಿಮೆ ಬೀಳುವದು. ಆದರೆ ಜೀನಿನ ಕ್ರಯವೆಷ್ಟು? ೧೨

ಬೀಜಗಣಿತ.

೧. ಬೀಜಗಣಿತದ ಭಾಗಾಕಾರದ ರೀತಿಯನ್ನು ಬರೆದು ಅದನ್ನು ಸಿದ್ಧ ಮಾಡಿರಿ.

೨. $\frac{೧}{೪}\left\{ \text{ಅ} - \text{೫} (\text{ಬ} - \text{ಅ}) \right\} - \frac{೩}{೬} \left\{ \frac{೧}{೪}\left(\text{ಬ} - \frac{\text{ಅ}}{೨}\right) - ೧೦ \right.$

$\left. \frac{೬}{೯}\left[\text{ಅ} - \frac{೨}{೪}(\text{ಬ} - ೪\,\text{ಅ})\right] \right\}$ ಇದಕ್ಕೆ ಸರಳ ರೂಪವನ್ನು ಕೊಡು, ಮತ್ತು $\text{ಕ}^{೨}+\text{೫}\,\text{ಕ}\,\text{ಯ} - ೨೪\,\text{ಯ}^{೨}+\text{ಕ} - ೭\,\text{ಯ}$ ಮತ್ತು $\text{ಅ}^{೨}-\text{ಬ}^{೨}-\text{ಕ}^{೨}+\text{ಡ}^{೨}-೦$ (ಅ ಡ–ಬ ಕ) ಇವುಗಳನ್ನೂ ಗುಣ್ಯ ಗುಣಕ ರೂಪಗಳಿಂದ ತೋರಿಸು.

೩. $\text{ಕ}^{೫} - ೪\,\text{ಬ}\,\text{ಕ}^{೪} - \frac{೧}{೬}\left[೧೦\,\text{ಅ}\,\text{ಕ} - ೪\left\{೭\,\text{ಬ}\,\text{ಕ}^{೪} - ೯ \right.\right.$ ೧೦

$\left.\left.\left(\frac{\text{ಕ}\,\text{ಕ}}{೨} - \text{ಬ}\,\text{ಕ}^{೪}\right) - \frac{೭}{೨೦}\text{ಅ}\,\text{ಕ}^{೪}\right\}\right]$ ಇದಕ್ಕೆ ಸರಳರೂಪ ಕೊಟ್ಟು ಉತ್ತರವನ್ನು ಕ ದ ಘಾತಪ್ರಕಾರದಂತೆ ಕ್ರಾಂಸಗಳಲ್ಲಿ ಬರಿ.

೪. ಕೆಳಗಿನ ಸಮೀಕರಣಗಳನ್ನು ಬಿಡಿಸು.

(ಅ) $\frac{\text{ಅ}\,(\text{ಬ} - \text{ಕ})}{\text{ಬ}\,\text{ಕ}} = \text{ಅ}\,\text{ಕ} + \text{ಕ}\,\frac{\text{ಅ}}{\text{ಬ}}$;

(ಬ) $\frac{೭\,\text{ಕ}+\text{೫}}{೭} - \frac{೨\,\text{ಕ}+೭}{೭} + ೧೦ - \frac{೭\,\text{ಕ}}{೫} = ೦$

೫. ಒಬ್ಬ ಮನುಷ್ಯನು ಮೂರು ವರ್ಷಗಳ ತನಕ ದರ ವರ್ಷ ೫೦ ಪೌಂಡುಗಳಂತೆ ಖರ್ಚು ಮಾಡಿ ತನ್ನ ಸಂಸಾರ ಸಾಗಿಸಿದನು. ಪ್ರತಿವರ್ಷ ಖರ್ಚಾಗಿ ಉಳಿದ ಹಣದ $\frac{೨}{೩}$ ಭಾಗ ಹಾಕುತ್ತಾ ನಡೆದನು. ಆದರೆ ೪ನೇ ವರ್ಷದ ಆಖೇರಿಗೆ ತನ್ನ ಹಣವನ್ನು ಎಣಿಸಿ ನೋಡಲು, ಮೊದಲಿನ ಹಣದ ಎರಡಷ್ಟು ಆಗಿತ್ತು. ಆದರೆ ಮೊದಲು ಅವನ ಹತ್ತಿರ ಎಷ್ಟು ಹಣವಿತ್ತು. ೧೦

ಶಾಲಾಪತ್ರಕೆ

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ ।
ಭಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆಸಗುಣಂ ತೋರಲ್ಕೆಕ್ಕೆಕೊಂಬುದೈ ।
ಜಯಮಿಂದೋಷವತಿದ್ದ ವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೩ಂ.] ಸಪ್ಟೆಂಬರ ೧೮೮೯ಇ. [ಸಂಚಿಕೆ ೯.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಪ್ರತಿಯೊಂದು ವರ್ಗದಲ್ಲಿ ಐದು ಪ್ರಕಾರದ ವಿದ್ಯಾರ್ಥಿಗಳಿರುವವೆಂಬ ಸಂಗತಿಯು ಎಲ್ಲ ಶಿಕ್ಷಕರಿಗೆ ಗೊತ್ತುಂಟು. ಆ ಐದು ಪ್ರಕಾರಗಳು ಯಾವವೆಂದರೆ:— (೧) ಪುಟ್ಟ ಕಡಿಮೆ ಬುದ್ಧಿಯ ಹುಡುಗರು. (೨) ಸ್ತಿಮಿತ ಬುದ್ಧಿಯ ಹುಡುಗರು. (೩) ಚಂಚಲ ಸ್ವಭಾವದ ಹುಡುಗರು. (೪) ನಾಚಿಕೆಯ ಸ್ವಭಾವದ ಹುಡುಗರು. (೫) ಚುರುಕು ಬುದ್ಧಿಯ ಹುಡುಗರು. ಈ ಐದೂ ಪ್ರಕಾರದ ವಿದ್ಯಾರ್ಥಿಗಳಿಗೆ ಸರಿಯಾಗಿ ಕೆಲಸ ಕೊಟ್ಟು ಇವರ ಬುದ್ಧಿಯನ್ನು ಜೈಲಿಗೆಳೆಯುವದು ಸುಸಾಧ್ಯವಾದ ಕೆಲಸವಲ್ಲ. ಜರ್ಮನಿಯ ದೇಶದೊಳಗೆ ಶಿಕ್ಷಕ ಜನರ ಈ ಪ್ರಕಾರದ ತೊಂದರೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಚುರುಕು ಬುದ್ಧಿಯ ಹುಡುಗರ ದೆಶೆಯಿಂದಲೂ ಸ್ತಿಮಿತ ಬುದ್ಧಿಯ ಹುಡುಗರ ದೆಶೆಯಿಂದಲೂ ಬೇರೆ ಬೇರೆಯಾದ ಶಾಲೆಗಳನ್ನು ಸ್ಥಾಪಿಸುವ ಆಲೋಚನೆಯು ನಡೆದಿರುವದೆಂದು

* ಅಲೌಕಿಕ ಬುದ್ಧಿಯ ಹುಡುಗರು ಆರನೇ ಪ್ರಕಾರದವರು. ಇವರ ಸಂಖ್ಯೆಯು ವಾಡಿಕೆಯಾಗಿ ಕಡಿಮೆಯಿರುವದರಿಂದ ಈ ಪ್ರಕಾರವನ್ನು ಹೇಳಲಿಲ್ಲ.

ಕೇಳುತ್ತೇವೆ. ಈ ಶಾಲೆಗಳಿಗಾಗಿ ಹುಡುಗರನ್ನು ಅಂದರೆ ಚುರುಕು ಬುದ್ಧಿಯ ಹುಡುಗರನ್ನೂ ಸ್ತಿಮಿತ ಬುದ್ಧಿಯ ಹುಡುಗರನ್ನೂ ವಿಂಗಡಿಸುವ ಕೆಲಸವು ಅಲ್ಲಿಯ ವೈದ್ಯ ಖಾತೆಯ ಅಧಿಕಾರಸ್ಥರು ಮಾಡತಕ್ಕವರು. ಈ ವಿಧದ ವ್ಯವಸ್ಥೆಯಿಂದ ಮಾಸ್ತರ ಜನರ ತೊಂದರೆಯೂ ಚುರುಕು ಬುದ್ಧಿಯ ಹುಡುಗರು ನಿಷ್ಪ್ರಯೋಜನವಾಗಿ ಕಳೆಯಬೇಕಾದ ಕಾಲವೂ ಉಳಿಯುವದೆಂಬದು ಸ್ಪಷ್ಟವದೆ. ಆದರೆ ವಿಂಗಡಿಸುವ ಕೆಲಸವು ಬಹಳ ದುಸ್ತರವಾಗಿರುವಂತೆ ತೋರುತ್ತದೆ. ಈ ಕೆಲಸದಲ್ಲಿ ತಪ್ಪಾವರೆ ಅದರಿಂದ ಪ್ರಯೋಜನಕ್ಕಿಂತ ಹಾನಿಯೇ ಹೆಚ್ಚಾಗಿ ಸಂಭವಿಸುವದು. ಪ್ರಾರಂಭದಲ್ಲಿ ಚುರುಕು ಬುದ್ಧಿಯವರಾಗಿ ತೋರುವ ಹುಡುಗರು ತಿಳಿಗೇಡಿಗಳಾದ ಉದಾಹರಣಗಳೂ, ಆದೇ ಮೇರೆಗೆ ಸ್ತಿಮಿತ ಬುದ್ಧಿಯವರಾಗಿ ತೋರುವ ಹುಡುಗರು ಮುಂದೆ ವ್ಯವಹಾರ ಚತುರರಾದ ಉದಾಹರಣೆಗಳೂ ಅನೇಕ ಉಂಟು. ಆದಕಾರಣ ಈ ವ್ಯವಸ್ಥೆಯಿಂದ ಯಾವ ಪ್ರಕಾರದ ಪ್ರಯೋಜನವಾದೀತೆಂಬದು ಈಗ್ಗೇ ಹೇಳಲಿಕ್ಕೆ ಮಾರ್ಗವಿಲ್ಲ. ಸದ್ಯಕ್ಕಂತೂ ,, ಘೆಟಾಟೋಪೊ ಭಯಂಕರಃ " ಎಂಬಂತೆ ತೋರುತ್ತದೆ.

ಉತ್ತಮ ಕಾಗದವನ್ನು ತಯಾರ ಮಾಡಲಿಕ್ಕೆ ಬರುವಂಥ ಬಂದು ಪ್ರಕಾರದ ಹುಲ್ಲನ್ನು ಮುಂಬೈ ಇಲಾಖೆಯೊಳಗಿನ ವನಸ್ಪತಿ ವಿದ್ಯಾಖಾತೆಯ ಮುಖ್ಯಾಧಿಕಾರಿಗಳಾದ ಮಿ. ಉಡ್‌ರೋ ಎಂಬವರು ಶೋಧಿಸಿ ತೆಗೆದು ಆ ಬಗ್ಗೆ ಸರಕಾರಕ್ಕೆ ರಿಪೋರ್ಟ ಮಾಡಿದ್ದಾರೆ. ಈ ಹುಲ್ಲಿನ ಬೀಜವು ಉತ್ತರ ಹಿಂದುಸ್ತಾನದಲ್ಲಿ ದೊರೆಯುತ್ತದೆ. ಅದಕ್ಕೆ ಸಾಬಯಿ, ಬಾಬರ ಎಂಬ ಪ್ರಸಿದ್ಧ ಹೆಸರುಗಳುಂಟು. ನಮ್ಮ

ಬಕ್ಕಲಿಗರು ಈ ಪುಲ್ಲನ್ನು ಬೆಳಿಸುವ ಕೆಲಸವನ್ನು ಕೈಕೊಂಡರೆ ಕಾಗದದ ಕಾರಖಾನೆಗಳಿಗೆ ಹೆಚ್ಚು ಸಹಾಯವಾಗುವದಲ್ಲದೆ ಅವರ ಸ್ವಂತ ಹಿತವಾದರೂ ಸಾಧಿಸುವಂತಿದೆ. ಪ್ರಾಯ ಡೇಕನ್ ಟೇಪರಮಿಲ್ಲಿನವರು ಈ ಪುಲ್ಲನ್ನು ಬೆಳಿಸುವದಕ್ಕಾಗಿ ೫೦ ಏಕರೆ ಭೂಮಿಯನ್ನು ೫ ವರ್ಷಗಳವರೆಗೆ ಅರ್ಧ ತೆರಿಗೆಯು ಕರಾರಿನಿಂದ ತೆಗೆದುಕೊಂಡಿರುತ್ತಾರೆಂದು ತಿಳಿಯುತ್ತದೆ. ಈ ಮೇರೆಗೆ ದೇಶದಲ್ಲಿ ಹೊರೆಗಳು ಬೆಳೆ ಬೆಳೆದ ಹಾಗೆ ಸರಕಾರದ ಮುಖವನ್ನು ನಿರೀಕ್ಷಿಸುವ ಜನರಿಗೆ ಬಂದು ಸುಖ ಜೀವನದ ಮಾರ್ಗವು ದೊರೆಯುವದು.

ಗಾಯನದಿಂದಾಗುವ ಲಾಭಗಳು:— ಪ್ರತಿ ದಿವಸ ಪ್ರಾತಃಕಾಲಕ್ಕೆ ಎದ್ದು; ನಿಯಮದಿಂದ ಕೆಲವು ವೇಳೆಯು ವರೆಗೆ ಗಾಯನ ಮಾಡಿದರೆ ಅದರಿಂದ ಶರೀರಕ್ಕೆ ಉತ್ತಮ ವ್ಯಾಯಾಮವಾಗುತ್ತದೆ. ಇಂಥ ವ್ಯಾಯಾಮವು ಬೇರೆ ಯಾತರಿಂದಲೂ ಆಗದು. ಯಾಕೆಂದರೆ, ಹಾಡುವದರಿಂದ ಶ್ವಾಸೋಚ್ಛ್ವಾಸವು ಬಹಳವಾಗಿ ನಡೆದು ಶ್ವಾಸದಿಂದ ಹೋಗುವ ಹವೆಯ ಗತಿಯು ಕಂಪಿತವಾಗುತ್ತದೆ. ಅದರಿಂದ ಪುಪ್ಪುಸಗಳಿಗೆ ಕೆಲಸ ಬಿದ್ದು ರುಧಿರಾಭಿಸರಣವು ವೃದ್ಧಿಯಾಗಿ ಇಂದ್ರಿಯಗಳು ಬಲವಾಗುತ್ತವೆ. ಮುಖ್ಯ ಶ್ವಾಸೋಚ್ಛ್ವಾಸನ ಕ್ರಿಯೆಯು ಸರಸವಾಗಿ ನಡೆಯುತ್ತದೆ.

ನಮ್ಮ ಭಾಗದ ಎಜ್ಯುಕೇಶನಲ್ ಇನ್ಸಪೆಕ್ಟರರಾದ ರಾವಬಹದ್ದೂರ ಸಹಸ್ರಬುದ್ಧಿ ಇವರು ಖಾಸಗೀ ಕೆಲಸಕ್ಕಾಗಿ ಎರಡು ತಿಂಗಳ ಹಕ್ಕಿನ ರಜೆಯನ್ನು ಪಡಕೊಂಡು ಕಳೆದ ತಿಂಗಳ ೩೦ನೇ ತಾರೀಖಿಗೆ ಪುಣೇಕ್ಕೆ ಹೋಗಿರುವರು. ಅವರ ಸ್ಥಳಕ್ಕೆ ನಮ್ಮಲ್ಲಿಯ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲ

ರಾದ ರಾ. ಸಾ. ರಾವಜೀ ಬಾಳಾಜೀ ಕರಂದೀಕರ ಇವರ
ಮತ್ತು ಕಾಲೇಜದ ಪ್ರಿನ್ಸಿಪಾಲರ ಸ್ಥಳಕ್ಕೆ ವ್ಹಾಯಿಸ ಪ್ರಿನ್ಸಿ
ಪಾಲರಾದ ರಾ. ರಾ. ರಾಮಚಂದ್ರ ಹಣಮಂತ ದೇಶಪಾಂಡೆ
ಇವರ ನೇಮಣೂಕ ಆದ ಪ್ರಕಾರ ಆ ತಾರೀಖಿಗೆ ಅವರು
ತಮ್ಮ ತಮ್ಮ ಜಾಗಾಗಳ ಚಾರ್ಜ ತೆಗಿದುಕೊಂಡಿರುವರು

ಸ್ಕೂಲರಶಿಪ್ಪ ಪರೀಕ್ಷೆಗಳು ಈ ತಿಂಗಳ ೨೯ನೇ ತಾರೀ
ಖಿಗೆ, ಮುಲ್ಕೀ ಪರೀಕ್ಷೆಗಳು ಇದೇ ತಿಂಗಳ ೧೬ನೇ ತಾರೀ
ಖಿಗೆ ಮತ್ತು ಟ್ರೇನಿಂಗ ಕಾಲೇಜದ ಸರಟಿಫಿಕೇಟ ಪರೀ
ಕ್ಷೆಗಳು ೨೫ನೇ ತಾರೀಖಿಗೆ ಪ್ರಾರಂಭವಾಗುವವು.

ಬೇರೆ ಇಲಾಖೆಯಲ್ಲಿಯ ವಿದ್ಯಾರ್ಥಿಗಳನ್ನು ತಮ್ಮಲ್ಲಿ
ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗೆ ಕೂಡ್ರಗೊಡಲಿಕ್ಕಿಲ್ಲವೆಂದು
ಅಲಹಾಬಾದ ವಿದ್ಯಾಪೀಠದವರು ಬಂದು ಠರಾವ ಪ್ರಸಿದ್ಧ
ಮಾಡಿರುತ್ತಾರೆ. ಬೇರೆ ವಿದ್ಯಾಪೀಠದಲ್ಲಿ ನಾಪಾಸಾದ ವಿದ್ಯಾ
ರ್ಥಿಗಳಿಗೆ ಇಲ್ಲಿ ಪರೀಕ್ಷೆಗೆ ಕೂಡ್ರಲಿಕ್ಕೆ ದೊಡ್ಡ ಅನುಕೂ
ಲವಿತ್ತು; ಅದು ಈ ಠರಾವಿನಿಂದ ತಪ್ಪಿದ್ದರಿಂದ ಉಮೇದ
ವಾರ ಜನರಿಗೆ ಅನನುಕೂಲವಾಗುವದು.

ಚಾಕು, ಚೂರಿ, ಕತ್ತಿ ಮುಂತಾದವುಗಳನ್ನು ಬಂದೇ
ಸವನೇ ಕೆಲಸಕ್ಕೆ ಹಚ್ಚಿದರೆ ಅವು ಮೆಲ್ಲ ಮೆಲ್ಲನೆ ಧಾರೆ ಇ
ಲ್ಲದಂತೆ ಆಗಹತ್ತುವವು. ಅವು ಸವಿಯುವದರಿಂದ ಹೀಗಾ
ಗುತ್ತವೆಂಬುಂತಲ್ಲ. ಅವುಗಳ ದಣಿಯುವಿಕೆಯೇ ಇದಕ್ಕೆ
ಕಾರಣವು. ಇದಕ್ಕೆ ಪ್ರಮಾಣವೇನೆಂದರೆ, ಕೆಲಸಕ್ಕೆ ಹಚ್ಚಿ
ದ ಕತ್ತಿ, ಚಾಕು, ಕತ್ತರಿ ಮುಂತಾದವುಗಳನ್ನು ಕೆಲವು
ದಿವಸ ಹಾಗೇ ಇಟ್ಟು ಮುಂದೆ ಪುನಃ ಕೆಲಸಕ್ಕೆ ಕೈಯಲ್ಲಿ

ತೆಗೆದುಕೊಂಡರೆ ಅವುಗಳ ಧಾರೆಯು ಮೊದಲಿನಂತೆ ಪವ
ನಾಗಿ ಹತ್ತುವದು.

ಮನುಷ್ಯನ ಸ್ನಾಯುಗಳು ದುಡಿದು ದಣಿಯಲಾಗಿ ಅವು
ಗಳಿಗೆ ವಿಶ್ರಾಂತಿ ದೊರಿತರೆ ಅವು ಪುನಃ ಪೂರ್ವದಂತೆ
ಬಲವಾಗುವಂತೆಯೇ ಧಾತುಗಳಿಗೆ ಸಹ ಆಗುತ್ತದೆಂದು
ಇತ್ತಲಾಗಿ ಶಾಸ್ತ್ರಶೋಧಕರು ಗೊತ್ತು ಹಚ್ಚಿರುತ್ತಾರೆ.
ಧಾತುಗಳ ದಣುವು ಅಂದರೆ ಅವು ಯಾವ ಅಣುಗಳಿಂದ ಆಗಿ
ರುವವೋ ಆ ಅಣುಗಳ ಪರಸ್ಪರ ಸಂಬಂಧವು ಬಂದೇ ಪ್ರ
ಕಾರವಾಗಿ ನಿಕಟವಾಗಿ ಉಳಿಯದಿರೋಣವೇ ಹೊರ್ತು
ಬೇರೆ ಏನೂ ಇಲ್ಲ. ಯಂತ್ರಾದಿಗಳ ಅವಯವಗಳ ಕೆಲಸ
ಗಳು ವರ್ಷಾನು ವರ್ಷ ಉತ್ತಮವಾಗಿ ನಡೆದು ಏನೂ
ಕಾರಣವಿಲ್ಲದೆ ಬಿಮ್ಮಿಂದೊಮ್ಮೆ ಕೆಲಸಕ್ಕೆ ಬಾರದಂತೆ ಆಗು
ತ್ತವೆಂಬ ಸಂಗತಿಯು ಯಂತ್ರ ನಡಿಸುವವರ ಅನುಭವಕ್ಕೆ
ಬಂದಿರುತ್ತದೆ. ಹೀಗಾಗುವದರ ಕಾರಣವು ಇಷ್ಟು ದಿವಸ
ಗಳ ವರೆಗೆ ಗೂಢವಾಗಿತ್ತು. ಆದರೆ ಈಗ ಅದು ವ್ಯಕ್ತ
ವಾಗಿರುತ್ತದೆ. ಧಾತುಗಳಿಗಾದರೂ ಬಂದು ಪ್ರಕಾರದ ದಣು
ವು ಇದ್ದೇ ಇರುತ್ತದೆ. ತಂತಿಯು ಬಂದು ಚೂರನ್ನು ಮು
ರಿಯು ಬೇಕಾಗಿದ್ದರೆ ಅದನ್ನು ಕೈಯಲ್ಲಿ ತೆಗಿದು ಕೊಂಡು
ಕೆಲವು ವೇಳೆ ಹಿಂದೆ ಮುಂದೆ ಮಣಿಸಾಡಬೇಕಾಗುತ್ತದೆ.
ಇದರಿಂದ ಆ ಭಾಗವನ್ನು ದಣಿಸುವದೇ ಮುಖ್ಯ ಉದ್ದೇ
ಶವಿರುತ್ತದೆ. ಅದು ದಣಿದ ಕೂಡಲೇ ತಂತಿಯು ಮುರಿ
ಯುತ್ತದೆ. ಆದರೆ ಅದೇ ತಂತಿಯನ್ನು ಸ್ವಲ್ಪ ಮಣಿಸಿ
ಇಲ್ಲವೆ ಬಡಿದು ಹಾಗೇ ಇಟ್ಟು ಮರುದಿವಸ ಪುನಃ ಅದರಂ
ತೆ ಮಾಡುತ್ತ ಹೋದರೆ ಆ ತಂತಿಯು ತೀವ್ರವಾಗಿ ಮುರಿ
ಯುವದಿಲ್ಲ. ವಿಶ್ರಾಂತಿ ಕೊಡುತ್ತ ಹೋಗಿ ಆ ತಂತಿಯನ್ನು
ಬೇಕಾದಷ್ಟು ಮಣಿಸಬಹುದು, ಅಥವಾ ಬೆಳಿಸಬಹುದು.

ನಮ್ಮ ದೇಶದಲ್ಲಿ ವಿದ್ಯುತ್ತಿನ ಉಂಗರದ ಕಾರಖಾ
ಯನ್ನು ತೆಗಿದ ಮಿ. ಗಣಪತರಾವ ಭಿವಾಜಿ ನಾಯಿಕ ಆ
ವಾ ಜೇ. ಬೀ. ನಾಯಿಕ ಇವರು ಬಂದು ಹೊಸ ಯುಕ್ತಿ
ಯನ್ನು ತೆಗಿದು ಆದರಿಂದ ಸ್ವಾರ್ಥ ಮತ್ತು ಪರಮಾರ್ಥ
ವನ್ನು ಸಾಧಿಸುವ ಯೋಜನೆಯನ್ನು ಮಾಡಿರುತ್ತಾರೆ
ಕೀಸೆಯೊಳಗೆ ಹಾಕುವ ಸಣ್ಣ ಘಡಿಯಾಳಗಳನ್ನು ದೊಡ್ಡ
ಘಡಿಯಾಳಗಳನ್ನು ಟಾಯಿಮಪೀಸುಗಳನ್ನು ಬೇರೆ ಹೊರ
ತರದ ಮೇಲ್ತಗಡುಗಳನ್ನು ತಯಾರ ಮಾಡಿಸಿ ಇತ್ತ್ಕಡಿ
ತರಿಸಿ ಮಾರುವ ವ್ಯವಸ್ಥೆಯನ್ನು ಮಾಡಿರುತ್ತಾರೆ. ಈ
ಎಲ್ಲ ಘಡಿಯಾಳಗಳ ಮೇಲಿನ ಅಂಕೆಗಳುಳ್ಳ ವಿಶೇಷಲಾಕಾರ
ವಾದ ತಗಡುಗಳ ಮೇಲೆ ರೋಮನ್ ಅಂಕೆಗಳ ಪತ್ತರ ದೇ
ವನಗರವ ಅಂಕೆಗಳನ್ನು ಹಾಕಿ ಅಂಕೆಗಳ ನಡುವಿನ ಬಿ
ಸ್ಥಳದಲ್ಲಿ ಹಿಂದೂ ದೇವತೆಗಳ ಮತ್ತು ಸಾಧು ಪುರುಷರ ಸುಂ
ದರ ಮೂರ್ತಿಗಳನ್ನು ತೆಗಿಸಿರುತ್ತಾರೆ. ಮತ್ತು ತಗಡಿನ
ಮಧ್ಯ ಭಾಗದಲ್ಲಿ ಶ್ರೀಮಚ್ಛತ್ರಪತಿ ಶಿವಾಜೀ ಮಹಾರಾ
ಜರ ಊರ್ಧ್ವಕಾಯ ಪ್ರತಿಮೆಯನ್ನು ತೆಗಿಸಿರುತ್ತಾರೆ.
ಈ ಪ್ರಕಾರದ ಘಡಿಯಾಳಗಳ ಮಾದರಿಯು ಇದೇ ಹೊಸ
ದಿದ್ದು ಇವರಿಂದ ನಾಯಿಕ ಇವರಿಗೆ ಒಳ್ಳೇ ಫಾಯದೆ
ಸಾಗಿರುತ್ತದೆ. ಇವರು ಈ ಘಡಿಯಾಳಗಳಂತೆಯೇ ರಾಸ್ಟ್ರ
ಯ ಸಭೆಯ ಅಧ್ಯಕ್ಷರ ಮತ್ತು ಇತ್ತ್ಕಡಿಯ ವಿದುಷಿ
ಸ್ತ್ರೀಯರ ಮೂರ್ತಿಗಳನ್ನು ತೆಗಿದ ಘಡಿಯಾಳಗಳನ್ನು
ತಯಾರ ಮಾಡಿಸುವ ವಿಚಾರದಲ್ಲಿರುವದಾಗಿ ತಿಳಿಯುತ್ತದೆ.
ಈ ಎಲ್ಲ ಪ್ರಕಾರದ ಘಡಿಯಾಳಗಳು ಸ್ವಿತ್ಸರ್ಲಂಡದಲ್ಲಿ
ನೆಸ್ಟ್ ಲೆಂಡ್ ಕಂಪನಿಯವರ ವಿದ್ಯಮಾನವಾಗಿ ತಯಾರ
ಮಾಡಿಸಿದವಿದ್ದು, ಗಟ್ಟಯಾದ ಯಂತ್ರಗಳಿಂದ ಮಾಡಿರುವ
ವಾಗಿ ತಿಳಿಯುತ್ತದೆ.

MORAL TRAINING OF CHILDREN.

ಮಕ್ಕಳ ನೀತಿ ಶಿಕ್ಷಣ.

(೧೩೪ನೇ ಪುಟದಿಂದ ಸಾಗಿದ್ದು)

ಮಕ್ಕಳ ಹಟಸ್ವಭಾವ—ಕೆಲವು ಮಿಡುಗರು ಅಪ್ಪಟ್ಟಕ್ಕೆ ಹಟವು ಮಾಡುತ್ತಾರೆ. ತುಸು ಸಿಟ್ಟು ಮಾಡಿದರೆ ಸಾಕು, ಅತ್ತು ರಂಪಾಟ ಮಾಡುತ್ತಾರೆ. ಇದನ್ನು ಕಂಡು ಕೆಲ ಜನ ತಾಯಿಗಳು ಗನ್ನ ತುಟಿ ಹಿಡಿದು ರಮ್ಮಿಸಲಿಕ್ಕೆ ಹೋದಂತೆ ಅವರ ಹಟವು ಕಡಿಮೆಯಾಗುವದಕ್ಕೆ ಬದಲು ಹೆಚ್ಚುತ್ತಲೇ ಹೋಗುವದು. ಕಟ್ಟಕಡೆಗೆ ಅವರು ಬೇಡಿದ ಪದಾರ್ಥವನ್ನು ತೆಗೆದುಕೊಂಡ ಹೊತ್ತು ಸುಮ್ಮನಾಗುವದಿಲ್ಲ. ಈ ಚಾಳಿಯು ಮಕ್ಕಳಿಗೆ ಹತ್ತದಂತೆ ತಾಯಿ ತಂದೆಗಳು ಎಚ್ಚರದಿಂದಿರಬೇಕು. ಮಿಡುಗರು ಹಟ ಹಿಡಿದ ಕೂಡಲೆ ಅವರನ್ನು ತುಸು ಹೊತ್ತು ಮಾತಾಡಿಸಲೇ ಬಾರದು, ಅಳಹತ್ತಿದರೆ ಸಮಾಧಾನ ಮಾಡಲಿಕ್ಕೆ ಹೋಗಬಾರದು. ಮನಸು ಬಿಗಿ ಮಾಡಿಕೊಂದು ಅರ್ಧ ತಾಸಿನವರೆಗೆ ಅವರನ್ನು ದುರ್ಲಕ್ಷಿಸಿದ ಹಾಗೆ ತೋರಿಸಿದರೆ ಸಾಕು, ಅವರು ತಮ್ಮಷ್ಟಕ್ಕೆ ತಾವೇ ಆ ಹಟವನ್ನು ಬಿಡುವರು. ತಾಯಿಗಳು ವಿಶೇಷವಾಗಿ ಲಕ್ಷದಲ್ಲಿಡತಕ್ಕ ಮಾತು ಏನಂದರೆ;—ಹುಡುಗರು ತಾವು "ಊಟ ಮಾಡುವದಿಲ್ಲ" ಇಲ್ಲವೆ "ಪಸಿವೆ ಆಗಿಲ್ಲ" ಎಂಬೆರಡು ವಾಕ್ಯಗಳನ್ನು ನುಡಿದರೆ ಸಾಕು, ತಾವು ಹೇಳಿದಂತೆ ತಾಯಿಯು ಕೇಳುವಳೆಂಬ ನಂಬಿಗೆಯು ಅವರಿಗೆ ಪೂರ್ಣವಾಗಿ ಇರುತ್ತದೆ. ಆದ್ದರಿಂದ ಅವರು ಆಗಾಗ್ಗೆ ಇವೇ ವಾಕ್ಯಗಳನ್ನು ನುಡಿದು ಅವರನ್ನು ಯಾವಾಗಲೂ ಅಂಜಿಸಿಕೊಳ್ಳುತ್ತಿರುತ್ತಾರೆ. ಈ ಮಾತಿನ ಅನುಭವವು ಬಹುಜನ ಎಲ್ಲರಿಗೂ ಇರಬಹುದು. ಇಂದು

ಮೇಳೆ ಹುಡುಗನು ,, ಹಸಿವೆಯಿಲ್ಲ, ಊಟ ಬೇಡ್ಲೆ ಎಂದು ಹಟ ಹಿಡಿದರೆ, ತಾಯಿಯು ಸಾಯಂಕಾಲದ ವರೆ ಅವನನ್ನು ಮತ್ತೊಮ್ಮೆ ಕರಿಯದೆ ಬಿಟ್ಟರೆ, ಅವನ ಸಿ ಕ್ಕು ಮುರಿದು ಊಟಕ್ಕೆ ಕರೆಯುವರೋ ಇಲ್ಲವೋ ಎಂದ ಆಗಾಗ್ಗೆ ತಾಯಿಯ ಕಡೆಗೆ ನೋಡಹತ್ತುವನು. ಇದ ತಿಳಿದ ಕೂಡಲೆ, ತಾಯಿಯು ಬಂದಾವರ್ತಿ ಕರಿದರೆ ಸಾಕು ಎಂಥ ಹಟಮಾರಿ ಹುಡುಗನಿದ್ದರೂ ಸುಮ್ಮನೆ ಎದ್ದು ಊ ಟಕ್ಕೆ ಬರುವನು. ಇದೇ ಪ್ರಕಾರ ಬಂದೆರಡಾವರ್ತಿ ಮೂ ವರೆ ಸಾಕು, ಈ ಹಟಮಾಡುವ ದುರ್ಗುಣವು ಅಡಗಿ ಹೋ ಗುವದು.

ನೋವು—ಅಕಸ್ಮಾತ್ತಾಗಿ ಹುಡುಗರು ಎಡವಿ ಬಿದು ಪೆಟ್ಟು ಹಚ್ಚಿಕೊಂಡು ಅಳಹತ್ತುವರು. ಇಂಥ ಪ್ರಸಂಗವು ಎಚ್ಚರದಿಂದಿರುವದಕ್ಕೆ ಅವರಿಗೆ ಕಲಿಸುತ್ತದೆ. ಮತ್ತು ಅವರಿಗೆ ಪತ್ತಿವಂಥ ಪೆಟ್ಟಿನ ನೆನಪು ಅವರ ಮನಸ್ಸಿನಲ್ಲಿ ಬಹು ದಿವಸಗಳ ವರೆಗೆ ನಿಲ್ಲುತ್ತದೆ. ಇದರಿಂದಾಗತಕ್ಕ ಬಳ್ಳೀ ಪರಿಣಾಮಗಳನ್ನು ಕೆಲವರು ತಾಯಂದಿರು ಲೆಕ್ಕಿಸದೆ ಓಡಿ ಬಂದು ಬಮ್ಮೆಲೇ ಅವರನ್ನು ಎತ್ತಿ ಹಿಡಿದು ಸಿಟ್ಟಿನಿಂ ದ ಅವರನ್ನು ನೋಡಿ ಬಾಯಿಗೆ ಬಂದಂತೆ ಬೈಯಹತ್ತುವರು. ಕೆಲವರು ಅಕ್ಕರತೆಯಿಂದ ಕಡ್ಡಿ ಬಯ್ದು ಗುಡ್ಡಾ ಮಾಡು ವರು. ಇದರಿಂದ ಆ ಮಕ್ಕಳು ಮತ್ತಿಷ್ಟು ಅಳಹತ್ತುವ ವೇ ಹೊರತು ಎಚ್ಚರದಿಂದ ನಡೆಯುವ ಗುಣವು ಅವರಿಗೆ ಹತ್ತಲಾರದು.

ಈ ಪ್ರಸಂಗದಲ್ಲಿ ತಾಯಿ ತಂದೆಗಳು ಮಾಡತಕ್ಕ ಮೇ ಲಾದ ಉಪಾಯವೇನಂದರೆ:—,, ಮಗನೇ ನಿನಗೆ ಪೆಟ್ಟು ಹತ್ತಿತೇನು" ಅಂಜಬೇಡ, ಇದು ಬೇಗನೆ ಇಲ್ಲದಂತೆ ಆಗು ವದು, ಎಂಬೀ ಮಾತುಗಳನ್ನು ಆಡಿ ಅವರಲ್ಲಿ ಧೈರ್ಯವೂ

ತ್ರಾಳ್ಮೆಯೂ ನೆಲಿಸುವಂತೆ ಮಾಡಬೇಕಲ್ಲದೆ ಸಣ್ಣ ಸಣ್ಣ ತೊಂದರೆಗಳು ಸಂಭವಿಸಿದರೆ ಸಹಾ ಅವರನ್ನು ಮತ್ತಿಷ್ಟು ಅಂಜಿಸಿ ಎದೆಯೊಡಕೊಳ್ಳುವಂತೆ ಮಾಡಬಾರದು. ತಂದೆಯು "ಮಗನೇ ಏಳು, ಇನ್ನೊಮ್ಮೆ ಜಿಗಿ ನೋಡುವಾ" ನೀನು ಓಡುತ್ತ ಹೋಗಿ ಆ ಮೂಲೆಯೊಳಗಿನ ಚಂಡನ್ನು ತೆಗೆದುಕೊಂಡು ಬಾ ಎಂದು ಹೇಳಿ, ಅವನನ್ನು ಹುರಿದುಂಬಿಸುತ್ತ ಹೋದರೆ, ಮಕ್ಕಳು ತನುಗೆ ಪತ್ತಿದ ಪೆಟ್ಟನ್ನು ತಡಕೊಳ್ಳುವಷ್ಟು ಘಟ್ಟಿಗರಾಗುವದಲ್ಲದೆ ಅನ್ಯರಿಗೆ ಪೆಟ್ಟು ಪತ್ತಿದರೆ ಕೈಲಾದಮಟ್ಟಿಗೆ ಸಹಾಯ ಮಾಡುವದಕ್ಕೆ ಮುಂದಾಗುವರು.

ಚಿಕ್ಕ ಹುಡುಗನು ಆಡುವಾಗ್ಗೆ ಕಾಲು ತಪ್ಪಿ ಬಿದ್ದು ಅಳುತ್ತ ಹತ್ತರ ಬಂದರೆ, ಮಗನೇ ಯಾಕೆ ಅಳುತ್ತಿ ಎಂದು ಪ್ರೀತಿಯಿಂದ ಮಾತಾಡಿಸಿ, ಅವನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಅವನ ತಲೆಯ ಮೇಲೆ ಮುತ್ತು ಬೆನ್ನ ಮೇಲೆ ಕೈಯಾಡಿಸಿ, ನಿನಗೆ ಏನಾಯಿತು ಹೇಳು ಎಂದು ಕೇಳಿದಷ್ಟಕ್ಕೇ ಅವನು ಕೆಲವಂಶದಿಂದ ಕನ್ನ ನೋವನ್ನು ಮರೆತು ಬಿಡುವನು. ಮತ್ತು ಅವನು ತೊಡೆಯ ಮೇಲೆ ಕೂತುಕೊಂಡು ತನಗೆ ಸಂಭವಿಸಿದ ಪ್ರಸಂಗವನ್ನು ಹೇಳ ಪತ್ತಿದ ಹಾಗೆ ಧೈರ್ಯದ ಮಾತುಗಳನ್ನೇ ಹೇಳುತ್ತ ಹೋದರೆ, ಬೇಗನೇ ಅವನ ದುಃಖವು ದೂರಾಗುವದು. ಮಕ್ಕಳು ದುಃಖದಿಂದ ಅಳಪತ್ತಿದಾಗ್ಗೆ ಅವರ ಕೈ ಕಾಲು ಮೋರೆ ಮುಂತಾದವುಗಳನ್ನು ತೊಳೆದರೆ ಅವರ ಲಕ್ಷವು ಬೇರೆ ಕಡೆಗೆ ತಿರುಗಿ ತಮಗೆ ಪತ್ತಿದ ಪೆಟ್ಟನ್ನು ಮರೆತು ಬಿಡುವರು. ಆದರೆ ಈ ಕೆಲಸವನ್ನು ಬಹಳ ಪ್ರೀತಿಯಿಂದ ಮಾಡಬೇಕು.

ಶಿಷ್ಟವು—ಮಕ್ಕಳು ತಮ್ಮ ಮಾತು ನಡಿಯವ ಕಾರ್ಯ
ದಿಂದ ಕಟಿಕೊಳ್ಳುವರು. ಆ ವೇಳೆಯಲ್ಲಿ ಶಿಕ್ಷಿಸುವದು ಎ
ಕ್ಕೂ ಕೆಟ್ಟದ್ದು. ಇದರಿಂದ ಅವರು ಸೋಮಾರಿಗಳೂ ಹೇ
ಡಿಗಳೂ ಆಗುವರು.

ಹುಡುಗರು ಕಟಿಕೊಂಡ ಹೊತ್ತಿನಲ್ಲಿ "ನೀನು ಈ ಹೊ
ತ್ತು ಬಹಳ ಎಟ್ಟಿತನ ಮಾಡುತ್ತೀ" ಎಂದು ಎಷ್ಟೋ ತಾ
ಯಿತಂದೆಗಳು ಅವರನ್ನು ಗದ್ದರಿಸುವರು, ಇದು ಸರಿಯ
ಲ್ಲ. ಹೀಗೆ ಅನ್ನುವದರಬದಲು ಅವನಿಗೆ ಪ್ರಿಯವಾದ ಆಟದ
ಕಡೆಗೆ ಇಲ್ಲವೆ ಇಷ್ಟವಾದ ಪದಾರ್ಥದ ಕಡೆಗೆ ಅವನ ಮನ
ಸ್ಸು ತಿರಗುವಂತೆ ಮಾಡುವದು ಲೇಸು. ಬಂದು ವೇಳೆ ಅವ
ನಿಗೆ ಆನಂದವಾಗುವ ಹಾಗೆ ಅವನೊಂದಿಗೆ ತುಸು ಹೊತ್ತು
ಆಡಿದರೂ ಅಡ್ಡಿ ಇಲ್ಲ. ಕೆಲವು ಪ್ರಸಂಗದಲ್ಲಿ ಕಟಕೊಂ
ಡ ಹುಡುಗರನ್ನು ಕುರಿತು ಹೆಚ್ಚಿಗೆ ಪೃಚ್ಛಾಪೃಚ್ಛಿ ಮಾ
ಡೋಣದರಿಂದಲೂ, ಅವರನ್ನು ರಮಿಸುವ ಪ್ರಯತ್ನ ಮಾ
ಡುವದರಿಂದಲೂ ಅವರು ಕೆಡುತ್ತಾರೆ; ಇಂಥ ವೇಳೆಯಲ್ಲಿ
ಅವರ ಗೋಜಿಗೆ ಹೋಗದೆ ಇರುವದೇ ಉತ್ತಮ ಉಪಾಯ
ವು. ವಿಶೇಷ ಸಲಿಗೆಯನ್ನು ಕೊಡುವದರಿಂದ ಮಕ್ಕಳಿಗೆ
ಹಾನಿಯೂ ತಮ್ಮ ಅಧಿಕಾರಕ್ಕೆ ಕೊರತೆಯೂ ಬರುತ್ತವೆ.
ಆದ್ದರಿಂದ ಈ ವಿಷಯದಲ್ಲಿ ಬಳ್ಳಿ ಜಾಣತನದಿಂದ ವರ್ತಿಸ
ಬೇಕು. ಹುಡುಗರ ಸಿಟ್ಟನ್ನು ಕಡಿಮೆ ಮಾಡಲಿಕ್ಕೆ ತಾಯಿ
ಯ ಆನಂದ ವೃತ್ತಿಯು ಮೇಲಾದ ಸಾಧನವಾಗಿರುತ್ತದೆ.

ದಯೆ—ಶ್ರುತಿಸ್ಮೃತಿಗಳಲ್ಲಿಯೂ ಇತಿಹಾಸ ಪುರಾಣಗ
ಳಲ್ಲಿಯೂ ಪರಮಾತ್ಮನು ಅತಿಕರುಣನು, ಕೃಪಾಳುವನು
ಎಂದು ವರ್ಣಿಸಲ್ಪಟ್ಟಿರುವನು. ಅವನ ಬಿರುದಾವಳಿಗಳಲ್ಲಿ
ಕೃಪೆಯೇ ಶ್ರೇಷ್ಠವಾದದ್ದು. ಈ ಗುಣವೇ ದೇವತಾಂಶವ
ಹುರುಪು. ಈ ಗುಣದಿಂದಲೇ ಮಾನವಸುಖಾಭಿವೃದ್ಧಿಯೂ

ಗುವದು. ಪರಸುಖದಿಂದ ಸುಖಬಡುವ ಗುಣವು ಬಲುಹೆ ಚ್ಚಿನದು. ಮನುಷ್ಯ ಸೌಖ್ಯದ ಇದೇ ಮೇಲಾದ ಸಾಧನ ವೆಂದು ಹೇಳಲಿಕ್ಕೆ ಏನೂ ಬಾಧಕವಿಲ್ಲ. ಪರೋಪಕಾರ ಮಾಡುವವನು ತನ್ನ ಸುಖದ ಬೀಜಾರೋಪಣ ಮಾಡು ತ್ತಾನೆಂದು ನಿಃಶಂಕವಾಗಿ ಹೇಳಬಹುದು. ಆದರಿಂದ ಈ ಗುಣವನ್ನು ಮಕ್ಕಳಲ್ಲಿ ಹುಟ್ಟಿಸಲಿಕ್ಕೆ ಪ್ರತಿ ಬಬ್ಬರು ಅದ ರಪೂರ್ವಕವಾಗಿ ಯತ್ನಿಸಬೇಕು. "ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ" ಎಂಬ ಸಂಸ್ಕೃತ ನುಡಿಯು ಪ್ರಸಿದ್ಧವಾದದ್ದು. ನಿಕೃಷ್ಟಪಕ್ಷಕ್ಕೆ ಮಕ್ಕಳು ಪರಪೀಡಾಪರಾಙ್ಮುಖರಾಗುವಂತೆ ಎಲ್ಲರು ಯತ್ನಿಸಲಿಕ್ಕೆ ಬೇಕು.

ನಿಷ್ಕರ್ಣತ್ವ—ಕೆಲವರು ಬಹುಮೃದುಸ್ವಭಾವದವರಿರುತ್ತಾರೆ. ಪರರನ್ನು ಪೀಡಿಸುವದೆಂದರೆ ಅವರಿಗೆ ಬಲುಸಂತೋಷವಾಗುತ್ತದೆ. ಈ ದೌರ್ಬಲ್ಯವು ಚಿಕ್ಕ ಮಕ್ಕಳಲ್ಲಿ ವಿಶೇಷವಾಗಿ ಕಂಡು ಬರುತ್ತದೆ. ಮೋಜಿಗಾಗಿ ನೊಣಗಳನ್ನು ಹಿಡಿದು ಅವುಗಳ ರೆಕ್ಕಿ ಕತ್ತರಿಸುವದು, ಚಂಡು ಹಾರಿಸುವದು, ಬಿತಿಕಾಟಗಳಿಗೆ ಗುರಿ ಇಟ್ಟು ಬಗೆಯುವದು ಮುಂತಾದ ದುಷ್ಟತನದ ಕೃತ್ಯಗಳನ್ನು ಅವರು ಮಾಡುತ್ತಾರೆಂಬದು ಎಲ್ಲರಿಗೆ ಗೊತ್ತಿದ್ದ ಮಾತು. ಅಜ್ಞಾನ ಅವಿಚಾರಗಳೇ ಇದಕ್ಕೆ ಕಾರಣವಾಗಿರುತ್ತವೆ. ಹುಡುಗನ ಕೈಯಲ್ಲಿ ಬೆತ್ತ ಕಿಕ್ಕರೆ ಅವನು ಪರರನ್ನು ಹೊಡೆಯಲಿಕ್ಕೆ ಹವಣಿಸುವನು, ಮತ್ತು ಹೊಡತದಿಂದ ಪರರು ಮರುಮರುಗಿದಂತೆ ಇವನ ಸಂತೋಷವು ಹೆಚ್ಚುವದು. ಇಂಥ ಪ್ರಸಂಗವಲ್ಲಿ ದುರ್ಲಕ್ಷ ಮಾಡುವದು ಎಷ್ಟಮಾತ್ರವೂ ಸರಿಯಲ್ಲ. ಈ ನಡತೆಯನ್ನು ತಿದ್ದದೆ ಹಾಗೆ ಬಿಟ್ಟರೆ ದುಷ್ಟತನವು ಹೆಚ್ಚುವದೇ

ಹೊತ್ತು ಕಡಿಮೆಯಾಗಲಾರದು. ಪರಪೀಡೆಯು ಅಸಹ್ಯವಾದದ್ದು; ಪರರನ್ನು ಸರ್ವಥಾ ಪೀಡಿಸಬಾರದೆಂದು ಮಕ್ಕಳಿಗೆ ತಿಳಿಸಿ ಹೇಳತಕ್ಕದ್ದು. ಬೆತ್ತ ಮುಂತಾದ ಬಡವೆಗಳನ್ನು ಹುಡುಗರಿಗೆ ಆಡಲಿಕ್ಕೆ ಕೊಡಲೇಬಾರದು. ಬೆತ್ತದಿಂದ ಬಡಿದರೆ ತನಗೆ ಹ್ಯಾಗೆ ನೋವಾಗುವದೋ ಹಾಗೇ ಪರರಿಗೆ ನೋವಾಗುವದೆಂಬ ಸಂಗತಿಯನ್ನು ಅವರಿಗೆ ತಿಳಿಸಿ ಹೇಳಬೇಕು. ಸುಮ್ಮಸುಮ್ಮನೆ ದನಗಳನ್ನು ಬಡಿಯುವ ಮತ್ತು ಬಳ್ಳೀಪುಡುಗನಿಗೆ ಬಪ್ಪಲಾರದು; ಮೂಕಪ್ರಾಣಿಗಳನ್ನು ಪೀಡಿಸುವವನೂ ನಿಷ್ಕಾರಣವಾಗಿ ಎರಡನೇಯವರನ್ನು ನೋಯಿಸುವವನು ಪಾಪ, ಇಂಥವರ ಮೇಲೆ ದೇವರು ಕೋಪಿಸುವನು; ಅದರಿಂದ ಎಂದಿಗೂ ಕಲ್ಯಾಣವಾಗದೆಂದು ಸೋದಾಹರಣವಾಗಿ ಅವರಿಗೆ ತಿಳಿಸಿ ಕೊಡಬೇಕು.

SELECTIONS FROM THE KARNATIK GAZETTEER.

ಕನ್ನಡ ಗರೆಹುಟಿಯರದಿಂದ ಅವತರಣಿಗಳು.

(೧೮೮೪ನೇ ಪುಟದಿಂದ ಮುಂದೆ ಸಾಗಿದ್ದು.)

ಬಾಗೇವಾಡಿ—ಬೆಳಗಾವಿಯ ದಕ್ಷಿಣಕ್ಕೆ ೧೦ ಮೈಲಿನ ಮೇಲೆ, ಜ. ಸಂ. (೮೧) ೪೫೨೪ ಈ ಹಳ್ಳಿಯಿಂದ ಬಂದು ಮೈಲಿನ ಮೇಲೆ ಚಿಕ್ಕ ಬಾಗೇವಾಡಿ ಎಂಬ ಸಣ್ಣ ಹಳ್ಳಿಯುಂಟು. ಅಲ್ಲಿ ಬಂದು ತಾಮ್ರ ಶಾಸನವು ಬಬ್ಬ ಜೇಡನ ಬಳಿಯಲ್ಲಿ ಸಿಕ್ಕಿದೆ ಅದರಲ್ಲಿ ದೇವಗಿರಿಯ ಕೃಷ್ಣರಾಜನ (ಕಹ್ನರನ) ಅಪ್ಪಣೆಯಿಂದ ಶಕೆ ೧೧೩೧ ರಲ್ಲಿ ೩೬ ಬ್ರಾಹ್ಮಣರಿಗೆ ಸಂತೆಯ ಬಾಗೇವಾಡಿಯಲ್ಲಿ ಕೆಲವು ಭೂಮಿಗಳನ್ನು ಇನಾಮು ಕೊಟ್ಟ ಬಗ್ಗೆ ಲೇಖವಿರುತ್ತದೆ. ಈ ಬ್ರಾಹ್ಮಣರಲ್ಲಿ ಕೆಲವರು ಕೊಂಕಣಸ್ಥರಿದ್ದರೆಂದು ಅವರ ಉಪನಾಮಗಳಿಂದ ತಿಳಿಯುತ್ತದೆ.

ಚಂದಗಡ—ಬೆಳಗಾವಿಯ ಪಶ್ಚಿಮಕ್ಕೆ ೨೦ ಮೈಲಿನ ಮೇಲೆ ಜ. ಸಂ. (೪೧) ೨೫೭೪. ಪೋಲೀಸ ಕಛೇರಿ, ಟಪಾಲ ಕಛೇರಿ, ಬಂದು ಶಾಲೆ, ಇರುತ್ತವೆ. ರವಳನಾಥ ನ ಗುಡಿಯು ದೊಡ್ಡದಿರುತ್ತದೆ. ಇಲ್ಲಿ ಸಣ್ಣದೊಂದು ಗಢಿ ಎಂಬ ಮಣ್ಣಿನ ಹಾಳು ಕೋಟೆಯುಂಟು.

ಗಂಧರ್ವಗಡ—ಬೆಳಗಾವಿಯ ಪಶ್ಚಿಮಕ್ಕೆ ೨೧ ಮೈಲಿನ ಮೇಲೆ, ೪೦೦ ಫೂಟು ಎತ್ತರವಾದ ಗುಡ್ಡದ ಮೇಲೆ ಮಣ್ಣಿನ ಹಾಳು ಕೋಟೆಯುಂಟು. ಇದನ್ನು ವಾಡಿಯ ಫೊಂಡ ಸಾವಂತನ ಮಗನಾದ ನಾಗ ಸಾವಂತನು ಸನ್ನ ೧೭೨೪ ರಲ್ಲಿ ಕಟ್ಟಸಿದ್ದನು ಈಗ ಜನರ ವಸ್ತಿ ಇಲ್ಲ.

ಮಹೀಪಾಲಗಡ—ಬೆಳಗಾವಿಯ ಪಶ್ಚಿಮಕ್ಕೆ ೧೦ ಮೈಲಿನ ಮೇಲೆ ದುರ್ಗ ಕೋಟೆಯು ಕೋಟೆಗೆ ಹೋಗುವ ವರು. ೩೦೦ ಫೂಟು ಉದ್ದವಾದ ಇಳಕಲವನ್ನು ಯೇರಿ ಹೋಗಬೇಕು. ಕೋಟೆಯು ೧೪೦೦ ಫೂಟು ಉದ್ದ, ೬೦೦ ಫೂಟು ಅಗಲು ಇರುತ್ತದೆ. ಕೋಟೆಯೊಳಗಿನ ಅರ್ಧ ಭಾಗದಲ್ಲಿ ಮಾತ್ರ ಮನೆಗಳಿರುತ್ತವೆ. ಉಳಿದ ಅರ್ಧಭಾಗದಲ್ಲಿ ಪುಲ್ಲು ಬೆಳೆಯುತ್ತದೆ. ಕೋಟೆಯೊಳಗೆ ದೊಡ್ಡದೊಂದು ಬಾವಿಯುಂಟು.

ಯಳ್ಳೂರಗಡ—ಬೆಳಗಾವಿಯ ಆಗ್ನೇಯಕ್ಕೆ ೭ ಮೈಲಿನ ಮೇಲೆ ದುರ್ಗ ಕೋಟೆಯು. ಈ ಗಡವು ಸಮುದ್ರದ ಸಪಾಟಯಿಂದ ೩೩೬೪ ಫೂಟು ಎತ್ತರಿರುತ್ತದೆ. ಕೋಟೆಯು ಸಣ್ಣದಿರುತ್ತದೆ. ಇದರಲ್ಲಿ ವಸ್ತಿ ಇಲ್ಲ. ಇಂಜನಿಯರ ಖಾತೆಯ ಅಧಿಕಾರಿಗಳು ಈ ಗಡವನ್ನು ಎತ್ತರದ ಮಾಪು ಮಾಡಿಕೊಂಡಿದ್ದಾರೆ.

ಚಿಕ್ಕೋಡಿ ತಾಲೂಕು.

ಕ್ಷೇತ್ರ—ಇದು ಜಿಲ್ಲೆಯ ವಾಯವ್ಯ ಮೂಲೆಯಲ್ಲಿ ಕೊ

ಲ್ಲಾಪುರ ಸಂಸ್ಥಾನದ ದಕ್ಷಿಣಕ್ಕೆ ಇರುತ್ತದೆ. ಸರಕಾರೀ ಹಳ್ಳಿಗಳು ೧೫೪, ದುಮ್ಮಾಲಿ ಹಳ್ಳಿಗಳು ೫೭. ಕ್ಷೇತ್ರ ೪೪೦. ಚ. ಮೈಲು, ಜನಸಂಖ್ಯೆ ೨೪೫೬೧೪; ಭೂಮಿಯ ಕಂದಾಯ ೨೬೧೪೪೦ ರೂಪಾಯಿ.

ಸ್ವರೂಪ, ಭೂಮಿ—ಉತ್ತರ ಭಾಗವು ಮೇಲಾದ ಕರೆ ಭೂಮಿಯ ಬೈಲು, ಆಗ್ನೇಯದಲ್ಲಿಯೂ ದಕ್ಷಿಣದಲ್ಲಿಯೂ ಗುಡ್ಡಗಳೂ ಅಡವಿಯೂ ಉಂಟು. ಕೃಷ್ಣಾ, ಘಟಪ್ರಭಾ, ಹರಣಕಾಶಿ, ಹೊಳೆಗಳ ನೆರೆಭೂಮಿ ಮೇಲಾದದ್ದು. ಪಶ್ಚಿಮದಲ್ಲಿ ಕೆಂಪು, ಉಳಿದದ್ದೆಲ್ಲ ಕರೆ ಭೂಮಿ; ಉತ್ತರದ ಭೂಮಿ ಮೇಲಾದದ್ದು. ಈ ತಾಲೂಕಿನಲ್ಲಿ ತೋಟಗಳು ಬಹಳ.

ಹವೆ, ಮಳೆ, ನೀರು—ದಕ್ಷಿಣ ಭಾಗದ ಹವೆ ರೋಗಕಾರಕ; ಉಳಿದ ಕಡೆಯಲ್ಲೆಲ್ಲ ವಾಡಿಕೆಯಾಗಿ ಆರೋಗ್ಯವುದು. ದಕ್ಷಿಣದಲ್ಲಿ ಮಳೆ ಹೆಚ್ಚು. ಪೂರ್ವದಲ್ಲಿ ಬಹು ಕಡಿಮೆ. ಚಿಕ್ಕೋಡಿಯಲ್ಲಿ ೧೧ ರಿಂದ ೩೭ ಇಂಚಿನ ವರೆಗೆ; ಸರಾಸರೀ ೨೫ ಇಂಚು. ಉತ್ತರದಲ್ಲಿ ಕೃಷ್ಣಾ, ವೇದಗಂಗಾ, ದೂಧಗಂಗಾ ಹೊಳೆಗಳು, ದಕ್ಷಿಣದಲ್ಲಿ ಘಟಪ್ರಭಾ, ಹರಣಕಾಶಿ, ಹೊಳೆಗಳು. ಇವಲ್ಲದೆ ಮಳೆಗಾಲದ ಸರವುಗಳು ಹಲವುಂಟು. ಬಟ್ಟೆಗೆ ನೀರು ವಿಪುಲ.

ಜನರು—ಬಟ್ಟು ಜನಸಂಖ್ಯೆಯಲ್ಲಿ ಶೇಕಡಾ ೯೫ ಹಿಂದೂ ಜನರು, ೩ ಮುಸಲ್ಮಾನರು. ೪೦ ಜನ ಕ್ರಿಸ್ತಿಗಳು. ಹಿಂದೂಗಳಲ್ಲಿ ಬ್ರಾಹ್ಮಣರು ೯೨೯, ಜೈನರು ೨೨೦೦, ಆರೇರು ೪೪೩೭, ಕುಣಬಿಗಳು ೪೯೨೯ ಹಣಬರು, ೫೫೫೪, ತಿಳಾರಿಗಳು ೨೪೦೯, ಪಂಚಾಳರು ೨೫೧೪, ಜೇಡರು ೨೨೪೬, ಪಟಗಾರರು ೧೬೫೬, ಲಿಂಗವಂತರು ೩೬೪೩೬, ಕಬ್ಬಲಿಗೇರು ೪೪೬೦, ಕುರುಬರು ೧೨೦೯೨,

ಬೇಡರು ೬೦೬೪, ಕೊರವರು ೧೦೧೧, ಹೊಲಿಯರು ೧೭೪೯, ಮೊದಿಗರು ೪೬೧೭, ಇತ್ಯಾದಿ.

ದೊಡ್ಡ ಊರುಗಳು.

ಬಿಕೊಕ್ಕೇರಿ—ಉತ್ತರ ಅಕ್ಷಾಂಶ ೧೬,೦೫', ಪೂರ್ವರೇಖಾಂಶ ೭೪, ೩೮', ಬೆಳಗಾವಿಯ ಉತ್ತರಕ್ಕೆ ೪೦ ಮೈಲಿನ ಮೇಲೆ; ಜನಸಂಖ್ಯೆ (೧೧) ೫೬೯೯. ತಾಲೂಕಿನ ಮುಖ್ಯ ಗ್ರಾಮವು. ತಾಲೂಕ ಕಚೇರಿ, ಮುನಸೀಫ ಕಚೇರಿ, ಮುಂತಾದ ತಾಲೂಕಿನ ಕಚೇರಿಗಳೂ ಐದು ಶಾಲೆಗಳೂ ಉಂಟು. ಇಲ್ಲಿ ಅಕ್ಕಿ, ಬೆಲ್ಲ, ಮೆಣಶಿನಕಾಯಿ, ತಂಬಾಕ, ಕಿರಾಣಿ, ಮುಂತಾದವುಗಳ ವ್ಯಾಪಾರವು ಬಳಿತಾಗಿ ನಡಿಯುತ್ತದೆ. ಗುರುವಾರ ಸಂತೆಯಾಗುತ್ತದೆ. ಧಡೋತಿಯ ಬಟ್ಟೆಗಳೂ, ಕಂಬಳಿಗಳೂ, ತಾಮ್ರ ಹಿತ್ತಾಳಿಗಳ ಪಾತ್ರೆಗಳೂ ಹುಟ್ಟುತ್ತವೆ. ಇಲ್ಲಿಯ ದ್ರಾಕ್ಷಿದ ಹಣ್ಣು ಪ್ರಸಿದ್ಧ. ಊರ ಹೊರಗೆ ಸಣ್ಣದೊಂದು ಮಣ್ಣಿನ ಕೋಟೆಯುಂಟು. ಇಂಗ್ಲಿಷರ ಅಮಲಿನ ಆರಂಭದಲ್ಲಿ ಈ ಊರು ಕೊಲ್ಲಾಪುರದ ರಾಜ್ಯಕ್ಕೆ ಸೇರಿತ್ತು. ಸನ್ ೧೮೮೦ರಲ್ಲಿ ಈ ಊರು ತಕ್ಕ ಮಟ್ಟಿಗೆ ಪ್ರಸಿದ್ಧವಿತ್ತೆಂದು ಬಬ್ಬ ಪ್ರಯಾಣಸ್ಥನು ಬರಿದಿಟ್ಟಿದ್ದಾನೆ.

DEPARTMENTAL NOTICE.

ನೋಟೀಸುಗಳು.

ಜಾ. ನಂಬರು ೧೬೦.

ಮೆ॥ ಕ್ಯೂರೇಟರ ಗವರ್ನಮೆಂಟ ಸೆಂಟ್ರಲ್ ಬುಕ್ ಡಿಪೋ ಮುಂಬಯಿ ಇವರಿಂದ ತಿಳಿಸಲ್ಪಡುವದೇನಂದರೆ—ಮಾಹೆ ಜುಲಾಯಿ ೧೮೯೫ ಇಸ್ವಿಯ ಕೊನೆಯ ವರೆಗೆ

ಕೆಳಗೆ ಬರೆದ ಪುಸ್ತಕಗಳು ಮುದ್ರಿತವಾಗಿ ಮಾರಾಟಕ್ಕೆ ಸಿದ್ಧವಾಗಿವೆ:—

ಪುಸ್ತಕಗಳು.	ಸಂಸ್ಕೃತ.	ಬೆಲೆ. ರೂ.	ಆ.	ಪೈ.
೧. ಪಂಡಿತಕೃತ ಅಥರ್ವವೇದ ಭಾಗ	೧ನೇ೦೦	೦	೦	
೧. ಸದರ ಸದರ	ಭಾಗ ೬ನೇ	೧೦	೦	೦
ಮರಾಠಿ.				
೧. ಬಾಲಬೋಧ ಮೊದಲನೇ ಪುಸ್ತಕ		೦	೧	೦
೧. ಉಜಳಣಿಯ ಪುಸ್ತಕ		೦	೧	೦
೧. ಹಿಂದುಸ್ಥಾನದ ನಕಾಶೆ		೪	೧೦	೦
ಕನ್ನಡ.				
೧. ಅಂಕಲಿಪಿ		೦	೧	೬
೧. ಎರಡನೇ ಪುಸ್ತಕ		೦	೧	೬
೧. ವೇಟು ಹೆಲ್ಥ (ಆರೋಗ್ಯಶಾಸ್ತ್ರ)		೦	೬	೯
೧. ಫೌಲರ ಸಾಹೇಬರ ಶಿಕ್ಷಣ ಪದ್ಧತಿ		೦	೧೧	೦
೧. ಕರ್ನಾಟಕ ಇತಿಹಾಸ		೦	೬	೦

ಮುಂಬಯಿ,
ತಾ॥ ೩೧-೩-೯೫

G. B. Nene.
ಕ್ಯೂರೇಟರ ಗವರ್ನ ಮೆಂಟ,
ಸೆಂಟ್ರಲ್ ಬು. ಡಿ. ಮುಂಬಯಿ.

II.

ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು ಬರುವ ನವಂಬರ ತಿಂಗಳ ೪ನೇ ತಾರೀಖಿನ ದಿವಸ (ಕಾರ್ತಿಕ ವದ್ಯ ೧) ಕನ್ನಡ ೬ನೇ ಇಯತ್ತೆಯಂತೆ ಆಗುವದು. ಪರೀಕ್ಷೆಗೆ ಬರುವವರು ೬ನೇ ಅಥವಾ ೫ನೇ ಗ್ರೇಡ ಮುಲ್ಕೀ ಸರ್ಟೀಫಿಕೀಟ ಪಡೆದವರೂ ಇಲ್ಲವೆ ಯು ನಿವ್ಹರ್ಸಿಟಿ ಪರೀಕ್ಷೆಯಲ್ಲಿ ಪಾಸಾದವರೂ (ಅಂದರೆ ಫಾಯ ನಲ್, ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗಳನ್ನು ಕೊಟ್ಟವರು)

ಸಶಕ್ತರೂ, ವ್ಯಂಗರಹಿತರೂ, ತಕ್ಕಮಟ್ಟಿಗೆ ಎತ್ತರದ ಮಂಥವರೂ, ಪದಿನೇಳರ ಮೇಲೆ ಇಪ್ಪತ್ತೆರಡರ ಒಳಗ ವಯಸ್ಸುಳ್ಳವರೂ ಇರಬೇಕು, ಮತ್ತು ವಯಸ್ಸಿನ ದಾಖಲೆಯನ್ನೂ ಮುಲ್ಕೀ ಸರ್ಟಿಫಿಕೇಟನ್ನೂ ಸಂಗಡ ತೆಗಿದು ಕೊಂಡು ಮೇಲ್ಕಾಣಿಸಿರುವ ಮುದ್ದತಿನ ಒಳಗಾಗಿ ನಮ್ಮ ಕಡೆಗೆ ಬಂದು ಹಾಜರ ಆಗಬೇಕು. ಪರೀಕ್ಷೆಗೆ ಬರುವವರು ಅಸಿಸ್ಟಂಟರೇ ಇರಲಿ, ಉಮೇದವಾರರೇ ಇರಲಿ, ಅವರಲ್ಲಿ ಉತ್ತಮ ರೀತಿಯಿಂದ ಪಾಸಾದ ೬೦ ಜನರನ್ನು ಪಗಾರಿ ವಿದ್ಯಾರ್ಥಿಗಳಾಗಿ ತೆಗಿದುಕೊಳ್ಳುವೆವು.

೨. ಸದರಿನೇ ಇಸವಿಯಲ್ಲಿ ಆಗುವ ಮುಲ್ಕೀ ಪರೀಕ್ಷೆಗೆ ಕೂಡುವ ಉಮೇದವಾರರು ಸಹ ಈ ಪರೀಕ್ಷೆಗೆ ಭರಬಹುದು; ಆವರೆ ಅವರು ಮುಲ್ಕೀ ಪರೀಕ್ಷೆಯಲ್ಲಿ ನಾ ಪಾಸಾದರೆ ಅವರನ್ನು ಕಾಲೇಜದಲ್ಲಿ ತೆಗಿದುಕೊಳ್ಳಲಿಕ್ಕಿಲ್ಲ.

೩. ಪರೀಕ್ಷೆಗೆ ಬರುವ ಎಲ್ಲ ಉಮೇದವಾರರು ತಮ್ಮ ಅಭ್ಯಾಸದ ಪುಸ್ತಕಗಳನ್ನೂ ಹಾಸಿಕೆ ಹೊದಿಕೆ ಮುಂತಾದ ಬೇಕಾಗುವ ಸಾಮಾನುಗಳನ್ನೂ ತೆಗಿದುಕೊಂಡು ಬರಬೇಕು. ಕಾಲೇಜವಲ್ಲಿ ಸೇರಿಸಿಕೊಳ್ಳಲ್ಪಟ್ಟವರು ದಸ್ತೈವಜನ್ನು ಬರಕೊಡಬೇಕಾಗುತ್ತದಷ್ಟೇ, ಅದಕ್ಕೆ ೧೫೦ ರೂಪಾಯಿಗಳ ಇಬ್ಬರು ಜಾಮೀನದಾರರು ಬೇಕಾಗುವರು. ಅವರನ್ನು ಸಹ ಗೊತ್ತು ಮಾಡಿಕೊಂಡು ಬರಬೇಕು. ಅಂದರೆ ಕಾಲೇಜದಲ್ಲಿ ಸೇರಿಸಿಕೊಂಡ ಕೂಡಲೆ ಕಾಲೇಜದ ನಿಯಮಗಳಿಗನುಸರಿಸಿ ಕರಾರ ಪತ್ರವನ್ನು ಬರಕೊಡಲಿಕ್ಕೆ ಅನುಕೂಲವಾಗುವದು. ಕಾಲೇಜದಲ್ಲಿ ನಿಂತವರು ಕಾಲೇಜದ ನಿಯಮದಂತೆ ಅಡ್ವಾನ್ಸು, ೬ ರೂಪಾಯಿ ಸ್ಟ್ಯಾಂಪಿಗಾಗಿ ೧॥ ರೂಪಾಯಿ ಇಷ್ಟು ಹಣವನ್ನು ಕೊಡಬೇಕಾಗುವದು. ಈ

ಹಣವನ್ನೂ ತಮ್ಮ ಖರ್ಚು ವೆಚ್ಚಕ್ಕಾಗಿ ಅವಶ್ಯವಾ
ಹಣವನ್ನೂ ತೆಗೆದುಕೊಂಡು ಬರಬೇಕು.

ಧಾರವಾಡ ಟ್ರೇ. ಕಾ.
ತಾ. ೪ ಅಗಷ್ಟ ೧೮೯೫. } RAOJI B. KARANDIKAR,
ಪ್ರಿನ್ಸಿಪಾಲ.

CORRESPONDENCE.

ಪತ್ರವ್ಯವಹಾರ.

ರಾವಸಾಹೇಬ ಕನ್ನಡ ಶಾಲಾ ಪತ್ರಕದ ದೊರೆಗಳಃ
ರಡಿದಾವರೆಗಳ್ಗೆ-ಸಾಷ್ಟಾಂಗ ನಮಸ್ಕಾರ ವಿನಂತಿ ಅಯ್ಯಾ
ನಾನು ನಾಮುವನ್ನು ಕಲಿಸುವದರ ಸಂಬಂಧವಾಗಿ ತಮ್ಮ
ಕಡೆ ಬರಕೊಂಡಿದ್ದೆನು; ತಾವು ತಮ್ಮ ಪತ್ರದೊಳದಕ್ಕನ
ವುಗೊಟ್ಟದ್ದರಿಂದ ಮಹದಾನಂದ ಸ್ವಾಂತನಾಗಿ ಪುನ
ತಮ್ಮ ಕಡೆ ಬಂದಿರುವೆನು, ಕರುಣವಿರಲಿ.

ಸರ್ವನಾಮ.

ಪರೀಕ್ಷೆಯ ಪ್ರಶ್ನೆ.

ಗುರು—ನಾಮುವೆಂದರೇನು?

ವಿ—ಯಾವದೊಂದು ಒಡವೆಯು ಹೆಸರು ನಾಮುವೆನಿಸು
ವದು.

ಗು—ಉದಾಹರಣೆ.

ವಿ—ಕಲ್ಲು, ರಾಮು, ರಂಗಿ, ಗಿಡ, ಮನೆ, ಒಕ್ಕಲಿಗ,
ತಾಯಿ, ತಂದೆ, ಮುಂಗಗಳು ಮು.

ಕಲಿಸುವ ಪ್ರಶ್ನೆ.

ಗು—(ರಾಮುನು ರಂಗಿಗೆ ಕಲ್ಲು ಬಿಗಿದನು; ಅದು ಅವಳ
ಕಾಲಿಗೆ ತಾಕಿತ್ತು. ಈ ವಾಕ್ಯಗಳನ್ನು ಕರೆ ಹಲ
ಗೆಯ ಮೇಲೆ ಬರೆದು) ಈ ವಾಕ್ಯಗಳಲ್ಲಿ ರಾಮು
ನೇನು ಮಾಡಿದನು?

ವಿ—ರಂಗಿಗೆ ಕಲ್ಲು ಬಗೆದನು.

ಗು—ಅದರಿಂದ ಏನಾಯಿತು?

ವಿ—ಅದು ಅವಳ ಕಾಲಿಗೆ ತಾಕಿತು.

ಗು—ಅದು ಅಂದರೆ ಯಾವದು?

ವಿ—ಕಲ್ಲು.

ಗು—ಅವಳ ಅಂದರೆ ಯಾವಳ?

ವಿ—ರಂಗಿಯ.

ಗು—ಹಾಗಾದರೆ ಅದು ಈ ಶಬ್ದವು ಯಾವ ಶಬ್ದದ ಬದಲಾಗಿ ಬಂದಂತಾಯಿತು?

ವಿ—ಕಲ್ಲು ಈ ಶಬ್ದದ ಬದಲಾಗಿ ಬಂದದೆ.

ಗು—ಅವಳ ಶಬ್ದವು ಯಾವ ಶಬ್ದದ ಬದಲಾಗಿ ಬಂದದೆ?

ವಿ—ರಂಗಿಯ ಈ ಶಬ್ದದ ಬದಲಾಗಿ ಬಂದದೆ.

ಗು—ಕಲ್ಲು ಮತ್ತು ರಂಗಿ ಈ ಶಬ್ದಗಳು ವ್ಯಾಕರಣದಲ್ಲಿ ಏನಾಗುತ್ತವೆ?

ವಿ—ನಾಮಗಳಾಗುತ್ತವೆ.

ಗು—(ಬುಬ್ಬ ಬುಕ್ಕಲಿಗನಿದ್ದನು; ಅವನು ಬಲು ಸಿಟ್ಟಿನವನಿದ್ದನು. ಈ ವಾಕ್ಯಗಳನ್ನು ಕರಿ ಹಲಗೆಯ ಮೇಲೆ ಬರೆದು, ಪುನಃ ವಿದ್ಯಾರ್ಥಿಯಿಂದ ಓದಿಸಿ) ಈ ವಾಕ್ಯಗಳಲ್ಲಿ ಅವನು ಅಂದರೆ ಯಾರು?

ವಿ—ಬುಕ್ಕಲಿಗನು.

ಗು—ಬುಕ್ಕಲಿಗನ ಬದಲು ಯಾವ ಶಬ್ದವನ್ನು ಉಪಯೋಗ ಮಾಡಿದಂತಾಯಿತು?

ವಿ—ಅವನು ಈ ಶಬ್ದವನ್ನು.

ಗು—ಬುಕ್ಕಲಿಗನು ಈ ಶಬ್ದವು ಏನಾಗುತ್ತದೆ?

ವಿ—ನಾಮವಾಗುತ್ತದೆ.

ವಿ—(ತಂದೆಯು ಮಗಳಿಗೆ ಹೇಳಿದ್ದೀನೆಂದರೆ—ಮಗಳೇ! ನಾನು ಹೇಳುವ ಮಾತುಗಳನ್ನೆಲ್ಲ ನೀನು ಕೇಳುವಿಯಾ? ಇದನ್ನು ಬರೆದು ಪುನಃ ವಿದ್ಯಾರ್ಥಿಗಳಿಂದ ಓದಿಸಿ) ಈ ವಾಕ್ಯದಲ್ಲಿ ಹೇಳುವವರ್ಯಾರು?

ವಿ—ತಂದೆಯು.

ಗು—ಕೇಳುವರಾರು?

ವಿ—ಮಗಳು.

ಗು—ತಂದೆಯು ಏನೆಂದು ಹೇಳುವನು?

ವಿ—ಮಗಳೇ ನಾನು ಹೇಳುವ ಮಾತುಗಳನ್ನೆಲ್ಲ ನೀನು ಕೇಳುವಿಯಾ? ಅಂದನು.

ಗು—ನಾನು ಅಂದರೆ ಇಲ್ಲಿ ಯಾರು?

ವಿ—ತಂದೆಯು.

ಗು—ನೀನು ಅಂದರೆ ಯಾರು?

ವಿ—ಮಗಳು.

ಗು—ತಂದೆ ಮತ್ತು ಮಗಳು ಈ ಶಬ್ದಗಳ ಬದಲಾಗಿ ಯಾವ ಶಬ್ದಗಳು ಉಪಯೋಗಿಸಿರುತ್ತವೆ?

ವಿ—ನಾನು ನೀನು ಈ ಶಬ್ದಗಳು.

ಗು—ತಂದೆಯು ಮಗಳು ಈ ಶಬ್ದಗಳು ಏನಾಗುತ್ತವೆ?

ವಿ—ನಾಮಗಳಾಗುತ್ತವೆ.

ಗು—ಹಾಗಾದರೆ ತಂದೆ, ಮಗಳು ಈ ನಾಮಗಳ ಬದಲಾಗಿ, ನಾನು ನೀನು ಈ ಶಬ್ದಗಳು ಬಂದಿರುತ್ತವೆ. ಅಂದ ಬಳಿಕ ನಮಗೆ ವಾಕ್ಯಗಳಲ್ಲಿ ನಾಮದ ಬದಲಾಗಿ ಬೇರೆ ಶಬ್ದಗಳನ್ನು ಉಪಯೋಗ ಮಾಡಲಿಕ್ಕೆ ಬರುತ್ತದೊ? ಇಲ್ಲೊ?

ವಿ—ಬರುತ್ತದೆ.

ಗು—(ಹಿಂದಿನ ಎಲ್ಲಾ ವಾಕ್ಯಗಳನ್ನು ಕ್ರಮವಾಗಿ ತಕ್ಕೊಂಡು ಆ ವಾಕ್ಯಗಳೊಳಗಿನ ನಾಮಗಳನ್ನು ಅವುಗಳಿಗೆ ಬದಲಾಗಿ ಬಂದ ಬೇರೆ ಶಬ್ದಗಳನ್ನು ಕೇಳಬೇಕು ಎಂತೆನೆ)

ಗು—ರಾಮನು ರಂಗಿಗೆ ಕಲ್ಲು ಬಗೆದನು ಅದು ಅವಳ ಕಾಲಿಗೆ ತಾಕಿತು. ಈ ವಾಕ್ಯಗಳಲ್ಲಿ ಕಲ್ಲು ಮತ್ತು ರಂಗಿ ಈ ಎರಡು ನಾಮಗಳ ಬದಲಾಗಿ ಉಪಯೋಗಿಸಿದ ಶಬ್ದಗಳು ಯಾವವು?

ವಿ—ಅದು ಮತ್ತು ಅವಳು.

ಗು—(ಇದರಂತೆ ಎನೇ ಉದಾಹರಣೆಯನ್ನು ಬಿದಿಸಿ) ಬಕ್ಕಲಿಗನು ಈ ನಾಮದ ಬದಲಾಗಿ ಬಂದ ಶಬ್ದ ಯಾವದು?

ವಿ—ಅವನು.

ಗು—(ಇನೇ ಉದಾಹರಣೆಯೊಳಗಿನ ನಾನು ನೀನು ಎಂಬ ಶಬ್ದಗಳಾದರೂ ತಂದೆ ಮಗಳೆಂಬ ನಾಮಗಳ ಬದಲಾಗಿ ಬಂದ ಶಬ್ದಗಳೆಂದು ಸೂಚಕ ಪ್ರಶ್ನೆಗಳಿಂದ ಹೊರಡಿಸಿ) ಅದು, ಅವಳು ಅವನು, ನಾನು, ನೀನು ಈ ಶಬ್ದಗಳು ಯಾತರ ಬದಲಾಗಿ ಬಂದಿರುತ್ತವೆ?

ವಿ—ನಾಮಗಳ ಬದಲಾಗಿ ಬಂದಿರುತ್ತವೆ.

ಗು—ಹಾಗಾದರೆ ವಾಕ್ಯಗಳಲ್ಲಿ ನಾಮಗಳ ಬದಲಾಗಿ ಬಂದ ಶಬ್ದಗಳಿಗೆ ಸರ್ವನಾಮಗಳೆನ್ನುತ್ತಾರೆ.

ಗು—(ಅಂದ ಬಳಿಕ ಆದು, ಅವಳು ಮುಂತಾದ ಶಬ್ದಗಳು ಏನಾಗುತ್ತವೆ?

ವಿ—ಸರ್ವನಾಮಗಳಾಗುತ್ತವೆ.

ಗು—ಸರ್ವನಾಮವೆಂದರೇನು?

ವಿ—ವಾಕ್ಯಗಳಲ್ಲಿ ನಾಮ ಪದಗಳ ಬದಲಾಗಿ ಬರುವ ಶಬ್ದಗಳಿಗೆ ಸರ್ವನಾಮಗಳೆನ್ನುತ್ತಾರೆ.

ಗು—(ಇಷ್ಟರ ಮೇಲಿಂದ ಮೇಲಿನ ಸರ್ವನಾಮಗಳ ಬಹು ವಚನಗಳನ್ನೂ ಅವುಗಳ ಭೇದಗಳನ್ನೂ ಸಾಧಾರಣವಾಗಿ ತಿಳಿಸಿ ಕೊಡಬೇಕು. ಆದರೆ ನಾಲ್ಕನೆಯ ಈಯುತ್ತಿಯವರಿಗೆ ಮಾತ್ರ ಸರ್ವನಾಮಗಳೊಳಗಿನ ಭೇದಗಳನ್ನೆಲ್ಲ ಅಂದರೆ ಸರ್ವನಾಮಗಳಲ್ಲಿ ಉತ್ತಮ, ಮಧ್ಯಮ, ಪ್ರಥಮ (ಪ್ರಥಮ, ದ್ವಿತೀಯ, ತೃತೀಯ) ಪುರುಷಗಳೆಂಬ ೩ ಭೇದಗಳಿರುತ್ತವೆ, ಪ್ರಥಮ ಪುರುಷದಲ್ಲಿ ಪ್ರಶ್ನಾರ್ಥಕ, ದರ್ಶಕ, ಅತ್ಯಾರ್ಥಕಗಳೆಂಬ ೩ ಬಳಭೇದಗಳಿರುತ್ತವೆಂಬವನ್ನು ಸೋದಾಹರಣವಾಗಿ ತಿಳಿಸಿ ಕೊಡಬೇಕು. ಮತ್ತು ವಾಕ್ಯಗಳಲ್ಲಿ ಸರ್ವನಾಮಗಳನ್ನು ಪಯೋಗಿಸುವ ಕಾರಣವನ್ನಾದರೂ ತಿಳಿಸಿಕೊಡಬೇಕು.)

ಅಯ್ಯಾ! ತಮ್ಮನ್ನಿನ್ನೊಮ್ಮೆ ಕಂಡುಕೊಳ್ಳಲ್ಬೇಳ್ಕು ಸೊಂದಾಶಿವತವೊಳ್ಗೋದುಗಂ.

ಹುಬ್ಬಳ್ಳಿ ತಾ. ಕುಸುಗಲ್ಲ } ಕುಲಕರ್ಣಿ ಸೋ. ಶಿವರು
ಕನ್ನಡ ಸಾಲೆ ತಾ. ೦೦।೪।೧೯೫೫ } ಪ್ರಪ್ಪಾ

DHARWAR TRAINING COLLEGE CERTIFICATE EXAMINATION.—1894.

ಕಾಲೇಜಿದ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನಗಳು.

೧ನೇ ವರ್ಷದ ವರ್ಗ.

ಅಂಕಗಣಿತ

(ರೀತಿಯು ಹೊರ್ತು ಬರೇ ಉತ್ತರಕ್ಕೆ ಬೆಲೆ ಇಲ್ಲ.)

(ಬಲಕ್ಕೆ ಬರಿದ ಅಂಕಿಗಳು ಪ್ರಶ್ನಗಳ ಪೂರ್ಣ ಗುಣಗಳು.)

೧. ಯಾವದಾದರೊಂದು ಸಂಖ್ಯೆಕ್ಕೆ ೭, ೧೧ ಮತ್ತು ೧೩ ರಿಂದ ಭಾಗಿಸಿದರೆ ಎಷ್ಟು ಬಾಕಿ ಉಳಿಯುವದೆಂಬದನ್ನು ಪ್ರತ್ಯಕ್ಷ ಭಾಗಾಕಾರ ಮಾಡದೆ ತಿಳುಕೊಳ್ಳುವ ರೀತಿಗಳನ್ನು ಬರೆದು ಅವುಗಳ ಉಪಪತ್ತಿಯನ್ನು ಹೇಳಿರಿ.

೨. ದಶಾಂಶ ಅಪೂರ್ಣಾಂಕದ ಸಂಕ್ಷಿಪ್ತ ಭಾಗಾಕಾರದ ರೀತಿಯನ್ನು ಬರೆದು ಆ ರೀತಿಯಿಂದ .೬೪೯೧ ÷ ೧.೫೬೫ ಈ ಭಾಗಾಕಾರವನ್ನು ಮಾಡಿ ತೋರಿಸಿರಿ.

೩. (ಅ) ವಿಭಾಜ್ಯ ಮತ್ತು ಅವಿಭಾಜ್ಯ ಸಂಖ್ಯೆಗಳೆಂದರೇನು? ಕೆಳಗಿನ ಸಂಖ್ಯೆಗಳ ಅವಿಭಾಜ್ಯ ಗುಣ್ಯ ಗುಣಕಗಳನ್ನು ತೆಗಿಯಿರಿ. ೧೩೨೯, ೧೪೪೪.

(ಆ) ಮೂರು ಪರಸ್ಪರ ಅವಿಭಾಜ್ಯ ಸಂಖ್ಯೆಗಳಲ್ಲಿ ಮೊದಲನೇ ಎರಡು ಸಂಖ್ಯೆಗಳ ಗುಣಾಕಾರವು ೯೧ ಮತ್ತು ಕಡೇ ಎರಡು ಸಂಖ್ಯೆಗಳ ಗುಣಾಕಾರವು ೫೫ ಇದ್ದರೆ ಆ ಸಂಖ್ಯೆಗಳು ಯಾವವು?

೪. $\frac{೧+\frac{೩}{೫}}{೨\frac{೪}{೫}-\frac{೩}{೫}} + \left\{ ೧ + \frac{\frac{೪}{೫}}{೯ - \frac{೩}{೧ - \frac{೪}{೫}}} \right\}$ ಇದಕ್ಕೆ ದಶಾಂಶ ಅಪೂರ್ಣಾಂಕದ ರೂಪ ಕೊಡು ಮತ್ತು $\frac{೩.೪೦೭ \times ೪೦.೬}{೨.೪೩೪}$ ಇದಕ್ಕೆ ಸರಳ ವ್ಯವಹಾರಿ ಅಪೂರ್ಣಾಂಕದ ರೂಪವನ್ನು ಕೊಡು.

೫. ಎರಡು ಸಮಾನ ಪಾತ್ರೆಗಳಿದ್ದು ಒಂದರಲ್ಲಿ ೩:೫ ಈ ಪ್ರಮಾಣದಿಂದ, ಮತ್ತೊಂದರಲ್ಲಿ ೫:೩ ಈ ಪ್ರಮಾಣದಿಂದ ನೀರು ಮತ್ತು ಹಾಲು ತುಂಬಿರುತ್ತವೆ. ಆದರೆ ಆ ಎರಡೂ ಪಾತ್ರೆಗಳೊಳಗಿನ ಮಿಶ್ರಣವನ್ನು ಕೂಡಿಸಿದರೆ ಅದರಲ್ಲಿ ಹಾಲು ಮತ್ತು ನೀರು ಇವುಗಳ ಪ್ರಮಾಣ ಹ್ಯಾಗೆ ಆಗುವದು?

೬. ಒಬ್ಬ ಹುಡುಗನು ಕೆಲವು ಕಾಗದವನ್ನು ೧ ರೂ. ೧೦ ಅ. ಕ್ಕೆ ಗಡ್ಡಿಯಂತೆ ಕೊಂಡನು. ಅವನು ಕೊಂಡ ಕಾಗದಕ್ಕಿಂತ ೬ ದಸ್ತುಗಳು ಹೆಚ್ಚು ಕಾಗದ ಅಷ್ಟೇ ಹಣಕ್ಕೆ ಬಂದಿದ್ದರೆ ಅವನಿಗೆ ೧ ರೂ. ೯ ಆಣೆಕ್ಕೆ ಗಡ್ಡಿಯಂತೆ ಬೀಳುತ್ತಿತ್ತು. ಆದರೆ ಅವನು ಎಷ್ಟು ಕಾಗದ ಕೊಂಡಿದ್ದನು?

೭ ಒಬ್ಬ ವ್ಯಾಪಾರಿಯು ೪೦ ಪೌಂಡ ಚಹ, ದರ ಪೌಂಡಿಗೆ ೪ ಶಿ. ೬ ಪೇ. ನಂತೆ ಕೊಂಡು ಅದರಲ್ಲಿ ಕಡಿಮೆ ದರದ ಚಹ ಕೆಲವು ಕೂಡಿಸಿ ಆ ಮಿಶ್ರಣವನ್ನು ೪ ಶಿ. ೪ ಪೇನಸಿಗೆ ಪೌಂಡಿನಂತೆ ಮಾರಲು ೫ ಶಿ. ೬ ಪೇ. ಲಾಭವಾಯಿತು. ಕಡಿಮೆ ದರದ ಚಹ ೭೦ ಪೌಂಡು ಕಡಿಮೆ ಕೂಡಿಸಿದ್ದರೆ ಅವನಿಗೆ ಅಸಲು ಆಗುತ್ತಿತ್ತು. ಆದರೆ ಕಡಿಮೆ ದರದ ಚಹ ಯಾವ ದರದ್ದು ಎಷ್ಟು ಕೂಡಿಸಿದ್ದನು?

೮. ಒಬ್ಬನು ತನ್ನ ಊರಿಂದ ಎರಡನೇ ಊರಿಗೆ ತಾಸಿಗೆ ೩ ಮೈಲಿನಂತೆ ನಡೆಯುತ್ತ ಹೋಗುತ್ತಾನೆ. ಅಲ್ಲಿ ೩ ಂದು ತಾಸಿನ ವರೆಗೆ ಕೆಲಸ ಮಾಡಿ, ಕುದುರೇ ಮೇಲಿಂದ ದರ ತಾಸಿಗೆ ೫ ಮೈಲಿನಂತೆ ತಿರಿಗಿ ತನ್ನ ಊರಿಗೆ ಬರುತ್ತಾನೆ. ಆದರೆ ಅವನಿಗೆ ಹೊರಟ ವೇಳೆಯಿಂದ ತಿರಿಗಿ ಬರುವ ತನಕ ೮ ತಾಸು ೪೫ ನಿನಿಟು ಆತ್ತಿತು. ಆದರೆ ಎರಡೂ ಊರುಗಳ ನಡುವೆ ಅಂತರವೆಷ್ಟು

ಶಾಲಾಪತ್ರಕ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ ।
ಉಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆಸುಗುಣಂ ತೋರಲ್ಕೆಕೈಕೊಂಬುದೈ ।
ಜಯಿಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೩ಂ.] ಅಕ್ಟೋಬರ ೧೮೮೯ಇ. [ಸಂಚಿಕೆ ೧೦.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಜ್ಞಾನ ಸಂಪಾದನಕ್ಕೆ ಹಲವು ಗ್ರಂಥಗಳನ್ನು ಓದುವದೂ ಸಭೆಗಳಿಗೆ ಹೋಗುವದೂ ಇವೆರಡು ಮೇಲಾದ ಸಾಧನಗಳಾಗಿರುತ್ತವೆ. ಎರಡನೇ ಸಾಧನದಿಂದ ಪ್ರಯೋಜನವಾಗಬೇಕಾದರೆ ಕೆಲವು ನಿಯಮಗಳನ್ನು ಲಕ್ಷದಲ್ಲಿ ಇಡಲಿಕ್ಕೆ ಬೇಕು. ಅವು ಯಾವವೆಂದರೆ:—

೧. ಸಭೆಯು ಕೂಡುವದಕ್ಕೆ ಗೊತ್ತುಪಡಿಸಿದ ವೇಳೆಗಿಂತಲೂ ಸ್ವಲ್ಪಾದರೂ ಮುಂಚಿತವಾಗಿಯೇ ಸಭೆಗೆ ಹೋಗಬೇಕು. ಅದರಿಂದ ಹಿರಿ ಸಂಗತಿಗಳನ್ನು ಸಾಧಿಸಿದಂತಾಗುವದು. ತಮಗೆ ಕೂಡುವದಕ್ಕೆ ತಮ್ಮ ಮನೆಸ್ಸಿಗೆ ತಕ್ಕಂಥ ಸ್ಥಳವು ದೊರಿಯುತ್ತದೆ. ತಮ್ಮ ಸಲುವಾಗಿ ಬೇರೆಯವರು ದಾರೀ ನೋಡಬೇಕಾಗುವದಿಲ್ಲ. ಗೊತ್ತು ಪಡಿಸಿದ ವೇಳೆಗೆ ಕೆಲಸ ಮಾಡುವ ರೂಢಿಯು ಬೀಳುತ್ತದೆ. ಮತ್ತು ಸಭೆಯಲ್ಲಿ ಪ್ರಾರಂಭದಿಂದ ಕಡೆತನಕ ನಡಿಯುವ ಎಲ್ಲ ವಿಷಯಗಳು ಚೆನ್ನಾಗಿ ತಿಳಿಯುತ್ತವೆ. ಆವಕಾರಣ ಸಭೆಗೆ ಮುಂ

ಚಿತವಾಗಿ ಹೋಗುವದು ಹೆಚ್ಚು ಹಿತಕರವಾದ ಸಂಗತಿಯು, ಬಂದು ವೇಳೆ ಕೆಲವೊಂದು ಅನಿವಾರ್ಯ ಅಡಚಣಿಗಾಗಿ ಸಭೆಗೆ ಹೋಗಲಿಕ್ಕೆ ಸ್ವಲ್ಪ ತಡವಾದರೆ ತಮ್ಮ ಕಡೆಗೆ ಯಾರ ಲಕ್ಷವು ಹೋಗದಂತೆ ಮೆಲ್ಲಗೆ ಸಭಾಸ್ಥಾನದಲ್ಲಿ ಹೋಗಿ ಕೂಡ್ರಬೇಕು. ಹೀಗೆ ಹೋಗಿ ಕೂಡ್ರುವದೊಂದು ಪ್ರಕಾರದ ಶಿಕ್ಷೆಯೇ ಸರಿ. ಅದನ್ನು ತಾವು ತಡಮಾಡಿ ಹೋದ ಬಗ್ಗೆ ಅನುಭೋಗಿಸಲೇ ಬೇಕು.

೨. ಸಭಾ ಸ್ಥಳದಲ್ಲಿ ತಂತಮ್ಮ ಯೋಗ್ಯತೆಯನ್ನು ಕುರಿತು ಪ್ರತಿಯೊಬ್ಬ ಮನುಷ್ಯನ ತಿಳುವಳಿಕೆಯು ಸ್ವಲ್ಪ ತಪ್ಪಿನದಿರುತ್ತದೆ. ಪ್ರತಿಯೊಬ್ಬನು ತಾನು ದೊಡ್ಡ ಯೋಗ್ಯತೆಯುವನೆಂದು ತಿಳಿಯುತ್ತಾನೆ. ಆದ ಕಾರಣ ತಾವು ಕೂತ ಸ್ಥಳದಿಂದ ತಮ್ಮನ್ನು ಯಾರೂ ಎಬ್ಬಿಸದಂತೆ ತಾವೇ ಮೊದಲು ವಿಚಾರದಿಂದ ಕೂಡ್ರುವದು ವಿಹಿತವಾದ್ದು. ಅದೇ ಮೇರೆಗೆ ತಾವು ತಮ್ಮ ಸ್ಥಳದಲ್ಲಿ ಸ್ವಸ್ಥವಾಗಿ ಕೂಡ್ರುವದು ಒಳ್ಳೇದು. ಮಾತಾಡಿ ಅಥವಾ ಗಲಿಬಿಲಿ ಮಾಡಿ ಬೇರೆಯವರ ಉಪಹಾಸಕ್ಕೆ ಗುರಿಯಾಗುವದು ಸರಿಯಲ್ಲ.

೩. ಸಭೆಯಲ್ಲಿ ನಡೆದ ವಿಷಯದಬಗ್ಗೆ ಉಂಟಾದ ತಮ್ಮ ಅಭಿಪ್ರಾಯವು ಬೇರೆ ಯಾರ ಮುಖದಿಂದಲೂ ಹೊರಬೀಳದಿದ್ದರೆ, ಉಳಿದವರ ಭಾಷಣವು ಮುಗಿದನಂತರ ಸವಡು ನೋಡಿಕೊಂಡು ತಾವು ಮೆಲ್ಲಗೆ ಎದ್ದು ನಿಂತು ಮಾತಾಡಿ ತೋರಿಸಬೇಕು. ಭಾಷೆಯು ಸರಳವಾಗಿರಬೇಕು. ಮಾತಾಡುವಾಗ್ಗೆ ತಾವು ಬುದ್ಧಿಪುರಃಸರ ಬೇರೆಯವರ ಅಭಿಪ್ರಾಯದ ವಿರುದ್ಧವಾಗಿ ಮಾತಾಡಬಾರದು. ಇನ್ನು ಸಹಜವಾಗಿ ತಮ್ಮ ಅಭಿಪ್ರಾಯವು ಬೇರೆಯವರ ಅಭಿಪ್ರಾಯಕ್ಕೆ ವಿರುದ್ಧವಾಗಿದ್ದರೆ ಅದನ್ನು ನಮ್ರತೆಯಿಂದ ಎರಡನೇಯವರ ಮನಸ್ಸು ನೋಯದಂತೆ ಅಡಿ ತೋರಿಸಬೇಕು.

ಅವರೆ ಅದರಲ್ಲಿ ತಮ್ಮ ಮತವನ್ನು ಮಾತ್ರ ತಿಳಿಸುವ ಉದ್ದೇಶವಿರಬೇಕಲ್ಲದೆ ಬೇರೆಯವರನ್ನು ಅಪಹಾಸಿಸುವ ಹೇತುವು ಕಿಂಚಿತ್ತಾದರೂ ಇರಬಾರದು. ಇದಲ್ಲದೆ ಭಾಷೆಯು ಸಭ್ಯವಾವದ್ದು ಕೇಳುವವರಿಗೆ ಸುಲಭವಾಗಿ ತಿಳಿಯುವಂಥಾದು ಇರಬೇಕು. ಅದರಲ್ಲಿ ವಿನೋದಾಂಶಕ್ಕಿಂತ ಬುದ್ಧಿಯನ್ನು ಪ್ರಚುರಗೊಳಿಸುವ ಭಾಗವುಹೆಚ್ಚಿರಲಿಕ್ಕೆಬೇಕು. ತಮ್ಮ ಅಭಿಪ್ರಾಯವನ್ನು ಅವಷ್ಟು ಸ್ವಲ್ಪದರಲ್ಲಿ ತಿಳಿಸಿಹೇಳಬೇಕು.

(ಸಶೇಷ)

ಭೋಜನ—ಹೊಟ್ಟೆತುಂಬ ಊಟಕ್ಕೆಯೋಗ್ಯವಾದ ವೇಳೆಯುಂದರೆ ಬಂದುಮಧ್ಯಾನ್ಹ ಮತ್ತೊಂದು ಸಾಯಂಕಾಲ, ಉಳಿದ ವೇಳೆಯಲ್ಲಿ ಅಲ್ಪಾಹಾರ ಮಾಡುವದೇ ಚಲೋದು. ಆದರೆ ಭೋಜನಕ್ಕೆ ಬಬ್ಬನೇ ಎಂದೂ ಕೂಡ್ರಬಾರದು; ತನ್ನ ಕುಟುಂಬದಲ್ಲಿಯ ಸಣ್ಣ ದೊಡ್ಡ ಜನರೊಂದಿಗೆ ಊಟಕ್ಕೆ ಕೂಡ್ರುವ ಪದ್ಧತಿಯು ಪ್ರಶಸ್ತವಾದದ್ದು. ಉಣ್ಣುವಾಗ್ಗೆ ಆನಂದವೃತ್ತಿಯಿಂದ ಇರಬೇಕು ಮತ್ತು ಯಾವದಾದರೊಂದು ಮನೋರಂಜಕವಾದ ವಿಷಯವಮೇಲೆ ಮಾತಾಡುತ್ತ ನಗುತ್ತಕೆಲಿಯುತ್ತ ಉಂಡರೆ ಪಚನಕ್ರಿಯೆಯು ಭರದಿಂದ ಸಾಗುವದು. ನಗುತ್ತ ಮಾತಾಡುತ್ತ ಸಾವಕಾಶವಾಗಿ ಸ್ವಸ್ಥ ಚಿತ್ತದಿಂದ ಊಟ ಮಾಡುವದು ಶರೀರಕ್ಕೆ ಬಹಳ ಆರೋಗ್ಯಕರವಾವದ್ದು. ಸಾವಕಾಶವಾದ ಊಟ, ಗಾಢವಾದ ನಿದ್ರೆ, ಮತ್ತು ತಕ್ಕಷ್ಟು ವ್ಯಾಯಾಮ ಇವು ಮೂರು ಶರೀರ ಪುಷ್ಟಿಗೂ ಆರೋಗ್ಯಕ್ಕೂ ಮೇಲಾದ ಸಾಧನಗಳಾಗಿರುತ್ತವೆ. ನಗುತ್ತ ಉಣ್ಣುವದರಿಂದ ಶ್ವಾಸೋಚ್ಛ್ವಾಸವು ಬಹಳವಾಗಿ ನಡಿಯುತ್ತದೆ ಮತ್ತು ಮಜ್ಜಾತಂತುಗಳ ಉದ್ದೀಪನವಾಗುತ್ತದೆ. ಇವೆರಡು ಕಾರಣಗಳಿಂದ ಪಕ್ವಾಶಯದ ವ್ಯಾಪಾರವು

ತೀವ್ರವಾಗಿ ನಡೆಯು ಅದಕ್ಕೆ ಉತ್ತಮ ರಕ್ತವು ಎಫೇಚ್ಛ್ ವಾಗಿ ದೊರಿಯುತ್ತದೆ. ಶ್ವಾಸವನ್ನು ಒಳಗೆ ತೆಗೆದುಕೊಳ್ಳು ವಾಗ್ಗೆಯೂ ಹೊರಗೆ ಬಿಡುವಾಗ್ಗೆಯೂ ನಡೆಯುವ ಶ್ವಾಶ ಕೋಶದ ಪಡದೆಗಳ ಮತ್ತು ನರಗಳ ಪಲನ ಚಲನದಿಂದ ಪಚನಕ್ರಿಯೆಗೆ ಸಹಾಯವಾಗುತ್ತದೆ. ಆವದರಿಂದ ಎರಡೂ ಹೊತ್ತು ಊಟದ ಕಾಲಕ್ಕೆ ನಗುತ್ತ ಕೆಲಿಯುತ್ತ ನಾಲ್ಕು ಜನರಲ್ಲಿ ಉಣಬೇಕು. ಏಕಾಂತದಲ್ಲಿ ಊಟಕ್ಕೆ ಎಂದೂ ಕೂಡ್ರಬಾರದು. ತನ್ನ ಪಂಕ್ತಿಗೆ ಕೂಡ್ರತಕ್ಕ ಜನರು ತನ್ನ ಪರಿಚಯದವರೇ ಇರಬೇಕು. ಇಲ್ಲದಿದ್ದರೆ ತನಗೆ ಸಂಕೋಚ ವಾಗುತ್ತದೆ. ಊಟದ ಕಾಲದ ಭಾಷಣವು ಮನೋರಂಜಕವೂ, ವ್ಯವಹಾರೋಪಯುಕ್ತವೂ ಇರಬೇಕಲ್ಲದೆ ವಿನೋದಪರವಾಗಿರಬೇಕು. ಪೂರ್ವದಲ್ಲಿ ಪ್ರಸಿದ್ಧಿ ಹೊಂದಿದ ಬೆಂಜಾಮಿನ ಫ್ರಾಂಕಲಿನನ ತಂದೆಯು ಚತುರರೂ ಸಮಂಜಸರೂ ಆದ ಜನರೊಂದಿಗೆ ಭೋಜನ ಮಾಡುತ್ತಿದ್ದನು. ಅವನು ತನ್ನ ಪಂಕ್ತಿಗೆ ಅಶಿಷ್ಟರೂ ಮೂರ್ಖರೂ ಆದಂಥ ಜನರನ್ನು ಎಂದೂ ತೆಗೆದುಕೊಳ್ಳಲಿಲ್ಲ. ಅವನಿಗೆ ಬಪಳ ಮಂದಿ ಮಕ್ಕಳಿದ್ದರು, ಅವನ ಕುಟುಂಬದಲ್ಲಿ ಬೇರೆ ಮನುಷ್ಯರು ಸಹ ಬಹಳ ಮಂದಿ ಇದ್ದರು. ಅವನು ಊಟದ ಕಾಲಕ್ಕೆ ಎಲ್ಲರನ್ನು ತನ್ನೊಂದಿಗೆ ಕರಕೊಂಡು ಉಣ್ಣುತ್ತಿದ್ದನು. ಆ ಕಾಲದ ಅವನ ಭಾಷಣವು ಚಿಕ್ಕ ಹುಡುಗರನ್ನು ವ್ಯವಹಾರಜ್ಞರನ್ನು ಮಾಡುವಂಥಾದಿರುತ್ತಿತ್ತು. ತಿಂಬುಂಬುವ ಪದಾರ್ಥಗಳಬಗ್ಗೆ ಅವನು ಎಂದೂ ಮಾತಾಡುತ್ತಿದ್ದಿಲ್ಲ. ಬರಿಯ ಭೋಜನ ಸಂಬಂಧದ ಭಾಷಣದಿಂದ ಹುಡುಗರ ಮನಸ್ಸು ಉತ್ತಮ ವಿಷಯದ ಕಡೆಗೆ ಎಳಿಯದೆ ಅವರು ಕೇವಲ ಭೋಜನ ಚತುರರಾಗುವರೆಂದು ಅವನ ಅಭಿಪ್ರಾಯವಿತ್ತು. ಹಿರಿಯ ಫ್ರಾಂಕಲಿನನ ಭೋ

ನೆ ಪದ್ಧತಿಯು ಉತ್ತಮವಾದದ್ದು. ಇಂಥ ತಾಯಿ ತಂದೆ
ಳ ಸಹವಾಸವು ದೊರಿಯುವ ಹುಡುಗರ ದೈವವು ಘನ
ಾದದ್ದೆನ್ನಲಿಕ್ಕೆ ಏನೂ ಸಂಶಯವಿಲ್ಲ.

ಬಹಳ ನಿದ್ರೆ ಮಾಡುವದರಿಂದ ಮನುಷ್ಯನ ಮಿದುಳಿಗೂ ಆರೋಗ್ಯಕ್ಕೂ ಅಪಾಯ ಸಂಭವಿಸುವದಲ್ಲದೆ ಅಂಗವಿಭ್ರಂ
ಶವೂ ತಲೆನೋವೂ ಬೇರೆ ರೋಗಗಳೂ ಹುಟ್ಟುತ್ತವೆ.
ಇದನ್ನು ಕುರಿತು ಡಾಕ್ಟರ ಥಾಮಸನನೆಂಬ ವೈದ್ಯನು
ಈ ಪ್ರಕಾರ ಬರೆಯುತ್ತಾನೆ:—"ಮನುಷ್ಯನು ಕಡಿಮೆ
ನಿದ್ರೆ ಮಾಡಿದಷ್ಟು ಆರೋಗ್ಯಕ್ಕೆ ಒಳ್ಳೇದು. ಅದರಿಂದ
ಶರೀರವು ಯಾವಾಗಲೂ ಒಳ್ಳೇ ಸ್ಥಿತಿಯಲ್ಲಿ ಇರುವದು.
ಮನುಷ್ಯನು ಸದಾ ಉದ್ಯೋಗದಲ್ಲಿ ಮನಸ್ಸು ಹಾಕಿದರೆ
ಈ ರೋಗಕರವಾದ ಅತಿ ನಿದ್ರೆಯ ಪ್ರಸಂಗವು ಎಂದಿ
ಗೂ ಬರಲಿಕ್ಕಿಲ್ಲ. ಸಶಕ್ತನಾದ ಮನುಷ್ಯನಿಗೆ ಆರುತಾ
ಸು ನಿದ್ರೆಯು ಸಾಕು. ನಾನು ೧೦೮ ವರ್ಷ ವಯ
ಸ್ಸಿನ ಒಬ್ಬ ವೃದ್ಧ ಮನುಷ್ಯನಿಗೆ ನೀನು ಪ್ರತಿ ದಿವಸ
ಎಷ್ಟು ತಾಸು ನಿದ್ರೆಮಾಡುತ್ತೀ ಎಂದು ಕೇಳಲಾಗಿ ಆ ದೇವ
ಪುರುಷನು ರಾತ್ರಿ ನಾಲ್ಕು ತಾಸುಗಳಿಗಿಂತ ಹೆಚ್ಚಿಗೆ ಎಂದೂ
ಮಲಗಿದ್ದು ನನಗೆ ಗೊತ್ತಿಲ್ಲವೆಂದು ಉತ್ತರ ಕೊಟ್ಟನು."
ಈ ಅವತರಣಿಂದ ಕಡಿಮೆ ನಿದ್ರೆ ಮಾಡಿದಷ್ಟು ಒಳ್ಳೇದೆಂ
ದು ಕಂಡು ಬರುತ್ತದೆ. ಆದರೆ ಪ್ರಕೃತಿಯು ಕಡದಂತೆ ಜಾ
ಗೃತರಾಗಿ ಕಡಿಮೆ ನಿದ್ರೆ ಮಾಡುವದು ವಿಹಿತವು.

ಧಾತುಗಳ ಪ್ರಸರಣ ಪ್ರಮಾಣವು—ಧಾತುಗಳಿಗೆ ಉ
ಷ್ಣತೆ ತಗಲಿದರೆ ಅವು ಪ್ರಸರಣ ಹೊಂದುತ್ತವೆಂಬ ವೈಜ್ಞಾನಿ
ಕವಾದ ಸಂಗತಿಯು ಬಹಳ ಮಂದಿ ಎಲ್ಲರಿಗೂ ಗೊತ್ತುಂ

ಬು. ಎಲ್ಲ ಧಾತುಗಳ ಪ್ರಸರಣ ಪ್ರಮಾಣವು ಸರಿಯಾಗಿರ
ವದಿಲ್ಲ. ಝಿಂಕ ಧಾತು ಎಲ್ಲಕ್ಕೂ ಹೆಚ್ಚು, ಪ್ಲಾಟಿನಮ್
ಧಾತು ಎಲ್ಲಕ್ಕೂ ಕಡಿಮೆ ಪ್ರಸರಣ ಹೊಂದುತ್ತದೆ

ಭಿನ್ನ ಭಿನ್ನ ಜಾತಿಯ ಧಾತುಗಳ ೧೦೦೦೦೦ ಇಂಚ
ಉದ್ದವಾದ ಪಟ್ಟಿಗಳನ್ನು ನೀರಿಗೆ ಎಸರು ಬರುವಷ್ಟು ಉ
ಷ್ಣತೆಯಲ್ಲಿ ಇಟ್ಟರೆ ಅವುಗಳ ಪ್ರಸರಣವು ಕೆಳಗೆ ಬರೆ
ಪ್ರಮಾಣದಿಂದ ಆಗುತ್ತದೆ.

ಝಿಂಕ (ಜಸ್ತ) ...	...	೦೧೪ ಇಂಚು
ಶೀಸ ...	...	೦೧೮ ಇಂಚು
ತವರ ...	...	೦೧೮ ಇಂಚು
ಬೆಳ್ಳಿ ...	...	೦೧೮ ,,
ತಾಮ್ರ ...	...	೦೧೩ ,,
ಭಂಗಾರ ...	...	೦೧೪ ,,
ಕಬ್ಬಿಣ (ಸಾದಾ) ...		೦೦೯ ,,
ಸದರ (ಹೊಯ್ದ ಮದ್ದು) ...		೦೦೬ ,,
ಪ್ಲಾತಿನಮ್ ...	...	೦೦೪ ,,

ಎಷ್ಟು ಉಷ್ಣತೆ ಕೊಟ್ಟಾಗ್ಯೂ ಪ್ಲಾತಿನಮ್ ಧಾತುವಿಗೆ ವಿಶೇಷವೇನೂ ಆಗದ್ದರಿಂದ ರಸಾಯನ ಪ್ರಯೋಗಗಳಲ್ಲಿ ಅದನ್ನು ಬಹಳವಾಗಿ ಉಪಯೋಗಿಸುತ್ತಾರೆ.

ಪುಸ್ತಕಗಳನ್ನು ಹ್ಯಾಗೆ ಸಂರಕ್ಷಿಸಬೇಕು—ಹುಳಗಳ ಬಾಯೊಳಗಿಂದ ಪುಸ್ತಕಗಳನ್ನು ಉಳಿಸಬೇಕಾದರೆ ಮೊದಲು ಅವುಗಳನ್ನು ತೇವು ಇಲ್ಲದಂಥ ಸ್ವಚ್ಛವಾದ ಹವೆಯಾಡುವಂಥ ಸ್ಥಳದಲ್ಲಿ ಇಡಬೇಕು. ಪುಸ್ತಕಗಳನ್ನು ಇಟ್ಟ ಹಲಿಗೆ ಅಥವಾ ಕವಾಟುಗಳನ್ನು ಯಾವಾಗಲೂ ಸ್ವಚ್ಛವಾಗಿ ಝಾಡಿಸುತ್ತಿರಬೇಕು. ಪುಸ್ತಕಗಳಿಗೆ ಹುಳ ಹತ್ತಿದರೆ

* ಶೂನ್ಯಾಂಶ ಉಷ್ಣಮಾನದಲ್ಲಿ.

ಮಳೆ ಮೂಡಿ ರಟ್ಟಿನ ಮತ್ತು ರಿಮುವ ಪೈಪ್ಗಳಿಗೆ ಹತ್ತುತ್ತಾ
ನೆ. ಹೀಗಾದಾಗ್ಗೆ ಪುಸ್ತಕಗಳನ್ನು ಭಟಿಕ ಮುಚ್ಚು ಬಿಳೇ
ಹೊಣಸಿನ ಪ್ರಡಿಯನ್ನು ಕೂಡಿಸಿ ಆ ಮಿಶ್ರಣದಿಂದ ಬರಿಸ
ಬೇಕು. ತಂಪ್ರು ಹವೆಯುಲ್ಲಿ ಭಟಿಕದ ನೀರೊಳಗೆ ತೊಯಿಸಿ
ಬಣಗಿಸಿದ ಉಣ್ಣೆಯು ವಸ್ತ್ರವಿಂದ ಪುಸ್ತಕಗಳನ್ನು ಬರಿಸ
ಬೇಕು; ಅದರಂತೆ ಪುಸ್ತಕಗಳನ್ನು ಇಡುವ ಜಲಿಗೆಗಳಿಗೆ
ನಟಿಕ, ಬಿಳೇ ಮೊಣಸಿನ ಪ್ರುಡಿಯನ್ನು ತಿಕ್ಕಬೇಕು. ಪುಸ್ತ
ಕಗಳನ್ನು ಕಟ್ಟುವಾಗ್ಗೆ ಹಾಕುವ ಸರಿಯು ಹುಳಿಗಳ
ಪ್ರಯು ಖಾದ್ಯವಾಗಿರುತ್ತದೆ. ಅದರಿಂದಲೇ ಪುಸ್ತಕಗಳಿಗೆ
ಹುಳ ಹತ್ತುವವೆಂದು ತಿಳಿಯುತ್ತದೆ. ನಮ್ಮ ಹಳೇ ಗ್ರಂ
ಥಾದಿಗಳನ್ನು ಜತನ ಮಾಡುವದಕ್ಕಾಗಿ ಗಂಟುಗಳಲ್ಲಿ ಬಜಿ
ಯನ್ನು ಹಾಕಿ ಕಟ್ಟುವರು. ಘಂಡಿಯಿಂದ ನಾಶವಾಗದಂತೆ
ಪುಸ್ತಕಗಳನ್ನು ಕಾಯುವದಕ್ಕೆ ಸುಣ್ಣವು ಉತ್ತಮ ಉಪಾ
ಯವು. ಕೆಲವರು ಪುಸ್ತಕಗಳಿಗೆ ಹುಳ ಹತ್ತಬಾರದೆಂದು
ಅವುಗಳನ್ನು ಪೊಲದು ಕಟ್ಟಬೇಕಾದರೆ ಉಪಯೋಗಿಸುವ
ಸರಿಯುಲ್ಲಿ ತುಪ್ಪವನ್ನು ಕೂಡಿಸುವದುಂಟು.

ಕೊಲ್ಹಾಪುರದ ಮಹಾರಾಜರಾದ ಶ್ರೀಷಣತ್ರಪತಿ ಶಾಹೂ
ಮಹಾರಾಜರಿಗೆ ಜಿ. ಸಿ. ಎಸ್. ಆಯ್. ಎಂಬ ಬಿರುದು ಮಾ
ನವ ಬಿರುದನ್ನು ಚಕ್ರವರ್ತಿನಿ ವಿಕ್ಟೋರಿಯಾ ಮಹಾರಾ
ಜಿಯವರು ಮುಂದದಿಂದ ಇತ್ತರು. ಈ ಬಿರುದಿನ ಸನದಾ
ದಿಗಳನ್ನು ನಮ್ಮ ಇಲಾಖೆಯ ಗವ್ಹರ್ನರರಾದ ಸ್ಯಾಂಡಸ್
ಪ್ಟರ್ ಫೊರೆಗಳು ಮಹಾರಾಜರಿಗೆ ಕೊಡುವ ತಿಂಗಳ
ಂಗಡಿಯೇ ತಾ|| ಗೆ ದೊಡ್ಡ ದರ್ಬಾರು ಭರಾಯಿಸಿ ಅರ್ಪಿಸಿದ
ರು. ಆಗ್ಗೆ ಅನೇಕ ಸರದಾರರು ಚಿನ್ನವ್ಹಿಸಿದ್ದರು. ಆ ಸಭೆ
ಯಲ್ಲಿ ಗವ್ಹರ್ನರ ಸಾಹೇಬರವರು ಪ್ರಾಥಮಿಕಶಿಕ್ಷಣ,
ಸ್ತ್ರೀಶಿಕ್ಷಣ, ಉಚ್ಚ ಸ್ಥಿತಿಯಶಿಕ್ಷಣ, ರಾತ್ರಿಶಿಕ್ಷಣದ ರಿಷ
ಾಲಯಗಳು, ಸ್ಥಳದಾರಿಕಬಾ, ನ್ಯಾಯದಾನಸ್ಥ, ಕಾರಾ
ಗೃಹಗಳು ಇವುಗಳನ್ನು ಕುರಿತು ತಮ್ಮ ಅಭಿಪ್ರಾಯವ

ನ್ನು ಆಡಿ ತೋರಿಸಿದರು. ಆ ಭಾಷಣದಿಂದ ನಮ್ಮ ಇಲಾ
ಖಾಧಿಪತಿಗಳಿಗೆ ಬಡವರ ಸಂಬಂಧದಿಂದ ಬಹಳ ಕನಿಕರ
ಉಂಟೆಂತಲೂ ನ್ಯಾಯದಕಡಿಗೆ ವಿಶೇಷ ಲಕ್ಷ ಉಂಟೆಂತ
ಲೂ ಸ್ಪಷ್ಟವಾಗಿ ತೋರುತ್ತದೆ. ಕೊಲ್ಹಾಪುರದ ಮಹಾರಾ
ಜರಿಗೆ ಚಿಕ್ಕವಯ್ಸಿನಲ್ಲಿ ಬಹುಮಾನವೂ ಅಧಿಕಾರವೂ
ದೊರೆತದ್ದು ನೋಡಿ ಎಲ್ಲರಿಗೆ ಆನಂದವಾಗುವದು ಸಹಜವು.
ಪರಮೇಶ್ವರನು ಈ ಚಿಕ್ಕ ಮಹಾರಾಜರನ್ನು ಬಹು ಭಾ
ಗ್ಯಶಾಲಿಯರನ್ನಾಗಿಯೂ, ಸಂತತಿಸಂಪತ್ತಿಸುಖೋಪೇತರ
ನ್ನಾಗಿಯೂ, ಆಯುಷ್ಯೋವಂತರನ್ನಾಗಿಯೂ ಮಾಡಲೆಂದು
ಆತನನ್ನು ಪ್ರಾರ್ಥಿಸುತ್ತೇವೆ.

[NOTES ON METHOD-SUCCESS IN TEACHING.

ಶಿಕ್ಷಣದಲ್ಲಿ ಕೀರ್ತಿಯು.

೧. ಶಿಕ್ಷಣದ ಕೆಲಸದಲ್ಲಿ ಕೀರ್ತಿಯು ದೊರಿಯಬೇಕಾ
ದರೆ ಮಾಸ್ತರನಲ್ಲಿ ಕೆಲವು ಗುಣಗಳು ಇರುವದು ಅವಶ್ಯವಿ
ರುತ್ತದೆ. ಅವುಗಳಲ್ಲಿ ಕೆಲಸದ ಶೇರಿಕೆಯು ಮೊದಲನೇದು.
ಕೆಲಸದಲ್ಲಿ ಪ್ರೀತಿ ಇಲ್ಲದಂಥ ಶಿಕ್ಷಕನು ತನ್ನ ವಿದ್ಯಾರ್ಥಿಗ
ಳಲ್ಲಿ ವಿದ್ಯದ ಹಂಬಲವನ್ನು ಹುಟ್ಟಿಸಲಾರನು. ಬೀಜದಂತೆ
ಫಲವಾಗುವದೆಂಬದು ಸರಿಯಷ್ಟೇ? ಆದ್ದರಿಂದ ವಿದ್ಯಾರ್ಥಿ
ಗಳಿಗೆ ತಮ್ಮ ಅಭ್ಯಾಸದಲ್ಲಿ ಬಹಳವಾಗಲಿ ತುಸು ಆಗಲಿ
ಪ್ರೀತಿ ಇರುವದು ಅವರ ಶಿಕ್ಷಕನಿಗಿದ್ದ ಪ್ರೀತಿಯನ್ನು ಕೂ
ಡಿರುತ್ತದೆ. ಹೆಸರು ಪಡಿಯುವ ಆತುರವುಳ್ಳ ಶಿಕ್ಷಕನು ಕಲಿ
ಸುವ ಕೆಲಸವೇ ತನ್ನ ಆಯುಷ್ಯದ ಕರ್ತವ್ಯವೆಂದು ತಿಳಿ
ಯಬೇಕು. ಅವನ ಮನಸ್ಸು ಅದರಲ್ಲಿ ಸದಾ ಲೀನವಾಗಿರ
ಲಿಕ್ಕೆಬೇಕು. ಇಂಥ ಶಿಕ್ಷಕನ ಸತೇಜವಾದ ಕಣ್ಣುಗಳು,
ಆನಂದಭರಿತವಾದ ಮುಖಮುದ್ರೆಯು, ಕಳಕಳಿಯ ನುಡಿ
ಗಳು, ಹುಡುಗರ ಮೇಲಿನ ಅಂತಃಕರಣವು ಇವುಗಳಿಲ್ಲ
ವಿದ್ಯಾರ್ಥಿಗಳಲ್ಲಿ ತಮಗೆ ಸದೃಶವಾದ ಗುಣಗಳನ್ನು ಮಟ್ಟಿಸಿ

ಅಭಿವೃದ್ಧಿಪಡಿಸುವವು; ಆದರೆ ಇದರಿಂದ ಕೆಲಸದಲ್ಲಿ ನಿಜವಾಗಿ ಪ್ರೀತಿಯಿಲ್ಲದ ಶಿಕ್ಷಕನು ಸಂಪೂರ್ಣ ಪ್ರೀತಿ ಇದ್ದಂತೆ ನಟಿಸಬೇಕೆಂದು ತಿಳಿಯಕೂಡದು. ಪ್ರತಿಯೊಬ್ಬ ಶಿಕ್ಷಕನು ತನ್ನ ಕೆಲಸದ ವಿಷಯದಲ್ಲಿಯೂ ಹುಡುಗರ ವಿಷಯದಲ್ಲಿಯೂ ತನ್ನ ಮನಸ್ಸಿನಲ್ಲಿ ಅತ್ಯಂತ ಪ್ರೀತಿಯು ಹುಟ್ಟುವಂತೆ ಪ್ರಯತ್ನ ಮಾಡಬೇಕು, ಅಂದರೆ ಅದರಿಂದ ಹುಡುಗರಿಗೆ ವಿದ್ಯೆ ಕಲಿಸುವದೂ ಅವರ ನಡತೆಗಳನ್ನು ತಿದ್ದುವದೂ ಅವನಿಗೆ ಲೋಕದಲ್ಲಿ ಅತ್ಯಂತ ಸುಖಕರವಾದ ಕೆಲಸಗಳಿನಿಸುವವು. ಆದರೆ ಹ್ಯಾಗಾದರೂ ತನ್ನ ಕೆಲಸ ಸಾಗಿ ಸುಖಂಪವನೂ ಶಿಕ್ಷಣದ ಕೆಲಸವು ಶೇರವಂಥವನೂ ಆದ ಶಿಕ್ಷಕನು ಎಂದಿಂದಿಗೂ ಸತ್‌ಶಿಕ್ಷಕನಾಗನು.

೨. ಶಿಕ್ಷಣವಲ್ಲಿ ಕೀರ್ತಿಯನ್ನು ಪಡೆಯಬೇಕೆಂಬ ಶಿಕ್ಷಕನಲ್ಲಿ ಇರಲವಶ್ಯವಾದ ಎರಡನೇ ಗುಣವು ವಿಶ್ವಾಸವು. ತನ್ನ ಕೆಲಸವು ಎಷ್ಟೇ ಕಷ್ಟವುಳ್ಳದ್ದಾಗಿ ತೋರಿದರೂ ಕಡೆಗೆ ಅದು ನಿಶ್ಚಯವಾಗಿ ಕೈಗೂಡಲಿಕ್ಕೇ ಬೇಕೆಂತಲೂ ಎಂಥಾ ಹುಡುಗರಿದ್ದರೂ ಅವರು ನಿಃಸಂದೇಹವಾಗಿ ವಿದ್ಯಾವಂತರಾಗುವರೆಂತಲೂ ಅವನಿಗೆ ಸಂಪೂರ್ಣವಾದ ನಂಬಿಗೆ ಇರಲಿಕ್ಕೆಬೇಕು. ಕಾರಣದಿಂದ ಕಾರ್ಯವಾಗುವದು ನಿಶ್ಚಯವಷ್ಟೇ, ಅದರಂತೆಯೇ ಚಲೋ ಶಿಕ್ಷಣದಿಂದ ವಿದ್ಯಾರ್ಥಿಗಳಿಗೆ ಚಲೋ ವಿದ್ಯವು ಬರುವದು ನಿಶ್ಚಯವೆಂಬ ಗ್ರಹಿಕೆಯು ಅವರ ಮನಸ್ಸಿನಲ್ಲಿ ಚನ್ನಾಗಿ ನಿಶ್ಚಯಿಸಬೇಕು ಈ ಗ್ರಹಿಕೆಯನ್ನು ಸುಳ್ಳು ಮಾಡುವಂಥ ಸಂಗತಿಗಳೂ ಕೆಲಕೆಲವು ಸಾರೆ ಸಂಭವಿಸಬಹುದು. ಹ್ಯಾಗಂದರೆ ಎಷ್ಟೋ ಸಾರೆ, ಶಿಕ್ಷಕನು ಶಾಲೆಯಲ್ಲಿ ಮಾಡಿದಂಥ ಶ್ರಮವು ತೀರ ವ್ಯರ್ಥವಾದಂತೆ ಕಾಣಿಸಬಹುದು. ಹಗಲಿರುಳು ಚಿಂತಿಸಿ ಬಹಳ ಪರಿಶ್ರಮ ಮಾಡಿ ಕಲಿಸುವ ಕೆಲಸವನ್ನು ಮಾಡಿದವರೂ ಅದಕ್ಕೆ ತಕ್ಕ ಫಲವಾಗದಂತೆ

ತೋರಬಹುದು. ಆದರೆ ಇಂಥ ಪ್ರಸಕ್ತಿಗಳಲ್ಲಿ ಯಃ
ಬಾರದಿರುವದಕ್ಕೆ ಬಹುತರವಾಗಿ ಶಿಕ್ಷಣಪದ್ಧತಿ ದೋ
ವೇ ಕಾರಣವಾಗಿರುತ್ತದೆ. ಯಾಕಂದರೆ ಜಡ ಪದಾರ್ಥ
ಗಳಲ್ಲಿ ಎಂದೂ ತಪ್ಪದಂಥ ಸೃಷ್ಟಿ ನಿಯಮಗಳಿದ್ದಂತೆ
ಮಾನಸಿಕಸೃಷ್ಟಿಯಲ್ಲಿಯೂ ಎಂದೂ ತಪ್ಪದಂಥ ನಿಯಮ
ಗಳಿರುವವು. ಇದು ಸುಳ್ಳೆಂದು ಭಾವಿಸಿದರೆ ದೇವನು
ಸೃಜಿಸಿದ ಕಡಿಮೆತರದ ಸೃಷ್ಟಿಯೇ ಮೇಲ್ತರದ ಸೃಷ್ಟಿಗಿಂ
ಹೆಚ್ಚು ಪೂರ್ಣವಾದದ್ದೆಂದು ಭಾವಿಸಬೇಕಾಗುವದು. ಆದ
ದೇವರ ಜಾಣ್ಮೆಯು ಬಾಹ್ಯಸೃಷ್ಟಿಯಲ್ಲಿ ತೋರಿಬರುವ
ಕ್ಕಿಂತಲೂ ಮಾನಸಿಕಸೃಷ್ಟಿಯಲ್ಲಿ ಹೆಚ್ಚು ಕಂಡುಬರು
ದು. ಹೀಗಿರುತ್ತ ದೇವರು ತನ್ನ ಹೆಚ್ಚಿನ ಸೃಷ್ಟಿಯಲ್ಲಿ
ಅಪೂರ್ಣನಿಯಮಗಳನ್ನು ವಿಧಿಸಿರುವನೆಂದು ತಿಳಿಯುವ
ವದು ಸರಿಯಾಗಲಾರದು. ಇನ್ನು ವಿದ್ಯಾರ್ಥಿಯು ತೀರ
ದಡ್ಡನಿದ್ದಾನೆಂದು ತಿಳಿಯುವಾ, ಅವನು ದಡ್ಡನಾದಾಗ್ಯೂ
ಅವನಲ್ಲಿ ಮನಸ್ಸಿಂಬುವದು ಇದ್ದೇ ಇರುವದಷ್ಟೇ? ಎಂಥ
ಮನಸ್ಸಿನವರೂ ತಿದ್ದುಪಡಿಯನ್ನು ಮೀರಿರುವದಿಲ್ಲ. ಆದರೆ
ಅದಕ್ಕೆ ತಕ್ಕ ಸಾಧನಗಳನ್ನು ಮಾತ್ರ ಉಪಯೋಗಿಸಲಿಕ್ಕೆ
ಬೇಕು. ಇಂಥ ಮನಸ್ಸನ್ನು ತಿದ್ದಬೇಕಾದರೆ ಮನಸ್ಸಿನ
ಬೆಳವಣಿಗೆಯನ್ನೇ ಅನುಸರಿಸಲಿಕ್ಕೆ ಬೇಕು. ಆ ಬೆಳವ
ಣಿಗೆಯ ನಿಯಮಗಳನ್ನು ಅಲಕ್ಷಿಸಿ ಎಷ್ಟು ಶ್ರಮ ಮಾಡಿ
ದರೂ ಅದು ವ್ಯರ್ಥವಾಗುವದೇ ಸರಿ. ಆದರೆ ಇಂಥ ಪ್ರಸ
ಕ್ತಿಯಲ್ಲಿ ಶಿಕ್ಷಕನಲ್ಲಿ ಮೇಲೆ ಹೇಳಿದ ಬಗೆಯ ವಿಜ್ಞಾ
ನವಿರುವದು ಅತ್ಯವಶ್ಯವಾಗಿರುವದು. ಅವನಲ್ಲಿ ಈ ಗುಣ
ವು ಇಲ್ಲದಿದ್ದರೆ ಅವನ ಮನಸ್ಸು ಸಾಕಷ್ಟು ಪ್ರಯತ್ನಗ
ಳನ್ನು ಮಾಡಲಿಕ್ಕೆ ಎಂದೂ ಎಳಸಲಿಕ್ಕಿಲ್ಲ. ಎಂಥಾ ದಡ್ಡ
ಹುಡುಗನಿದ್ದರೂ ಅವನಿಗೆ ವಿಚಾರ ಮಾಡಲಿಕ್ಕೆ ಯತ್ನ
ಮಾಡುವದರಿಂದಲೂ ಜ್ಞಾನವನ್ನು ಸಂಪಾದಿಸುವದರಿಂದಲೂ

ಆನಂದವು ಆಗುವದಂದೂ ಇಂಥ ಆನಂದವಾಗದಿದ್ದರೆ ಆ
ನ್ನು ಪ್ರತಿಬಂಧಿಸುವಂಥ ವಿಶೇಷ ಕಾರಣಗಳೇನಾದರು
ಇರಲಿಕ್ಕೆ ಬೇಕೆಂದೂ ನಂಬಿ ನಡೆಯುವ ಶಿಕ್ಷಕನು ಯೋಗ್ಯ
ವಾದ ಪದ್ಧತಿಯನ್ನು ಆಲೋಚಿಸಿಕೊಂಡು ಅದನ್ನು ಉಪ
ಯೋಗಿಸಿ ತನ್ನ ಇಷ್ಟವನ್ನು ಕೊನೆಗಾಣಿಸಬಹುದು. ಅದರ
ಅವಸ್ಥೆಯಲ್ಲಿ ಇಂಥ ವಿಶ್ವಾಸವಿಲ್ಲದಿದ್ದರೆ ಅವನ ಉತ್ಸಾಹವು
ಕುಗ್ಗಿ ಅವನು ತನ್ನ ಕೆಲಸಕ್ಕೆ ಬೇಸರಿಯುವನು.

೩. ಯಾವದೊಂದು ವಿಷಯವನ್ನು ಕಲಿಸಿ ಹೆಸರು ಪಡೆ
ಯಬೇಕಾದರೆ ವಿಷಯದ ಪ್ರಯೋಜನವು ಅಥವಾ ಫಲ
ವು ಮಾಸ್ತರನಿಗೆ ಸ್ಪಷ್ಟವಾಗಿ ತಿಳಿದಿರಲಿಕ್ಕೆ ಬೇಕು. ಯಾ
ವದೊಂದು ವಿಷಯವನ್ನು ಕಲಿಸುವ ಉದ್ದೇಶವನ್ನು ಕೂ
ರಿತು ಸ್ಥೂಲವಾಗಿ ವಿಚಾರ ಮಾಡಿದರೆ ಅವರಿಂದ ಸಾ
ಮಾನ್ಯ ಫಲ ಮತ್ತು ವಿಶೇಷಫಲವೆಂಬ ಎರಡು ತರದ ಫಲ
ಗಳು ಉಂಟಾಗಬೇಕೆಂಬ ಉದ್ದೇಶವಿರುವದೆಂದು ಕಂಡುಬರು
ವದು. ವಿಷಯಕ್ಕೂ ಅಭೀಷ್ಟಪ್ರಯೋಜನಕ್ಕೂ ಅಥವಾ
ವಿಷಯಕ್ಕೂ ಕಲಿಯುವವನ ಬುದ್ಧಿಸಾಮರ್ಥ್ಯಕ್ಕೂ ಇರು
ವ ಸಂಬಂಧದಿಂದ ಸಾಮಾನ್ಯೋದ್ದಿಷ್ಟವಾಗುತ್ತದೆ. ಹುಡು
ಗರಿಗೆ ಕೆಲವೊಂದು ವಿಶೇಷತರದ ಜ್ಞಾನವನ್ನು ಮಾಡಿಕೊ
ಡುವದು ಅಥವಾ ಅವರಲ್ಲಿ ಕೆಲವೊಂದು ತರದ ಕೌಶಲ್ಯವ
ನ್ನು ಹುಟ್ಟಿಸುವದು ಇದೇ ಪಾಠದ ವಿಶೇಷ ಫಲವು. ಉ
ದಾಹರಣಾರ್ಥವಾಗಿ ಭೂಗೋಲ ವಿಷಯವನ್ನು ತೆಗೆದು
ಕೊಳ್ಳುವಾ: ಭೂಗೋಲದ ಅಭ್ಯಾಸದಿಂದ ವಿದ್ಯಾರ್ಥಿಗ
ಳ ಮನಸ್ಸಿನಮೇಲೆ ಸಹಜಕ್ಕೆ ಆಗುವಂಥ ಪರಿಣಾಮವೂ
ಅವನಿಗೆ ಮುಂದೆ ಪ್ರಪಂಚದಲ್ಲಿ ಆಗುವಂಥ ಪ್ರಯೋಜನ
ವೂ ಭೂಗೋಲದ ಸಾಮಾನ್ಯಪ್ರಯೋಜನ ಅಥವಾ ಫ
ಲವಾಗಿರುತ್ತದೆ. ನೇಮಿಸಿಕೊಟ್ಟ ಭೂಗೋಲದ ಭಾಗ

ವನ್ನು ವಿದ್ಯಾರ್ಥಿಗಳಿಗೆ ಸಂಪೂರ್ಣವಾಗಿ ತಿಳಿಯುವಂತೆ ಕಲಿಸುವದು ಆ ಪಾಠದ ವಿಶೇಷಫಲವಿರುತ್ತದೆ. ಯಾವ ವಿಷಯವನ್ನಾದರೂ ಕಲಿಸಿದ್ದು ಸಾರ್ಥಕವಾಗಬೇಕಾದರೆ ಇವೆರಡೂ ಪ್ರಯೋಜನಗಳನ್ನು ಒಟ್ಟುಗೂಡಿಸಲಿಕ್ಕೆಬೇಕು. ಕಲಿಸುವ ವಿಷಯದ ಸಾಮಾನ್ಯಪ್ರಯೋಜನವನ್ನೂ ಪಾಠದ ವಿಶೇಷಪ್ರಯೋಜನವನ್ನೂ ಏಕಕಾಲಕ್ಕೆ ಲಕ್ಷ್ಯದಲ್ಲಿಟ್ಟು ಕಲಿಸಿದರೆ ಶಿಕ್ಷಣವು ಅತ್ಯಂತ ಫಲದಾಯಕವಾಗುವದು. ಶಿಕ್ಷಕನು ಕಲಿಸಿದ ವಿಷಯವನ್ನು ತಿಳಿಕೊಳ್ಳುವದಕ್ಕಾಗಿ ಹುಡುಗರು ಯಾವ ಮಾನಸಿಕ ಶಕ್ತಿಗಳನ್ನೂ ನೀತಿಯ ಕಲ್ಪನೆಗಳನ್ನೂ ಉಪಯೋಗಿಸಬೇಕಾಗುವದೋ ಅವುಗಳನ್ನು ಅಭಿವೃದ್ಧಿಪಡಿಸುವಂಥ ವಿಶೇಷತರದ ಪದ್ಧತಿಯನ್ನೇ ಶಿಕ್ಷಕನು ಅನುಸರಿಸಲಿಕ್ಕೆಬೇಕು. ಶಿಕ್ಷಣವ ಉದ್ದೇಶವು ಭಿನ್ನಭಿನ್ನ ಪಾಠಂತೆ ಕಲಿಸುವ ಪದ್ಧತಿಯಲ್ಲಿ ಹೆಚ್ಚು ಕಡಿಮೆ ಮಾಡಲಿಕ್ಕೇಬೇಕು; ಯಾಕಂದರೆ ಕಲಿಸುವ ಪದ್ಧತಿಯು ಹುಡುಗರ ವಯಸ್ಸು, ಕಲಿಸತಕ್ಕ ವಿಷಯ, ನೆರವೇರಿಸತಕ್ಕ ಉದ್ದೇಶ ಇವುಗಳಿಗೆ ಅನುಗುಣವಾಗಿ ಹುಡುಗರಿಂದ ನಿರೀಕ್ಷಣೆಗಳನ್ನೂ ತುಲನೆಗಳನ್ನೂ ಕಲ್ಪನೆಗಳನ್ನೂ ಊಹೆಗಳನ್ನೂ ಅನುಮಾನಗಳನ್ನೂ ತರ್ಕಗಳನ್ನೂ ಮಾಡಿಸುವಂಥಾದ್ದಿರಬೇಕೆಂಬುವದು ಸ್ಪಷ್ಟವಾಗಿರುತ್ತದೆ. ಪಾಠದ ವಿಶೇಷಪ್ರಯೋಜನವನ್ನು ಕೊನೆಗಾಣಿಸಬೇಕಾದರೆ ಹುಡುಗರ ಲಕ್ಷ್ಯವು ಸ್ಥಿರಗೊಂಡು ಏಕಾಗ್ರವಾಗುವಂತೆ ಪ್ರಶ್ನೆಗಳನ್ನು ಕೇಳೋಣ, ವೃಷ್ಟಾಂತಗಳನ್ನು ಹೇಳೋಣ, ಅವರು ಹೇಳಿದ ಉತ್ತರಗಳಿಗೆ ಲಕ್ಷಕೊಡೋಣ, ಮೊದಲಾದ ಹಂಚಿಕೆಗಳನ್ನು ಸರಿಯಾಗಿ ಉಪಯೋಗಿಸಲಿಕ್ಕೆಬೇಕು.

(ಮುಂದೆ ಸಾಗುವದು.)

SELECTIONS FROM THE KARNATIK GAZETTEER.

ಕನ್ನಡ ಗೆಜೆಟಿಯರಿನಿಂದ ಆಯ್ದ ಭಾಗಗಳು.

(ನೀ ಪುಟದಿಂದ ಮುಂದೆ ಸಾಗಿದ್ದು.)

ಶ್ರಿಕ್ಕೇರಿ--ಚಿಕ್ಕೋಡಿಯ ನೈರುತ್ಯಕ್ಕೆ ೧೫ ಮೈಲಿನ ಮೇಲೆ ತಾಸಗಾಮಿಯ ಪರಶುರಾಮಭಾವನು ಸ೯ ೧೭೭೫ ರಲ್ಲಿ ಕಾದಿ ಈ ಕೋಟೆಯನ್ನು ತಕ್ಕೊಂಡನು. ಸ೯ ೧೮೦೨ರಲ್ಲಿ ಕೊಲ್ಲಾಪುರದವರ ಕಡೆಯಿಂದ ಇಂಗ್ಲಿಷ ಸರಕಾರದವರು ತಕ್ಕೊಂಡರು. ಈ ಕೋಟೆಯು ಸುಮಾರು ೮೦೦ ಮೂಳ ಚಚ್ಚೌಕಾಗಿದೆ, ಕಂದಕವು ಪೂರಾಮುಗದಿಲ್ಲ.

ಭೋಜ--ಚಿಕ್ಕೋಡಿಯ ಪಾಯವ್ಯಕ್ಕೆ ೧೫ ಮೈಲಿನ ಮೇಲೆ ಜ. ಸಂ. (೮೧) ೪೧೫೦ ಈ ಊರಲ್ಲಿ ಸಹಪತ್ತಿಯ ರಟ್ಟರದೊಂದು ತಾಮ್ರಶಾಸನವು ದೊರಿದರೆ.

ಹುಕ್ಕೇರಿ--ಚಿಕ್ಕೋಡಿಯ ದಕ್ಷಿಣಕ್ಕೆ ೧೫ ಮೈಲಿನ ಮೇಲೆ ಜ. ಸಂ. (೮೧) ೪೧೯೫ ಮುಖ್ಯಾಲಕಚೇರಿಯ ಮುಖ್ಯ ಗ್ರಾಮವು. ಅಕ್ಕಿ, ಬೆಲ್ಲ, ಕಬ್ಬಿ, ಹೊಗಸಿನಕಾಯಿ ಮುಂತಾವವುಗಳ ವ್ಯಾಪಾರವು ಸೋಮವಾರ ಸಂತೆಯಲ್ಲಿ ಆಗುತ್ತದೆ. ಒಕ್ಕಲಿಗರ ಶೀಲೆಗಳೂ ಕಂಬಳಿಗಳೂ ಹುಟ್ಟುತ್ತವೆ. ವಿಜಾಪುರದ ಬಾನಕಹನೆ ಸರದಾರರು ಕಟ್ಟಿಸಿದ ಚಿನೀ ಗುಮಟಿ, ಗಡಸಿನ ಜಾಹೇಬನ ಮುಶೀದಿ, ಎಂಬ ಎರಡು ಮುಶೀದಿಗಳಿರುತ್ತವೆ. ಮುಕ್ಕೇರಿಯ ನಳವು ಈ ಶೀಮೆಯಲ್ಲಿ ಪ್ರಸಿದ್ಧವಾಗಿದ್ದು. ಹುಕ್ಕೇರಿಯನ್ನು ಗೆಲ್ಲಾಸಿ ಎಂಬ ಮನ್ಸಬದಾರರಿಗೆ ವಿಜಾಪುರದ ಬಾದಶಹನು ಜಪ್ತಗೀರು ಕೊಟ್ಟಿದ್ದನು. ಜೋಗಾಪಿಯು ಅಸದಖಾನನಂತೆ ಐನ ಉಲ್ಲುಲ್ಲ ಗಿಲಾಸೀ ಎಂಬ ಸರದಾರನು ಮುಕ್ಕೇರಿಯಲ್ಲಿ ೧೫೦೦ರೀದ ೧೭೫೦ ಇಷ್ಟು ಆಳುತಿದ್ದನು. ಅವನೇ ಮುಕ್ಕೇರಿಯ ನಳವನ್ನೂ ಕೋಟೆಯನ್ನೂ ಎರಡು ಗೋರಿ

ಗಳನ್ನೂ ಕಟ್ಟಿಸಿದನು. ಶಿವಾಜಿಯು ದಂಗೆಯಲ್ಲಿ ಹುಕ್ಕೇರಿಯ ದೇಸಾಯಿಯು ಪ್ರಬಲನಾಗಿ ಸ್ವತಂತ್ರನಾಗಿದ್ದನು. ಆದರೆ ಮುಂದೆ ಪೇಶವನು ಅವನ ಸ್ವಾತಂತ್ರ್ಯವನ್ನು ಮುರಿದನು. ಈ ದೇಸಾಯಿಯ ವಂಶದವರು ಈಗ ಪಂಟಮುರಿಯಲ್ಲಿ ಇರುತ್ತಾರೆ. ಇಂಗ್ಲಿಷ ಸರಕಾರದ ಅಮಲಿನ ಆರಂಭದಲ್ಲಿ ಹುಕ್ಕೇರಿಯು ಕೊಲ್ಲಾಪುರದವರ ರಾಜ್ಯಕ್ಕೆ ಸೇರಿತ್ತು.

ಕಬ್ಬೂರು—ಚಿಕ್ಕೋಡಿಯ ದಕ್ಷಿಣಕ್ಕೆ ೧೦ ಮೈಲಿನ ಮೇಲೆ, ಜ. ಸಂ. (೧೯೧೧) ೨೪೪೩ ಬಂದು ಹಳ್ಳಿಯ ನೀರಿನಿಂದ ಊರಿನ ಸುತ್ತಮುತ್ತ ಸುಮಾರು ೫೦ ತೋಟಗಳಾಗಿವೆ. ಅವುಗಳಲ್ಲಿ ಅಕ್ಕಿ ಹೊರತಾಗಿ ಎಲ್ಲ ಬಗೆಯ ಧಾನ್ಯಗಳು, ಬಾಳೆ, ಪಲ್ಲೆಗಳು ಬೆಳೆಯುತ್ತವೆ. ಈಚ್ಚಿನ ಗುಡಿಯಲ್ಲಿ ಬಂದು ಲಿಪಿಯುಂಟು. ಅದನ್ನು ಇನ್ನೂ ಯಾರೂ ಓದಿಲ್ಲ. ಈ ಊರಿನ ಬಳಿಯಲ್ಲಿ ಚಿಕ್ಕೋಡಿ ರೋಡ ಎಂಬ ಹೊಗೆಬಂಡಿಯ ಸ್ಟೇಶನ್ನು ಇರುತ್ತದೆ.

ಖರೋಶಿ—ಚಿಕ್ಕೋಡಿಯ ದಕ್ಷಿಣಕ್ಕೆ ೪ ಮೈಲಿನಮೇಲೆ. ಜ. ಸಂ. (೧೯೧೧) ೨೦೨೪ ಘಂಟೇಬಸವಣ್ಣನ ಜಾತ್ರೆಯು ಶ್ರಾವಣದಲ್ಲಿ ಆಗುತ್ತದೆ

ಕೊಂಗನೊಳ್ಳಿ—ಚಿಕ್ಕೋಡಿಯ ವಾಯವ್ಯಕ್ಕೆ ೨೦ ಮೈಲಿನಮೇಲೆ, ಜ. ಸಂ. (೧೯೧೧) ೪೦೩೧ ಟಪಾಲಕಚೇರಿ, ಇಂಗ್ಲಿಷಶಾಲೆ, ಹೆಣ್ಣು ಮಕ್ಕಳಶಾಲೆ, ಮುಸಾಫರೀ ಒಂಗಲೆ ಇರುತ್ತವೆ. ಗುರುವಾರದ ಸಂತೆಯಲ್ಲಿ ಅಕ್ಕಿ, ಸಕ್ಕರಿ, ಉಪ್ಪು, ಬಟ್ಟೆಗಳು, ಕಿರಾಣಿ ಮುಂತಾದವುಗಳ ಮಾರಾಟವು ಬಹಳವಾಗುತ್ತದೆ. ಸಂತೆಯಲ್ಲಿ ದನಗಳ ಮಾರಾಟವು ಬಹಳವಾಗುತ್ತದೆ. ಈ ಊರಲ್ಲಿ ಧಡೋತಿಯು ಬಟ್ಟೆಗಳೂ ಕಂಬಳಿಗಳೂ ಹುಟ್ಟುತ್ತವೆ. ಸರ್ ೧೮೫೬ನೇ ವರ್ಷದ ಬರಗಾಲದ ಪೂರ್ವದಲ್ಲಿ ಈ ಊರಲ್ಲಿ ಕಾಗದ ಮಾಡುವ ಕಾರಖಾನೆಗಳಿದ್ದವು. ಈ ಊರಿಗೆ ಬಂದು ಹಾಳು ಕೋಟೆಯುಂಟು.

ಮನೋಳಿ—ಚಿಕ್ಕೋಡಿಯ ದಕ್ಷಿಣಕ್ಕೆ ೧೨ ಮೈಲಿನ ಮೇಲೆ, ಜ. ಸಂ. (೧೧) ೨೫೭೬ ಇದಕ್ಕೆ ನಗರವು ನೋಳಿಯನ್ನುವರು. ಈ ಮನೋಳಿ, ಚಿಕ್ಕೋಡಿ ಪರಗ ಣೆಗಳನ್ನು ಪೇಶವನು ಸ್ವ ೧೭೬೦ರಲ್ಲಿ ಪಟವರ್ಧನರಿಗೆ ಕೊಟ್ಟಿದ್ದರಿಂದ ಅವರಿಗೂ ಕೊಲ್ಲಾಪುರದ ಅರಸನಿಗೂ ಇ ದು ಜಗಳ ಉಂಟಾಯಿತು. ಮುಂದೆ ಇವೇ ಪರಗಣೆಗ ಳು ನಿಪ್ಪಾಣಿಕರನ ಕೈಸೇರಿದ ಬಳಿಕ ಅವನಿಗೂ ಕೊಲ್ಲಾ ಪುರದವರಿಗೂ ಅರು ವರ್ಷ ಜಗಳ ನಡೆದಿತ್ತು.

ನಿಪ್ಪಾಣಿ—ಬೆಳಗಾವಿಯ ಉತ್ತರಕ್ಕೆ ೭೦ ಮೈಲಿನಮೇ ಲೆ, ಚಿಕ್ಕೋಡಿಯ ಪಶ್ಚಿಮಕ್ಕೆ ೧೩ ಮೈಲಿನಮೇಲೆ, ಜ. ಸಂ. (೧೧) ೯೩೫೭ ಇಲ್ಲಿ ಮುನಸಿಪಾಲಟಿ, ಟಪಾಲ ಕಚೇರಿ, ಮುಶಾಫರೀಬಂಗಲೆ, ಧರ್ಮಶಾಲೆ, ಪುಸ್ತಕಾಲ ಯ, ೪ ಶಾಲೆಗಳು ಉಂಟು. ಇಲ್ಲಿ ೫೦೦೦ರಿಂದ ೬೦೦೦ ರದವರೆಗೆ ಭಂಡವಲವುಳ್ಳಂಥ ವ್ಯಾಪಾರಸ್ಥರು ೧೦೦ ಜನ ರುಂಟು. ಗುರುವಾರದ ಸಂತೆಯು ದೊಡ್ಡದಾಗುತ್ತದೆ. ಅಕ್ಕಿ, ಅಡಿಕೆ, ಯಾಲಕ್ಕಿ, ಕಿರಾಣಿ, ಸಕ್ಕರೆ, ಕಾಳು, ವ ಸ್ತ್ರ, ಪಾತ್ರೆಗಳು ಮುಂತಾದ ಸರಕುಗಳ ವ್ಯಾಪಾರವು ಬ ಹಳ ನಡೆಯುತ್ತದೆ. ದನಗಳ ವ್ಯಾಪಾರದ ಬಗ್ಗೆ ನಿಪ್ಪಾ ಣಿಯು ಪೆಸರಾಗಿದೆ; ಸಂತೆಯಲ್ಲಿ ೩೫ ಸಾವಿರದವರೆಗೆ ದನಗಳ ವ್ಯಾಪಾರವಾಗುತ್ತದೆ. ಈ ಊರಲ್ಲಿ ಧಡೋತಿ ಯು ಬಟ್ಟೆಗಳೂ, ಕಂಬಳಿಗಳೂ ಹುಟ್ಟುತ್ತವೆ. ಮ್ಯುನ ಸಿಪಾಲಟಿಯು ಆದಾಯವು ೧೮೮೦—೮೫ರಲ್ಲಿ ೧೦೫೮೬ ರೂಪಾಯಿ ಇತ್ತು. ನಿಪ್ಪಾಣಿಯ ಅಪ್ಪಾಸಾಹೇಬನು ಬೆರ ಗುಪ್ಪಿಯ ಬಳಿಯಲ್ಲಿ ದೊಡ್ಡ ದೊಂದು ಕೆರೆ ಕಟ್ಟಿಸಿ, ನಿಪ್ಪಾ ಣಿಯ ಊರೊಳಗೆ ನೆಳ ತಂದಿದ್ದಾನೆ. ಅವರ ನೀರು ಊ ರವರು ಕುಡಿಯುತ್ತಾರೆ. ಇದರ ಹೊರತು, ಮ್ಯುನಸಿ

ಪಾಲಟಿಯವರು ಜೇರೆ ಬಂಬೆರಡು ಕೆರೆಗಳನ್ನು ಕಟ್ಟಿಸಿ ದ್ದಾರೆ. ಊರ ಬಳಿಯಲ್ಲಿ ಬಂದು ಶೀ ನೀರಿನ ಪಳ್ಳವೂ ಇರುತ್ತದೆ; ನಿಪ್ಪಾಣಿಯ ಕೋಟೆಯು ಭದ್ರವಾಗಿ ಕಟ್ಟಿ ದ್ದಿರುತ್ತದೆ. ಇದರ ಸುತ್ತಲಿನ ಕಂದಕದೊಳಗೆ ನೀರು ಇರುವದು. ಈ ಕೋಟೆಯನ್ನು ಸರಕಾರದವರು ಯುದ್ಧಕ್ಕೆ ಬೇರದಂತೆ ಕೆಡಿಸಿದಾಗ್ಯೂ ಇದು ಇನ್ನೂ ಭದ್ರವಾಗಿರುತ್ತದೆ. ಕೋಟೆಯ ಬಾಗಿಲಿನ ಬಳಿಯಲ್ಲಿ ನಿಪ್ಪಾಣಿಕರನ ಅರಮನೆಯುಂಟು.

ನಿಪ್ಪಾಣಿಯು ನಡಿಯುವ ಪತಪದಲ್ಲಿ ಹೆಸರಿಗೆ ಬಂದ ಗ್ರಾಮವಿರುತ್ತದೆ. ಪೂರ್ವಕಾಲದ ಗುಡಿಗಳೂ ಲಿಪಿಗಳೂ ಈ ಊರಲ್ಲಿ ಅಲ್ಲ. ಇಲ್ಲಿಯ ದೇಸಾಯಿ, ಸಿದೋಜಿರಾವ ಅಪ್ಪಾಸಾಹೇಬ ನಿಂಬಾಳಕರ ಎಂಬವನೇ ಮೊದಲಿಗೆ ಹೆಸರಿಗೆ ಬಂದವನು. ಇವನು ಮೊರಲು ಸಿಂದ್ಯನ ದಂಡಿನಲ್ಲಿ ಸರದಾರನಾಗಿ ದಕ್ಷಿಣಮಹಾರಾಷ್ಟ್ರದಲ್ಲಿ ಸಿಂದ್ಯನಿಗೆ ಸಹಾಯ ಮಾಡಿದನು. ೧೮೦೧, ಪುನರಲಹೇಲ್ಕರ್ನಿಯು ಶ್ರೀರಂಗಪಟ್ಟಣದಿಂದ ಬಾಜೀರಾಯನನ್ನು ಗಾದಿಯಮೇಲೆ ಕೂಡ್ರಿಸಲಿಕ್ಕೆ ಪುಣೆಗೆ ಹೋಗುವಾಗ ನಿಪ್ಪಾಣಿಕರನು ಅವನ ಸಂಗಡ ದಂಡಿನೊಡನೆ ಹೋಗಿ ಇಂಗ್ಲಿಷ ದಂಡಿನವರಿಗೆ ಸಹಾಯ ಮಾಡಿದನು ೧೮೦೨. ಈ ಪ್ರಕಾರ ನಿಪ್ಪಾಣಿಕರನು ಇಂಗ್ಲಿಷರ ಸ್ನೇಹವನ್ನೂ ಪೇಶವನ ಸ್ನೇಹವನ್ನೂ ಸಂಪಾದಿಸಿದ್ದರಿಂದ ಪೇಶವನು ಅವನಿಗೆ "ಸರಲಷ್ಕರ" ಎಂಬ ಬಿರುದು ಕೊಟ್ಟು ಮನೋಳಿ, ಹುಕ್ಕೇರಿ ಈ ಎರಡು ಪರಗಣೆಗಳನ್ನು ಸಂಜಾಮಿಗಾಗಿ ಕೊಟ್ಟನು. ಪ್ರಸ್ತೋಳಿಯ ಪರಗಣೆಗಾಗಿ ಕೊಲ್ಹಾಪುರದ ಅರಸನಿಗೂ ನಿಪ್ಪಾಣಿಕರನಿಗೂ ಮೊದಲಿನಿಂದ ಯುದ್ಧ ನಡೆದಿತ್ತು. ಕಡೆಯ

ಲ್ಲಿ ಪೇಶವನ ಮಧ್ಯಸ್ಥಿಯಿಂದ ೧೪೦೯ರಲ್ಲಿ ಇಬ್ಬರ ವ್ಯಾಜ್ಯ ತೀರಿ ಕೊಲ್ಲಾಪುರದವರ ಮಗಳನ್ನು ನಿಪ್ಪಾಣಿಕರನು ಲಗ್ನ ಮಾಡಿಕೊಂಡನು. ಆದರೂ ನಿಪ್ಪಾಣಿಕರನು ಮೊದಲಿನ ವ್ಯಾಜ್ಯವನ್ನು ಬಿಡಲಿಲ್ಲ. ಮುಂದೆ ೧೪೧೭ರಲ್ಲಿ ಪ್ರಣಯ ರೆಸಿಡೆಂಟನಾಗಿದ್ದ ಎಲ್ಫಿನ್‌ಸ್ತನ ಸಾಹೇಬನ ಮಧ್ಯಸ್ಥಿಯಿಂದ ಕೊಲ್ಲಾಪುರದ ಅರಸನು ಮಸೋಳಿ, ಚಿಕ್ಕೋಡಿ ಇವೆ ರಡು ಪರಗಣಗಳನ್ನು ನಿಪ್ಪಾಣಿಕರನಿಗೆ ನಿರಾತಂಕವಾಗಿ ಕೊಟ್ಟನು.

CORRESPONDENCE.

ಪತ್ರವ್ಯವಹಾರ.

ಸಂಖ್ಯಾ ಕಲಿಸುವದು.

ರಾವಸಾಹೇಬ ಎಡೀಟರ ಕನ್ನಡ ಶಾಲಾಪತ್ರಿಕ ಇವರ ಸನ್ನಿಧಿಗೆ—

ಸಾಷ್ಟಾಂಗನಮಸ್ಕಾರ ವಿನಂತಿ, ದೊರೆಗಳೇ! ಈಗಿನ ದೇಶಭಾಷೆಯ ಸಾಲೆಗಳಲ್ಲಿ ಗಣಿತಶಾಸ್ತ್ರವನ್ನು ಕಲಿಸುವ ಕ್ರಮವು ಎನೆಯ ಇಯತ್ತೆಯಿಂದ ಆರಂಭವಾಗುತ್ತದೆ. ಎರಡನೆಯ ಇಯತ್ತೆಯಲ್ಲಿರುವ ವಿದ್ಯಾರ್ಥಿಗಳ ಬುದ್ಧಿಯು ತಕ್ಕಷ್ಟು ಪೌಢತೆಯನ್ನು ಹೊಂದದಿರುವ ಮೂಲಕ, ಅವರಿಗೆ ಸಂಖ್ಯಾ, ಬೇರೀಜು, ವಜಾಬಾಕಿ ಇವುಗಳನ್ನೂ ನಾಲ್ಕನೆಯ ಇಯತ್ತೆಯವರಿಗೆ ಪ್ರಮಾಣಗಣಿತವನ್ನೂ ಅಲ್ಪಪ್ರಮದಿಂದ ಕಲಿಸುವದು ಬಹು ದುಸ್ತರವಾದದ್ದೆಂದು ನಾನು ಅಲ್ಪ ದಿನಗಳ ಅನುಭವದಿಂದ ಮನಗಂಡನು. ಈ ವಿಷಯಗಳನ್ನು ಆಯಾ ಇಯತ್ತೆಗಳಲ್ಲಿ ಕಲಿಸುವಾಗ ಶಿಕ್ಷಕರು ತಕ್ಕಷ್ಟು ಶ್ರಮವಹಿಸದಿದ್ದರೆ, ಮುಂದಿನ ವಿಷಯಗಳ

ದ್ದು ಕಲಿಸುವದು ಅವರಿಗೇ ಬಹು ಬಿಗಿಯಾಗುತ್ತದೆ. ಆದು ದರಿಂದ ಆರಂಭವಲ್ಲಿಯೇ ವಿದ್ಯಾರ್ಥಿಗಳ ಬುದ್ಧಿಸಾಮರ್ಥ್ಯ ಕ್ಕೆ ಸರಿಯಾಗಿ ವಿಷಯಗಳಿಗೆ ಸುಲಭ ರೂಪ ಕೊಟ್ಟು, ತಿಳಿಯುವಂತೆ ಕಲಿಸುವದು ಉತ್ತಮ ಮಾರ್ಗವಾದ ಕಾರಣ ಮೇಲ್ಕಾಣಿಸಿದ ವಿಷಯಗಳನ್ನು ಕಲಿಸುವ ಕ್ರಮಗಳನ್ನು ನನ್ನ ಅಲ್ಪಮತಿಗೆ ತೋಚಿದಷ್ಟು ಸಿದ್ಧಮಾಡಿ, ಮೊದಲಿಗೆ ಸಂಖ್ಯಾ ಕಲಿಸುವ ಮಾವರಿಯನ್ನು ತಮ್ಮ ಡಿದಾವರೆಗಳಿಗೆ ಬಿನ್ನವಿಸಿರುವೆನು. ಇದರೊಳ್ದೋಷಗಳು ಕಂಡುಬಂದಲ್ಲಿ ಅವುಗಳನ್ನು ದೂರಮಾಡಿ ಇದೇ ತಿಂಗಳ ಸಂಚಿಕೆಯಲ್ಲಿ ಪ್ರಸಿದ್ಧಿಸಿ ನನ್ನ ಮಿತ್ರರ್ಗೆ ಈ ಲಾಭವನ್ನೀಯುವಿರೆಂದು ಕೋರುತ್ತೇನೆ.

ಉಪಕರಣಗಳು—(ಶಿಕ್ಷಕನು ಮೊದಲು ಕೆಲವು ಬಿಡಿ ಕಾಳು, ಕೆಲವು ಹತ್ತರ ಗಂಟು, ಕೆಲವು ನೂರರ ಗಂಟು, ಖಡು, ಕರೇಹಲಿಗೆ ಇವುಗಳನ್ನು ತೆಗೆದು ಕೊಂಡು ಸಿದ್ಧನಾಗಬೇಕು.)

ಪರೀಕ್ಷೆಯ ಪ್ರಶ್ನೆಗಳು.

ಸೂಚನೆ—ವಿದ್ಯಾರ್ಥಿಗಳನ್ನು ಅರ್ಧವರ್ತುಲಾಕಾರವಾಗಿ ಕೂಡ್ರಿಸಿ. ಅವರ ಲಕ್ಷವನ್ನು ಎಳೆದುಕೊಳ್ಳುವದರ ಸಲುವಾಗಿ ಅವರು ಹಿಂದೆ ಕಲಿತಅಂಕೆಯೊಳಗೆ ಕೆಲವು ಮಾರ್ಮಿಕ (ಜೂನ್ಯ ಯಾಕೆ ಬರಿಯುತ್ತಾರೆ? ಎಷ್ಟು ಕಾಳುಗಳನ್ನು ಕೂಡಿಸಿದರೆ ಹತ್ತರಗಂಟಾಗುವದು? ಈ ಮುಂತಾದ) ಪ್ರಶ್ನೆಗಳನ್ನು ಶಿಕ್ಷಕರು ಚಟುಪಟಿಕೆಯಿಂದ ಮಾಡಬೇಕು.

ಕಲಿಸುವ ಪ್ರಶ್ನೆಗಳು:

ಗುರು—(ಕೆಲವು ಬಿಡಿಕಾಳುಗಳನ್ನು ತಕ್ಕೊಂಡು ಒಬ್ಬ ವಿದ್ಯಾರ್ಥಿಗೆ) ಇವು ಎಷ್ಟು ಅವೆ?

ವಿದ್ಯಾರ್ಥಿ—ಏಳು ಅವೆ. (ಬರಿಸುವದು.)

ಗು—(ಬಿಡಿಕಾಳುಗಳ ಕಡಿಗೆ ಬೊಟ್ಟುಮಾಡಿ) ಇವುಗಳೊಳಗಿನ ಎಂಟು ಕಾಳುಗಳನ್ನು ಬೇರೆ ತೆಗಿ.

ವಿ—ಅದೆರಂತೆ ಮಾಡುವದು. (ಅದನ್ನು ಬರಿಸುವದು.)

ಗು—(ಎಂಟು ಕಾಳು ತೋರಿಸಿ) ಇವು ಎಷ್ಟು ಅವೆ?

ವಿ—ಎಂಟು ಅವೆ.

ಗು—" ಎಂಟು " ಇದನ್ನು ಹದಿನೆಂಟು ಮಾಡಬೇಕಾದರೆ ಎಷ್ಟು ಕೂಡಿಸಬೇಕು?

ವಿ—ಹತ್ತು ಕೂಡಿಸಬೇಕು.

ಗು—ಎಷ್ಟು ಹತ್ತು ಕೂಡಿಸಬೇಕು?

ವಿ—ಬಂದು ಹತ್ತು ಕೂಡಿಸಬೇಕು (ಇದನ್ನೇ ೧೮ ಮಾಡಿ ಬರಿಸುವದು.)

ಗು—ಬಂದು ಹತ್ತರಗಂಟು ಕೂಡಿಸಿದ್ದು ಯಾತರ ಹಿಂದೆ ಬರಿದಿ?

ವಿ—ಎಂಟರ ಹಿಂದೆ ಬರಿದೆನು.

ಗು—ಎಂಟರ ಹಿಂದೆ ಯಾವ ಅಂಕೆಯನ್ನು ಬರಿದಿ?

ವಿ—ಬುದು ಅಂಕೆಯನ್ನು ಬರಿದೆನು.

ಗು—ಯಾತರ ಸಲುವಾಗಿ ಬರಿದಿ?

ವಿ—ಹತ್ತು ಕೂಡಿಸಿದರ ಸಲುವಾಗಿ ಬರಿದೆನು.

ಗು—ಎಂಟರ ಹಿಂದೆ ಬಂದು ಬರಿವರೆ ಯಾವ ಅಂಕೆಯಾಗುವದು?

ವಿ—ಹದಿನೆಂಟಾಗುವದು.

ಗು—ಏಳರ ಒಂದೆ ಬಂದು ಬರಿದರೆ ಎಷ್ಟಾಗುವದು ?

ವಿ—ಹದಿನೇಳಾಗುವದು.

ಗು—೦೩,೧೪ರಲ್ಲಿ ಬಿಡಿ ಕಾಳುಗಳಿಷ್ಟು ?

ವಿ—ಏಳು, ಎಂಟು.

ಗು—ಪತ್ತರ ಗಂಟುಗಳಿಷ್ಟು ?

ವಿ—ಒಂದೊಂದು ಇದರಂತೆ (ನಾಲ್ಕೈದು ಅಂಕೆಗಳನ್ನು ಹಾಕಿ ಬಿಡಿಕಾಳು ಹಾಗು ಹತ್ತರಗಂಟುಗಳನ್ನು ಕೇಳಬೇಕು.)

ಗು—ಬಿಡಿಕಾಳು ತೋರಿಸುವ ಸ್ಥಾನಕ್ಕೆ ಮೊದಲನೆಯ ಮನೆಯಂತಲೂ, ಹತ್ತರಗಂಟು ತೋರಿಸುವ ಸ್ಥಾನಕ್ಕೆ ಎರಡನೆಯ ಮನೆಯಂತಲೂ ಅನ್ನುವರು. (ಈ ಮನೆಗಳನ್ನು ತಿಳಿಸುವ ಕಾಲಕ್ಕೆ ಚೌಕ ಮನೆಗಳನ್ನು ಕರೇ ಹಲಿಗೆಯಮೇಲೆ ಕೊರೆದು ತಿಳಿಸಬಹುದು.)

ಗು—(೨೫,೩೪ ಈ ಸಂಖ್ಯೆಗಳನ್ನು ಕರೇ ಹಲಿಗೆಯಮೇಲೆ ಬರಿದು) ೨೫ರಲ್ಲಿ ಬಿಡಿ ಕಾಳುಗಳಿಷ್ಟು ?

ವಿ—ಐದು.

ಗು—ಅವು ಯಾವ ಮನೆಯಲ್ಲಿರುತ್ತವೆ ?

ವಿ—ಮೊದಲನೆಯ ಮನೆಯಲ್ಲಿ.

ಗು—೩೪ರಲ್ಲಿ ಬಿಡಿ ಕಾಳುಗಳಿಷ್ಟು ?

ವಿ—ನಾಲ್ಕು.

ಗು—ಅವು ಯಾವ ಮನೆಯಲ್ಲಿರುತ್ತಾವೆ?

ವಿ—ಮೊದಲನೆಯ ಮನೆಯಲ್ಲಿ.

ಗು—೨೫,೩೪ರಲ್ಲಿ ಮೊದಲನೆಯ ಮನೆಯಲ್ಲಿರುವ ಅಂಕೆಗಳ್ಯಾವವು ?

ವಿ—ಐದು ಮತ್ತು ನಾಲ್ಕು.
ಗು—ಅವು ಏನು ತೋರಿಸುತ್ತವೆ?
ವಿ—ಬಿಡಿ ಕಾಳುಗಳನ್ನು.
ಗು—ಹಾಗಾದರೆ ಮೊದಲನೆಯ ಅಂಕೆಗಳು ಏನು ತೋರಿಸುವವು?
ವಿ—ತಮ್ಮಷ್ಟು ಬಿಡಿ ಕಾಳುಗಳನ್ನು ತೋರಿಸುವವು.
ಗು—ಮೊದಲನೆಯ ಮನೆಗೆ ಅಂದರೆ ಬಿಡಿಕಾಳುಗಳ ಮನೆಗೆ ಎಕ್ಕಂಸ್ಥಾನವೆನ್ನುವರು. ಅಂಕೆಗೆ ಎಕ್ಕಂ ಅನ್ನುವರು.
ಗು—೨೫,೩೪ ರಲ್ಲಿ ಎಕ್ಕಂಗಳೆಷ್ಟು?
ವಿ—ಐದು ಮತ್ತು ನಾಲ್ಕು (ಕೆಲವು ಉದಾಹರಣೆಗಳನ್ನು ಕೇಳಬೇಕು.)

ದಹಂ ಕಲಿಸುವದು.

ಗು—೨೫,೩೪ ಇವುಗಳಲ್ಲಿ ಏನೆಯ ಮನೆಯಲ್ಲಿರುವ ಅಂಕೆಗಳ್ಯಾವವು?
ವಿ—ಎರಡು ಮತ್ತು ಮೂರು.
ಗು—ಅವು ಏನು ತೋರಿಸುತ್ತವೆ?
ವಿ—ಹತ್ತರಗಂಟುಗಳನ್ನು.
ಗು—ಏನೆಯ ಮನೆಯಲ್ಲಿ ೬ ಹಾಕಿದರೆಷ್ಟು ಹತ್ತರಗಂಟುಗಳಾಗುವವು?
ವಿ—ಆರು ಹತ್ತರ ಗಂಟುಗಳಾಗುವವು.
ಗು—೮ ಹಾಕಿದರೆಷ್ಟಾಗುವವು?
ವಿ—೮ ಹತ್ತರಗಂಟುಗಳಾಗುವವು.
ಗು—ಹಾಗಾದರೆ ಏನೆಯ ಮನೆಯ ಅಂಕೆಗಳು ಏನು ತೋರಿಸುವವು?

ವಿ—ತಮ್ಮಪ್ಪ ಹತ್ತರಗಂಟುಗಳನ್ನು ತೋರಿಸುವವು.
ಗು—ಏನೆಯ ಮನೆಯ ಅಂಕೆಗೆ ಅಂದರೆ ಹತ್ತರಗಂಟು
ಳಿಗೆ ದಹಂ ಅನ್ನುವರು.
ಗು—ಒಕ್ಕಿ,ಳಿಳರಲ್ಲಿ ದಹಂಗಳಿಷ್ಟ ?
ವಿ—ಎರಡು ಮತ್ತು ಮೂರು (ಕೆಲವು ಉದಾಹರಹೆಗ
ನ್ನು ಹಾಕಿಸಿ ಪ್ರಶ್ನೆಗಳ ದ್ವಾರದಿಂದ ದಹಂ, ಎಕ್ಕ
ಗಳನ್ನು ಕೇಳಬೇಕು.)
ಗು—(ಬಬ್ಬ ವಿದ್ಯಾರ್ಥಿಗೆ) ನಿನಗೆ ಈಗ್ಗ ಎಷ್ಟ ಸ್ಥಾನಗ
ಳು ತಿಳಿದವು ?
ವಿ—ದಹಂ ಎಕ್ಕಂ ಹೀಗೆ ಎರಡು ಸ್ಥಾನಗಳು ತಿಳಿದವು.
ತಿನೆಯ ಮನೆಯನ್ನು ಅಂದರೆ ಶತಂ ತಿಳಿಸುವದು.
ಗು—(೯೯ ಬರಿದು) ಇದರಲ್ಲಿ ಬಿಡಿಕಾಳುಗಳಿಷ್ಟ ?
ವಿ—ವಂಭತ್ತು.
ಗು—ಹತ್ತರಗಂಟುಗಳಿಷ್ಟ ?
ವಿ—ವಂಭತ್ತು.
ಗು—(೯ ಬಿಡಿಕಾಳುಗಳನ್ನು ತೋರಿಸಿ) ಇವುಗಳೊಳಗೆ
ಇನ್ನೊಂದು ಬಿಡಿಕಾಳು ಕೂಡಿಸಿದರೆಷ್ಟಾಗುವವು ?
ವಿ—೧೦ ಬಿಡಿಕಾಳುಗಳಾಗುವವು.
ಗು—(೧೦ ಕಾಳುಗಳನ್ನು ಕೂಡಿಸಿ ಕಟ್ಟಿ) ಇದು ಎಷ್ಟ
ಕಾಳುಗಳ ಗಂಟಾಯಿತು ?
ವಿ—೧೦ ಕಾಳುಗಳ ಬಂದು ಗಂಟಾಯಿತು.
ಗು—ನಮ್ಮ ಹತ್ತರ ಹತ್ತರಗಂಟುಗಳ ಹೊರತು ಮೇಲಾ
ಗಿ ಬಿಡಿಕಾಳುಗಳು ಉಳಿದವೋ ?
ವಿ—ಇಲ್ಲ.

ಗು—ಏನೂ ಇಲ್ಲೆಂದು ತೋರಿಸಲಿಕ್ಕೆ ಏನು ಬರಿಯುತ್ತಾರೆ?

ವಿ—ಶೂನ್ಯ.

ಗು—ನಮ್ಮ ಹತ್ತರ ಏನು ಇರುವದಿಲ್ಲ?

ವಿ—ಬಿಡಿಕಾಳುಗಳು.

ಗು—ಅದರ ಬಗ್ಗೆ ಏನು ಬರಿಯಬೇಕು?

ವಿ—ಶೂನ್ಯ.

(ಮುಂದೆ ಸಾಗುವದು.)

DHARWAR TRAINING COLLEGE CERTIFICATE EXAMINATION.—1894.

ಕಾಲೇಜಿನ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು.

೧ನೇ ವರ್ಷದ ವರ್ಗ.

ಶಾಸ್ತ್ರೀಯ ವಿಷಯ.

೧. ಪದಾರ್ಥಗಳ ೩ ರೂಪಗಳಾವವು? ಎಲ್ಲ ಪದಾರ್ಥಗಳು ಈ ಮೂರೂ ರೂಪಗಳನ್ನು ಹೊಂದುತ್ತವೆಯೊ? ಇಲ್ಲವಾದರೆ ಅಂಥ ಪದಾರ್ಥದ್ದೊಂದು ಉದಾಹರಣೆಯನ್ನು ಕೊಡು.

೨. ಪದಾರ್ಥಗಳ ಸಾಂಸಿದ್ಧಿಕ ಧರ್ಮವೆಂದರೇನು? ಅವು ಎಷ್ಟು ಇರುತ್ತವೆ? ಪ್ರತಿಯೊಂದು ಸಾಂಸಿದ್ಧಿಕ ಧರ್ಮವನ್ನು ವಿವರಿಸು. ೧೦

೩. ಪೃಥ್ವಿ—ಅಪ್—ತೇಜಸ್—ಆಕಾಶ—ವಾಯು ಈ (೫) ಸಂಜ್ಞಮಹಾಭೂತಗಳಿಂದ ಸೃಷ್ಟಿಯು ಆಗಿರುತ್ತದೆಂದು ಕೆಲವರು ನಂಬುತ್ತಾರೆ. ಇದು ಎಷ್ಟು ಮಟ್ಟಿಗೆ ನಿಜವಾದದ್ದು? ಅರ್ವಾಚೀನ ಶೋಧದಂತೆ ಈ ಮಹಾಭೂತಗಳೆಷ್ಟು? ಅವುಗಳಲ್ಲಿ ಹತ್ತು ತತ್ವಗಳ ಹೆಸರುಗಳನ್ನು ಬರೆಯಿರಿ. ೧೧

೪. ವಾತಾಕರ್ಷಕ ಯಂತ್ರವನ್ನೂ ಭಾರಮಾಪಕ ಯಂತ್ರವನ್ನೂ ಆಕೃತಿ ಸಹಿತ ವಿವರಿಸು.

೫. ಸೈರನ್ನನನ್ನು ಆಕೃತಿ ಸಹಿತ ವಿವರಿಸಿ ಅದರಿಂದ ನಮಗೆ ಏನು ತಿಳಿಯುತ್ತದೆಂಬದನ್ನು ಬರೆಯಿರಿ.

೬. ಶಕೆಯಿಂದ ಎಲ್ಲ ಪದಾರ್ಥಗಳು ಬೆಳಿಯುತ್ತವೆ. ಮತ್ತು ಜಳಿಯಿಂದ ಅವು ಆ ಕುಂಜನವಾಗುತ್ತವೆಂಬ ನಿಯಮವನ್ನು ಉದಾಹರಣಗಳಿಂದ ಸ್ಪಷ್ಟೀಕರಿಸು. ಈ ನಿಯಮಕ್ಕೆ ಅಪವಾದಗಳುಂಟೋ? ಇದ್ದರೆ ಅವುಗಳನ್ನು ಕಾರಣ ಸಹಿತ ವಿವರಿಸು.

೭. (ಅ) ನಾಯಿ, ಮಂಗ, ಒಂಟೆ, (ಆ) ತೆಂಗಿನ ಕಾಯಿ, ಹತ್ತೀಗಿಡ, ಕೇಶರ, (ಇ) ಕಲ್ಲಿದ್ದಲು, ಗಂಧಕ, ಸೀಸಪೇನು ಇವುಗಳಲ್ಲಿ ಒಂದೊಂದು ಭಾಗದ ಒಂದೊಂದನ್ನು ಕುರಿತು ನಿಮಗೆ ಗೊತ್ತಿದ್ದನ್ನು ಬರೆಯಿರಿ.

೮. ಹವೆಯ ಘಟಕಾನಯವಗಳಾವವು? ಅವು ಹವೆಯಲ್ಲಿ ಯಾವ ಪ್ರಮಾಣದಿಂದಿರುತ್ತವೆ? ಹವೆಯನ್ನು ಕೆಡಿಸುವ ಕಾರಣಗಳಲ್ಲಿ ಯಾವದು ಅನಿವಾರ್ಯವಿರುತ್ತವೆ?

೯. "ನಾವು ಬಹುಕಾಲದಿಂದ ಪರತಂತ್ರರಾಗಲಿಕ್ಕೆ ಈ ನಮ್ಮ ಸತ್ವಹೀನವಾದ ಆಹಾರವೇ ಕಾರಣವೆಂದು ಅವರು ತಿಳಿಸುತ್ತಾರೆ" ಈ ವಾಕ್ಯದ ಅರ್ಥವನ್ನು ಸ್ಪಷ್ಟವಾಗಿ ಬರದು ನಮ್ಮ ಸ್ವಾತಂತ್ರ್ಯಭಾನಕ್ಕೆ ನಮ್ಮ ಆಹಾರವು ಕಾರಣನಲ್ಲೆಂಬ ಬಗ್ಗೆ ನಿಮಗೆ ಗೊತ್ತಿದ್ದ ಕಾರಣಗಳನ್ನು ಬರೆಯಿರಿ.

೧೦ ಆರೋಗ್ಯಕರವಾದ ಮನೆಗಳನ್ನು ಕಟ್ಟಸಬೇಕಾದರೆ ಯಾವ ಸಂಗತಿಗಳನ್ನು ಲಕ್ಷದಲ್ಲಿಡಬೇಕು? ಈ ಸಂಗತಿಗಳಲ್ಲಿ ಯಾವಕ್ಕೆ ನಮ್ಮ ಜನರು ದುರ್ಲಕ್ಷ ಮಾಡುತ್ತಾರೆ?

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ
ಭಯಸುತ್ತುಂ ಪ್ರತಿಮಾಸದಾದಿಗೊಲವಿಂದೀಪತ್ರಮುಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೫ನೇ.] ನವೆಂಬರ ೧೮೮೫ನೇ ಸಂ. [ಸಂಚಿಕೆ ೧೧.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ದಕ್ಷಿಣಭಾಗದ ಮುನಸಿಪಾಲಿಟಿ ಇದ್ದ ಊರುಗಳಲ್ಲಿರುವ ಸಾಲೆಗಳು ಮುನಿಸಿಪಾಲಿಟಿಗಳ ವಶಕ್ಕೆ ಬೇರಿ ೧೦ ವರ್ಷಗಳಾಗುತ್ತ ಬಂದವು. ಈ ಅವಧಿಯಲ್ಲಿ ನಮ್ಮ ಭಾಗದೊಳಗೆ ಸ್ಥಾನಿಕ ಸ್ವರಾಜ್ಯದ ವಿಷಯವನ್ನು ಎತ್ತಿದ ಅಧಿಕಾರಸ್ಥರ ಆಲೋಚನೆಗೆ ಸರಿಯಾಗಿ ಮುನಿಸಿಪಲ್ ಕಾನ್‌ಫರನ್ಸುಗಳು ಈವರೆಗೂ ಆಗಲಿಲ್ಲ. ಆದರೆ ಹುಬ್ಬಳ್ಳಿಯ ಮುನಸಿಪಾಲಿಟಿಯವರು ಈ ಮಾತನ್ನೆತ್ತಿ ಈ ವರ್ಷ ಕಳೆವ ತಿಂಗಳ ೫ನೇ ತಾರೀಖಿಗೆ ಸ್ಕೂಲ ಕಮಿಟಿಯ ಮೆಂಬರರನ್ನೂ ಶಾಲಾ ಮಾಸ್ತರರನ್ನೂ ಒಟ್ಟುಗೂಡಿಸಿ ಕಾನ್‌ಫರನ್ಸಿನ ಕೆಲಸವನ್ನು ಜರುಗಿಸಿದ ಶ್ರೇಯಸ್ಸು ರಾವಸಾಹೇಬ ಗೋವಿಂದರಾವ ದಾತಾರ ಮೂಪುಲೇದಾರ ಹುಬ್ಬಳ್ಳಿ ಇವರಿಗಿರುತ್ತದೆ. ೫ನೇ ತಾರೀಖಿಗೆ ಕೂಡಿದ ಸಭೆಯಲ್ಲಿ (೫) ಹೊಗಿದ್ದ ಸಾಲೆಗಳ ಅಭಿವೃದ್ಧಿಗೆ ಅನುಕೂಲ ಪ್ರತಿಕೂಲಗಳನ್ನು ಕುರಿತು, (೬) ವಿದ್ಯದ ಜೀವಣಿಗೆಯ ವಿಷಯವನ್ನು ಕುರಿತು ಚರ್ಚೆ ನಡೆದು, ಸ್ಕೂಲಕಮಿಟಿಯವರು

ಶಾಲಾಗೃಹ, ಮಾಸ್ತರ ಜನರ ಪಗಾರ, ಶಿಕ್ಷಣದ ಉಪಕರಣಗಳು ಇವುಗಳನ್ನು ಕುರಿತು ತಕ್ಕ ಏರ್ಪಾಡುಗಳನ್ನು ಮಾಡಬೇಕೆಂತಲೂ, ಕಲಿಸತಕ್ಕ ವಿಷಯಗಳನ್ನು ಶಿಕ್ಷಕರು ಆಸ್ಥೆಯಿಂದ ಶಿಕ್ಷಣ ಪದ್ಧತಿಗೆ ಅನುಸಾರವಾಗಿ ಕಲಿಸುತ್ತ ಹೋಗಬೇಕೆಂತಲೂ ಗೊತ್ತು ಮಾಡಲ್ಪಟ್ಟು ಸಭೆಯು ಕೆಲಸವು ಮುಗಿಸಲ್ಪಟ್ಟಿತು. ಈ ಪ್ರಕಾರದ ಸಭೆಗಳು ಅಲ್ಲಲ್ಲಿಗೆ ಮೇಲಿಂದ ಮೇಲೆ ಆಗುತ್ತ ಹೋದರೆ ವಿದ್ಯಾ ಪ್ರಸಾರದ ಕೆಲಸವು ಚನ್ನಾಗಿ ಸಾಗುವದೆಂಬದಕ್ಕೆ ಏನೂ ಸಂದೇಹವಿಲ್ಲ.

ಮೊನ್ನೆ ಮೊನ್ನೆ ಪೇನ್‌ಶನ್ ತೆಗಿದುಕೊಂಡು ಸ್ವದೇಶಕ್ಕೆ ಮರಳಿದ ಪ್ರಿನ್ಸಿಪಾಲ ಆಕ್ಸೆನ್‌ಹ್ಯಾಮ ಸಾಹೇಬರವರು ಆಗಷ್ಟ ತಿಂಗಳಲ್ಲಿ ಆಕ್ಸಫರ್ಡದೊಳಗೆ ಹಿಂದುಸ್ಥಾನದಲ್ಲಿಯ ಶಿಕ್ಷಣದ ಸಂಬಂಧದಿಂದ ಒಂದು ವ್ಯಾಖ್ಯಾನವನ್ನು ಕೊಟ್ಟರು. ಅವರಲ್ಲಿ ಬಾಬೆರಡು ಬಹಳ ಮಹತ್ವದ ಸಂಗತಿಗಳಿದುತ್ತವೆ. ಈ ದೇಶದಲ್ಲಿ ಸುಶಿಕ್ಷಿತ ಜನರು ತಮ್ಮ ಉದ್ಯೋಗದಿಂದಲೂ ಧೈರ್ಯದಿಂದಲೂ ಲೋಕಶಿಕ್ಷಣದ ಕೆಲಸಕ್ಕಾಗಿ ಮಾಡುವ ಶ್ರಮವನ್ನು ಕುರಿತು ಅವರನ್ನು ಕೊಂಡಾಡಿದರು. ಅದೇ ಮೇರಿಗೆ ಮಿಕನರಿ ಜನರನ್ನೂ ವ್ಯಾಖ್ಯಾನಕಾರರು ಹೊಗಳಿದರು. ಸುಶಿಕ್ಷಿತ ಜನರು ರಾಜದ್ರೋಹಿಗಳೂ ನೀತಿಭ್ರಷ್ಟರೂ ಆಗುತ್ತ ನಡೆದಿರುವರೆಂದು ಇತ್ತ ಕಡೆಗೆ ಎದ್ದ ಪ್ರವಾದದ ಬಗ್ಗೆ ವ್ಯಾಖ್ಯಾನಕಾರರು ತಮ್ಮ ಅಭಿಪ್ರಾಯವನ್ನೂ ಅನುಭವವನ್ನೂ ಸ್ಪಷ್ಟವಾಗಿ ಅರುಹಿ ಈ ಪ್ರವಾದಕ್ಕೆ ಅಸೂಯೆಯ ಹೊರತು ಅಸ್ಪದವೇ ಇಲ್ಲೆಂದು ಖಂಡಿತವಾಗಿ ತಿಳಿಸಿದರು. ವ್ಯಾಖ್ಯಾನಕಾರರು ಈ ದೇಶದೊಳಗೆ ಬಹು ದಿವಸ ವಿದ್ಯಾಖಾತೆಯಲ್ಲಿ ಕೆಲಸ ಮಾಡಿದವರಾದದರಿಂದ ಈ ಸರ್ಟಿಫಿಕೇಟು ಬಹಳ ಗೌರವವುಳ್ಳದ್ದೆಂದು ಎನ್ನಲಿಕ್ಕೆ

ಬಾಧಕವಿಲ್ಲ. ಈ ಆರೋಪಗಳಿಗೆ ಸ್ವಲ್ಪಾದರೂ ಆಧಾರ ವಿದ್ದಿಗೆ ಅದು ಸರಕಾರದ ಶಿಕ್ಷಣಪದ್ಧತಿಯ ಫಲವೆಂದು ಅವರು ಆಡಿ ತೋರಿಸಿದರು.

ಧರ್ಮಸಂಬಂಧದಿಂದ ಅವರು ಹೇಳಿದ್ದೇನೆಂದರೆ—"ಸುಶಿಕ್ಷಿತ ಜನರಲ್ಲಿ ಇದನ್ನು ಕುರಿತು ಜಾಸ್ತಿಯಾಗಿ ಅನಾಸ್ಥೆ ಹುಟ್ಟುತ್ತ ನಡೆದದೆಂಬುವದು ನಿಜವು. ಆದರೆ ಆ ಸಂಬಂಧದಿಂದ ಸರಕಾರದವರ ಮೇಲೆ ತಪ್ಪು ಹೊರಿಸಲಿಕ್ಕೆ ಬರಲಾರದು. ಅದಕ್ಕೆ ಬೇರೆ ಅನೇಕ ಕಾರಣಗಳಿರುತ್ತವೆ. ಆದರಲ್ಲಿ ವಿದ್ಯಾರ್ಥಿಗಳ ಹಿರಿಯರು ಅವರ ಧರ್ಮ ಸಂಬಂಧದ ಶಿಕ್ಷಣವಲ್ಲಿ ತೋರಿಸುವ ಅನಾಸ್ಥೆಯು ಮುಖ್ಯಕಾರಣವಾಗಿರುತ್ತದೆ."

ಹಿಂದುಸ್ಥಾನವಲ್ಲಿ ವರಿಷ್ಠ ಪ್ರತಿಯ ಶಿಕ್ಷಣವು ಬಹಳ ಸ್ವಲ್ಪ ಖರ್ಚಿನಿಂದ ಅಥವಾ ಖರ್ಚಿಲ್ಲದೆ ದೊರಿಯುತ್ತದೆಂದು ಬಹಳ ಮುಂದಿ ಆಂಗ್ಲೋ ಇಂಡಿಯನ್ ಜನರ ಅಭಿಪ್ರಾಯವಿರುತ್ತದೆ. ಈ ಅಭಿಪ್ರಾಯದ ಅಸತ್ಯತೆಯನ್ನು ಆಕ್ಸನ್‌ಹ್ಯಾಮ್ ಸಾಹೇಬರವರು ಸಭಿಕರ ನಿದರ್ಶನಕ್ಕೆ ಚೆನ್ನಾಗಿ ತಂದು ಕೊಟ್ಟರು. ಅವರು ಹಿಂದುಸ್ಥಾನವಲ್ಲಿಯ ಅಂಡರ ಗ್ರಾಜುಯೇಟ್ಸ ಜನರಿಗೆ ಆಕ್ಸಫರ್ಡ ವಲ್ಲಿಯ ವಿದ್ಯಾರ್ಥಿಗಳಿಗಿಂತ ಕಡಿಮೆ ಫೀ ಬೀಳದೆ ಹೆಚ್ಚಿಗೆ ಬೀಳುತ್ತದೆಂತಲೂ, ಇಂಗ್ಲಂಡದಲ್ಲಿ ವರಿಷ್ಠ ಶಿಕ್ಷಣಕ್ಕೆ ತಗಲುವ ಖರ್ಚು ಫೀ ಮುಂತಾದ ಶಿಕ್ಷಣದ ಬಾಬಿಗಾಗಿ ಹತ್ತದೆ, ಕೇವಲ ಐಷಆರಾಮಿನಿಂದ ಇರುವದಕ್ಕೆ ಹತ್ತುತ್ತದೆಂತಲೂ ಇಂಗ್ಲಂಡದಲ್ಲಿ ಸರಕಾರದಿಂದ ಪ್ರತಿ ಬುಬ್ಬ ಮನುಷ್ಯನಿಗೆ ಶಿಕ್ಷಣಕ್ಕಾಗಿ ೫ ಶಿಲಿಂಗು ಖರ್ಚು ಮಾಡಲ್ಪಡುತ್ತದೆಂತಲೂ ಆದೇ ಹಿಂದುಸ್ಥಾನದಲ್ಲಿ ಪ್ರತಿ ಬುಬ್ಬನಿಗೆ ೧ ಪೇನ್ಸು ಮಾತ್ರ

ಸರಕಾರದಿಂದ ಖರ್ಚು ಮಾಡಲ್ಪಡುತ್ತದೆಂತಲೂ ಸಪ್ರಮಾಣವಾಗಿ ಹೇಳಿದರು. ಮತ್ತು ವಸ್ತುಸ್ಥಿತಿಯು ಹೀಗಿರುತ್ತಾ ಸರಕಾರದವರು ಹಿಂದುಸ್ಥಾನದಲ್ಲಿ ವರಿಷ್ಠ ಶಿಕ್ಷಣಕ್ಕೆ ಹೆಚ್ಚು ಖರ್ಚು ಮಾಡುತ್ತಾರೆಂದು ಕೂಗುವದು ತೀರ ಅಸಂಬದ್ಧವೆಂದು ತಿಳಿಸಿದರು.

ಕಡೆಯಲ್ಲಿ ವ್ಯಾಖ್ಯಾನಕಾರರು ಸ್ತ್ರೀ ಶಿಕ್ಷಣದ ಕಡೆಗೆ ಬಲಿದು, ಅದರಲ್ಲಿ ಘಾಸಿ ಜನರು ಎಲ್ಲಕ್ಕೂ ಮುಂದರಿದಿರುವರೆಂದು ಅವರನ್ನು ಬಣ್ಣಿಸಿ, ಇಡಿ ಹಿಂದುಸ್ಥಾನದಲ್ಲಿ ಸ್ತ್ರೀ ಶಿಕ್ಷಣವು ದಿನದಿನಕ್ಕೆ ಹೆಚ್ಚುತ್ತ ನಡೆದದ್ದು ಸದ್ಯಕ್ಕೆ ಮದ್ರಾಸ ಇಲಾಖೆಯು ಉಳಿದ ಎಲ್ಲ ಭಾಗಗಳಿಗಿಂತ ಮುಂದರಿದಿರುವದೆಂದು ಹೇಳಿದರು.

ಹೂವಿನ ಗಿಡಗಳ ವರ್ಗೀಕರಣವನ್ನು ಬಣ್ಣದಿಂದ ಮಾಡಲಾಗಿ ಅವು ಬಂದು ನಾವಿರ ಜಾತಿಯವಿರುತ್ತವೆಂದು ಗೊತ್ತಾಗಿರುತ್ತದೆ. ಅವುಗಳಲ್ಲಿ ೭೯೪ ಗಿಡಗಳಿಗೆ ಬಿಳೀ ಹೂವುಗಳೂ, ೭೦೬ ಗಿಡಗಳಿಗೆ ಹಳದೀ ಬಣ್ಣದ ಹೂವುಗಳೂ, ೭೭೦ ಗಿಡಗಳಿಗೆ ಕೆಂಪು ಹೂವುಗಳೂ, ೧೪೧ ಗಿಡಗಳಿಗೆ ಅಸಮಾನೀ ಬಣ್ಣದ ಹೂವುಗಳೂ, ೭೫೫ ಗಿಡಗಳಿಗೆ ನೀಲಿ ಬಣ್ಣದ ಹೂವುಗಳೂ, ೩೬ ಗಿಡಗಳಿಗೆ ಪಸುರು ಹೂವುಗಳೂ, ೧೭೭ ಕ್ಕೆ ಕಿತ್ತಳೇ ಬಣ್ಣದ ಹೂವುಗಳೂ, ೪ ಗಿಡಗಳಿಗೆ ಪಿಂಗಟ ಬಣ್ಣದ ಹೂವುಗಳು ಮತ್ತು ೭೯೯ ಕ್ಕೆ ಕಲೀ ಹೂವುಗಳು ಆಗುವವೆಂದು ಗೊತ್ತಾಗಿರುತ್ತದೆ.

(೭೧೯ ಪುಟದಿಂದ ಸಾಗಿದ್ದು.)

೪. ಮಾತಾಡುವಾಗ್ಗೆ ಬಪಳ ಎಚ್ಚರದಿಂದ ಮಾತಾಡಲಿಕ್ಕೆ ಬೇಕು ತಮ್ಮ ಮತವನ್ನು ಸಿದ್ಧಮಾಡುವದಕ್ಕೆ ಹೇಳಬೇಕಾಗುವ ಸಂಗತಿಗಳು ನಿಜವಾಗಿರಬೇಕು ಮತ್ತು ಅವು

ಗಳಬಗ್ಗೆ ತಮಗೆ ಏನೂ ಸಂಶಯವಿರಬಾರದು. ಇಂಥ ಸಂಗತಿಗಳನ್ನೇ ಹೇಳಬೇಕಲ್ಲದೆ ಬೇರೆ ಸಂಗತಿಗಳನ್ನು ಹೇಳಬಾರದು. ಆದರೆ ಕೆಲವು ಪ್ರಸಂಗಗಳಲ್ಲಿ ಅನೇಕ ಸಂಗತಿಗಳನ್ನು ಹೇಳಬೇಕಾಗುತ್ತದೆ. ಅವೆಲ್ಲಾ ಪೂರ್ಣವಾಗಿ ತಮ್ಮ ಲಕ್ಷ್ಯದಲ್ಲಿರುತ್ತವೆಂಬ ನಿಯಮವಿಲ್ಲ. ಎಷ್ಟೋ ಸಂಗತಿಗಳು ಅರ್ಧಮರ್ಧ ನೋಡಿದಂಥವೂ ಅಥವಾ ನೋಡಿ ಬಿಡಿಸಿದಂಥವೂ ಇರುತ್ತವೆ. ಆದದರಿಂದ ಅವುಗಳನ್ನು ಹೇಳುವಾಗ್ಗೆ ಹೆಚ್ಚು ಕಡಿಮೆ ಶಬ್ದಗಳು ಬೀಳುವ ಸಂಭವವಿರುತ್ತದೆ. ಆ ಕಾರಣ ಇಂಥ ಸಂಗತಿಗಳನ್ನು ಹೇಳುವಾಗ್ಗೆ ಮೊದಲು, ಮುಂಚೆ, ಪೂರ್ವದಲ್ಲಿ, ನನಗೆ ತೋರುತ್ತದೆ, ನನ್ನ ನೆನಪಿನಲ್ಲಿರುತ್ತದೆ; ಬಹುಶಾ, ಬಹಳವಾಗಿ, ಕದಾಚಿತ್, ಪ್ರಾಯಶಃ, ಕ್ರಮೇಣ ಮುಂತಾದ ಶಬ್ದಗಳಲ್ಲಿ ಯೋಗ್ಯವಾದ ಶಬ್ದಗಳನ್ನು ಉಪಯೋಗಿಸಬೇಕು. ಆದರಿಂದ ತಮ್ಮ ನಿಜಸ್ಥಿತಿಗೆ ಹಾನಿ ಬರಲಾರದು.

೫. ಸಭೆಗೆ ಹೋದಮೇಲೆ ಮಾತಾಡುವದಕ್ಕಿಂತ ಕೇಳುವ ಆತುರವು ಹೆಚ್ಚಿಗಿರಬೇಕು. ಬಂದು ಪ್ರಕಾರದಿಂದ ಸ್ವತಃ ಮಾತಾಡುವದು ಬೇರೆಯವರನ್ನು ಜಾಣರನ್ನು ಮಾಡುವ ಪ್ರಯತ್ನವನ್ನು ಸೂಚಿಸುತ್ತದೆ; ಮತ್ತು ಕೇಳುವದು ಸ್ವತಃ ಜಾಣನಾಗುವ ಪ್ರಯತ್ನವನ್ನು ಸೂಚಿಸುತ್ತದೆ. ಇವೆರಡೂ ಸ್ತುತ್ಯ ಕೆಲಸಗಳಾಗಿರುತ್ತವೆ. ಆದರೆ ಇವುಗಳಲ್ಲಿ ತಾನು ಸ್ವತಃ ಜಾಣನಾಗುವ ಪ್ರಯತ್ನವು ಅಂದರೆ ಬೇರೆಯವರು ಏನು ಮಾತಾಡುತ್ತಾರೆಂಬದನ್ನು ಕೇಳುವ ಪ್ರಯತ್ನವು ವಿಶೇಷ ಗ್ರಾಹ್ಯವಾಗಿರುತ್ತದೆ. ಅದರಲ್ಲಿ ವಿನಯದ ಅಂಶವಿರುತ್ತದೆ. "ದೇವರು ನಮಗೆ ಬಂದೀ ಬಾಯಿಯನ್ನೂ ಎರಡು ಕಿವಿಗಳನ್ನೂ ಕೊಟ್ಟಿದ್ದಾನೆಂದು" ಒಬ್ಬ ಕವಿಯು ವರ್ಣಿಸಿರುತ್ತಾನೆ. ಇದರಿಂದ ನಾವು ಸ್ವಲ್ಪ

ವೇ ಮಾತಾಡಬೇಕು ಮತ್ತು ಬಹಳ ಕೇಳಬೇಕೆಂದು ಅವನ ಅಭಿಪ್ರಾಯವಿರುತ್ತದೆ. ಮತ್ತು ಇದೇ ಹೆಚ್ಚು ಶ್ರೇಯಸ್ಕರವಾದದ್ದು.

೬. ಈಗಿನ ಕಾಲದಲ್ಲಿ ಸಭೆಗಳಲ್ಲಿ ಮಾತಾಡಬೇಕಾದರೆ, ಮತ್ತೊಂದು ವಿಶೇಷ ಮಹತ್ವದ ಸಂಗತಿಯ ಕಡೆಗೆ ಲಕ್ಷ ಕೊಡುವದು ಅವಶ್ಯವಿರುತ್ತದೆ. ಅದು ಯಾವದೆಂದರೆ ರಾಜಕೀಯ ಪ್ರಕರಣದ ವಿಷಯವು. ನಮ್ಮ ತರುಣ ಜನರು ಸಭೆಗಳಲ್ಲಿ ಇವರ ವಿಷಯಕ್ಕೆ ಮಾತಾಡದಂತೆಯೇ ಪ್ರಯತ್ನ ವಿಡಬೇಕು. ಮಾತಾಡುವ ಪ್ರಸಂಗವೇ ಬಿದ್ದರೆ ಅಥವಾ ಮಾತಾಡಲಿಕ್ಕೇ ಬೇಕೆಂದು ತೋರಿದರೆ ಬಹಳ ಎಚ್ಚರದಿಂದ ಮಾತಾಡಬೇಕು. ಕಾರಣವೇನೆಂದರೆ ಸಾಂಪ್ರತ ಕಾಲದಲ್ಲಿ ಈ ದೇಶದಲ್ಲಿಯ ಎಲ್ಲ ರಾಜ್ಯ ವ್ಯವಸ್ಥೆಯು ನಮ್ಮ ತರುಣ ಜನರಿಗೆ ತಿಳಿದಿರುತ್ತದೆ. ಅದರಲ್ಲಿಯ ವ್ಯಂಗಗಳು ಅವರಿಗೆ ಗೊತ್ತಾಗಿರುತ್ತವೆ. ಮತ್ತು ಈ ವ್ಯಂಗಗಳಿಂದ ತಮ್ಮ ರಾಷ್ಟ್ರಕ್ಕೆ ಆಗುವ ಹಾನಿಯು ಅವರಿಗೆ ಚನ್ನಾಗಿ ತಿಳಿದಿರುತ್ತದೆ. ಆ ಸಂಬಂಧದ ವಿಚಾರದಿಂದ ಪ್ರಸಂಗವಶಾತ್ ಅವರ ಮನಸ್ಸು ಸಂತಪ್ತವಾಯಿತೆಂದರೆ ಅವರ ಬಾಯಿಂದ ಅವಿಚಾರದ ಉದ್ಗಾರಗಳು ಹೊರಡುವ ಸಂಭವವಿರುತ್ತದೆ. ಆದ್ದರಿಂದ ಇಂಥ ಪ್ರಸಂಗಗಳನ್ನು ಆದಷ್ಟು ತಪ್ಪಿಸುವದೇ ಒಳ್ಳೆಯದು. 'ಇಂಥ ವಿಷಯಗಳ ಮೇಲೆ ಊಹಾಪೋಹವಾಗಿ ಅವುಗಳ ಬಗ್ಗೆ ಯೋಗ್ಯ ವ್ಯವಸ್ಥೆಯಾಗುವ ಅವಶ್ಯಕತೆಯು ಇರುವದಿಲ್ಲೆ? ಎಂದು ಯಾರಾದರೂ ಶಂಕಿಸಬಹುದು. ಈ ವಿಷಯದಬಗ್ಗೆ ಚರ್ಚಿಸಿ ಅವರಬಗ್ಗೆ ನಿರ್ಣಯಿಸುವದು ಉಳಿದ ವಿಷಯಗಳಿಗಿಂತಲೂ ಹೆಚ್ಚಿಗೆ ಮಹತ್ವದ್ದಿರುವದು ನಿಜವು. ಆದರೆ (೧) ಆ ವಿಷಯದಬಗ್ಗೆ

ಸದ್ಯದ ಸ್ಥಿತಿಯು ಚನ್ನಾಗಿರುವದಿಲ್ಲ. ಈ ವಿಷಯದ ಸಂಬಂಧವು ನಮಗೂ ನಮ್ಮ ರಾಜ್ಯಕರ್ತರಿಗೂ ಇರುತ್ತದೆ. ಆದರೆ ಇವೆರಡು ಸಂಬಂಧಗಳ ಐಕ್ಯವಿರುವದಿಲ್ಲ. ಸ್ವಲ್ಪ ವೈಪರೀತ್ಯವಿರುತ್ತದೆ. ರಾಜ ಪಕ್ಷ ಸಂಬಂಧವು ಅತ್ಯಂತ ಪ್ರಬಲವೂ ನಮ್ಮ ಸಂಬಂಧವು ಅತ್ಯಂತ ದುರ್ಬಲವೂ ಆಗಿರುತ್ತದೆ ಇವುಗಳ ದ್ವಂದ್ವವು ಪ್ರಾರಂಭಿಸಿದರೆ, ಆದರಲ್ಲಿ ದುರ್ಬಲ ಪಕ್ಷವು ನಾಶಹೊಂದುವದು ನಿಸ್ಸಂದೇಹವು. ಆದ್ದರಿಂದ ನಾವು ಅದರ ಬಗ್ಗೆ ಮೌನ ಧರಿಸಿ ನಡೆಯುವದನ್ನೆಲ್ಲ ಸಾವಧಾನದಿಂದ ನೋಡಬೇಕು ಅಥವಾ ಮಾತಾಡುವದಾದರೆ ಜಪ್ಪಿಸಿ ಸಾಧಾರವಾಗಿ, ಪೂರ್ವಾಪರ ಸಂಬಂಧವನ್ನು ತೂಗಿನೋಡಿ ಮಾತಾಡಬೇಕು. ಇದು ಉತ್ತಮವಾದದ್ದು. ಆದೇಮೇರೆಗೆ (೨) ಕೆಲವು ವಿಷಯಗಳು ಮಾತಿನಿಂದ ಕೆಡುವಷ್ಟು, ಕೃತಿಯಿಂದ ಕೆಡುವದಿಲ್ಲ. ರಾಜಕಾರಣವು ಅವುಗಳಲ್ಲಿ ಬಂದಾಗಿರುತ್ತದೆ. ರಾಜಕಾರಣದ ಪುರುಷರು ಬಹಳ ಮಾತಾಡುವದಿಲ್ಲೆಂಬದು ಎಲ್ಲರಿಗೂ ಗೊತ್ತುಂಟು. ಅದರ ತಾತ್ಪರ್ಯವೇನೆಂದರೆ—ತಾವು ಮಾಡತಕ್ಕ ಕಾರ್ಯದ ಬಗ್ಗೆ ಮೊದಲೇ ಆಡಿ ತೋರಿಸುವದರಿಂದ ಎಲ್ಲವೂ ನಾಶವಾಗುವ ಸಂಭವವಿರುತ್ತದೆ. ಅಂದರೆ ಇದು ಚದುರಂಗದ ಆಟದಂತೆ ಇರುತ್ತದೆ; ಅದರಲ್ಲಿ ತಾವು ಮುಂದೆನು ಮಾಡತಕ್ಕವರೆಂಬದನ್ನು ಮೊದಲೇ ಎಂದೂ ಹೇಳುವದು ಸರಿಯಲ್ಲ. ಆದರಿಂದ ಈ ವಿಷಯದ ಸಂಬಂಧದಿಂದ ಮೌನವನ್ನು ಅಂಗೀಕರಿಸುವದೇ ಉತ್ತಮ ಪಕ್ಷವು.

ಬೇರೆ ಸಾಧಾರಣ ವಿಷಯಗಳ ಬಗ್ಗೆ ಮಾತಾಡುವಾಗೆಲ್ಲ ಬಹಳ ಜಾಗ್ರತರಾಗಿರಬೇಕು. ಆತ್ಮಶ್ಲಾಘನೆಯನ್ನು ಮಾಡಿಕೊಳ್ಳಬಾರದು. ಖಂಡನ ಬುದ್ಧಿ ಇರಬಾರದು. ತಮ್ಮ ಮತವನ್ನು ಸುವಿನಯದಿಂದ ಹೇಳಬೇಕು.

(ಮುಂದೆ ಸಾಗುವದು.)

ನಮ್ಮ ಜಿಲ್ಲಾಧಿಪತಿಗಳಾದ ಲಾರ್ಡ್ ಸ್ಯಾಂಡಹರ್ಸ್ಟ್ ದೊರೆಗಳವರು ದಕ್ಷಿಣ ಮಹಾರಾಷ್ಟ್ರದಲ್ಲಿ ಪ್ರವಾಸ ಮಾಡುವದಕ್ಕೆ ಹೊರಟು ಕಳೆದ ತಿಂಗಳ ೬ನೇ ತಾರೀಖಿಗೆ ಕೊಲ್ಹಾಪುರಕ್ಕೆ ಹೋಗಿ ಅಲ್ಲಿಂದ ೭ನೇ ತಾರೀಖಿಗೆ ಬೆಳಗಾವಿಗೆ ಬಂದು ಕ್ಯಾಸಲ್‌ರಾಕ್‌ವನ್ನು ಕಂಡು ಮರಳಿ ಸ್ವಸ್ಥಾನಕ್ಕೆ ಹೋದರು.

ಹೊಗೆ ಬಂಡಿಗಳಲ್ಲಿ ಪ್ರವಾಸ ಮಾಡುವ ೩ನೇ ತರಗತಿಯವರ ಅನುಕೂಲತೆಯನ್ನು ಕುರಿತು ಹಿಂದುಸ್ಥಾನ ಸರಕಾರದವರು ೧೦ನೇ ಜುಲಾಯಿಯಲ್ಲಿ ಬಂದು ಹೊಸ ಠರಾವು ಮಾಡಿರುತ್ತಾರೆ. ಅದರಲ್ಲಿ ತೋರಿಸಿರುವ ಸಂಗತಿಗಳು ಯಾವವೆಂದರೆ:—ಈ ಪ್ರವಾಸಿಕರು ಕೂಡುವದರ ಸಲುವಾಗಿ ಹೆಚ್ಚಿಗೆ ಪ್ರಶಸ್ಥವಾದ ಇಮಾರತಗಳನ್ನು ಕಟ್ಟಿಸಬೇಕು. ಗಾಡಿಗಳಲ್ಲಿ ಮಲಮೂತ್ರ ವಿಸರ್ಜನೆಕ್ಕೆ ತಕ್ಕ ಅನುಕೂಲತೆಯನ್ನೂ, ಸ್ಟೇಶನುಗಳಲ್ಲಿ ಫಲಾಹಾರದ ಮತ್ತು ಸ್ವಚ್ಛವಾದ ಕುಡಿಯುವ ನೀರಿನ ಅನುಕೂಲತೆಯನ್ನು ಮಾಡಬೇಕು. ಊರ ಪೇಟೆಗಳಲ್ಲಿ ತಿಕೀಟು ಮಾರುವ ಅಂಗಡಿಗಳನ್ನೂ ಏಜಂಟರನ್ನೂ ತೀವ್ರವಾಗಿ ಹೊತ್ತುಹೊಡಿ ೩ನೇ ತರಗತಿಯ ತಿಕೀಟುಗಳನ್ನು ಪಡಿಯುವದಕ್ಕಾಗಿ ಸದ್ಯಕ್ಕೆ ಆಗುತ್ತಿರುವ ಕಷ್ಟವನ್ನೂ ವೇಳೆಯ ವ್ಯಯವನ್ನೂ ಕಟ್ಟು ಮಾಡಬೇಕು. ಜಾತ್ರೆಗಳ ಬಗ್ಗೆ ಹೆಚ್ಚು ಸೋವಿಯಾದ ಗಾಡಿಗಳನ್ನಿಡಬೇಕು. ಹೆಚ್ಚಿಗೆ ಪ್ರವಾಸಿಕರಿದ್ದ ದಿವಸಗಳಲ್ಲಿ ಬೇರೆ (ಸ್ಪೇಶಲ್) ಗಾಡಿಗಳನ್ನು ಬಿಡುವ ವ್ಯವಸ್ಥೆ ಮಾಡಬೇಕು. ಪ್ರವಾಸಿಕರು ಫಲಾಹಾರಾದಿಗಳನ್ನು ಮಾಡಿ ವಿಶ್ರಾಂತಿಗೊಳ್ಳುವಂತೆ ತಕ್ಕ ಸ್ಥಳಗಳಲ್ಲಿ ಸಾಕಷ್ಟು ವೇಳೆ ಗಾಡಿಗಳನ್ನು ನಿಲ್ಲಿಸಬೇಕು. ಬೆಸಿಲಿನ ದಿವಸಗಳಲ್ಲಿ ಬಂ

ಬೊಂದು (ಕಂಪಾರ್ಟ್‌ಮೆಂಟ್) ಕೋಚಿಗಳಲ್ಲಿ ಕೂಡಿಸಲ್ಪ
ಡುವ ಜನರ ಸಂಖ್ಯೆಯನ್ನು ಕಡಿಮೆ ಮಾಡಬೇಕು. ಸಾ
ಮಾನುಗಳ ಗಾಡಿಗಳ ಸಲುವಾಗಿ ಪ್ರವಾಸಿಕರಿಗೆ ಅನುಕೂಲ
ವಾಗುವಂತೆ ಹೊಸ ನಿಯಮಗಳನ್ನು ಗೊತ್ತು ಮಾಡಬೇಕು,
ಇತ್ಯಾದಿ. ಆದರೆ ಈ ತರಾವಿನಿಂದ ಸದ್ಯಕ್ಕೆ ವಿಶೇಷ ಅನು
ಕೂಲತೆ ಏನೂ ಆಗುವಂತೆ ತೋರುವದಿಲ್ಲ. "ಗುಡ್ಡ
ಗದ್ದರಿಸಿ ಇಲಿ ಹೊರಟಿತೆಂಬಂತೆ" ಸರಕಾರದವರ ತರಾವಿನ
ಸ್ಥಿತಿಯಾಗುವ ಸಂಭವವೇ ವಿಶೇಷವಿರುತ್ತದೆ. ಆದದರಿಂದ
ಸರಕಾರದವರು ಕೆಲವೊಂದು ನಿಯಮವನ್ನು ಗೊತ್ತು ಮಾಡಿ
ರೇಲ್ವೆ ಅಧಿಕಾರಸ್ಥರು ಅದರಂತೆ ನಡಕೊಳ್ಳಲಿಕ್ಕೇ ಜೋಕೆಂ
ದು ತಿಳಿಸಬೇಕು. ಮತ್ತು ರೇಲ್ವೆಯವರಲ್ಲದಂಥ ಜೋಕೆ
ಅಧಿಕಾರಿಗಳನ್ನು ನಿಯಮಿಸಿ ಸೂಚಿಸಿದ ಸುವ್ಯವಸ್ಥೆಯ
ಸಂಬಂಧದಿಂದ ಆಗಾಗ್ಗೆ ಮೇಲ್ವಿಚಾರಣೆ ಮಾಡಬೇಕು;
ಅಂದರೆ ಪ್ರವಾಸಿಕರಿಗೆ ಸ್ವಲ್ಪಾದರೂ ಹಿತವಾಗದೆ ಇರದು.

NOTES ON METHOD-SUCCESS IN TEACHING.

ಶಿಕ್ಷಣದಲ್ಲಿ ಕೀರ್ತಿಯು.

(ಹಿಂದೇ ಪುಟದಿಂದ ಸಾಗಿದ್ದು)

೪. ಕಲಿಸತಕ್ಕ ವಿಷಯವನ್ನೇ ಆಗಲಿ ಅಥವಾ ಆ ವಿಷ
ಯದಲ್ಲಿ ಲಕ್ಷಿಸತಕ್ಕಂಥಾದೊಂದು ಅಂಶವನ್ನೇ ಆಗಲಿ ವಿ
ದ್ಯಾರ್ಥಿಗಳಿಗೆ ಬಮ್ಮೆಲೆ ಸ್ಪಷ್ಟವಾಗಿ ತಿಳಿಯುವಂತೆ ಹೇಳ
ಬೇಕು. ಈ ವಿಷಯದಲ್ಲಿ ಉತ್ತಮ ಪದ್ಧತಿಯು ಯಾವದೆಂ
ದರೆ; ಮಾಸ್ತರರು ಕಲಿಸಬೇಕಾದ ವಿಷಯವನ್ನು ಕುರಿತು
ಚನ್ನಾಗಿ ವಿಚಾರ ಮಾಡಿ ಆ ಪಾಠದ ಒಂದೊಂದು ಭಾಗದ
ವಿಷಯದಲ್ಲಿ ಒಂದೊಂದು ಪ್ರಶ್ನವನ್ನು ಮುಂಚಿತವಾಗಿಯೇ
ತಯಾರ ಮಾಡಿಕೊಂಡು ಬಂದಿರಬೇಕು; ಮತ್ತು ಆ
ಪ್ರಶ್ನಗಳನ್ನು ಕ್ರಮದಿಂದ ಬಂದರ ಹಿಂದೊಂದು ಬಿಡಿಸ

ತಕ್ಕ ಲಕ್ಷಣಗಳಂತ ವಿದ್ಯಾರ್ಥಿಗಳಿಗೆ ಕೇಳಬೇಕು. ನಾವು ಯಾವ ಪದ್ಧತಿಯನ್ನು ಅನುಸರಿಸಿದರೂ ಅದರಿಂದ ವಿದ್ಯಾರ್ಥಿಗಳಲ್ಲಿ ಕುತೂಹಲ ಹುಟ್ಟುತ್ತದೆಂಬ ಸುಳ್ಳು ತಿಳುವಳಿಕೆಯಿಂದ ವಿಷಯಕ್ಕೆ ಸಂಬಂಧವಿಲ್ಲದ ಸಂಗತಿಗಳನ್ನು ಹೇಳಿ ಅವರನ್ನು ಗೊಂದಲಪಡಿಸಬಾರದು. ಇಂಥ ಪದ್ಧತಿಯಿಂದ ಮಾಸ್ತರನಿಗಾಗಲಿ ವಿದ್ಯಾರ್ಥಿಗಳಿಗಾಗಲಿ ಏನೂ ಲಾಭವಾಗಲಾರದು. ಯಾವದಾವರೂ ವಿಷಯವನ್ನು ಹುಡುಗರ ಮುಂದೆ ಹೆಚ್ಚು ಹೆಚ್ಚು ಸ್ಪಷ್ಟವಾಗಿ ಇಟ್ಟಂತೆ ಆ ವಿಷಯವನ್ನು ಸಂಪೂರ್ಣವಾಗಿ ತಿಳುಕೊಳ್ಳಲಿಕ್ಕೆ ಅವರು ಹೆಚ್ಚು ಹೆಚ್ಚು ಪ್ರಯತ್ನವನ್ನು ಮಾಡುವರು. ಪಾಠದ ಬಂದು ಭಾಗವು ಯಾವತ್ತು ವಿದ್ಯಾರ್ಥಿಗಳಿಗೆ ತಿಳಿದನಂತರ ಮುತ್ತೊಂದು ಭಾಗವನ್ನು ತೆಗದುಕೊಳ್ಳಬೇಕು; ಇಲ್ಲದಿದ್ದರೆ ಶಿಕ್ಷಕನು ಮುಂದೆ ಸಾಗಿಸಾಗಿದ ಹಾಗೆ ಅವನ ಶಿಷ್ಯರು ಹಿಂದ ಹಿಂದೆ ಉಳಿಯುವರು. ಹುಡುಗರಿಗೆ ತಕ್ಕ ಪ್ರಶ್ನಗಳನ್ನು ಕೇಳಬೇಕಾದರೆ ಮಾಸ್ತರನಲ್ಲಿ ತುಸು ಜಾಣತನವೂ ಇರಬೇಕಾಗುತ್ತದೆ. ಪ್ರಶ್ನದ ಉತ್ತರವು ಪ್ರಶ್ನದಮೇಲಿಂದಲೇ ತಿಳಿಯುವಂಥ ಅಥವಾ ಹುಡುಗರಿಗೆ ಅರ್ಥವು ತಿಳಿಯದೆ ಉತ್ತರವನ್ನು ಮಾತ್ರ ಹೇಳಲಿಕ್ಕೆ ಬರುವಂಥ ಪ್ರಶ್ನಗಳನ್ನು ಎಂದೂ ಕೇಳಬಾರದು. ಬಂದೇ ವಿಷಯವನ್ನು ಎರಡು ರೀತಿಯಿಂದ ಹೇಳಲಿಕ್ಕೆ ಬರುತ್ತದೆ. ಅವು ಹ್ಯಾಗಂದರೆ:--
ವಿದ್ಯಾರ್ಥಿಗಳಿಗೆ ವಿಚಾರ ಮಾಡುವದಕ್ಕೂ ಕಾಸ್ಕ್ರೀಕ್ತ ರೀತಿಯಿಂದ ಅನುಮಾನಗಳನ್ನು ತೆಗೆಯುವದಕ್ಕೂ ಅಗತ್ಯ ಬೀಳುವಂತೆ ಪ್ರಶ್ನಗಳನ್ನು ಕೇಳುವದು ಬಂದು. ವಿಷಯವನ್ನು ಸ್ಪಷ್ಟವಾಗಿ ವಿವರಿಸಿ ಅದರ ಉಪಪತ್ತಿಯನ್ನೂ ದೃಷ್ಟಾಂತಗಳನ್ನೂ ಮಾಸ್ತರರು ತಾವೇ ಹೇಳುವದು ಮುತ್ತೊಂದು. ಈ ಎರಡು ಪದ್ಧತಿಗಳಲ್ಲಿ ಶಿಕ್ಷಕನು ಯಾವ ಪದ್ಧತಿಯನ್ನು ಅನುಸರಿಸಬೇಕೆಂಬದು ವರ್ಗದ ಹುಡು

ಗರ ಬುದ್ಧಿಯನ್ನು ಅವಲಂಬಿಸಿರುವದು. ಆದರೆ ಹುಡುಗರು ತಮ್ಮ ಮಾನಸಿಕ ಶಕ್ತಿಗಳನ್ನು ಅದಷ್ಟು ಹೆಚ್ಚು ಉಪಯೋಗಿಸುವಂತೆ ಮಾಡಬೇಕಾದರೆ ಮೊದಲನೇ ಪದ್ಧತಿಯೇ ಸ್ವೀಕರಿಸತಕ್ಕಂಥಾದ್ದು.

೫. ವಿದ್ಯಾರ್ಥಿಗಳಿಗೆ ಯಾವದಾದರೊಂದು ವಿಷಯದ ನಿರೂಪಣವನ್ನು ಚನ್ನಾಗಿ ಮಾಡಿದ ನಂತರ ಅವರು ಅದನ್ನು ಚನ್ನಾಗಿ ಗೃಹಿಸಿಕೊಂಡು ನೆನಪಿಡುವದಕ್ಕೆ ಸಾಕಷ್ಟು ಅವಕಾಶವನ್ನು ಕೊಡುವಲ್ಲಿ ಮಾಸ್ತರನು ಜಾಗ್ರತೆ ಪಡಬೇಕು. ಬಂದು ವಿಷಯವನ್ನು ಅಲ್ಪ ಸ್ವಲ್ಪ ನಿರೂಪಿಸಿ ಅದನ್ನು ಅಷ್ಟಕ್ಕೇ ಬಿಟ್ಟು ಮತ್ತೊಂದು ವಿಷಯವನ್ನು ಪ್ರಾರಂಭಿಸುವದರಿಂದ ಏನೂ ಪ್ರಯೋಜನವಾಗುವದಿಲ್ಲ. ಯಾಕಂದರೆ, ಯಾವದಾದರೊಂದು ಪಾಠವನ್ನು ಹೇಳಿದ ಕೂಡಲೆ ವಿದ್ಯಾರ್ಥಿಗಳ ಲಕ್ಷ್ಯವು ಅದನ್ನು ಕುರಿತು ವಿಚಾರ ಮಾಡುವದಕ್ಕೆ ತೊಡಗುವದು. ಅಷ್ಟರಲ್ಲಿಯೇ ಮತ್ತೊಂದು ವಿಷಯವನ್ನು ಹೇಳಿದರೆ ಅವರು ಗೊಂದಲದಲ್ಲಿ ಬಿದ್ದು ಅವರಿಂದ ಮೊದಲಿನ ವಿಷಯಕ್ಕೆ ಸಂಬಂಧಿಸಿದ ಸಂಗತಿಗಳನ್ನೂ ಎರಡನೇ ವಿಷಯಕ್ಕೆ ಸಂಬಂಧಿಸಿದ ಸಂಗತಿಗಳನ್ನೂ ವಿಂಗಡಿಸುವದು ಆಗುವದಿಲ್ಲ. ಆದ್ದರಿಂದ ಮೊದಲು ಹೇಳಿದ ವಿಷಯವನ್ನು. ಸ್ಪಷ್ಟೀಕರಿಸುವಂಥ ದೃಷ್ಟಾಂತಗಳನ್ನು ಕೊಟ್ಟು ಆ ವಿಷಯವು ಅವರ ಮನಸ್ಸಿನಲ್ಲಿ ಪೂರ್ಣವಾಗಿ ನಡುವಂತೆ ಪರಿಶ್ರಮವನ್ನು ಮಾಡದೆ ಮತ್ತೊಂದು ವಿಷಯವನ್ನು ಎಂದೂ ಹೇಳಲಿಕ್ಕೆ ಹತ್ತಬಾರದು. ಮಾಸ್ತರನು ಈ ಸಂಗತಿಯನ್ನು ಮರೆತರೆ ವಿದ್ಯಾರ್ಥಿಗಳು ಅವನು ಯಾವದೊಂದು ವಿಷಯವನ್ನು ತಾತ್ಸರ ಮಾಡಿದ್ದನ್ನು ನೋಡಿ ಅದು ಮಹತ್ವದ್ದಲ್ಲೆಂದು ತಿಳಿದು ಅದನ್ನು ಲಕ್ಷ್ಯವಲ್ಲಿಡಲಿಕ್ಕೆ

ಏನೂ ಪ್ರಯತ್ನ ಮಾಡುವದಿಲ್ಲ; ಮತ್ತು ಅದರಿಂದ ಮಾಸ್ತರನು ಮಾಡಿದ ಶ್ರಮವು ಗುಡ್ಡಕ್ಕೆ ಕಲ್ಲು ಹೊತ್ತಂತೆ ನಿಷ್ಫಲವಾಗುವದು.

೬. **अनारंभः क्षेमकरः** ಎಂಬ ಸಂಸ್ಕೃತ ಗಾದೆಯು ಶಿಕ್ಷಣದ ಕೆಲಸದಲ್ಲಿ ಬಹು ಪ್ರಯೋಜನಕರವಾದದ್ದು. ಯಾವದಾದರೊಂದು ವಿಷಯದ ಮರ್ಮವನ್ನು ತಿಳಿಸಿ ಸ್ವಲ್ಪ ಕಲಿಸುವದೂ, ಮರ್ಮವನ್ನು ತಿಳಿಸದೆ ಸುಮ್ಮನೆ ಹೆಚ್ಚು ಕಲಿಸುವದೂ ಬಂದಕ್ಕೊಂದು ವಿಪರೀತವಾಗಿರುವದಲ್ಲದೆ ಪ್ರಯೋಜನಾಪೇಕ್ಷೆಯಿಂದ ಭಿನ್ನ ಪರಿಣಾಮವುಳ್ಳವುಗಳಾಗಿರುತ್ತವೆ. ಬಂದು ತಾಸಿನಲ್ಲಿ ಬಂದು ಅಥವಾ ಎರಡು ಉದಾಹರಣೆಗಳನ್ನು ತಕ್ಕ ಪದ್ಧತಿಯಿಂದ ಹೇಳಿದರೆ ಅವುಗಳ ಜ್ಞಾನವು ವಿದ್ಯಾರ್ಥಿಗಳಿಗೆ ತಕ್ಕಷ್ಟು ಚನ್ನಾಗಿ ಆಗುವದು. ಪುಡುಗರನ್ನು ಕೆಲಸಕ್ಕೆ ಹಚ್ಚದೆ ಮಾಸ್ತರನು ತಾನಾಗಿ ೩/೪ ಲೆಕ್ಕಗಳನ್ನು ಹೇಳಿದರೆ ಅದಕ್ಕೂ ಕಡಿಮೆ ಜ್ಞಾನವಾಗುವದು; ೪/೫ ಉದಾಹರಣೆಗಳನ್ನು ಹೇಳಿದರಂತೂ ತೀರ ಕಡಿಮೆಯಾಗುವದು. ಸಾರಾಂಶ, ಮಾಸ್ತರನು ಹೆಚ್ಚು ಹೆಚ್ಚು ಉದಾಹರಣೆಗಳನ್ನು ಕೊಟ್ಟ ಕೊಟ್ಟ ಹಾಗೆ ಶಿಕ್ಷಣದ ಬಲವು ಕುಂದುತ್ತ ಹೋಗುತ್ತದೆ. ವಿದ್ಯಾರ್ಥಿಗಳ ಯೋಗ್ಯತೆಗೆ ಸರಿಯಾಗಿ ವಿಷಯಗಳನ್ನು ಹೇಳುವದರಲ್ಲಿ ತಕ್ಕಷ್ಟು ಜ್ಞಾನವಿಲ್ಲದಂಥ ಮಾಸ್ತರನು ಬಂದು ವಿಷಯವನ್ನು ತಿಳಿಸಿ ಕೊಡುವಾಗ ಅನೇಕ ವಿಷಯಗಳನ್ನು ಬೆರಿಸಿ ಗೊಂದಲದಲ್ಲಿ ಬೀಳುತ್ತಾನೆ. ಇದಲ್ಲದೆ ವಿಷಯವನ್ನು ತೀವ್ರ ಮುಗಿಸಬೇಕೆಂಬ ಅತುರದಿಂದ ಮಾಸ್ತರನು ಮುಂದ ಮುಂದಕ್ಕೆ ಸಾಗುತ್ತಾನೆ. ಇದು ಸರಿಯಲ್ಲ. ಯಾಕಂದರೆ ನಿಯಮಿತವಾದ ವಿಷಯದ ಜ್ಞಾನವು ಎಷ್ಟು ಚನ್ನಾಗಿ ಆಗುತ್ತದೆಯೋ ಅಷ್ಟು ಅಳತೆಗೆಟ್ಟ ವಿಷಯದ ಜ್ಞಾನವು ಚನ್ನಾ

ಗಿ ಬಗಾವದಲ್ಲ; ಆದ್ದರಿಂದ ಕಲಿಸತಕ್ಕ ವಿಷಯ, ಹಾಗು ಅವಕ್ಕೆ ಗೊತ್ತು ಮಾಡಿದ ವೇಳೆ, ಇವುಗಳ ಬಗ್ಗೆ ವಿಚಾರ ಮಾಡಿ ನಿಷ್ಪ್ರಯೋಜನವಾದ ಮಾತುಗಳನ್ನು ಬಿಟ್ಟು, ವಿಷಯಕ್ಕೆ ಸಂಬಂಧಿಸಿದಂಥ, ನಿತ್ಯ ಕಣ್ಣಿಗೆ ಬೀಳುವಂಥ ಬಗೆ ಬಗೆಯ ದೃಷ್ಟಾಂತಗಳನ್ನು ಕೊಟ್ಟು ವಿದ್ಯಾರ್ಥಿಗಳಿಗೆ ಸ್ಪಷ್ಟವಾಗಿ ತಿಳಿಯಿಕೊಳ್ಳುವದಕ್ಕೆ ಅಸ್ಪದವಾಗುವಂತೆ ತನ್ನ ಶಿಕ್ಷಣವನ್ನು ಮೆಲ್ಲ ಮೆಲ್ಲನೆ ಕ್ರಮಕ್ಕನುಸಾರವಾಗಿ ನಡಿಸುವದೇ ವಿಹಿತವಾಗುವುದು.

SELECTIONS FROM THE KARNATIK GAZETTEER.

ಕನ್ನಡ ಗೆಜೆಟಿಯರಿಂದ ಅವತರಣಿಗಳು.

(ಒಳಿನೇ ಪುಟದಿಂದ ಮುಂದೆ ಸಾಗಿದ್ದು.)

ನಿಪ್ಪಾಣಿಕರನು ಇಷ್ಟು ಕ್ರೂರನಿದ್ದಾಗ್ಯೂ ಇಂಗ್ಲಿಷ ಸರದಾರರ ಕೂಡ ಬಹು ಲೀನನಾಗಿ ನಡಿಯುತ್ತಿದ್ದನು. ಆ ದ್ದರಿಂದ ಎಲ್ಫಿನಸ್ತನ ಮೂಲಕವು ಮುಂತಾದ ಸರದಾರರ ಪ್ರೀತಿಯನ್ನು ಸಂಪಾದಿಸಿದ್ದನು. ಮುಂದೆ ಪೇಶವನಿಗೂ ನಿಪ್ಪಾಣಿಕರನಿಗೂ ವ್ಯಾಜ್ಯವುಟ್ಟಿ ಪೇಶವನು ಇಂಗ್ಲಿಷರ ಸಹಾಯದಿಂದ ನಿಪ್ಪಾಣಿಕರನ ಕೆಲವು ಶೀಮೆಗಳನ್ನು ಕಸುಕೊಂಡನು. ಆದರೆ ಅಂತರಂಗದಲ್ಲಿ ನಿಪ್ಪಾಣಿಕರನಿಗೆ ಪೇಶವನ ಸಹಾಯವಿತ್ತು. ಮುಂದೆ ೧೮೧೮ ರಲ್ಲಿ ಪೇಶವನು ರಾಜ್ಯಕಳಕೊಂಡು ಓಡಿ ಹೋಗುವಾಗ ನಿಪ್ಪಾಣಿಕರನು ಪೊದಲು ಪೇಶವನ ದಂಡಿನಲ್ಲಿ ಕೂಡಿದ್ದನು. ಆವರೆ ಪೇಶವನ ಪರಿಣಾಮ ನೋಡಿ, ಅವನು ತಾನಾಗಿ ಇಂಗ್ಲಿಷರ ಅಂಕಿತಕ್ಕೆ ಬಂದನು. ಆದರೂ ಆವನು ಪೇಶವನ ಪಕ್ಷವನ್ನು ಸ್ವೀಕರಿಸಿದ್ದಕ್ಕೆ ಇಂಗ್ಲಿಷರು ಆವನ ಮನೋಳಿ, ಚಿ

ಕ್ಕೊಳ್ಳೀಡಿ ಪರಗಣೆಗಳನ್ನು ಕಸುಕೊಂಡು ಕೊಲ್ಲಾಪುರದ ಅರಸನಿಗೆ ಕೊಟ್ಟರು. ಆದ್ದರಿಂದ ನಿಪ್ಪಾಣಿಕರನು ಅಂತರಂಗದಲ್ಲಿ ಇಂಗ್ಲಿಷರಮೇಲೆ ಸಿಟ್ಟುಹಿಡಿದನು. ಆದರೆ ಅದರಿಂದೇನು ಪ್ರಯೋಜನವಾಗಲಿಲ್ಲ. ನಿಪ್ಪಾಣಿಕರನಿಗೆ ಸಂತತಿ ಇದ್ದಿಲ್ಲ. ಅವನು ತನ್ನ ಹೆಂಡತಿಯು ಬಸುರಿದ್ದಾಳೆಂದು ಪ್ರಕಟಿಸಿ ಬಬ್ಬ ವಿಧವೆಯ ಕೂಸನ್ನು ಆಕೆಯ ಮುಂದೆ ಹಾಕಿ ವಿಧವೆಯನ್ನು ಕೊಂದು, ಹೆಂಡತಿಯು ಮಗನನ್ನು ಹಡಿದಳೆಂದು ಸರಕಾರಕ್ಕೆ ತಿಳಿಸಿದನು. ಆದರೆ ಸರಕಾರಕ್ಕೆ ಬಳಗಿನ ದುಷ್ಕರ್ಮವೆಲ್ಲ ಚೆನ್ನಾಗಿ ತಿಳಿದದ್ದರಿಂದ ಸರಕಾರದವರು ಆ ಮಗನನ್ನು ಮಂಜೂರ ಮಾಡದೆ, ಸರಂಜಾಮೆಲ್ಲ ಅಪ್ಪಾಸಾಹೇಬನ ತರುವಾಯ ಸರಕಾರಕ್ಕೆ ಸೇರತಕ್ಕದ್ದೆಂದು ತರಾವು ಮಾಡಿದರು, ೧೮೩೧. ಮುಂದೆ ೧೮೩೯ರಲ್ಲಿ ಅಪ್ಪಾಸಾಹೇಬನು ಮರಣ ಹೊಂದಲಾಗಿ, ಸರಕಾರದವರು ಅವನ ಮೊದಲಿನ ೧೫೦೦೦ದ ದೇಸಗತಿಯ ಸೀಮೆಯನ್ನೆಷ್ಟು ಬಿಟ್ಟು ಉಳಿದ ಸೀಮೆಯನ್ನು ತಕ್ಕೊಂಡರು. ನಿಪ್ಪಾಣಿಕರನು ಸಾಯುವ ಪೂರ್ವದಲ್ಲಿ ಬಬ್ಬ ದತ್ತಪುತ್ರನನ್ನು ದೇಸಗತಿಗೆ ವಾರಸದಾರನಾಗಿ ತಕ್ಕೊಂಡಿದ್ದನು. ಆ ಮಗನ ಸಲುವಾಗಿ ನಿಪ್ಪಾಣಿಕರನ ೬ ಜನ ಹೆಂಡರು ತಮ್ಮತಮ್ಮೊಳಗೆ ಬಪಳ ದಿವಸ ಜಗಳಾಡಿದರು. ಈಗಿನ ವಾರಸದಾರನು ರಾಜಕುಮಾರ ಕಾಲೇಜದಲ್ಲಿ ಬಳಿತಾಗಿ ವಿದ್ಯಾಭ್ಯಾಸ ಮಾಡಿ, ತನ್ನ ದೇಸಗತಿಯ ಕಾರಭಾರವನ್ನು ತಾನೇ ನಡಿಸುತ್ತಾನೆ.

ಅಪ್ಪಾಸಾಹೇಬನು ಬಹು ಜನ ಸಾವುಕಾರರನ್ನು ದುಡ್ಡಿನೆಸಲುವಾಗಿ ಸೆರೆಯೊಳಗೆ ಹಾಕಿದ್ದನು; ಬಹು ಜನರನ್ನು ಕ್ರೂರತನದಿಂದ ಕೊಲ್ಲಿಸಿದನು. ಸೆರೆಯೊಳಗಿದ್ದವರನ್ನು

ಇಂಗ್ಲಿಷ ಸರಕಾರದವರು ನಿಪ್ಪಾಣಕರನಿರುವಾಗಲೇ ಬಲಾ
ತ್ಕಾರದಿಂದ ಬಿಡಿಸಿದರು. ನಿಪ್ಪಾಣಿಕರನು ಸುಂದರಿಯರಾದ
ತರುಣ ಸ್ತ್ರೀಯರನ್ನು ಸಿಕ್ಕಲ್ಲಿಂದ ಎತ್ತಿಕೊಂಡು ಹೋಗಿ,
ಅವರಲ್ಲಿ ಬಹು ಜನರನ್ನು ನಾನಾಪ್ರಕಾರದ ಯಾತನೆ ಪಡಿ
ಸಿ ಕೊಂದ ಕಥೆಗಳು ಜನರೊಳಗೆ ಪ್ರಸಿದ್ಧವಿರುತ್ತವೆ.

ಸವಲಗಿ—ಚಿಕ್ಕೋಡಿಯ ಉತ್ತರಕ್ಕೆ ೧೦ ಮೈಲಿನಮೇ
ಲೆ, ಜ. ಸ. (೪೧) ೭೦೪೦. ಮಂಗಳವಾರ ಸಂತೆಯಾಗು
ತ್ತದೆ. ಧಡೋತಿಯ ವಸ್ತ್ರಗಳೂ ಕಂಬಳಿಗಳೂ ಹುಟ್ಟು ವ
ತ್ತವೆ. ಈ ಊರಲ್ಲಿ ಸಕ್ಕರೆ ಮಾಡುವ ಹೋರೆಯು ಬಳಿ
ತಾಗಿ ನಡೆಯುತ್ತದೆ. ಊರಹೊರಗೆ ಕಬ್ಬಿನ ತೋಟಗಳಿ
ರುತ್ತವೆ.

ಸಂಕೇಶ್ವರ—ಹುಕ್ಕೇರಿಯ ವಾಯವ್ಯಕ್ಕೆ ೪ ಮೈಲಿನ
ಮೇಲೆ ಜ. ಸ. (೪೧) ೪೧.೬, ಟಪಾಲ ಕಚೇರಿ, ಎರಡು
ಶಾಲೆಗಳು ಇರುತ್ತವೆ. ಬೆಳಗಾವಿಜಿಲ್ಲೆಯಲ್ಲಿ ಹೆಸರಾದ ಪಡ
ಮೊಲೆಗಳಲ್ಲಿ ಸಂಕೇಶ್ವರವನ್ನು ಎಣಿಸುತ್ತಾರೆ. ಇಲ್ಲಿ ಸು
ಮಾರು ೫೦ ಜನ ವ್ಯಾಪಾರಸ್ಥರು ೫೦೦ ರಿಂದ ೨೫೦೦೦ ರಿಂದ
ವರೆಗೆ ಭಂಡವಲುಳ್ಳವರು ಇರುವದಲ್ಲದೆ, ಕೈಗಡದಿಂದ ಹಣ
ಕೂಡಿಸಿ ಕೊಡಕೊಳ್ಳುವ ಹೋರೆಯನ್ನು ಮಾಡುವವರು,
ಬಹು ಜನರುಂಟು. ಶುಕ್ರವಾರ ಸಂತೆಯಾಗುತ್ತದೆ. ಕಾಳು
ಗಳು, ಪಾತ್ರೆಗಳು, ವಸ್ತ್ರಗಳು, ಅರಳಿ, ನೂಲು, ಕಿರಾಣಿ
ಮುಂತಾದ ಸರಕುಗಳ ಮಾರಾಟವು ಬಹಳ ನಡೆಯುತ್ತದೆ.
ಇಲ್ಲಿಯ ವ್ಯಾಪಾರಸ್ಥರು ಅರಳಿಯನ್ನು ಕೊಂಡು ಜಿಪಳಾ
ಣಕ್ಕೂ ಮೆಂಗುಲೂರಿಗೂ ಕಳಿಸುತ್ತಾರೆ; ತೆಂಗು, ಉತ್ತತ್ತಿ,
ಅಡಿಕೆ ಮುಂತಾದ ಕಿರಾಣಿಗಳನ್ನು ಘಟ್ಟದ ಕೆಳಗಿಂದ ತಂ
ದು ಪರಪೇಟೆಗಳಿಗೆ ಕಳಿಸುತ್ತಾರೆ.

ಸಂಕೇಶ್ವರದಲ್ಲಿ ಶಂಕರಲಿಂಗನ ಗುಡಿಯು ಪುರಾತನವಿರುತ್ತದೆ. ಇದರಲ್ಲಿ ಮೂರು ಲಿಪಿಗಳಿರುತ್ತವೆ. ಅವುಗಳಲ್ಲಿ ಒಂದು ಕಾರ್ತವೀರ್ಯನೆಂಬ ರಟ್ಟರಾಜನು ೧೧೯೯ ರಲ್ಲಿ ಬರಸಿದ್ದಿರುತ್ತದೆ. ಶಿವರಾತ್ರಿಯಲ್ಲಿ ಶಂಕರಲಿಂಗನ ಜಾತ್ರೆಯಲ್ಲಿ ೨, ೩ ಸಾವಿರ ಜನ ಕೂಡುತ್ತದೆ. ಸಂಕೇಶ್ವರ ಸ್ವಾಮಿಯ ಮಠವು ಸುಮಾರು ಎರಡು ಯಕರೆಯಷ್ಟು ವಿಸ್ತಾರವಾಗಿರುತ್ತದೆ. ಇದರ ಹಿತ್ತಲಬಾಗಿಲಿನ ಬಳಿಯಲ್ಲಿ ಹರಣಕಾಶಿಯೆಂಬ ಸಣ್ಣ ಹೊಳೆಯು ಹರಿಯುತ್ತದೆ. ಯಜ್ಞಮಂಟಪವು ೧೦೦೦ ಜನರಿಗೆ ಕೂಡ್ರಲಿಕ್ಕೆ ಬರುವಷ್ಟು ದೊಡ್ಡದಿರುತ್ತದೆ. ಮಠಕ್ಕೆ ಸುಮಾರು ೩೦೦೦ ಇನಾಮು ಭೂಮಿಗಳೂ ಗ್ರಾಮಗಳೂ ನಡೆಯುತ್ತವೆ. ಇದಲ್ಲದೆ ಶಿಷ್ಯಜನರ ಕಡೆಯಿಂದ ಬರುವ ಆದಾಯ ಬೇರೆ. ೧೬ನೇ ಶತಕದ ಕಡೆಯಲ್ಲಿ ಶಂಕರ ಭಾರತಿಯೆಂಬ ಸ್ವಾಮಿಗಳಿಗೆ ವಿಜಾಪುರದ ರಣದುಲ್ಲಾ ಖಾನನೆಂಬ ಸರದಾರನು ಕೆಲವು ಗ್ರಾಮಗಳನ್ನು ಇನಾಮು ಕೊಟ್ಟಬಳಿಕ ಸಂಕೇಶ್ವರದಲ್ಲಿ ಆ ಸ್ವಾಮಿಗಳು ಮಠವನ್ನು ಸ್ಥಾಪಿಸಿದರೆಂದು ಹೇಳುತ್ತಾರೆ.

ಸೆಂದೂರು, ಅಥವಾ ರಾಸೂಬಾಯಿಯ ಗುಡ್ಡ. ನಿಪ್ಪಾಣಿಯ ನೈರುತ್ಯಕ್ಕೆ ೫ ಮೈಲಿನ ಮೇಲೆ ಸುಮಾರು ೬೫೦ ಫೂಟು ಎತ್ತರವಾದ ಗುಡ್ಡದಮೇಲೆ ಈ ಹೆಸರಿನ ಎರಡು ಹಳ್ಳಿಗಳಿರುತ್ತವೆ; ಅವುಗಳ ಜನಸಂಖ್ಯೆ (೧೯೧೧) ೨೫೦೦. ಈ ಗುಡ್ಡದ ಮೇಲೆ ರಾಸೂಬಾಯಿ ಎಂಬ ದೇವತೆಯ ಗುಡಿ ಇರುತ್ತದೆ. ಅದರ ಬಳಿಯಲ್ಲಿ ಆರೋಗ್ಯಕರವಾದ ನೀರಿನಝರಿಯುಂಟು.

ಯೆಮುಕನಮರಡಿ—ಚಿಕ್ಕೋಡಿಯ ದಕ್ಷಿಣಕ್ಕೆ ೩೦ ಮೈಲಿನಮೇಲೆ, ಜ. ಸ. (೧೯೧೧) ೪೪೯೦. ಊರ ಹೊರಗೆ ಒಂದು ಕೋಟೆಯುಂಟು; ಮ್ಯೂನಿಸಿಪಾಲಟಿ, ಪೋಷ್ಟಲ

ಫೀಸು, ಸೆರಕಾರೀಬಾಲೆ, ಇರುತ್ತವೆ. ಮ್ಯುನಿಸಿಪಾಲಿಟಿಯ ಆದಾಯವು ೧೪೪೦-೪೫ರಲ್ಲಿ ೧೫೦೫ ರೂಪಾಯಿ ಇತ್ತು. ಮಂಗಳವಾರ ಸಂತೆಯಾಗುತ್ತದೆ ಅದರಲ್ಲಿ ಕಾಳು, ವಸ್ತ್ರ, ತೆಂಗು, ಉತ್ತತ್ತಿ ಮುಂತಾದವುಗಳ ವ್ಯಾಪಾರವು ಆಗುತ್ತದೆ.

ಯೇಡೂರು—ಚಿಕ್ಕೋಡಿಯ ಈಶಾನ್ಯಕ್ಕೆ ೧೨ ಮೈಲಿ ನಮೋಲೆ ಜ. ಸ. (೪೧) ೦೧೯೦, ಕೃಷ್ಣೆಯ ದಂಡಿಯಲ್ಲಿ ಇಲ್ಲಿ ವೀರಭದ್ರನ ಗುಡಿಯು ೧೪೫ ಫೂಟು ಚಚ್ಚೌಕ ಇರುತ್ತದೆ. ಈ ಗುಡಿಯಲ್ಲಿ ಸಕ ೧೪೩೦, ೧೪೩೬ ಈ ವರ್ಷಗಳಲ್ಲಿ ಬರಿಸಿದ ಲಿಪಿಗಳಿರುತ್ತವೆ. ಈ ಊರು ಈ ವೀರಭದ್ರದೇವರಿಗೇ ಇನಾಮು ನಡೆಯುತ್ತದೆ. ಈ ದೇವರ ಜಾತ್ರೆಯು ಶಿವರಾತ್ರಿಯಲ್ಲಿ ಬಂದು ತಿಂಗಳಿನವರೆಗೆ ನಡಿಯುತ್ತದೆ. ಜಾತ್ರೆಯಲ್ಲಿ ೧೦೦೦೦ಕ್ಕಿಂತ ಹೆಚ್ಚು ಜನ ಕೂಡಿ, ಸುಮಾರು ೫೦೦೦೦ ರೂಪಾಯಿಯವರೆಗೆ ಸರಕುಗಳ ವ್ಯಾಪಾರವಾಗುತ್ತದೆ, ಯೆಡೂರ ಕ್ಷೇತ್ರವೆಂದು ಎಣಿಸಲ್ಪಡುತ್ತದೆ.

ವಲ್ಲಭಗಡ—ಚಿಕ್ಕೋಡಿಯ ನೈರುತ್ಯಕ್ಕೆ ೧೫ ಮೈಲಿನ ಮೇಲೆ ಈ ದುರ್ಗಕೋಟೆಯನ್ನು ಕಟ್ಟಿರುವ ಗುಡ್ಡವು ೩೦೦ ಫೂಟು ಎತ್ತರವಿರುತ್ತದೆ. ಕೋಟೆಯು ೨೫೫ ಫೂಟು ಉದ್ದ, ೨೦೦ ಫೂಟು ಅಗಲು ಇರುತ್ತದೆ. ಈ ಗುಡ್ಡದ ಇಳಕಲಿನಮೇಲೆ ಬಂದು ಸಣ್ಣ ಹಳ್ಳಿಯುಂಟು.

DEPARTMENTAL NOTICE.

ನೋಟೀಸು.

ಯಾವತ್ತು ಸ್ಕೂಲ ಮಾಸ್ತರರಿಗೆ ಈ ಪ್ರಕಟನೆಯ ಮುಖಾಂತರವಾಗಿ ತಿಳಿಸುವದೇನಂದರೆ,—ವಿದ್ಯಾಖಾತೆಗೆ ಅವಶ್ಯವಾದ ಪುಸ್ತಕಗಳನ್ನು ಕನ್ನಡ ಪಂಡಿತರಿಂದ ಬರೆಯಿಸಬೇಕಾಗಿ ಮೆ॥ ಡಾಯರೇಕ್ಟರ ಸಾಹೇಬರವರು ಅಪ್ಪಣೆ ಮಾಡಿರುತ್ತಾರೆ. ಈ ಪುಸ್ತಕಗಳಲ್ಲಿ ಬಹಳ ಸ್ವಲ್ಪ ಪುಸ್ತ

ಕಗಳು ಬರೇ ಕನ್ನಡ ಬಲ್ಲಂಥ ಜನರಿಂದ ಆಗುವಂಥವಿರು
ತ್ತವೆ. ಅವುಗಳಲ್ಲಿ ಬಾಯಿಲೆಖ್ಖಿದ ಪುಸ್ತಕವು ಬಂದಾಗಿರು
ತ್ತದೆ. ಈ ಪುಸ್ತಕವನ್ನು ಕನ್ನಡ ಮಾಸ್ತರರಿಂದ ಬರೆ
ಯಿಸಿ ಅದಕ್ಕೆ ತಕ್ಕ ಉಚಿತವನ್ನು ಕೊಡಿಸಬೇಕೆಂದು
ನಮ್ಮ ಭಾಗದ ಇನಸ್ಪೆಕ್ಟರ ಸಾ॥ ಬಹಾದ್ದೂರವರ ಅಲೋ
ಚನೆಯುಂಟು. ಆದರೆ ಕನ್ನಡ ಮಾಸ್ತರರಲ್ಲಿ ಯಾರಾದರೂ
ದೇವಕುಳಿ ಯಂಬವರು ಮಾಡಿದ ಬಾಯಿಲೆಖ್ಖಿದ ಪುಸ್ತಕದ
ಒನೇ ಭಾಗದ ಭಾಷಾಂತರವನ್ನು ಮಾಡಲಿಕ್ಕೆ ಒಪ್ಪಿಕೊಂ
ಡರೆ ಅವರು ಕೆಳಗೆ ಕಾಣಿಸಿದ ಸಂಗತಿಗಳನ್ನು ಬರುವ ದಿಸೆಂ
ಬರ ತಿಂಗಳ ಒಂನೇ ತಾರೀಖಿನ ಒಳಗಾಗಿ ನಮಗೆ ಬರೆದು
ತಿಳುಹಿಸಬೇಕು.

(೧) ತಮ್ಮ ಹೆಸರು.

(೨) ತಾವು ಈ ಮೊದಲು ಬರೆದ ಪುಸ್ತಕಗಳು, ಪಡೆದ
ಸರಟೀಫಿಕೇಟು, ಅಥವಾ ತಾವು ಬರೆದ ನಿಬಂಧ
ಗಳು, ಪತ್ರವ್ಯವಹಾರ ಇತ್ಯಾದಿ.

(೩) ಬಾಯಿಲೆಖ್ಖಿದ ಪುಸ್ತಕವನ್ನು ಬರೆಯಲಿಕ್ಕೆ+ ಬೇ
ಕಾಗುವ ಅವಧಿ.

(೪) (ಅ) ಪುಸ್ತಕವನ್ನು ತಾವೇ ಛಾಪಿಸುವ ಮನ
ಸ್ಸುಂಟೋ? ಅಥವಾ (ಆ) ಸರಕಾರದವ
ರೇ ಛಾಪಿಸಬೇಕೋ ಎಂಬವರ ವಿವರ.

(೫) (ಅ) ಬ ಬಗ್ಗೆ ಅಪೇಕ್ಷಿಸುವ ಇನಾಮು. (ಆ) ಬ
ಬಗ್ಗೆ ಅಪೇಕ್ಷಿಸುವ ಇನಾಮು.

---

* ಒನೇ ಭಾಗದ ಭಾಷಾಂತರವು ಸಿದ್ಧವಾಗಿರುತ್ತದೆ.

+ ಕೇವಲ ಈ ಪುಸ್ತಕದ ಭಾಷಾಂತರವಾಗತಕ್ಕದ್ದಿರುವದಿಲ್ಲ. ನಮ್ಮ ಭಾಗದಲ್ಲಿ ನಡೆಯುತ್ತಿರುವ ಅಳತೆ ಮುಂತಾದ ಮಾನಗ
ಳಿಗೆ ಸರಿಯಾಗಿ ಅದರಲ್ಲಿ ಹೆಚ್ಚು ಕಡಿಮೆ ಮಾಡತಕ್ಕದ್ದಿರುತ್ತದೆ.

ಮಾಸ್ತರರು ಕಳುಹಿದ ಭಾಷಾಂತರಗಳಲ್ಲಿ ಒಪ್ಪಿಗೆ ಹೊಂದಿದ ಪುಸ್ತಕವನ್ನು ಸ್ವೀಕರಿಸಿ ಅದಕ್ಕೆ ಉಚಿತದ ಹಣ ಕೊಡಲ್ಪಡುವದು.

ಧಾರವಾಡ ಟ್ರೇ. ಕಾ. ತಾ. ೧೧–೧೦–೧೯೫೫. } RAOJI B. KARANDIKAR, ಸೆ. ನ್ಹನ್ಯಾಕ್ಯುಲರ ಬುಕ್ಕ ಕಮಿಾಪಿ.

CORRESPONDENCE.

ಪತ್ರವ್ಯವಹಾರ.

(ಪೀನೇ ಪುಟದಿಂದ ಮುಂದೆ ಸಾಗಿದ್ದು.)

ಗು–ಎಲ್ಲಿ ಬರೆಯಬೇಕು?

ವಿ–ಮೊವಲನೆಯ ಮನೆಯಲ್ಲಿ. (ಬರಿಸುವದು.)

ಗು–ಮೊದಲು ನಮ್ಮ ಹತ್ತರ ಎಷ್ಟು ಹತ್ತರ ಗಂಟುಗಳಿದ್ದವು?

ವಿ–೯ ಹತ್ತರ ಗಂಟುಗಳಿದ್ದವು.

ಗು–ಇವುಗಳೊಳಗೆ (ಹೊಸದಾಗಿ ಕಟ್ಟಿದ ಬಂದು ಹತ್ತರ ಗಂಟು ತೋರಿಸಿ) ಇದೊಂದು ಗಂಟು ಕೂಡಿಸಿದರೆಷ್ಟು ಗಂಟುಗಳಾಗುವವು?

ವಿ–೧೦ ಹತ್ತರ ಗಂಟುಗಳಾಗುವವು

ಗು–(ಹತ್ತು ಹತ್ತರ ಗಂಟುಗಳನ್ನು ಕೂಡಿಸಿ ಕಟ್ಟಿ) ಇದು ಎಷ್ಟರ ಎಷ್ಟು ಗಂಟಾಯಿತು?

ವಿ–ಹತ್ತು ಹತ್ತರ ಬಂದು ಗಂಟಾಯಿತು.

ಗು–ಮೇಲಾಗಿ ಬೇರೆ ಹತ್ತರ ಗಂಟುಗಳುಂಟಪ್ಪೊ?

ವಿ–ಇಲ್ಲ.

ಗು–ಅವರ ಬಗ್ಗೆ ಏನು ಬರೆಯಬೇಕು?

ವಿ–ಶೂನ್ಯ.

ಗು–ಎಲ್ಲಿ ಬರೆಯಬೇಕು?

ವಿ–ಒನೆಯ ಮನೆಯಲ್ಲಿ. (ಬರಿಸುವದು.)

ಗು–ಈಗ್ಗೆ ನಮ್ಮ ಪತ್ತರ ಎಷ್ಟರ ಗಂಟು ಉಳಿಯಿತು?

ವಿ–ಪತ್ತು ಪತ್ತರ ಗಂಟು ಉಳಿಯಿತು.

ಗು–ಪತ್ತು ಪತ್ತರ ಗಂಟಿಗೆ ನೂರೆಂತಲೂ, ಶತಂ ಎಂತಲೂ ಅನ್ನುವರು. ಅವನ್ನು ದಹಮ್ಮದ ಹಿಂದೆ ಬರಿಯುತ್ತಾರೆ.

ಗು–(ನೂರರ ಗಂಟು ತೋರಿಸಿ) ಇದು ಎಷ್ಟರ ಎಪ್ಪತ್ತು ಗಂಟು?

ವಿ–ನೂರರ ಬಂದು ಗಂಟು.

ಗು–ಇವನ್ನು ಎಲ್ಲಿ ಬರೆಯಬೇಕು?

ವಿ–ದಹಮ್ಮದ ಹಿಂದೆ. (ಬರಿಸುವದು.)

ಗು–ದಹಮ್ಮದ ಮನೆ ಎಷ್ಟನೆಯದು?

ವಿ–ಒ ನೆಯದು.

ಗು–ಹಾಗಾದರೆ ಶತಮ್ಮದ ಮನೆ ಎಷ್ಟನೆಯದಾಯಿತು?

ವಿ–ಳಿ ನೆಯದಾಯಿತು.

ಗು–(೧೦೦ ಈ ಸಂಖ್ಯೆಯನ್ನು ತೋರಿಸಿ) ಇದರಲ್ಲಿ ನೆಯ ಒನೆಯ ಮನೆಗಳಲ್ಲಿ ಏನು ಅವೆ?

ವಿ–ಶೂನ್ಯ.

ಗು–ಯಾಕೆ ಬರಿದವೆ?

ವಿ–ಆ ಸ್ಥಾನಗಳಲ್ಲಿ ಏನೂ ಇಲ್ಲೆಂದು ಬರೆದವೆ.

ಗು–ಯಾವದೊಂದು ಸ್ಥಾನ ಹೇಳದಿದ್ದರೆ ಅಲ್ಲಿ ಏನು ಬರೆಯಬೇಕು?

ವಿ–ಶೂನ್ಯ ಬರೆಯಬೇಕು.

ಗು–(೬೦೫, ೫೦೮ ಈ ಸಂಖ್ಯೆಗಳನ್ನು ತೆಗೆದು ತೋರಿಸಿ

ಪೂವರಿಯು ಬೇರೆ ಸಂಖ್ಯೆಗಳನ್ನು ಬರೆದು) ಈ ಎರಡೂ ಸಂಖ್ಯೆಗಳಲ್ಲಿ ಶಿನೆಯು ಮನೆಯಲ್ಲಿರುವ ಅಂಕೆಗಳ್ಯಾವವು?

ವಿ—ಆರು ಮತ್ತು ಐದು.

ಗು—ಅವು ಏನು ತೋರಿಸುತ್ತವೆ?

ವಿ—ನೂರು ತೋರಿಸುತ್ತವೆ.

ಗು—ಶಿನೆಯ ಮನೆಯ ಅಂಕೆಗಳು ಏನು ತೋರಿಸಿದ ಹಾಗಾಯಿತು.

ವಿ—ತಮ್ಮಷ್ಟು ನೂರು ತೋರಿಸಿದ ಹಾಗಾಯಿತು.

ಓದಲಿಕ್ಕೆ ಕಲಿಸುವದು.

ಗು—೬೦೫ ರಲ್ಲಿ ನೂರು ಎಷ್ಟು?

ವಿ—ಆರು.

ಗು—ದಹಮ್ಮು ಎಕ್ಕಮ್ಮು ಗಳೆಷ್ಟು?

ವಿ—ಎರಡು ದಹಮ್ಮುಗಳು ಮತ್ತು ಅಯ್ದು ಎಕ್ಕಮ್ಮುಗಳು.

ಗು—ಎರಡು ದಹಮ್ಮು ಐದು ಎಕ್ಕಮ್ಮು ಕೂಡಿ ಎಷ್ಟಾಯಿತು?

ವಿ—೨೫ ಆಯಿತು.

ಗು—೬ ನೂರು ಹಾಗು ೨೫ ಇವುಗಳನ್ನು ಕೂಡಿಸಿ ಅನ್ನು.

ವಿ—ಆರುನೂರಾ ಇಪ್ಪತ್ತೈದು.

ಗು—ಅದರಂತೆ ೫೦೪ ಇದನ್ನಾದರು ಅನ್ನು.

ವಿ—(ಅನ್ನುವನು.)

ಗು—೫೦೪ ರಲ್ಲಿ ಶೂನ್ಯ ಯಾಕೆ ಹಾಕಿದ್ದಾರೆ?

ವಿ—ದಹಮ್ಮುದ ಮನೆಯಲ್ಲಿ ಏನೂ ಇಲ್ಲೆಂದು ಹಾಕಿದ್ದಾರೆ. (ಕೆಲವು ಉದಾಹರಣೆಗಳನ್ನು ಹಾಕಿ ಓದಲಿಕ್ಕೂ ಕೆಲವುಗಳನ್ನು ತಾನು ಹೇಳಿ ಬರೆಯಲಿಕ್ಕೂ ಕಲಿಸಬೇಕು.)

೪ನೆಯ ಸ್ಥಾನ ಅಷ್ಟಪಾ ಸಾವಿರ ಕಲಿಸುವದು.

ಗು—(೯೦೦ ಬರಿದು) ಈ ಸಂಖ್ಯೆ ಎಷ್ಟಿರುತ್ತದೆ?

ವಿ—ಒಂಬತ್ತು ನೂರು.

ಗು—ಇದರಲ್ಲಿ ಇನ್ನೊಂದು ನೂರು ಕೂಡಿಸಿದರೆಷ್ಟು ಆಗುವದು?

ವಿ—ಹತ್ತು ನೂರಾಗುವದು.

ಗು—ಹತ್ತು ನೂರುಗಳ ಗಂಟಿಗೆ ಸಾವಿರ ಅನ್ನುವರು. ಅವನ್ನು ಶತಮಾನ ಹಿಂದೆ ಬರಿಯುತ್ತಾರೆ.

ಗು—ಹತ್ತು ನೂರು ಕೂಡಿಸಿದರೆಷ್ಟಾಗುವದು?

ವಿ—ಒಂದು ಸಾವಿರಾಗುವದು.

ಗು—ಅದನ್ನು ಎಲ್ಲಿ ಬರೆಯಬೇಕು?

ವಿ—ನೂರರ ಹಿಂದೆ ಬರೆಯಬೇಕು. (ಬರಿಸುವದು.)

ಗು—ನೂರರ ಮನೆ ಎಷ್ಟನೆಯದು?

ವಿ—ಮೂರನೆಯದು.

ಗು—ಹಾಗಾದರೆ ಸಾವಿರದ ಮನೆ ಎಷ್ಟನೆಯದಾಗುವದು?

ವಿ—ನಾಲ್ಕನೆಯದಾಗುವದು.

ಗು—ನಾಲ್ಕನೆಯ ಮನೆಯಲ್ಲಿ ೫ ಇದ್ದರೆಷ್ಟು ಸಾವಿರಾಗುವದು?

ವಿ—ಅಯ್ದು ಸಾವಿರಾಗುವದು.

ಗು—೬ ಇದ್ದರೆಷ್ಟಾಗುವದು?

ವಿ—ಆರು ಸಾವಿರಾಗುವದು.

ಗು—ಅಂದಮೇಲೆ ನಾಲ್ಕನೆಯ ಮನೆಯ ಅಂಕೆಗಳು ಏನು ತೋರಿಸುವವು?

ವಿ—ತಮ್ಮಷ್ಟು ಸಾವಿರ ತೋರಿಸುವವು.

(ಮುಂದೆ ಸಾಗುವದು.)

DHARWAR TRAINING COLLEGE CERTIFICATE EXAMINATION.—1895.

ಕಾಲೇಜಿನ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು.

ಕಿನ್ನೇ ವರ್ಷದ ವರ್ಗ.

ಶಿಕ್ಷಣ.

೧. ವ್ಯವಸ್ಥೆಯನ್ನು ಕಾಯ್ದುಕೊಳ್ಳ ಬೇಕಾದರೆ ಶಿಕ್ಷಕನಲ್ಲಿ ಅವಶ್ಯವಾದ ಗುಣಗಳು ಯಾವವು? ಶಿಕ್ಷಕನು ಅನುಸರಿಸತಕ್ಕ ನಿಯಮಗಳು ಯಾವವು?

೨ ಶಾಲಾಸ್ಥಿತಿಯು ಶಿಕ್ಷೆಯು ವ್ಯರ್ಥ ಪ್ರಮಾಣದಲ್ಲಿರುತ್ತದೆಂಬ ಮಾತನ್ನು ಸ್ಥಾಪಿಸಿರಿ; ಕೆಟ್ಟಶಾಲೆಯ ವಿದ್ಯಾರ್ಥಿಗಳ ದುರಾಚಾರಗಳನ್ನು ವಿವರಿಸಿರಿ.

೩. "ಶಿಕ್ಷಕರು ಇಯತ್ತೈಯಿಂತೆ ಹಾಗೂ ಹೀಗೂ ಅಭ್ಯಾಸ ಮಾಡಿಸುತ್ತಾರೆ. ಆದರೆ ಅದು ಶಿಕ್ಷಣವಲ್ಲ." ಇದನ್ನು ಕುರಿತು ನಿಮ್ಮ ಅಭಿಪ್ರಾಯವನ್ನೂ ಶಿಕ್ಷಣದ ವ್ಯಾಖ್ಯೆಯನ್ನೂ ಬರೆಯಿರಿ.

೪. ಮೇಲಾದ ಪ್ರಶ್ನ ಪರಂಪರೆಯ ಲಕ್ಷಣಗಳು ಯಾವವು? ಪ್ರಶ್ನ ಪದ್ಧತಿಯಿಂದ ಕೆಲಸ ಸಾಗಿಸಲಿಚ್ಛಿಸುವ ಶಿಕ್ಷಕನು ಪ್ರಶ್ನಗಳ ಸಂಬಂಧದಿಂದ ಯಾವ ನಿಯಮಗಳನ್ನು ಲಕ್ಷದಲ್ಲಿಡಬೇಕು?

೫. "ವಿದ್ಯಾರ್ಥಿಗಳಿಗೆ ತಿಳಿಯುವಂಥ ಅಥವಾ ಅವರೇ ಕಂಡು ಹಿಡಿಯುವಂಥ ಸಂಗತಿಗಳನ್ನು ಶಿಕ್ಷಕರು ಸರ್ವಥಾ ತಾವಾಗಿ ಹೇಳಬಾರದು" ಈ ಮಾತಿನ ಮರ್ಮವೇನು? ಇದರಂತೆ ಶಿಕ್ಷಕರು ನಡೆಯುವದಿಲ್ಲ, ಇದರ ಕಾರಣವೇನು? ಅದರಿಂದ ನಷ್ಟವೇನು?

೬. ಪಾಠದ ಟಿಪ್ಪಣಿಗಳೆಂದರೇನು? ಅವುಗಳ ಪ್ರಯೋಜನವೇನು? "ದೃಢಭಾಜಕ" ದ ಪಾಠದ ಟಿಪ್ಪಣಿಗಳನ್ನು ಬರೆಯಿರಿ.

೭. ಭೂಗೋಲ ಕಲಿಸುವಾಗ ವಿದ್ಯಾರ್ಥಿಗಳಲ್ಲಿ ಉತ್ಸಾಹ ಆದರಗಳನ್ನು ಹ್ಯಾಗೆ ಹುಟ್ಟಿಸುವಿರಿ?

೮. ಉಕ್ತ ಲೇಖನದಿಂದ ಪ್ರಯೋಜನವಾಗಬೇಕಾದರೆ ಯಾವ ಎರಡು ಸಂಗತಿಗಳನ್ನು ಕುರಿತು ಲಕ್ಷ ಕೊಡಲಿಕ್ಕೆ ಬೇಕು?

೯. ಬೆಲೆಯುಳ್ಳ ಶಿಕ್ಷಣವೆಂದರೇನು? ಶಿಕ್ಷಕರು ಕೈಕೊಳ್ಳತಕ್ಕ ಬುದ್ಧಿ ಸಾಮರ್ಥ್ಯಗಳನ್ನು ಕ್ರಮವಾಗಿ ಹೇಳಿರಿ.

೫೦. ೧೦೦ ಹುಡುಗರಿಗಾಗಿ ಹೊಸ ಸಾಲೆಯ ಮನೆಯನ್ನು ಕಟ್ಟತಕ್ಕದ್ದದೆ. ಅದಕ್ಕಾಗಿ ಸ್ಥಲವನ್ನೂ ವರ್ಗಣಿಯನ್ನೂ ದೊರಕಿಸಿ ಆ ಸ್ಥಲದ ನಕಾಶದ ಸಹಿತವಾಗಿ ನಿಮ್ಮ ಜಿಲ್ಲೆಯ ಡಿ. ಎ. ಇನಸ್ಪೆಕ್ಟರರ ಕಡಿಗೆ ರಿಪೋರ್ಟು ಮಾಡಿರಿ.

ಎನೇ ವರ್ಷದ ವರ್ಗ.

೧. "ಭಾವವೇ ಬಲವು" ಇದನ್ನು ವಿವರಿಸಿರಿ.

೨. ಸ್ಥಿರತ್ವ ಅಂದರೇನು? ಇದರ ಪ್ರಯೋಜನವೇನು? ಯಾವ ಉಪಾಯಗಳಿಂದ ಇದನ್ನು ಬೆಳಿಸ ಬಹುದು? ಒಂದು ಉಪಾಯವನ್ನು ಪೂರ್ಣವಾಗಿ ವಿವರಿಸಿರಿ.

೩. ಕಲಿಸುವ ಸದ್ಧತಿಗಳು ಯಾವವು? ಮೇಲಾದದ್ದು ಯಾವದು? ಯಾಕೆ?

೪. ಲಕ್ಷ್ಮನನ್ನು ಕುರಿತು ಗಾರ್ಥವೇಟನು ಹೇಳಿದ ನಿಯಮುಗಳನ್ನು ಬರಿಯಿರಿ.

೫. ವಿದ್ಯಾರ್ಥಿಗಳಲ್ಲಿ ಸ್ವಾವಲಂಬನ ದೀಘೋದ್ಯೋಗಗಳನ್ನು ಹ್ಯಾಗೆ ನೆಲೆಗೊಳಿಸ ಬಹುದು?

೬. ನೀವು ಮಾಸ್ತರರಾಗಿ ನಿಯಮಿಸಲ್ಪಟ್ಟ ಹಳ್ಳಿಯ ಜನರು ತಮ್ಮ ಮಕ್ಕಳನ್ನು ಸಾಲೆಗೆ ಆದರದಿಂದ ಕಳಿಸುವದಿಲ್ಲ. ಮಕ್ಕಳ ಅಭ್ಯಾಸವನ್ನು ಕುರಿತು ಎಷ್ಟು ಮಾತ್ರವೂ ವಿಚಾರಿಸುವದಿಲ್ಲ. ಈ ಜನರಲ್ಲಿ ಆದರ ಬುದ್ಧಿಯನ್ನು ಹುಟ್ಟಿಸಲಿಕ್ಕೂ ಅವರ ಸಹಾಯವನ್ನು ಪಡೆಯಲಿಕ್ಕೂ ಉಪಾಯಗಳು ಯಾವವು?

೭. ಶಾಲೆಯ ಕೆಲಸದಲ್ಲಿ ಸ್ಮರಣಶಕ್ತಿಯ ಗೌರವವನ್ನೂ ಪ್ರಯೋಜನವನ್ನೂ ವಿವರಿಸಿರಿ.

೮. ಅನುಮಾನದಿಂದ ಉತ್ತರ ಕೊಡುವ ಜಟದಿಂದ ಹಾನಿಯೋ ಲಾಭವೋ? ಯಾಕೆ? ಈ ಜಟವನ್ನು ಹ್ಯಾಗೆ ಬಿಡಿಸುವಿರಿ.

೯. ವಿದ್ಯಾರ್ಥಿಗಳ ಅಕ್ಷರ ಕೆಡುವದಕ್ಕೆ ಕಾರಣವೇನು? ಸುಧಾರಿಸಲಿಕ್ಕೆ ಉಪಾಯಗಳು ಯಾವವು?

೧೦. ಫೀ ವಸೂಲು ಭರಣಾ, ಪಗಾರ ಈ ಸಂಬಂಧದ ನಿಯಮುಗಳನ್ನು ಬರೆಯಿರಿ.

ವರ್ಗಣೆ ವಸೂಲು.

ಧಾರವಾಡ ಜಿಲ್ಲೆ.

	ರೂ.	ಆ.	ಪೈ.
ರಾ. ಸಾ. ಡಿ. ಎ. ಇ. ಜಿಲ್ಲಾ ಧಾರವಾಡ ಇವರಿಂದ ಲೋ. ಬೋ. ಸಾಲಿಗಳ ಬಾ॥ ಅಗಷ್ಟ ಮತ್ತು ಸಪ್ಟಂಬರ ೧೮೯೫ರ ಒಗ್ಗೆ.	೫೦	೫	೦
ಸದರಿಯವರಿಂದ ಧಾರವಾಡ ಮತ್ತು ಹುಬ್ಬಳ್ಳಿ ಮುನಸಿಪಾಲಟಿ ಸಾಲೆಗಳ ಹೊರ್ತು ಇತರ ಮು. ಸಾಲಿಗಳ ಬಾ॥ ಅಗಷ್ಟ ಮತ್ತ ಸಪ್ಟಂಬರ ೧೮೯೫ರ ಬಗ್ಗೆ.	೩	೬	೦
ಹುಬ್ಬಳ್ಳಿ ಮು. ಮಾಸ್ತರರಿಂದ ಜುಲೈಯಿಂದ ಸಪ್ಟಂಬರದ ವರೆಗೆ.	೩	೮	೬

ಬೆಳಗಾವ ಜಿಲ್ಲೆ.

ರಾ. ಸಾ. ಡಿ. ಎ. ಇನಸ್ಪೆಕ್ಟರರಿಂದ ಲೋ. ಬೋ. ಸಾಲೆಗಳ ಬಗ್ಗೆ ಸಪ್ಟಂಬರ ೧೮೯೫ರ ಬಾ.	೧೬	೫	೯

ವಿಜಾಪೂರ ಜಿಲ್ಲೆ.

ರಾ. ಸಾ. ಡಿ. ಎ. ಇ. ಜಿಲ್ಲಾ ವಿಜಾಪೂರ ಇವರಿಂದ ಲೋ. ಬೋ. ಹಾಗೂ ಮುನಸಿಪಲ್ ಶಾಲೆಗಳ ಬಾ॥ ಅಗಷ್ಟ ಮತ್ತು ಸಪ್ಟಂಬರ ೧೮೯೫ರ ಬಗ್ಗೆ.	೧೬	೫	೩

ಕಾರವಾರ ಜಿಲ್ಲೆ.

ರಾ. ಸಾ. ಡಿ. ಎ. ಇವರಿಂದ ಡೋ. ಬೋ. ಸಾಲಿಗಳ ಬಗ್ಗೆ ಜೂಲೈಯಿಂದ ಸಪ್ಟಂಬರ ತಿನಾಹಿ ಬಾಬತು.	೩೧	೦	೯
ಸದರಿಯವರಿಂದ ಹಲ್ಯಾಳ, ಸಿರ್ಸಿ, ಘಟ್ಟಕಳ ಮ್ಯು. ಸಾಲೆಗಳು ಹೊರ್ತಾಗಿ ಉಳಿದ ಮ್ಯು. ಸಾ. ಬಾ. ಎಪ್ರಿಲದಿಂದ ಸಪ್ಟಂಬರ ಸಾಮಾಹಿ ಬಗೆ.	೯	೩	೩

ಕಿರುಕುಳ.

ರಾ. ರಾ. ಶಿವಲಿಂಗಸ್ವಾಮಿ ಇವರಿಂದ ನೋಟೀಸಿನ ಬಾಬತ್ತು. } ೦ ೮ ೦

---

* ಇದರೊಳಗೇನಾದರೂ ತಪ್ಪು ಇದ್ದರೆ ಅದನ್ನು ದಯಮಾಡಿ ತಿಳುಹಬೇಕು.

ನೋಟೀಸು.

ನಂಬರು ೩೫೧.

ಮೆ॥ ಕ್ಯುರೇಟರ ಗವರ್ನಮೆಂಟ ಸೆಂಟ್ರಲ ಬುಕ್‌ಡಿಪೋ ಮುಂಬಯಿ ಇವರಿಂದ ತಿಳಿಸಲ್ಪಡುವದೇನಂದರೆ:—

ತಾ॥ ೨೦—೧೦—೧೯೧೯ ನೇ ಇಸವಿವರೆಗೆ ಕೆಳಗೆ ಬರೆದ ಪುಸ್ತಕಗಳು ಮುದ್ರಿತವಾಗಿ ಮಾರಾಟಕ್ಕೆ ಸಿದ್ಧವಾಗಿವೆ. ಅವುಗಳ ವಿವರ;—

ಪುಸ್ತಕಗಳು.	ಬೆಲೆ.		
ಇಂಗ್ಲಿಷ.	ರೂ.	ಆ.	ಪೈ.
ಹಾವರ್ಡ ಥರ್ಡ ಬುಕ್	೦	೨	೬
ಹಾವರ್ಡ ಕೃತ ರುಡಿಮೆಂಟ್ರಿ ಗ್ರಾಮರ	೦	೨	೦

ಮುಂಬಯಿ. J. B. Dubash.

ತಾ॥ ೨೧—೧೦—೧೯: ಕ್ಯುರೇಟರ ಗವರ್ನಮೆಂಟ ಸೆಂಟ್ರಲ್ ಬುಕ್‌ಡಿಪೋ ಮುಂಬಯಿ.

ಕನ್ನಡಶಾಲಾಪತ್ರಿಕೆ.

KANARESE

SCHOOL PAPER.

ಪುಸ್ತಕ ೩೦.] ದಿಶಂಬರ ೧೮೯೬ಇ. [ಸಂಚಿಕೆ ೧೨.

ಅನುಕ್ರಮಣಿಕೆ.

		ಪುಟ.
೧.	ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು	...೨೬೫
೨.	ಕಲಿಸುವ ಪದ್ಧತಿಗಳು.—ಪಾಠದ ಟಿಪ್ಪಣಿಗಳು	...೨೭೩
೩.	ಕನ್ನಡ ಗೆಝೆಟಿಯರದಿಂದ ಅವತರಣಿಗಳು	...೨೮೦
೪.	ಪತ್ರವ್ಯವಹಾರ.	...೨೮೫
೫.	ಕಾಲೇಜದ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು	...೨೮೮

CONTENTS.

1. Educational Intelligence and Useful Notes ...265
2. Methods of Teaching–Notes of Lessons ...273
3. Selections from the Karnatic Gazetteer ...280
4. Correspondence. 285
5. Dharwar Training College Certificate Examination—1895, ... 288

DHARWAR:
PRINTED AT THE KARNATIC BOOK DEPOT PRESS,
1895.

ಪ್ರಕಟನೆ.

ನಮ್ಮ ಡಿಪೋದಲ್ಲಿ ಯಾವತ್ತು ಸರಕಾರಿ ಹಾಗು ಖಾಸಗಿ ಶಾಲೋಪಯೋಗಿ ಪುಸ್ತಕಗಳೂ, ಕಾವ್ಯ ನಾಟಕಾದಿಗಳೂ, ಪುರಾಣೇತಿಹಾಸಗಳೂ, ಇನ್ನೂ ಅನೇಕ ತರದ ಪುಸ್ತಕಗಳೂ, ಕ್ರಯಕ್ಕೆ ದೊರೆಯುತ್ತವೆ. ಬೇಕಾದವರು ರೋಖ ಹಣ ಕೊಟ್ಟು ಇಲ್ಲವೆ ವ್ಯಾಲ್ಯುಪೇಬಲ್ ದ್ವಾರ ತರಿಸಿಕೊಳ್ಳಬೇಕು.

ಕಮಿಶನ್ ದರ ಕೆಳಗೆ ಬರೆದಂತೆ.

೧ ರೂಪಾಯಕ್ಕೆ	ಸರಕಾರಿ.									ಖಾಸಗಿ.								
	ರೂಪಾಯಿಯಿಂದ		ರೂಪಾಯಿಯವರೆಗೆ.		ರೂಪಾಯಿಯಿಂದ		ರೂಪಾಯಿಯವರೆಗೆ.		ಹಿಚ್ಚು ತೆಗೆದುಕೊಳ್ಳುವಂಥಾಗಿಲ್ಲ.	ರೂಪಾಯಿಯಿಂದ		ರೂಪಾಯಿಯವರೆಗೆ.		ರೂಪಾಯಿಯಿಂದ		ಹಿಚ್ಚು ತೆಗೆದುಕೊಳ್ಳುವಂಥಾಗಿಲ್ಲ.	
	೦	೧	೦	೦	೧	೬	೦	೧	೮	೦	೪	೦	೦	೬	೦	೧	೪	೦

ರಿಜಿಷ್ಟರ ಮಾಡಿಸಿ ಹಕ್ಕು ಪಡಕೊಂಡ ಖಾಸಗಿ ಬುಕ್ಕುಗಳಿಗ್ಗೂ, ಹಾಗು ರೂಪಾಯಿಯ ಅಂಶಕ್ಕೂ ಕಮಿಶನ್ ದೊರಿಯಲಾರದು. ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗೆ ಸಹಿ ಮಾಡಿದವರ ಕಡಿಗೆ ಬರೆದು ತಿಳಕೊಳ್ಳಬೇಕು.

ಹುಬ್ಬಳಿ,
ತಾ|| ೦೨-೮-೧೫.

ಶಿವಲಿಂಗಸ್ವಾಮಿ,
ಬುಕ್‌ಸೆಲರ ಹುಬ್ಬಳ್ಳಿ

ಲಲಿತಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ।
ಭಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ ।
ಜಯಮಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೩ನೇ.] ದಿಸೆಂಬರ ೧೮೮೯ನೇ ಸಾಲು. [ಸಂಚಿಕೆ ೧೨.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಇಂಡಿಯನ್ ಸಿವ್ಹಿಲ್ ಸರ್ವಿಸದ ಪರೀಕ್ಷೆಯ ಪರಿಣಾಮ ವು ಮೊನ್ನೆ ಮೊನ್ನೆ ತಿಳಿಸಲ್ಪಟ್ಟತು. ಈ ಪರೀಕ್ಷೆಯಲ್ಲಿ ೬೬ ಜನರು ಆರಿಸಲ್ಪಟ್ಟರು. ಇವರಲ್ಲಿ ಬಬ್ಬನು ಮಾತ್ರ ಈ ದೇಶದವನಿರುವನು. ಅವನ ಹೆಸರು ಶ್ರೀಖ ಅಸಗಾರಅಲ್ಲಿ. ಇವನ ನಂಬರು ೬೬ರಲ್ಲಿ ೬೨ನೇದಿರುತ್ತದೆ. ಇವನಿಗೆ ೧೫೧೯ ಗುಣಗಳು ಶಿಕ್ಕಿರುತ್ತವೆ. ಮೊದಲನೇಯವನಿಗೆ ೩೬೩೮ ಗುಣಗಳು ಶಿಕ್ಕಿರುತ್ತವೆ. ಕಡೆಯವನಿಗೆ ೧೫೧೯ ದೊರೆತಿರುತ್ತವೆ. ಈ ಪ್ರಕಾರದ ಪರೀಕ್ಷೆಯ ಪರಿಣಾಮ ವಾಗುತ್ತಿರಲಿಕ್ಕೆ ನಮ್ಮಲ್ಲಿಯ ಯಾವ ಎದೆಗಾರನು ತನ್ನ ಮಗನನ್ನು ಎಳವ್ರಾಯದಲ್ಲಿ ಪರದೇಶಕ್ಕೆ ಕಳುಹಿಸಲಿಕ್ಕೆ ಧೈರ್ಯಗೊಳ್ಳುವನೋ ತಿಳಿಯದು. ದಾದಾಭಾಯಿ ನವರೋಜಿಯೂ ಅವನ ಸಹಕಾರಿ ಜನರೂ ಕೋರುವಂತೆ ಹಿಂದುಸ್ಥಾನದಲ್ಲಿಯೂ ಈ ಪರೀಕ್ಷೆಯಾದರೆ ನಮ್ಮ ಜನರಿಗೆ ಸ್ವಲ್ಪ

ಪ್ರಕಟನ.

ನಮ್ಮ ಡಿಪೋದಲ್ಲಿ ಯಾವತ್ತು ಸರಕಾರಿ ಹಾಗು ಖಾಸಗಿ ಶಾಲೋಪಯೋಗಿ ಪುಸ್ತಕಗಳೂ, ಕಾವ್ಯ ನಾಟಕಾದಿಗಳೂ, ಪುರಾಣೇತಿಹಾಸಗಳೂ, ಇನ್ನೂ ಅನೇಕ ತರದ ಪುಸ್ತಕಗಳೂ, ಕ್ರಯಕ್ಕೆ ದೊರೆಯುತ್ತವೆ. ಬೇಕಾದವರು ರೋಖ ಹಣ ಕೊಟ್ಟು ಇಲ್ಲವೆ ವ್ಯಾಲ್ಯುಪೇಬಲ್ ದ್ವಾರ ತರಿಸಿಕೊಳ್ಳಬೇಕು.

ಕಮಿಶನ್ ದರ ಕೆಳಗೆ ಬರೆದಂತೆ.

೧ ರೂಪಾಯಕ್ಕೆ	ಸರಕಾರಿ.						ಖಾಸಗಿ.					
	೧೦ ರೂಪಾಯಿ ಮಿಂಚು ೮೦ ರೂಪಾಯಿ ವರಿಗೆ.			೮೦ ರೂಪಾಯಿ ಮಿಂಚು ೨೫೦ ರೂಪಾಯಿ ವರಿಗೆ.			೨೫೦ ರೂಪಾಯಿ ಮಿಂಚು ೧೦೦೦ ರೂಪಾಯಿ ವರಿಗೆ.			೧೦೦೦ ರೂಪಾಯಿಂಚು ಹೆಚ್ಚು ಹೆಚ್ಚು ಹೆಚ್ಚು ಹೆಚ್ಚು ವರಿಗೆ.		
	೦	೧೦	೦	೦	೧೫	೦	೧೮	೦	೦	೦	೬	೦
	೦	೧೨	೦	೦	೧೮	೦	೨೧	೦	೦	೦	೮	೦
	೦	೧೪	೦	೦	೨೧	೦	೨೪	೦	೦	೦	೧೦	೦
	೦	೧೬	೦	೦	೨೪	೦	೨೭	೦	೦	೦	೧೨	೦
	೦	೧೮	೦	೦	೨೭	೦	೩೦	೦	೦	೦	೧೪	೦
	೦	೨೦	೦	೦	೩೦	೦	೩೩	೦	೦	೦	೧೬	೦
	೦	೨೨	೦	೦	೩೩	೦	೩೬	೦	೦	೦	೧೮	೦
	೦	೨೪	೦	೦	೩೬	೦	೩೯	೦	೦	೦	೨೦	೦
	೦	೨೬	೦	೦	೩೯	೦	೪೨	೦	೦	೦	೨೨	೦
	೦	೨೮	೦	೦	೪೨	೦	೪೫	೦	೦	೦	೨೪	೦
	೦	೩೦	೦	೦	೪೫	೦	೪೮	೦	೦	೦	೨೬	೦
	೦	೩೨	೦	೦	೪೮	೦	೫೧	೦	೦	೦	೨೮	೦
	೦	೩೪	೦	೦	೫೧	೦	೫೪	೦	೦	೦	೩೦	೦
	೦	೩೬	೦	೦	೫೪	೦	೫೭	೦	೦	೦	೩೨	೦
	೦	೩೮	೦	೦	೫೭	೦	೬೦	೦	೦	೦	೩೪	೦
	೦	೪೦	೦	೦	೬೦	೦	೬೩	೦	೦	೦	೩೬	೦

ರಿಜಿಸ್ಟರ ಮಾಡಿಸಿ ಹಕ್ಕು ಪಡಕೊಂಡ ಖಾಸಗಿ ಬುಕ್ಕುಗಳಿಗ್ಗೂ, ಹಾಗು ರೂಪಾಯಿಯ ಅಂಶಕ್ಕೂ ಕಮಿಶನ್ ದೊರಿಯಲಾರದು. ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗೆ ಸಹಿ ಮಾಡಿದವರ ಕಡಿಗೆ ಬರೆದು ತಿಳಕೊಳ್ಳಬೇಕು.

ಹುಬ್ಬಳಿ,
ತಾ|| ೨೨-೪-೧೯.

ಶಿವಲಿಂಗಸ್ವಾಮಿ,
ಬುಕ್‌ಸೆಲರ ಹುಬ್ಬಳ್ಳಿ

ವಿದ್ಯಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ।
ಭಯಸುತ್ತಂ ಪ್ರತಿಪೂಸದಾದಿಗೊಲವಿಂದೀಪತ್ರಮಂ ಮುದ್ರಿಸಿ॥
ನಯದಿಂದಿತ್ತಪೆವೋದುವರ್ಗೆಸುಗುಣಂ ತೋರಲ್ಕೆಕೈಕೊಂಬುದೈ।
ಜಯದಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೩ನೆ.] ದಿಸೆಂಬರ ೧೮೯೩. [ಸಂಚಿಕೆ ೧೨.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧವ ವೃತ್ತಾಂತಗಳು.

ಇಂಡಿಯನ್ ಸಿವ್ಹಿಲ್ ಸರ್ವಿಸದ ಪರೀಕ್ಷೆಯ ಪರಿಣಾಮವು ಪ್ರಮೊನ್ನೆ ಮೊನ್ನೆ ತಿಳಿಸಲ್ಪಟ್ಟಿತು. ಈ ಪರೀಕ್ಷೆಯಲ್ಲಿ ೬೬ ಜನರು ಆರಿಸಲ್ಪಟ್ಟರು. ಇವರಲ್ಲಿ ಬಬ್ಬನು ಮಾತ್ರ ಈ ದೇಶದವನಿರುವನು. ಅವನ ಹೆಸರು ಶೇಖ ಅಸಗಾರಅಲ್ಲಿ. ಇವನ ನಂಬರು ೬೬ರಲ್ಲಿ ೬೨ನೇದಿರುತ್ತದೆ. ಇವನಿಗೆ ೧೫೧೯ ಗುಣಗಳು ಸಿಕ್ಕಿರುತ್ತವೆ. ಮೊದಲನೇಯವನಿಗೆ ೩೭೪೪ ಗುಣಗಳು ಸಿಕ್ಕಿರುತ್ತವೆ. ಕಡೆಯವನಿಗೆ ೧೪೯೩ ದೊರೆತಿರುತ್ತವೆ. ಈ ಪ್ರಕಾರದ ಪರೀಕ್ಷೆಯ ಪರಿಣಾಮ ವಾಗುತ್ತಿರಲಿಕ್ಕೆ ನಮ್ಮಲ್ಲಿಯ ಯಾವ ಎದೆಗಾರನು ತನ್ನ ಮಗನನ್ನು ಎಳೆಪ್ರಾಯದಲ್ಲಿ ಪರದೇಶಕ್ಕೆ ಕಳುಹಿಸಲಿಕ್ಕೆ ಧೈರ್ಯಗೊಳ್ಳುವನೋ ತಿಳಿಯುಮ. ದಾದಾಭಾಯಿ ನವರೋಜಿಯೂ ಅವನ ಸಹಕಾರಿ ಜನರೂ ಕೋರುವಂತೆ ಹಿಂದುಸ್ಥಾನದಲ್ಲಿಯೂ ಈ ಪರೀಕ್ಷೆಯಾದರೆ ನಮ್ಮ ಜನರಿಗೆ ಸ್ವಲ್ಪ

ಅನುಕೂಲವಾಗುವದು. ನಮ್ಮ ಜನರು ಐಕಮತ್ಯದಿಂದ ಯತ್ನಿಸಿದರೆ ಈ ಕೆಲಸವುಇಂದಿಲ್ಲ ನಾಳೆ ಕೈಗೂಡಬಹುದು.

ಧಾರವಾಡ ಟ್ರೇನಿಂಗ ಕಾಲೇಜದ ವಾರ್ಷಿಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟುಗಳನ್ನು ಕೊಡುವ ಸಮಾರಂಭವು ಕಳೆದ ತಿಂಗಳ ೮ನೇ ತಾರೀಖು ಶುಕ್ರವಾರ ದಿವಸ ಸಾಯಂಕಾಲಕ್ಕೆ ಕಾಲೇಜದ ಎದುರಿಗಿರುವ ವಿಸ್ತಾರವಾದ ಪುಷ್ಪವಾಟಿಕೆಯೊಳಗೆ ಸುಂದರವಾಗಿ ಹಾಕಿದ ಮುಂಟಪದಲ್ಲಿ ನೆರವೇರಿಸಲ್ಪಟ್ಟಿತು. ಈ ಸಮಾರಂಭಕ್ಕೆ ಇಲ್ಲಿಯ ಲೋಕಪ್ರಿಯ ಕಲೆಕ್ಟರರಾದ ಮೆ॥ ಮ್ಯೂರ ಸಾಹೇಬರೂ ಬೇರೆ ಯುರೋಪಿಯರ್ಯ ಕಾಮದಾರರೂ ಮುನಸೂಫ, ಮಾಮಲೇದಾರ, ವಕೀಲ ಮುಂತಾದ ಅನೇಕ ಸಭ್ಯ ಗೃಹಸ್ಥರೂ ಬಂದಿದ್ದರು. ಸಭೆಯ ಕೆಲಸವು ಸಾಯಂಕಾಲದ ೫ ಘಂಟೆಗೆ ಪ್ರಾರಂಭವಾಗಿ ಮೆ॥ ಮ್ಯೂರ ಸಾಹೇಬರವರು ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಿದ ನಂತರ ಕಾಲೇಜದ ಪ್ರಿನ್ಸಿಪಾಲರಾದ ರಾವಸಾಹೇಬ ಕರಂದೀಕರ ಇವರು ರಿಪೋರ್ಟು ಓದಿದರು. ಅದರ ತಾತ್ಪರ್ಯವೇನಂದರೆ:—

"ನನ್ನ ನಿಮಂತ್ರಣಕ್ಕೆ ಮಾನ ಕೊಟ್ಟು ತಾವೆಲ್ಲರೂ ಸಮಾರಂಭಕ್ಕೆ ದಯಮಾಡಿಸಿರುವಿರಿ; ಅದಕ್ಕಾಗಿ ನಾನು ತಮ್ಮೆಲ್ಲರ ಉಪಕಾರ ನೆನಿಸುತ್ತೇನೆ. ಬಿಷ್ಟಿಸ ಸಮಾರಂಭವು ಕಾಲೇಜಶಿಕ್ಷಣದ ಒಂದು ಅಂಶವಾಗಿರುತ್ತದೆ. ಯಾಕಂದರೆ, ಇಲ್ಲಿಂದ ಮಾಸ್ತರರಾಗಿ ಹೋಗುವ ಜನರಿಗೆ ಇಂಥ ಸಮಾರಂಭಗಳನ್ನು ಮಾಡುವ ಪ್ರಸಂಗಗಳು ಮೇಲಿಂದ

ವ ಮೇಲೆ ಬದಗುವವು. ಈ ಸಮಾರಂಭದ ಉದ್ದೇಶಗಳು ಎರಡಿರುತ್ತವೆ. ನಾವು ಇಡಿ ವರ್ಷದಲ್ಲಿ ಮಾಡಿದ ಕೆಲಸವನ್ನು ಜನರ ಮುಂದಿಡುವದು ಮೊದಲನೇದು; ಮತ್ತು ತಮ್ಮ ಕೆಲಸದ ಮುಂದುತಿಯನ್ನು ಕೊಡುವದಕ್ಕೆ ವಿದ್ಯಾರ್ಥಿಗಳು ಪ್ರಾಗೆ ಸಿದ್ಧರಾಗಿರಬೇಕೆಂಬದನ್ನು ತಿಳಿಸಿ, ಅವರ ಬಗ್ಗೆ ತಮ್ಮೆಲ್ಲರಿಗಿದ್ದ ಕಳಕಳಿಯನ್ನೂ ಅಭಿಮಾನವನ್ನೂ ವ್ಯಕ್ತವಾಗಿ ತೋರಿಸುವದು ಎರಡನೇದು.

'ಈ ಕಾಲೇಜವು ಸರ್ ೧೪೭೬ನೇ ಇಸವಿಯಲ್ಲಿ ಸ್ಥಾಪಿತವಾಯಿತು. ಆದರೆ ಆ ಕಾಲಕ್ಕೆ ಇದು ಒಂದು ಕ್ಲಾಸಿನ ರೂಪದಿಂದ ಮಾತ್ರ ಇತ್ತು. ಸರ್ ೧೪೭೫ರಿಂದ ೧೪೭೯ರ ವರೆಗೆ ಹತ್ತು ವರ್ಷದಲ್ಲಿ ಈ ಸಂಸ್ಥೆಯು ಕ್ರಮಕಾ ಬೆಳೆದು ಕಾಲೇಜವೆಂಬ ಹೆಸರಿಗೆ ಬಿಪ್ಪಹತ್ತಿತೆನ್ನಬಹುದು. ಅಂದಿನಿಂದ ಸರಕಾರವರ ಸಹಾಯ, ಕಾಮದಾರ ಜನರ ಉದ್ಯೋಗ ಮತ್ತು ಜನರ ಉತ್ತೇಜನಗಳಿಂದ ಇದರ ಉತ್ತರೋತ್ತರ ಉತ್ಕರ್ಷವಾಗಹತ್ತಿತು. ಮುಂಬಯಿ ಇಲಾಖೆಯಲ್ಲಿರುವ ಯೂನಿವರ್ಸಿಟಿ ಕಾಲೇಜಗಳಲ್ಲಿ ಇಪ್ಪಾರತಿಯ ಮತ್ತು ಬೇರೆ ತರದ ಅನುಕೂಲಗಳಿಗಾಗಿ ನಮ್ಮ ಕಾಲೇಜದ ನಂಬರು ೧ನೇದಿರುತ್ತದೆಂಬದು ಹೇಳಲಿಕ್ಕೆ ನಾನು ಅಭಿಮಾನ ಪಡುತ್ತೇನೆ; ಮತ್ತು ಈ ಸ್ಥಳದಲ್ಲಿ ವಿದ್ಯಾರ್ಥಿಗಳು ಮಾಡುವ ಕೆಲಸವನ್ನು ನೋಡಿ ಮತ್ತು ಪರೀಕ್ಷೆಯ ಪರಿಣಾಮಗಳನ್ನು ತಿಳಕೊಂಡು ಅಭ್ಯಾಸದ ಸಂಬಂಧದಿಂದ ಈ ಕಾಲೇಜದ ಸ್ಥಿತಿಯನ್ನು ಊಹಿಸುವ ಕೆಲಸವನ್ನು ನಿಮ್ಮೆಲ್ಲರಿಗೆ ಬಿಟ್ಟಿ ಸುತ್ತೇನೆ.'

'ಕಾಲೇಜದಲ್ಲಿ ೩ನೇ ವರ್ಷದವರು ೧೦ ಮಂದಿ, ೨ನೇ ವರ್ಷದವರು ೩೦ ಮಂದಿ ಮತ್ತು ೧ನೇ ವರ್ಷದವರು ೬೦ ಮಂದಿ ಈ ಪ್ರಕಾರ ೧೦೦ ಮಂದಿ ವಿದ್ಯಾರ್ಥಿಗಳನ್ನು ಇದ

ಬೇಕೆಂದು ಸಾಧಾರಣ ನಿಯಮವಿದ್ದಂತೆ ಸದ್ಯಕ್ಕೆ ಕಾಲೇಜಿನಲ್ಲಿ ೯೦ ವಿದ್ಯಾರ್ಥಿಗಳಿದ್ದು ಪರೀಕ್ಷೆಯ ಪರಿಣಾಮವು ಕೆಳಗೆ ಬರೆದಂತೆ ಇರುತ್ತದೆ.

ವರ್ಗ.	ರಜಿಸ್ಟರ ಮೇಲಿನ ಸಂಖ್ಯೆ.	ಪರೀಕ್ಷೆಗೆ ನಿಂತ ವಿದ್ಯಾರ್ಥಿಗಳ ಸಂಖ್ಯೆ.	ಪಾಸಾದವರ ಸಂಖ್ಯೆ.
೩ನೇ ವರ್ಷ.	೧೧	೧೦	೯
೨ನೇ ವರ್ಷ.	೩೦	೨೯	೨೬
೧ನೇ ವರ್ಷ.	೪೯	೩೫	೨೬
	೯೦	೭೪	೬೧

‘ಕಳೆದ ವರ್ಷ ೧೧೦ ವಿದ್ಯಾರ್ಥಿಗಳು ಪರೀಕ್ಷೆಗೆ ನಿಂತು ಅವರಲ್ಲಿ ೧೦೬ ಮಂದಿ ಪಾಸಾಗಿದ್ದರು. ಈ ವರ್ಷ ೭೪ ವಿದ್ಯಾರ್ಥಿಗಳು ಪರೀಕ್ಷೆಗೆ ನಿಂತು ೬೧ ಮಂದಿ ಪಾಸಾಗಿರುವರು. ಎರಡೂ ವರ್ಷ ಪಾಸಾದವರ ಶೇಕಡಾ ಪ್ರಮಾಣವು ಸಾಧಾರಣವಾಗಿ ಅಷ್ಟೇ ಇರುತ್ತದೆ. ಮೂರನೇ ವರ್ಷದಲ್ಲಿ ಪಾಸಾದ ೯ ಮಂದಿಯಲ್ಲಿ ೨ನೇ ವರ್ಗದಲ್ಲಿ ಅಂದರೆ ೧೦೦ಕ್ಕೆ ೬೦ ಮತ್ತು ಹೆಚ್ಚಿಗೆ ಗುಣ ಪಡೆದವರು ೫ ಮಂದಿ, ಮತ್ತು ೨ನೇ ವರ್ಗದಲ್ಲಿ ಅಂದರೆ ೧೦೦ಕ್ಕೆ ೪೦ಕ್ಕಿಂತ ಹೆಚ್ಚಿಗೆ ಗುಣ ಪಡೆದವರು ನಾಲ್ವರು ಉಂಟು. ಅದರಂತೆ ೨ನೇ ವರ್ಷದಲ್ಲಿ ಪಾಸಾದ ೨೬ ಜನರಲ್ಲಿ ಅರ್ಧ ೧ನೇ ವರ್ಗದಲ್ಲಿ ಪಾಸಾದವರೂ ಅರ್ಧ ೨ನೇ ವರ್ಗದಲ್ಲಿ ಪಾಸಾದವರೂ ಉಂಟು.’

‘ಪರೀಕ್ಷೆಯಲ್ಲಿ ಒಟ್ಟಿಗೆ ಪಾಸಾದ ೬೧ ಜನರಲ್ಲಿ ೨ನೇ ವರ್ಷದ ೯ ಜನರನ್ನು ಮೂರನೇ ವರ್ಷದ ಅಭ್ಯಾಸಕ್ಕಾಗಿಯೂ ೧ನೇ ವರ್ಷದ ೨೬ ಜನರನ್ನು ಎರಡನೇ ವರ್ಷದ ಅಭ್ಯಾಸಕ್ಕಾಗಿಯೂ ಇಟ್ಟುಕೊಂಡಿರುತ್ತಾರೆ; ಉಳಿದ

ಒಂದು ಈವೊತ್ತು ಸರ್ಟಿಫಿಕೇಟು ಪೊಂದಿ ಕೆಲಸಗ
ಳಿಲಿ ಯೋಗತಕ್ಕವರು. ಕಾಲೇಜಿನ ವಾರ್ಷಿಕ ಖರ್ಚು
೨೫೦೦ ರೂಪಾಯಿ ಇರುತ್ತದೆ. ಅದರಿಂದ ಪ್ರತಿಯೊಬ್ಬ
ವಿದ್ಯಾರ್ಥಿ ಮನುಷ್ಯನಿಗಾಗಿ ಈ ವರ್ಷ ೪೦೦ ರೂಪಾಯಿ
ಖರ್ಚು ಮಾಡಿದಂತೆ ಆಯಿತು.'

'ಈ ಕಾಲೇಜಕ್ಕೆ ಬಂದು ವರ್ಕಶಾಪ್ ಜೋಡಿಸಿದ್ದು,
ಅದರಲ್ಲಿ ೮೯ ವಿದ್ಯಾರ್ಥಿಗಳು ಬಡಿಗ ಕೆಲಸವನ್ನೂ ೧೫
ವಿದ್ಯಾರ್ಥಿಗಳು ಕಮ್ಮಾರ ಕೆಲಸವನ್ನೂ ಕಲಿಯುತ್ತಾ
ರೆ. ಡ್ರಾಯಿಂಗ ಕಲಿಯುವವರು ೪೮ ಮಂದಿಯುಂಟು.
ಸರ್ ೧೯೧೪ನೇ ಇಸವಿಯಲ್ಲಿ ಆದ ಕಲಾಕೌಶಲ್ಯದ ಪರೀ
ಕ್ಷೆಯಲ್ಲಿ ಇಬ್ಬರು ಈ ಕಾಲೇಜಿನಿಂದ ಪಾಸಾಗಿರುವರು.
ಕಾಲೇಜಕ್ಕೆ ಬಂದು ಗಾಯನ ಕ್ಲಾಸನ್ನು ಸಹ ಜೋಡಿಸಿ
ರುತ್ತದೆ. ಆದರೆ ಗಾಯನ ಕಲಿಸುವ ಡ್ರಾಯಿಂಗ ಮಾಸ್ತ
ರರಿಗೆ ಸಾಕಷ್ಟು ವೇಳೆ ದೊರೆಯದ್ದರಿಂದ ಅದರಲ್ಲಿ ಕೆಲಸವು
ಆಗತಕ್ಕಷ್ಟು ಚೆನ್ನಾಗಿ ಆಗುವದಿಲ್ಲ. ಆದರೂ ಕವಿತಾ
ಮುಂತಾದವುಗಳನ್ನು ಸುಸ್ವರದಿಂದ ಅನ್ನುವ ಕೆಲಸವು ಕೆಲ
ವಂಶದಿಂದ ಚೆನ್ನಾಗಿ ಸಾಧಿಸಹತ್ತಿರುತ್ತದೆಂದೆನ್ನಬಹುದು.
ಉತ್ತಮ ಪಾಠನ ಮತ್ತು ಸುಸ್ವರದಿಂದ ಕವಿತೆಗಳನ್ನು
ಅನ್ನುವದು ಇವೆರಡು ಮಾಸ್ತರರ ಪ್ರಥಮ ಕರ್ತವ್ಯಗಳಲ್ಲಿ
ಎಣಿಸಲ್ಪಡುವವು. ಈ ಕೆಲಸಗಳನ್ನು ನಮ್ಮ ಜನರು ತಕ್ಕ
ಮಟ್ಟಿಗೆ ಸರಿಯಾಗಿ ಮಾಡಲಿಕ್ಕೆ ತಕ್ಕವರಾಗಿರುತ್ತಾರೆಂದು
ನಾನು ಸಂತೋಷದಿಂದ ತಿಳಿಸುತ್ತೇನೆ.'

ಪ್ರಾಕ್ಟಿಸಿಂಗ್ ಸ್ಕೂಲ್—ಇದು ಕಾಲೇಜಿನ ಬಂದು ಮುಖ
ತ್ವವ ಅಂಗವಿರುತ್ತದೆ. ಈ ಶಾಲೆಯ ಹೆಡ್ ಮಾಸ್ತರರಾದ
ಮಿ. ನಾಯ್ಡುರವರ ಪರಿಶ್ರಮದಿಂದ ಇದು ದಿನ ದಿನಕ್ಕೆ ಬೆಳೆ

ಯುತ್ತ ನಡೆದಿದೆ. ಈ ಶಾಲೆಯ ವಾರ್ಷಿಕ ಪರೀಕ್ಷೆಯಲ್ಲಿ ೧೯೨೬ರಲ್ಲಿ ೬೦ ಜನ ವಿದ್ಯಾರ್ಥಿಗಳು ಪಾಸಾಗಿರುತ್ತಾರೆ. ಕಳೆದ ವರ್ಷ ಇಲ್ಲಿಂದ ಮುಲ್ಕೀ ಪರೀಕ್ಷೆಗೆ ಹೋದ ೬೦ ಜನರಲ್ಲಿ ೧೧ ಮಂದಿ ಪಾಸಾಗಿರುವರು. ಈ ವರ್ಷ ಸಹ ಮುಲ್ಕೀ ಪರೀಕ್ಷೆಗೆ ಇಲ್ಲಿಂದ ೬೦ ವಿದ್ಯಾರ್ಥಿಗಳನ್ನು ಕಳಿಸಿರುತ್ತಾರೆ. ಪರಿಣಾಮವು ಇನ್ನೂ ತಿಳಿದಿಲ್ಲ.'

'ಗವರ್ನೀ ಸಾಧಕದ ದೆಶೆಯಿಂದಲೂ ಕಾಲೇಜಿನ ಸ್ಥಿತಿಯ ದೆಶೆಯಿಂದಲೂ ಡಾಕ್ಟರ ಮೆಕಾಲಮನ್ ಮತ್ತು ಡಾಕ್ಟರ ಡವ್ಹಿಸನ್ ಇವರ ಆರೈಕೆಯಿಂದಲೂ ವಿದ್ಯಾರ್ಥಿಗಳ ಆರೋಗ್ಯವು ಸರಸಾಗಿರುವದು, ಇತ್ಯಾದಿ."

ರಿಪೋರ್ಟ್ ವಾಚನವು ಮುಗಿದ ನಂತರ ಕಾಲೇಜಿನ ಒಬ್ಬ ವಿದ್ಯಾರ್ಥಿಯು ಕವಿತೆಯ ಎನೇ ಪ್ರಸ್ತಕದ ಒಂದು ಪಾಠವನ್ನೂ ಮತ್ತೊಬ್ಬನು ಭೂಗೋಲವನ್ನೂ ಇನೇಯವನು ಕಬ್ಬಿನ ಒಡವೆಯ ಪಾಠವನ್ನೂ ಎನೇಯವನು ಕಂಬಳಿಯ ಒಡವೆಯ ಪಾಠವನ್ನೂ ಇನೇಯವನು ಶಾಸ್ತ್ರೀಯ ವಿಷಯದ ವಾಚನದ ಪಾಠವನ್ನೂ ಪ್ರಯೋಗ ಸಹಿತವಾಗಿ ಕಲಿಸಿದನು. ಅನಂತರ ವಿದ್ಯಾರ್ಥಿಗಳಲ್ಲಿ ಕೆಲವರು ಪದಗಳನ್ನು ಹಾಡಿದರು, ಕೆಲವರು ನೀತಿ ವಿಷಯಕ ಸಂಭಾಷಣೆಗಳನ್ನು ಅಂದು ತೋರಿಸಿದರು. ಬಳಿಕ ಸರ್ಟಿಫಿಕೇಟುಗಳೂ ಪ್ರೈಜ್ ಸಿಂಗಸ್ಕೂಲ ವಿದ್ಯಾರ್ಥಿಗಳಿಗೆ ಬಕ್ಷಿಸುಗಳೂ ಕೊಡಲ್ಪಟ್ಟವು. ಕಡೆಗೆ ಪ್ರೈಸಿಡೆರಾದಂಟ ಮಿ॥ ಜಲೆಕ್ಟರ ಸಾಹೇಬರವರು ಸಮಯಕ್ಕೆ ಉಚಿತವಾಗಿ ಭಾಷಣ ಮಾಡಿದರು. ತಾವು ೫೫ ವರ್ಷಗಳ ಹಿಂದೆ ನೋಡಿದ ಶಾಲೆಗಳ ಮತ್ತು ಈಗ ನೋಡುವ ಶಾಲೆಗಳ ವ್ಯವಸ್ಥೆಯಲ್ಲಿ ಮಹದಂತರವಿರುತ್ತದೆಂತಲೂ

ಪೂರ್ವದಲ್ಲಿ ಹಳೇ ಪದ್ಧತಿಯ ಪ್ರಕಾರ ಕೆಲಸ ನಡಿಯುತ್ತಿದ್ದು ಈಗ ಟ್ರೇಂಡ ಮಾಸ್ತರರ ಕೈಕೆಳಗೆ ಎಲ್ಲ ಕಡಿಗೂ ಸುಧಾರಣೆಯಾಗಿರುತ್ತದೆಂತಲೂ ಅವರು ಹೇಳಿದರು. ಸದ್ಯಕ್ಕೆ ಲೋಕಲ್‌ಬೋರ್ಡ ಮತ್ತು ಮ್ಯುನಿಸಿಪಲ್ ಶಾಲೆಗಳಲ್ಲಿ ಮಾಸ್ತರ ಜನರ ಕಲಿಸುವ ಪದ್ಧತಿ, ವ್ಯವಸ್ಥೆ, ತಾಲೀಮು ಇವುಗಳನ್ನು ನೋಡಿ ಮನಸ್ಸಿಗೆ ಬಹಳ ಆನಂದವಾಗುತ್ತದೆ; ಇದೆಲ್ಲ ಕಾಲೇಜದ ಫಲವೆಂದು ತಿಳಿಸಿ, ಕಾಲೇಜದ ಮಾಜಿ ಪ್ರಿನ್ಸಿಪಾಲರಾದ ರಾ. ಸಾ. ಕಟ್ಟಿ ಮತ್ತು ಈಗಿನ ಪ್ರಿನ್ಸಿಪಾಲರಾದ ರಾ. ಸಾ. ಕರಂದೀಕರ ಇವರನ್ನು ಕೊಂಡಾಡಿದರು. ರಾ. ಸಾ. ಕರಂದೀಕರ ಮತ್ತು ರಾ. ಸಾ. ರೊದ್ದ ಡೆ. ಎ. ಇನಸ್ಪೇಕ್ಟರ ಇವರ ಪರಿಶ್ರಮದಿಂದ ಇಲ್ಲಿ ಫೀಮೇಲ್ ಟ್ರೇನಿಂಗ ಕ್ಲಾಸವು ಸ್ಥಾಪಿತವಾಗಿರುತ್ತದೆ; ಇದನ್ನು ಸ್ಥಾಪಿಸುವದಕ್ಕೆ ಬಹಳ ಶ್ರಮ ಹತ್ತಿತು; ಇದು ಬೆಳೆದು ತೀವ್ರವೇ ಗಂಡು ಹುಡುಗರ ಕಾಲೇಜದಂತೆ ಹೆಸರಿಗೆ ಬರುವದೆಂದು ಬಯಸುತ್ತೇನೆ, ಎಂದು ತಮ್ಮ ಭಾಷಣವನ್ನು ಮುಗಿಸಿದರು. ಕಡೆಗೆ ರೀತಿಯಂತೆ ಹಾರ, ತುರಾಯಿ, ತಾಂಬೂಲ ಮುಂತಾದವುಗಳನ್ನು ಕೊಟ್ಟು ಸಮಾರಂಭವು ಮುಗಿಸಲ್ಪಟ್ಟಿತು.

(೨೮೬ನೇ ಪುಟದಿಂದ ಮುಂದೆ ಸಾಗಿದ್ದು.)

೩. ಸಭೆಗಳಲ್ಲಿ ಯಾರ ಕೂಡಲೂ ಇತ್ತೀಡ ವಾದ ಮಾಡಬಾರದು. ಅತಿ ಪ್ರಸಂಗದ ಸಮಯ ಬಂದರೆ ಸುಮ್ಮನೇ ಇರುವದು ಒಳ್ಳೇದು. ವಾದದಿಂದ ಜೀವಕ್ಕೆ ಅಸಮಾಧಾನ ಮಾತ್ರ ಆಗುವದಲ್ಲದೆ ಪ್ರಯೋಜನವೇನೂ ಆಗುವದಿಲ್ಲ. "ವಾದೇ ವಾದೇ ಜಾಯತೇ ತತ್ವಬೋಧಃ"

ಎಂದು ಅನ್ನುವ ಪರಿಪಾಠ ಉಂಟು. ಆದರೆ ಆ ವಾದವು ಈ ತರದ್ದಲ್ಲ. ಶಾಂತತೆಯಿಂದ ನಿಜವಾದ ಪ್ರಮಾಣಗಳನ್ನು ತೋರಿಸಿ ತಮ್ಮ ಮತವನ್ನು ಪ್ರತಿಕಕ್ಷಿಗಳ ಕಡೆಯಿಂದ ಒಡಂಬಡಿಸುವ ಕ್ರಮವು ನಡೆದರೆ ಅದರಿಂದ ನಿಜವಾಗಿ ತತ್ವಬೋಧವಾಗುವದು. ಆದರೆ ಈ ಕೆಲಸವು ಬಹು ಕಠಿಣವಾವದ್ದಿರುವದರಿಂದ ಸ್ವಲ್ಪು ಮಂದಿಗೆ ಮಾತ್ರ ಸಾಧಿಸುತ್ತದೆ. ವಾದದಿಂದ ವೈಮನಸ್ಸು ಉಂಟಾಗುವದೇ ಬಹಳವಿರುವದರಿಂದ ವಾದಮಾಡುವ ಛರಕ್ಕೆ ಸಭಸಾಬೀಳಬಾರದು.

ಈ ಪ್ರಕಾರ ಹಟದಿಂದ ಒಂದು ವೇಳೆ ವಾದದಲ್ಲಿ ಜಯ ದೊರಕಿಸಿದಾಗ್ಯೂ ಅದು ಆ ಕಾಲಕ್ಕೆ ಮಾತ್ರ ಮಹತ್ವದಾಗಿ ತೋರುತ್ತದೆ. ಮುಂದೆ ಕಾಲಾಂತರದಿಂದ ಅದು ತೀರ ಹುಲ್ಲುಕವಾಗಿ ತೋರಹತ್ತುವದು. ಅದರಲ್ಲಿಯ ವ್ಯಂಗಗಳು ತಮಗೇ ತೋರಹತ್ತಿ ತಾವು ವಾದ ಮಾಡದಿದ್ದರೆ ನೆಟ್ಟಗಾಗುತ್ತಿತ್ತೆಂದು ತಮ್ಮ ಮನಸ್ಸಿಗೆ ಹೊಳೆಯಹತ್ತುವದು.

೮. ಸಭೆಯಲ್ಲಿ ಎರಡನೇಯವರು ಮಾತಾಡಹತ್ತಿದರೆ ಅದರ ಕಡೆಗೆ ತಾವು ಪೂರ್ಣ ಲಕ್ಷ ಕೊಡಬೇಕು; ದುರ್ಲಕ್ಷ ಮಾಡಬಾರದು. ದುರ್ಲಕ್ಷ ಮಾಡಿದರೆ ಮಾತಾಡುವವನ ಅಪಮಾನ ಮಾಡಿದಂತೆ ಆಗುತ್ತದೆ. ಸಭೆಯಲ್ಲಿ ಮಾತಾಡುವವರು ತಮ್ಮ ಭಾಷಣವನ್ನು ಎಲ್ಲರೂ ಕೇಳಬೇಕೆಂದು ಮಾತಾಡುತ್ತಿರುತ್ತಾರೆ. ಆ ಕಾಲಕ್ಕೆ ಮಾತಾಡುವದು ಅವರ ಕೆಲಸವೂ, ಕೇಳುವದು ಸಭಿಕರ ಕೆಲಸವೂ ಆಗಿರುತ್ತವೆ. ಉಭಯ ಪಕ್ಷದವರೂ ತಮ್ಮ ತಮ್ಮ ಕೆಲಸವನ್ನು ಯಥಾಯೋಗ್ಯವಾಗಿ ಮಾಡತಕ್ಕದ್ದು.

೯. ಸಭೆಯು ಮುಗಿದ ನಂತರ ಅವರಲ್ಲಿ ನಡೆದ ಭಾಷಣದ ಬಗ್ಗೆ ವಿಚಾರ ಮಾಡಿ ಅದರಿಂದ ತಮಗೆ ಆದ ಲಾಭವನ್ನು ನೋಡಿ ತಿಳಿದುಕೊಳ್ಳಬೇಕು. ಆ ಲಾಭದ ಪ್ರಕಾರಗಳು ಎರಡು. ತಮಗೆ ಮುಂಚಿತವಾಗಿ ಗೊತ್ತಿಲ್ಲದಂಥ ಯಾವದೊಂದು ಸಂಗತಿಯು ತಿಳಿದರೆ ಅದನ್ನು ಲಕ್ಷದಲ್ಲಿಡುವದು ಒಂದು, ಮತ್ತು ಬೇರೆಯವರಲ್ಲಿಯ ವ್ಯಂಗಗಳನ್ನು ನೋಡಿ ಅವು ತಮ್ಮಲ್ಲಿ ಶೇರದಂತೆ ಅಥವಾ ತಮ್ಮಲ್ಲಿದ್ದರೆ ಅವುಗಳನ್ನು ಹೋಗಲಾಡಿಸುವಂತೆ ಪ್ರಯತ್ನ ಮಾಡುವದು ಮತ್ತೊಂದು. ಈ ಎರಡೂ ಪ್ರಕಾರಗಳು ಹಿತಾವಹವಾಗಿರುತ್ತವೆ.

METHODS OF TEACHING-NOTES OF LESSONS

ಕಲಿಸುವ ಪದ್ಧತಿಗಳು.—ಪಾಠದ ಟಿಪ್ಪಣಿಗಳು.

(ಗತಸಂ ಪುಟದಿಂದ ಮುಂದೆ ಸಾಗಿದ್ದು.)

ಸೃಷ್ಟಿ ವರ್ಣನೆಯು.

೧ನೇ ಪ್ರಕರಣ.

ಪ್ರಾಣಿಗಳ ವಿಷಯಕ್ಕೆ ಪಾಠದ ಟಿಪ್ಪಣಿಗಳು.

ತೀರ ಚಿಕ್ಕ ಹುಡುಗರಿಗೆ ಸಹ ಪದ್ಧತಿಗೆ ಸರಿಯಾಗಿ ಕಲಿಸುವದಕ್ಕೆ ಪ್ರಾಣಿಗಳ ಪಾಠವು ಬಹು ಸರಸವಾದದ್ದು. ಶಾಲೆಯಲ್ಲಿರುವ ಕಾಲದಲ್ಲಿ ವಿದ್ಯಾರ್ಥಿಗಳನ್ನು ಆನಂದಪಡಿಸಿ ಅವರ ಮನಸ್ಸನ್ನು ಎಳೆದುಕೊಳ್ಳುವದಕ್ಕೆ ಉತ್ತಮವಾದ ವಿಷಯವು ಇದಲ್ಲದೆ ಬೇರೆ ಯಾವದೂ ಇಲ್ಲ. ಚಿಕ್ಕತನದಿಂದಲೇ ಅವರಿಗೆ ಕೆಲವು ಪ್ರಾಣಿಗಳು ಪೂರ್ಣವಾಗಿ ಗೊತ್ತಿರುತ್ತವೆ; ಬೇರೆಯವುಗಳನ್ನು ಚಿತ್ರಗಳಿಂದ ತಿಳಿಸಿಕೊಡಬಹುದು. ಸೋಜಿಗದ ಬಿಡವೆಗಳಿಗೆ ಮನಸು ಎಳೆದಂತೆಯೇ ಪ್ರಾಣಿಗಳ ವಿಷಯವಾಗಿ ಅವರ ನಿರೀಕ್ಷಣ ಶಕ್ತಿಗಳು ಕೂಡ್ಲೆ ಉದ್ಯೋಗ ಮಾಡ ತೊಡಗುತ್ತವೆ. ಇದರಿಂದ

ಶಿಕ್ಷಕರಿಗೆ ಬಹು ದೊಡ್ಡ ಸಹಾಯವಾಗುತ್ತದೆ. ಪ್ರಾಣಿ ವಿಷಯಕ ಪಾಠಗಳು ಸ್ವತಃ ಸಿದ್ಧವಾಗಿ ಮನೋಹರವಾಗಿರುವದರಿಂದ ಆರಂಭದಲ್ಲಿ ಇವುಗಳನ್ನೇ ಕಲಿಸುವದಕ್ಕಾಗಿ ಶಿಕ್ಷಕರು ಕೈಕೊಳ್ಳಬಹುದು.

ಪ್ರಾಣಿವಿಷಯಕ ಪಾಠದ ಟಿಪ್ಪಣಿಯಲ್ಲಿ ಕೆಳಗೆ ಬರೆದಂತೆ ಆರು ಭಾಗಗಳನ್ನು ಮಾಡಬಹುದು. ಅವು ಯಾವವೆಂದರೆ:—(೧) ವರ್ಗೀಕರಣ. (೨) ಶರೀರಬಂಧನ ಅಥವಾ ಮೈಕಟ್ಟು. (೩) ಸ್ವಭಾವ ಮತ್ತು ಗುಣ. (೪) ಆಹಾರ. (೫) ವಾಸಸ್ಥಳ. (೬) ಉಪಯೋಗ.

೧. ವರ್ಗೀಕರಣ— ಪ್ರಾಣಿಕೋಟಿಯಲ್ಲಿ ವಿವಕ್ಷಿತ ಪ್ರಾಣಿಯನ್ನು ನಮ್ಮನ್ನು (ವರ್ಜಿಯನ್ನು) ಸೂತ್ರ ಪಡಿಸುವದು, ಅದು ಬೇರೆ ಯಾವ ಪ್ರಾಣಿಗಳಿಗೆ ಹೋಲುತ್ತದೆಂಬದನ್ನು ಹೇಳುವದು, ಅದಕ್ಕೂ ತದ್ವರ್ಗದ ಇತರ ಪ್ರಾಣಿಗಳಿಗೂ ಇರುವ ಭೇದಾಭೇದಗಳನ್ನು ತಿಳಿಸುವದು, ಮುಂತಾದದ್ದೇ ಈ ಭಾಗದ ಉದ್ದೇಶವಾಗಿರುತ್ತದೆ. ಈ ಉದ್ದೇಶವು ವಿವಕ್ಷಿತ ಪ್ರಾಣಿಯ ವಿಭಾಗ, ವರ್ಗ, ಜಾತಿ, ಕುಲ ಮುಂತಾದವುಗಳನ್ನು ಸರಿಯಾಗಿ ವಿವರಿಸಿದರೆ ಮಾತ್ರ ನೆರವೇರುತ್ತದೆ. ಉದಾಹರಣಾರ್ಥವಾಗಿ ಸಿಂಹವನ್ನು ತೆಗೆದುಕೊಳ್ಳುವಾ:—ಸಿಂಹವು ಬೆನ್ನೆಲುಬುಳ್ಳ ಪ್ರಾಣಿಯಾಗಿದೆಂಬದನ್ನು ಪ್ಪೇ ಹೇಳಿಬಿಟ್ಟರೆ ಪೂರ್ಣವಾಗಲಾರದು ಇದರಿಂದ ಪ್ರಾಣಿಕೋಟಿಯಲ್ಲಿ ಅದು [illegible] ಎಂದು. ಯಾಕಂದರೆ ಪಕ್ಷಿಗಳೂ ನಿರಾಘಾತವಾಗಿ ಹೊಟ್ಟೆಹೊಸೆಯುವ ಪ್ರಾಣಿಗಳೂ ಸಹ ಬೆನ್ನೆಲುಬುಳ್ಳಂಥ ಪ್ರಾಣಿಗಳಾಗಿರುತ್ತವೆ. ಸಿಂಹವು ಸಸ್ತನಿ ಪ್ರಾಣಿ ಇರುತ್ತದೆ ಅಥವಾ ಅದು ತನ್ನ ಮರಿಗಳಿಗೆ ಹೊಲೆ ಕುಡಿಸುತ್ತದೆ ಎಂದು ಹೇಳಿದರೆ ಮಾತ್ರ ಅದರ ವರ್ಜಿಯನ್ನು ಸ್ವಲ್ಪ ಮಟ್ಟಿಗೆ ತಿಳಿಸಿದಂತೆ ಆಗುವದು. ಈ

ವಿವರಣದಿಂದ ಹಕ್ಕಿ, ಮೀನು, ಹೊಟ್ಟೆ ಹೊಸೆಯುವ ಪ್ರಾಣಿಗಳಿಗೂ ಇದಕ್ಕೂ ಇರುವ ಭೇದವು ತಿಳಿಸಿದಂತಾಗುವದು. ಆದರೆ ಸೆಸ್ತನ ಪ್ರಾಣಿಗಳಲ್ಲಿ ಸಹ ಅನೇಕ ಭೇದಗಳಿರುತ್ತವೆ. ಆದರಿಂದ ಸಿಂಹವು, ಆಕಳು ಕುದುರೆಗಳಿಂದ ಭಿನ್ನವಾಗಿರುವದೆಂದು ತಿಳಿಸುವದಕ್ಕಾಗಿ ಅದು ಮಾಂಸಭಕ್ಷಕ ಪ್ರಾಣಿಯೆಂದು ಹೇಳಲಿಕ್ಕೆ ಬೇಕು. ಮಾಂಸಾಹಾರಿ ಪ್ರಾಣಿಗಳು ಸಹ ಅನೇಕವಿರುತ್ತವೆ. ಆದದರಿಂದ ಸಿಂಹವು ಬೆಕ್ಕಿನ ಕುಲದ್ದೆಂದು ಹೇಳಬೇಕು; ಅಂದರೆ ಪ್ರಾಣಿ ಕೋಟಿಯಲ್ಲಿ ಸಿಂಹದ ನಿಜವಾದ ಸ್ಥಾನವನ್ನು ಹೇಳಿದಂತೆ ಆಗುವದು. ವಿದ್ಯಾರ್ಥಿಗಳಿಗೆ ಪ್ರಾಣಿ ಕೋಟಿಯಲ್ಲಿಯ ಭಾಗಗಳನ್ನು ಚನ್ನಾಗಿ ತಿಳಿಸಿ ಹೇಳಿದರೆ ಉಪಯೋಗವಾಗುವದು.

೨. ಶರೀರ ರಚನೆ ಆಥವಾ ಮೈಕಟ್ಟು—ಈ ಭಾಗದಲ್ಲಿ ನಿರ್ದಿಷ್ಟ ಪ್ರಾಣಿಯ ಸ್ವರೂಪದ ಸ್ಥೂಲ ಸೂಕ್ಷ್ಮ ವರ್ಣನೆಗಳು ಬರುತ್ತವೆ. ಆ ಪ್ರಾಣಿಯ ಶರೀರಾಕೃತಿ, ಬಣ್ಣ, ರೂಪ ಇವುಗಳನ್ನು ಸರಿಯಾಗಿ ವಿವರಿಸಿದರೆ ಸ್ವರೂಪ ಜ್ಞಾನವಾಗುವದು. ಪ್ರಾಣಿಯ ಅಂಗಭಾಗಗಳನ್ನು ಹೇಳುವಾಗ್ಗೆ ಅವಕ್ಕೆ ಏನಾದರೂ ವಿಶೇಷವಾದ ಅವಯವವಿದ್ದರೆ ಅದನ್ನು ಆದರಪೂರ್ವಕವಾಗಿ ತಿಳಿಸಿ ಹೇಳಬೇಕು. ಉದಾಹರಣಾರ್ಥವಾಗಿ ಆನೆಯ ಸೊಂಡಿಲವನ್ನೂ, ಗಂಡಕದ ಮೂಗಿನ ಮೇಲಿನ ಕೋಡನ್ನೂ, ಸಿಂಹದ ನಖಪಂಜರವನ್ನೂ ಕ್ಯಾಂಗಾರೂವಿನ ಚೀಲವನ್ನೂ ವಿಂಗಡವಾಗಿ ವರ್ಣಿಸಲಿಕ್ಕೆ ಬೇಕು.

೩. ಸ್ವಭಾವ—ಈ ಭಾಗದಲ್ಲಿ ಆ ಪ್ರಾಣಿಯ ಸ್ವಭಾವ, ಜೀವನ ಕ್ರಮ, ನೈಸರ್ಗಿಕ ವ್ಯಾಪಾರ ಮುಂತಾದವುಗಳ ವಿವರವು ಬರುತ್ತದೆ.

೪. ಆಹಾರ—ಈ ಭಾಗವು ಹೆಚ್ಚು ಗೌರವದ್ದಿರುತ್ತದೆ ಯಾಕಂದರೆ ಪ್ರಾಣಿಗಳ ಶರೀರರಚನಾಸ್ವಭಾವಗಳಿಗೂ ಆಹಾರಕ್ಕೂ ಸೋಜಿಗದ ಸಂಬಂಧವಿರುತ್ತದೆ.

೫. ವಾಸಸ್ಥಳ—ಈ ಭಾಗದಲ್ಲಿ ಪ್ರಾಣಿಗಳಿರುವ ದೇಶವನ್ನು ಇಲ್ಲವೆ ದೇಶಗಳನ್ನು ಹೇಳಿದರೆ ತೀರಲಿಲ್ಲ. ಆ ಪ್ರಾಣಿಗಳು ಸಂಚರಿಸುವಂಥ ಪರ್ವತ, ದರಿ, ಬೈಲು, ಪಳುವು, ಉಸಬಿನ ಅರಣ್ಯ ಮುಂತಾದವುಗಳನ್ನು ಹೇಳಲಿಕ್ಕೆಬೇಕು. ಕೆಲವೊಂದು ಪ್ರಾಣಿಯು ಈ ಪೃಥ್ವಿಯ ಬಂದು ಭಾಗದಲ್ಲಿ ಮನುಷ್ಯನಿಗೆ ಈಲಾಗುತ್ತದೆ. ಅದೇ ಮತ್ತೊಂದು ಭಾಗದಲ್ಲಿ ಕಾಡು ಸ್ಥಿತಿಯಲ್ಲಿಯೇ ಇರುವದು. ಈ ಸಂಗತಿಯನ್ನು ಸಹ ಈ ಭಾಗದಲ್ಲಿ ಹೇಳಲಿಕ್ಕೆಬೇಕು.

೬. ಉಪಯೋಗ—ಪ್ರಾಣಿಯು ಬದುಕಿರುವಾಗ್ಗೆ ಯಾವ ಕೆಲಸಕ್ಕೆ ಬರುವದೋ ಆ ಕೆಲಸಗಳ ವಿವರವು ಈ ಭಾಗದಲ್ಲಿ ಬರುವದು. ಅದೇ ಮೇರೆಗೆ ಪ್ರಾಣಿಯು ಸತ್ತ ಬಳಿಕ ಅದರ ಶರೀರಾವಯವಗಳಿಂದ ಆಗುವ ಪ್ರಯೋಜನಗಳ ವಿವರವೂ ಬರುವದು. ಈ ಮೃಗವನ್ನು ಹಿಡಿಯುವ ರೀತಿಯನ್ನೂ ಈ ಭಾಗದಲ್ಲಿಯೇ ಹೇಳುವದು ವಿಹಿತ. ಕೊನೆಯಲ್ಲಿ ಈ ಪ್ರಾಣಿಯ ಸಂಬಂಧದಿಂದ ಬಂದು ಮನೋಹರವಾದ ಕಥೆಯನ್ನು ಹೇಳಿ ಪಾಠವನ್ನು ಮುಗಿಸಬಹುದು.

ಇನ್ನು ನಾವು ಉದಾಹರಣಾರ್ಥವಾಗಿ ಮೇಲಿನಂತೆ ಭಾಗಗಳನ್ನು ಮಾಡಿ ಸಿಂಹದ ಒಡವೆಪಾಠವನ್ನು ಕೆಳಗೆ ಕೊಡುತ್ತೇವೆ. ಈ ಮಾದರಿಯಿಂದ ಚತುರ ಶಿಕ್ಷಕರು ಬೇಕಾದ ಪ್ರಾಣಿಪಾಠವನ್ನು ಹೇಳಬಹುದು.

ಮೂದರಿಯ ಪಾಠವು. ಸಿಂಹ.

ಉಪಕರಣಗಳು:—ಬೆಕ್ಕು ಸಿಂಹಗಳ ಚಿತ್ರಗಳೂ, ಪೃಥ್ವಿಯ ನಕಾಶೆಯೂ.

ಉಪೋದ್ಘಾತ:—ವಿದ್ಯಾರ್ಥಿಗಳಿಗೆ ಬೆಕ್ಕು ಸಿಂಹಗಳ ಚಿತ್ರಗಳನ್ನು ತೋರಿಸಿ ಅವು ಬಂದನ್ನೊಂದು ಹೋಲುತ್ತವೆಂಬದನ್ನು ಪ್ರಶ್ನರೂಪದಿಂದ ಹೊರಡಿಸುವದು.

ಭಾಗಗಳು.	ಸಂಗತಿ ಅಥವಾ ವಿಷಯ.	ಪದ್ಧತಿ.
೧ ವರ್ಗೀಕರಣ.	೧. ವಿಭಾಗ:—ಬೆನ್ನೆಲವುಳ್ಳದ್ದು. ೨. ವರ್ಗ:—ಸಸ್ತನ. ೩. ಜಾತಿ:—ಮಾಂಸಭಕ್ಷಕ. ೪. ಕುಲ:—ಬೆಕ್ಕಿನ ಕುಲ.	೧. ಹುಲಿ—ಬಸವನ ಹುಲಿ, ನುತ್ತು ಮಾನಕ್ಕೆ ಸರಿಹಚ್ಚಿ ತೋರಿಸುವದು. ೨. ಸಸ್ತನ ಶಬ್ದದ ಅರ್ಥವನ್ನು ಹೇಳುವದು. ಪಕ್ಷಿಗಳಿಗೂ ಮಾನಗಳಿಗೂ ಸರಿಮಾಡಿ ತಿಳಿಸಿ ಹೇಳುವದು. ೩. ಆಕಳು ಕುದುರೆಗಳಿಗೆ ಸರಿಹಚ್ಚಿ ತಿಳಿಸುವದು. ೪. ಈ ಕುಲದ ಪ್ರಾಣಿಗಳನ್ನು ಬಂದೆರಡನ್ನು (ಬೆಕ್ಕು ಹುಲಿ) ಹೇಳಿ ಮತ್ತೆ ಪ್ರಾಣಿಗಳನ್ನು ಕೇಳುವದು.
೨ ಶರೀರರಚನೆ.	೧. ಶರೀರ:—ಉದ್ದ, ಬಲವಾದದ್ದು. ಪುಟ್ಟಿಯಾದವಲವುಗಳು. ಕಸುವುಳ್ಳ ಸ್ನಾಯುಗಳು, ಕಂದು ಬಣ್ಣದ ತೊಗಲು.	೧. ಪ್ರಾಣಿಯನ್ನು ವರ್ಣಿಸುವಾಗ್ಗೆ ಅದರ ಪ್ರತಿಯೊಂದು ಶರೀರಭಾಗವನ್ನು ತೋರಿಸುವದು. ವಿದ್ಯಾರ್ಥಿಗಳಿಂದ ಅದರ ವರ್ಣನೆಯನ್ನು ಹೊರಡಿಸುವದು.

೨. ಆಕೃತಿ:—ನಿಲವು ಸುಮಾರು ೪ ಫೂಟು. ನಿಡಿದು ಏಳು ಫೂಟು.
೩. ತಲೆ:—ದುಂಡನ್ನದು.
೪. ಕಣ್ಣುಗಳು:—ದೊಡ್ಡವು, ದುಂಡನ್ನವು ಕತ್ತಲೆಯಲ್ಲಿ ಸಹ ಕಾಣುವ ಸಾಮರ್ಥ್ಯವುಳ್ಳಂಥವು.
೫. ಹಲ್ಲುಗಳು:—ಮೊನೆಯಾದಂಥವು.

೬. ನಾಲಿಗೆ:—ಹುರಬರಕಾದದ್ದು.

೭. ಕುತ್ತಿಗೆ:—ಬಹಳ ಬಲವುಳ್ಳದ್ದು.

೮. ಆಯಾಲು:—ಗಂಡುಗಳಿಗೆ ಮಾತ್ರ ಹೆಗ್ಗತ್ತಿನಮೇಲೆ ಕೂದಲು ಉದ್ದವಾಗಿರುವವು.
೯. ಮಾಸೆಗಳು:— ಬಾಯಿಯಿಂದ ಎಡಬಲಕ್ಕೆ ಅಡ್ಡ ಹೋಗಿರುವವು.

೧೦. ಪಾದಗಳು:—ಪ್ರತಿಯೊಂದು ಬೊಟ್ಟನ ಕೆಳಗೆ ದಪ್ಪನ್ನ ಮಾಂಸಮಯ ಭಾಗವುಳ್ಳವು.

೨. ಸಾಲೆಯು ಗೋಡೆಗಳ ಮೇಲೆ ಅಳತೆಹಾಕಿ ತೋರಿಸುವದು.
೩. ಬೆಕ್ಕಿಗೆ ಸರಿಮಾಡಿ ತೋರಿಸುವದು.
೪. ರಾತ್ರಿಯಲ್ಲಿ ಆಹಾರ ಹುಡುಕುವದಕ್ಕಾಗಿ ಉಪಯೋಗಿಸುವದನ್ನು ಹೇಳುವದು.
೫. ಮಾಂಸವನ್ನು ಹರಿದು ತಿನ್ನುವ ಕೆಲಸಕ್ಕೆ ಬರುತ್ತವೆಂಬದನ್ನು ತಿಳಿಸುವದು.
೬. ಮಾಂಸವನ್ನು ಎಲವಿನಿಂದ ಬೇರೆಮಾಡಿ ಗೀರಿಕೊಳ್ಳುವ ಕೆಲಸಕ್ಕೆ ಬರುವದೆಂಬದನ್ನು ಹೇಳುವದು.
೭. ಸಿಂಹವು ಎತ್ತನ್ನು ಹೊತ್ತುಕೊಂಡು ಹೋಗುವ ಕಥೆಯನ್ನು ಹೇಳಿ ತಿಳಿಸುವದು.
೮. ಕುದುರೆಯ ಆಯಾಲಿಗೆ ಸರಿ ಹಚ್ಚಿ ತಿಳಿಸುವದು.

೯. ಹಳುವುಗಳಲ್ಲಿ ಸಂಚಾರ ಮಾಡುವಾಗ್ಗೆ ದಾರಿಯನುವನ್ನು ತಿಳಕೊಳ್ಳುವದಕ್ಕಾಗಿ ಆಗುವ ಪ್ರಯೋಜನವನ್ನು ತಿಳಿಸುವದು.
೧೦. ಸಪ್ಪಳ ಮಾಡದೆ ಜೇಟಿಯನ್ನು ಬಿನ್ನಟ್ಟುವ ರೀತಿಯನ್ನು ತಿಳಿಸುವದು.

	೧೧. ನಖಪಂಜರಗಳು:—ಹದನಾದಂಥವೂ ಮಾಂಸವನ್ನು ಅವರಣದೊಳಗೆ ಹುದುಗಿಕೊಂಡಂಥವೂ ಇರುತ್ತವೆ.	೧೧. ಕತ್ತಿ ಮತ್ತು ಅದರ ಬರ ಇವುಗಳಿಗೆ ಸರಿ ಹಚ್ಚಿ ತೋರಿಸುವದು.
	೧೨. ಬಾಲ:—ಉದ್ದ, ತುದಿಯಲ್ಲಿ ಗೊಂಡೆಯುಳ್ಳದ್ದು.	೧೨. ರೇಶಿಮೆಯ ಗೊಂಡೆಗೆ ಸರಿಹಚ್ಚಿ ತೋರಿಸುವದು.
೩ ಸ್ವಭಾವ ಮತ್ತು ಗುಣ.	೧ ಹಗಲಿನಲ್ಲಿ ಮಲಗುವದು. ೨. ರಾತ್ರಿಯಲ್ಲಿ ನೀರಿನ ಹತ್ತರ ಆಹಾರಕ್ಕಾಗಿ ಹೊಂಚು ಹಾಕಿಕೊಂಡು ಕೂಡ್ರುವದು, ಪಶುಗಳು ನೀರು ಕುಡಿಯುವಾಗ್ಗೆ ಅವುಗಳನ್ನು ಹಾರಿ ಹಿಡುಕೊಳ್ಳುವದು. ೩. ಉಗ್ರ. ೪. ತಂತ್ರವುಳ್ಳದ್ದು. ೫. ನುರಿಗಳಮೇಲೆ ಬಲು ಪ್ರೀತಿಯುಳ್ಳದ್ದು.	೧. ಬೆಕ್ಕುಗಳು ಇಲಿಗಳನ್ನು ಹಿಡಿಯುವದಕ್ಕಾಗಿ ಹೊಂಚು ಹಾಕಿಕೊಂಡು ಕೂಡ್ರುವ ರೀತಿಗೂ ಅವುಗಳನ್ನು ಹಿಡಿಯುವ ರೀತಿಗೂ ಸರಿಮಾಡಿ ತೋರಿಸಿ ತಿಳಿಸುವದು.
೪ ಆಹಾರ.	೧ ಜಿಂಕೆ, ಕುರಿ, ಎತ್ತು ಮೊದಲಾದ ಪಶುಗಳು ಅಪರೂಪವಾಗಿ ಮನುಷ್ಯ.	ಶರೀರರಚನೆ ಮತ್ತು ಸ್ವಭಾವಗಳ ವಿವರದಿಂದ ತಿಳಿಸುವದು.
೫ ವಾಸಸ್ಥಳ.	೧ ಆಫ್ರೀಕಾ—ಹಿಂದುಸ್ಥಾನ ಮತ್ತು ಇರಾಣ. ಏಶಿಯದ ಸಿಂಹಗಳು ಆಫ್ರೀಕದ ಸಿಂಹಗಳಿಗಿಂತ ಸಣ್ಣವು.	ನಕಾಶದಲ್ಲಿ ದೇಶಗಳನ್ನು ತೋರಿಸುವದು.
೬ ಉಪಯೋಗ.	೧ ತೊಗಲು ಹೊದ್ದುಕೊಳ್ಳುವದಕ್ಕೆ ಉಪಯೋಗಿಸಲ್ಪಡುತ್ತದೆ.	ಸಿಂಹದ ಒಂದು ಕಥೆಯನ್ನು ಹೇಳುವದು. ಅನೆಯು ನ್ನೇರಿ ಜನರು ಇದರ ಬೇಟೆಯನ್ನಾಡುವರು ಎಂಬದನ್ನು ವಿವರಿಸುವದು.

SELECTIONS FROM THE KARNATIK GAZETTEER.

ಕನ್ನಡ ಗರ್ಝಿಟಿಯರದಿಂದ ಅವತರಣಿಗಳು.

(ಮೊದಲನೇ ಪುಟದಿಂದ ಮುಂದೆ ಸಾಗಿದ್ದು.)

ಅಥಣಿ ತಾಲೂಕು.

ಕ್ಷೇತ್ರ—ಇದು ಜಿಲ್ಲೆಯ ಈಶಾನ್ಯ ಮೂಲೆಯಲ್ಲಿ ವಿಜಾಪುರ ತಾಲೂಕಿನ ದಕ್ಷಿಣಕ್ಕೆ ಇರುತ್ತದೆ. ಇದರಲ್ಲಿ ಸರಕಾರೀ ಹಳ್ಳಿಗಳು ೬೫, ದುನಮೂಲೀ ೧೩, ಉಂಟು. ಕ್ಷೇತ್ರ ೬೮೬ ಚ. ಮೈಲು, ಜನಸಂಖ್ಯೆ ೧೦೫೯೬೧, ಭೂಮಿಯ ಕಂದಾಯ ೧೫೪೬೭೦ ರೂಪಾಯಿ.

ಸ್ವರೂಪ, ಭೂಮಿ—ಪಶ್ಚಿಮದಲ್ಲಿ ವೃಕ್ಷಗಳಿಲ್ಲದ ಹಾವಾದ ಗುಡ್ಡಗಳಿವೆ, ಅವು ಒಂದರ ಹಿಂದೊಂದು ಮಾವಟಿಗಳ ಹಾಗೆ ಕಾಣುತ್ತವೆ ಬೈಲು ಪ್ರದೇಶದಲ್ಲಿ ಸಹ ನೆಲವು ತೆರೆಗಳ ಹಾಗೆ ತಗ್ಗು ದಿನ್ನೆಯಾಗಿರುತ್ತದೆ. ತಗ್ಗುಗಳಲ್ಲಿ ಸರವುಗಳು ಮಳೆಗಾಲದಲ್ಲಿ ಹರಿಯುತ್ತವೆ; ಭೂಮಿ ಮೇಲಾದದ್ದು. ದಿನ್ನೆಗಳ ಮೇಲಿನ ಭೂಮಿ ಬಿರುಸು, ಮಣ್ಣು ಬಹಳಿಲ್ಲ. ಕೃಷ್ಣಾತೀರದಲ್ಲಿ ಹಳ್ಳಿಗಳು ದಟ್ಟ, ಬೇರೆ ಕಡೆಯಲ್ಲಿ ಅಂಗಲ; ಅವುಗಳಿಗೆ ಸುತ್ತು ಗೋಡೆಗಳಿವೆ. ಯಾವತ್ತು ಕರೆ ಭೂಮಿ; ಕೃಷ್ಣೆಯ ಎಡಬಲದಲ್ಲಿ ೩, ೪ ಮೈಲಿನ ವರೆಗೆ ಸುತ್ತಮುತ್ತಣ ಸಣ್ಣಯೆರೆಯುಂಟು. ಈದೇ ಪ್ರದೇಶದಲ್ಲಿ ಸೀಮೆ ಹುಣಿಸೆ, ಬೇವು, ಜಾಲಿ, ಅರಳೆ, ಇಂಥಾ ಮರಗಳನ್ನು ಕಾಣಬಹುದು; ಬೇರೆ ಕಡೆಯಲ್ಲಿ ಮರಗಳಿಲ್ಲ.

ಹವೆ ಮಳೆ, ನೀರು—ಹವೆ ಆರೋಗ್ಯದ್ದು ಅದರಲ್ಲಿ ವೈಪರೀತ್ಯವಿಲ್ಲ. ವಾಡಿಕೆಯಾಗಿ ಮಳೆಯು ನಿಯಮದ್ದಲ್ಲ; ಪೂರ್ವಭಾಗದಲ್ಲಿ ಎಲ್ಲಕ್ಕೂ ಕಡಿಮೆ; ಅಥಣಿಯಲ್ಲಿ ೭ ರಿಂದ ೩೪ ಇಂಚಿನ ವರೆಗೆ; ಸರಾಸರೀ ೨೪ ಇಂಚು. ದಕ್ಷಿಣ

ಾಗದಲ್ಲಿ ಕೃಷ್ಣೆಯೇ ನೀರಿನ ಮುಖ್ಯ ಆಶ್ರಯ. ಪಶ್ಚಿಮ ಾಗದಲ್ಲಿ ಅಗರ್ಣಿಯೆಂಬ ಹಳ್ಳವು ಉತ್ತರದಿಂದ ದಕ್ಷಿಣ ಕ್ಕೆ ಹರಿದು ಕೃಷ್ಣೆಗೆ ಕೂಡುತ್ತದೆ. ಇದಲ್ಲದೆ ಬೇರೆ ಸಣ್ಣ ರುವುಗಳು ಹಲವುಂಟು. ಅವು ಬೇಸಿಗೆಯಲ್ಲಿ ಬೊಣಗಿ ್ದಾಗ್ಯೂ, ಅವುಗಳ ಪಾತ್ರೆಗಳಲ್ಲಿ ಬೊರತೆಗಳನ್ನು ಕಡಿದು ೀರಿಗೆ ಆಶ್ರಯ ಮಾಡಿಕೊಳ್ಳುವರು. ಸರುವುಗಳಿಲ್ಲದ ಪ್ರ ೀಶಗಳಲ್ಲಿ ಬಾವಿಗಳು, ಕೆಲವು ಕಡೆಯಲ್ಲಿ ಕೆರೆಗಳು, ುಂಟು. ಅವು ಬೇಸಿಗೆಯಲ್ಲಿ ಬತ್ತಿವವೆಂದರೆ ನೀರಿನ ತಾಪ ಶ್ರಯವಾಗುತ್ತದೆ.

ಜನವು—ಬಟ್ಟು ಜನಸಂಖ್ಯೆಯಲ್ಲಿ ಶೇಕಡಾ ೪೯.೬೯ ಿಂದೂ ಜನರು, ೧೦.೦೯ ಮುಸಲ್ಮಾನರು. ಹಿಂದೂಗ ಳಲ್ಲಿ ಬ್ರಾಹ್ಮಣರು ೫೧೧೦, ಜೈನರು ೧೧೬೧೭, ಆರೇರು ೧೪೫೦. ರಡ್ಡೀರು ೧೦೦೯, ಕುರುಬರು ೯೪೪೫, ಕಬ್ಬಲಿಗೇರು ೪೪೪೬, ಬೇಡರು ೧೭೬೦, ಹೊಲಿಯರು ೬೪೪೫, ಮಾದಿಗರು ೦೭೯೬ ಇತ್ಯಾದಿ.

ದೊಡ್ಡ ಊರುಗಳು.

ಅಥಣಿ—ಉತ್ತರ ಅಕ್ಷಾಂಶ ೧೬, ೪೦, ಪೂರ್ವರೇಖಾಂಶ ೭೪, ೭, ಬೆಳಗಾವಿಯ ಈಶಾನ್ಯಕ್ಕೆ ೭೦ ಮೈಲಿನ ಮೇಲೆ, ಜನಸಂಖ್ಯೆ (೪೧) ೧೧೧೪೬. ಹಳೆ ವಸ್ತಿಯು ಹಾಳು ಬಿ ದ್ದದೆ, ಅದರ ಸುತ್ತು ಮುತ್ತಲಿನ ಕಂದಕವು ತುಂಬಿ ಹೋ ಗಿದೆ. ಈಗಿನ ವಸ್ತಿಗೆ ಎರಡು ಅಗಸೆಗಳಿರುತ್ತವೆ; ಆದಿತ್ಯ ವಾರ ಸಂತೆಯಾಗುತ್ತದೆ. ಅಡಿಕೆ, ಉತ್ತತ್ತಿ, ಅಕ್ಕಿ, ಉಪ್ಪು, ಅರಳೆ, ತುಪ್ಪ, ಗೋಧಿ ಮುಂತಾದ ಸರಕುಗಳ ವ್ಯಾಪಾ ರವು ಬಪಳ ನಡಿಯುತ್ತದೆ; ಸಂತೆಯಲ್ಲಿ ದನಗಳ ವ್ಯಾಪಾ ರವೂ ಪೊಳಿತಾಗಿ ಆಗುತ್ತದೆ. ಈ ಊರಲ್ಲಿ ಗಾಲಿಯ ಹಳ

ಗಳೂ ಸೋರುಪ್ಪು ಹುಟ್ಟುತ್ತವೆ. ತಾಲೂಕಿನ ಕಚೇರಿಗಳಲ್ಲದೆ ಟಪಾಲುಆಫೀಸು, ಆಸಪತ್ರಿ, ಸಬಜಡಜಕೋರ್ಟು, ಮ್ಯುನಿಸಿಪಾಲಿಟಿ, ಆರು ಶಾಲೆಗಳು ಇರುತ್ತವೆ. ಮ್ಯುನಿಸಿಪಾಲಿಟಿಯ ಆದಾಯವು ಸರ್ ೧೪೪೦—೪೩ ರಲ್ಲಿ ೧೦೫೩೦ ರೂಪಾಯಿ ಇತ್ತು. ಊರಿಗೆ ಎರಡು ಶೀನೀರಿನ ಕೆರೆಗಳೂ ೧೧೧ ಬಾವಿಗಳೂ ಇರುತ್ತವೆ; ೧೪ ಬಾವಿಗಳ ನೀರು ಕುಡಿಯಲಿಕ್ಕೆ ಬರುತ್ತದೆ, ಉಳಿದ ಬಾವಿಗಳೆಲ್ಲ ಸೌಳು; ೪೫ ಬಾವಿಗಳಿಗೆ ಪಾವಟಿಗೆಗಳುಂಟು. ಮೊದಲ ಬಾವಿಯು ಎಲ್ಲಕ್ಕೂ ದೊಡ್ಡದು, ಸುತ್ತಳತೆ ಸುಮಾರು ೧೦೦ ಫೂಟು. ಇದರಲ್ಲಿ ನೀರು ೭೦ ಫೂಟಿಗೀತ ಕಿರಿದು ಯೆಂದೂ ಇರುವದಿಲ್ಲ. ಈ ಬಾವಿಯನ್ನು ಮ್ಯುನಸಿಪಾಲಿಟಿಯವರು ಸರ್ ೧೪೪೩ ರಲ್ಲಿ ೩೬೦೦ ರೂಪಾಯಿ ವೆಚ್ಚ ಮಾಡಿ ಕಟ್ಟಿಸಿದರು; ಆದರೆ ಈ ಬಾವಿಯ ನೀರು ದನಕ್ಕೆ ಮಾತ್ರ ಕುಡಿಯಲಿಕ್ಕೆ ಬರುತ್ತದೆ. ಕುಂಬಾರ ಬಾವಿಯೂ ದೊಡ್ಡದಿರುತ್ತದೆ; ಅವರ ನೀರು ಮನುಷ್ಯರಿಗೆ ಕುಡಿಯಲಿಕ್ಕೆ ಬರುತ್ತದೆ. ಮ್ಯುನಿಸಿಪಾಲಿಟಿಯವರು ೪೦೦೦ ರೂಪಾಯಿ ವೆಚ್ಚ ಮಾಡಿ ಈ ಬಾವಿಯನ್ನು ದುರಸ್ತು ಮಾಡಿದ್ದಾರೆ. ಮ್ಯುನಸಿಪಾಲಿಟಿಯವರು ೭೦೦೦ ರೂಪಾಯಿ ವೆಚ್ಚ ಮಾಡಿ ಹೊಸ ಮಾರ್ಕೆಟ್ಟು ಕಟ್ಟಿಸಿದ್ದಾರೆ; ಮಾರ್ಕೆಟನಲ್ಲಿಯು ಅಂಗಡಿಗಳಲ್ಲದೆ ಹಳೆ ಬಾಜಾರಿನಲ್ಲಿ ೨೩೫ ಅಂಗಡಿಗಳಿರುತ್ತವೆ. ಊರವರು ೧೫೦೦ ರೂಪಾಯಿ ವೆಚ್ಚ ಮಾಡಿ ಪುಸ್ತಕಾಲಯವನ್ನು ಕಟ್ಟಿಸಿದ್ದಾರೆ. ಈ ಊರಿಗೆ ಹಳೆ ದೊಂದು ಮಣ್ಣಿನ ಕೋಟೆಯುಂಟು ಮಾಮಲೇದಾರ ಕಚೇರಿಯು ಮೊದಲು ಕೋಟೆಯೊಳಗಿನ ಒಂದು ಹಳೆ ಮನೆಯಲ್ಲಿ ಇತ್ತು. ಈ ಊರಲ್ಲಿ ಒಂದೇ ಆವಾರದೊಳಗೆ ಸಿದ್ದೇಶ್ವರನ ಗುಡಿ, ಅಮೃತೇಶ್ವರನ ಗುಡಿ, ಒಂದು ಮಸೀದಿ ಇರುತ್ತವೆ.

ಸಿದ್ಧೇಶ್ವರನಿಗೆ ಮುಸಲ್ಮಾನರು ಸಹ ನಡಕೊಳ್ಳುತ್ತಾರೆ, ಅದರ ಮೇಲೆ ಮಶೀದಿಯುಂತೆ ಗುಮ್ಮುಟವದೆ.

ಸ೯ ೧೬೪೯ರಲ್ಲಿ ಅಫಣಿಯು ವ್ಯಾಪಾರದ ದೊಡ್ಡ ಪಟ್ಟಿ ಣವಿತ್ತೆಂದು ಬಬ್ಬ ಫ್ರೆಂಚ ಪ್ರವಾಸಿಯು ಬರೆದು ಇಟ್ಟಿ ದ್ದಾನೆ. ಅಫಣಿಯು ಸ೯ ೧೬೫೯ರಲ್ಲಿ ಮೊಗಲರ ಕೈಸೇರಿ ತು. ದಿಲಾವರಖಾನನೆಂಬ ಮೊಗಲ ಸರದಾರನು ಅಫಣಿಯ ನಿವಾಸಿಗಳನ್ನು ಗುಲಾಮರನ್ನು ಮಾಡಿ ಮಾರುವ ಪ್ರಯ ತ್ನಮಾಡಿದನು. ಆದರೆ ಶಿವಾಜಿಯು ಮಗ ಸಂಭಾಜಿಯು ಅದನ್ನು ನಡೆಯಗೊಡಲಿಲ್ಲ. ನಿಜಾಮಉಲ್ಮುಲ್ಕನು ಸ೯ ೧೭೨೦ರಲ್ಲಿ ಅಫಣಿಯನ್ನು ತಕ್ಕೊಂಡು ಸ್ವಲ್ಪ ದಿವಸದೊ ಳಗೆ ಕೊಲ್ಲಾಪೂರದ ಅರಸನಿಗೆ ಕೊಟ್ಟನು; ಅವನು ಅದ ನ್ನು ಸಾತಾರೆಯ ಶಾಹೂರಾಜನಿಗೆ ಕೊಟ್ಟನು. ಸ೯ ೧೮೫೯ರಲ್ಲಿ ನಿರ್ವಾಣಕರನು ಸಂತತಿಯಿಲ್ಲದೆ ಮರಣ ಹೊಂ ದಿದ್ದರಿಂದ ಅಫಣಿಯು ಬಾಲಸಾತಿಗೆ ಬಂತು.

ಐನಾಪೂರ—ಅಫಣಿಯ ನೈರುತ್ಯಕ್ಕೆ ೧೩ ಮೈಲಿನ ಮೇಲೆ ಕೃಷ್ಣೆಯ ದಂಡೆಯಲ್ಲಿ ಜ. ಸ. (೪೧) ೪೫೦೩. ಇಲ್ಲಿ ಟಪಾಲ ಆಫೀಸು ಇರುತ್ತದೆ. ಊರ ಹೊರಗೆ ವೀರ ಶಾಜೀ ಯೆಂಬ ಸತ್ಪುರುಷನ ಗೋರಿಯುಂಟು. ನಿವಾಸಿ ಗಳು ಮುಸಲ್ಮಾನರು ಬಹಳ; ಆರೋಗ್ಯದ ಗ್ರಾಮವು. ಮಿರ್ಜಿಯ ಗೋಪಾಳರಾಯನೆಂಬ ಪಟವರ್ಧನನು ನಷ್ಟಾಂ ಶನಾದದ್ದರಿಂದ ಸ೯ ೧೭೪೦ರಲ್ಲಿ ಐನಾಪುರವು ಬಾಲಸತಿಗೆ ಬಂತು.

ಬೆಳವಣಿಕಿ—ಅಫಣಿಯ ವಾಯವ್ಯಕ್ಕೆ ೬ ಮೈಲಿನ ಮೇಲೆ ಹಳ್ಳಿಯು ಬಳಿಯಲ್ಲಿ ಹಳೇ ಐನಾಳಾಗಡವೆಂಬ ಗುಡ್ಡವು ೧೦೦೦ ಫೂಟು ಎತ್ತರವಿರುತ್ತದೆ ಅದರ ಮೇಲೆ ಸಿದ್ಧೇಶ್ವ

ರನ ಗವಿಯೆಂಬದೊಂದು ಗವಿಯುಂಟು. ಈ ಗುಡ್ಡವು ಸಾಂಗಲೀ ಸಂಸ್ಥಾನಕ್ಕೆ ಸೇರಿರುತ್ತದೆ.

ಕಾಗವಾಡ—ಅಥಣಿಯ ಪಶ್ಚಿಮಕ್ಕೆ ೨೦ ಮೈಲಿನ ಮೇಲೆ ಜ. ಸ. (೪೧) ೩೪೦೨ ಟಪಾಲ ಕಚೇರಿ ಇರುತ್ತದೆ. ಅರಳಿಯ ವ್ಯಾಪಾರವು ಸ್ವಲ್ಪ ನಡಿಯುತ್ತದೆ. ಬ್ರಹ್ಮನಾಥ ಸಟವಾಯಿ ಎಂಬವೆರಡು ಗುಡಿಗಳುಂಟು. ಬ್ರಹ್ಮನಾಥನ ಮೂರ್ತಿಯನ್ನು ನೆಲಮನೆಯಲ್ಲಿ ಇಟ್ಟಿದ್ದಾರೆ. ಅದರ ಬಳಿಯಲ್ಲಿ ಬಂದು ಲಿಪಿಯುಂಟು. ಅದನ್ನು ಯಾರೂ ಓದಿದಂತೆ ತೋರುವದಿಲ್ಲ. ಸಟವಾಯಿಯನ್ನು ಮಕ್ಕಳು ಹುಟ್ಟಿದ ಬಳಿಕ ಮೂರು ತಿಂಗಳಿನ ವರೆಗೆ ಪೂಜಿಸುವರು. ದಕ್ಷಿಣ ಮಹಾರಾಷ್ಟ್ರದಲ್ಲಿ ಈ ದೇವಿಯ ಪ್ರಸಿದ್ಧಿಯುಂಟು. ಪೌಷ ಮಾಸದಲ್ಲಿ ಜಾತ್ರೆಯಾಗುತ್ತದೆ. ಕಾಗವಾಡದಲ್ಲಿ ಬಬ್ಬ ಪಟವರ್ಧನ ಸಂಸ್ಥಾನಿಕನಿರುತ್ತಿದ್ದನು. ಅವನು ಸಂತತಿಯಿಲ್ಲದೆ ತೀರಿದ್ದರಿಂದ ಅವನ ರಾಜ್ಯವು ಸರಕಾರಕ್ಕೆ ಸೇರಿತು.

ಕೂಡಚಿ—ಅಥಣಿಯ ನೈರುತ್ಯಕ್ಕೆ ೧೦ ಮೈಲಿನ ಮೇಲೆ ಕೃಷ್ಣೆಯ ದಂಡೆಯಲ್ಲಿ, ಜ. ಸ. (೪೧) ೩೩೭೩. ಇಲ್ಲಿ ಟಪಾಲ ಕಚೇರಿ, ಎರಡು ಶಾಲೆಗಳು, ಹೊಗೆ ಬಂಡಿಯ ಸ್ಟೇಶನು ಇರುತ್ತವೆ. ಈ ಊರಲ್ಲಿ ಜಮುಖಾನೆಗಳು ಆಗುತ್ತವೆ. ಈ ಊರಿನ ಬಳಿಯಲ್ಲಿ ಕೃಷ್ಣೆಯು ಪಾತ್ರೆಯೊಳಗಿರುವದೊಂದು ನಡುಗಡ್ಡೆಯಲ್ಲಿ ಜಾಲಿ, ಹುಣಿಚೀ ಮರಗಳ ಬನದಲ್ಲಿ ಶೇಖಮದವಮ್ಮದ ಪೀರದಾದಿ ಎಂಬ ಮುಸಲ್ಮಾನ ಸತ್ಪುರುಷನ ಗೋರಿ ಇರುತ್ತದೆ. ಈ ಸತ್ಪುರುಷನು ಧರ್ಮೋಪದೇಶ ಮಾಡುವನು. ಬಲಖ ಪಟ್ಟಣದವಳೊಬ್ಬ ರಾಜಕನ್ನಿಕೆಯು ಇವನ ಶಿಷ್ಯಳಾಗಿ ಹಿಂದುಸ್ಥಾನಕ್ಕೆ ಬಂದು ಪರೋಪಕಾರದಲ್ಲಿ ಜನ್ಮ ಕಳೆದಳೆಂದು ಹೇಳುತ್ತಾರೆ. ಆಕೆಯು ಗೋರಿಯು ಈ ನಡುಗಡ್ಡೆಯಲ್ಲಿ ಇರುತ್ತವೆ. ಮಹಮೂದ

ನೀರದಾದಿಯು ಕಲಬುರ್ಗೆಯಲ್ಲಿ ಸತ್ತದ್ದರಿಂದ ಅವನೆ ನಿಜವಾದ ಗೋರಿಯು ಅಲ್ಲಿ ಇರುತ್ತದೆ. ಈ ನಡುಗಡ್ಡೆಯಲ್ಲಿ ರಾಜಕನ್ನಿಕೆಯ ಸನ್ಮಾನಾರ್ಥವಾಗಿ ಆಕೆಯ ಗೋರಿಯ ಬಳಿಯಲ್ಲಿ ಆ ಗುರುವಿನ ಗೋರಿಯನ್ನು ಕಟ್ಟಿದ್ದಾರೆಂದು ಹೇಳುತ್ತಾರೆ. ಬಾಮನೀ ಬಾದಶಾಹಿಯನ್ನು ಸ್ಥಾಪಿಸಿದ ಜಾಫರಖಾನನಿಗೆ ದಿಲ್ಲಿಯ ಮಹಮ್ಮದ ತಗಲಖ ಬಾದಶಹನು ಕೂಡಚಿಯನ್ನು ಜಾಹಾಗೀರು ಹಾಕಿ ಕೊಟ್ಟದ್ದಾನೆಂದು ಫಿರಿಸ್ತನು ಬರಿದಿದ್ದಾನೆ.

CORRESPONDENCE.
ಪತ್ರವ್ಯವಹಾರ.

(ಎಂಟನೇ ಪುಟದಿಂದ ಮುಂದೆ ಸಾಗಿದ್ದು)

ಓದಲಿಕ್ಕೆ ಹೇಳುವದು.

ಗು— (೭೫೫೪ ಈ ಸಂಖ್ಯೆಯನ್ನು ಬರಿದು) ಇದರಲ್ಲಿ ಸಾವಿರಗಳಿಷ್ಟು?

ವಿ—ಏಳು.

ಗು—ನೂರುಗಳಿಷ್ಟು?

ವಿ—ಮೂರು.

ಗು—ಎಕ್ಕಂ ದಹಂ ಗಳಿಷ್ಟು?

ವಿ—೪ ಎಕ್ಕಂ, ೫ ದಹಂ.

ಗು—೭ ಸಾವಿರ ಮತ್ತು ಮೂರು ನೂರಾ ೫೪ ಇವನ್ನು ಕೂಡಿಸಿ ಅನ್ನು.

ವಿ—ಅದರಂತೆ ಅನ್ನುವನು. (ಇದೇ ಪ್ರಕಾರಾ ಕೆಲವು ಸಂಖ್ಯೆಗಳನ್ನು ಹಾಕಿ ಓದಲಿಕ್ಕೆ ಕಲಿಸಬೇಕು.)

ಬರಿಯಲಿಕ್ಕೆ ಕಲಿಸುವದು.

ಗು—(೯೬೭೫ ಇದನ್ನು ಬರಿದು) ಈ ಸಂಖ್ಯೆ ಎಷ್ಟಿರುತ್ತದೆ?

ವಿ—ಮೂವತ್ತು ಸಾವಿರದ ಆರು ನೂರಾ ಎಪ್ಪತ್ತೈದು

ಗು—ಇದರಲ್ಲಿ ಎಷ್ಟು ಸ್ಥಾನಗಳಿವೆ?

ವಿ—೫ ಸ್ಥಾನಗಳು.

ಗು—ಇವುಗಳಲ್ಲಿ ಎಲ್ಲಕ್ಕೂ ಹೆಚ್ಚಿನ ಸ್ಥಾನ ಯಾವ

ವಿ—ಸಾವಿರದ್ದು.

ಗು—ಮೇಲಿನ ಸಂಖ್ಯೆಯನ್ನು ಓದುವ ಕಾಲಕ್ಕೆ ಮೊ
ಲು ಯಾವ ಹೆಚ್ಚಿನ ಸ್ಥಾನದ ಸಂಖ್ಯೆಯನ್ನು ಓದಿದಿ?

ವಿ—ಸಾವಿರ ಸ್ಥಾನದ ಸಂಖ್ಯೆಯನ್ನು ಓದಿದೆನು.

ಗು—ಅಲ್ಲಿ ಎಷ್ಟು ಸಾವಿರ ಉಂಟು?

ವಿ—೯ ಸಾವಿರ ಉಂಟು. (ಅವನ್ನು ಬರಿಸುವದು.)

ಗು—ತರುವಾಯ ಯಾವ ಯಾವ ಸ್ಥಾನಗಳ ಸಂಖ್ಯೆಗ
ಳನ್ನು ಓದಿದಿ?

ವಿ—ನೂರು, ದಹಂ, ಎಕ್ಕಂ ಈ ಸ್ಥಾನಗಳ ಸಂಖ್ಯೆಗ
ಳನ್ನು ಓದಿದೆನು.

ಗು—ನೂರರ ಸ್ಥಾನ ಎಷ್ಟನೆಯದು?

ವಿ—ಮೂನೆಯದು.

ಗು—ಎಷ್ಟು ನೂರುಂಟು?

ವಿ—ಆರು ನೂರು.

ಗು—ಇವನ್ನು ೯ ಸಾವಿರವಲ್ಲಿ ಬರಿಯಬೇಕಾದರೆ ಯಾ
ವ ಸ್ಥಾನದಲ್ಲಿ ಬರಿಯಬೇಕು?

ವಿ—ಮೂನೆಯ ಸ್ಥಾನದಲ್ಲಿ.

ಗು—ಯಾವ ಕಡೆಯಿಂದ ಎಣಿಸಬೇಕು?

ವಿ—ಬಲಗಡೆಯಿಂದ. (ಎಣಿಸಿ ಬರಿಸುವದು.)

ಗು—ಇನ್ನು ಏನು ಬರಿಯತಕ್ಕದ್ದು ಉಳಿಯಿತು?

ವಿ—೩೪.

ಗು—೩೪ ಮತ್ತು ೯ ಇವು ಯಾವ ಯಾವ ಸ್ಥಾನಗಳ
ಅಂಕಿಗಳು.

ವಿ—ದಹಂ, ಎಕ್ಕಂ ಸ್ಥಾನಗಳ ಅಂಕಿಗಳು. (ಬರಿಸುವುದು.)

ಗು— (ಒಬ್ಬ ವಿದ್ಯಾರ್ಥಿ) ಈಗ್ಗೆ ಬರಿದೆ ಸಂಖ್ಯೆಯು ಮೊದಲಿನ ಸಂಖ್ಯೆಗೆ ಸರಿಯಾಯಿತೋ?

ವಿ—ಆಯಿತು. (ತರುವಾಯ ಶಿಕ್ಷಕನು ಸಂಖ್ಯೆಯನ್ನು ಮೂವ ಕ್ರಮದಿಂದ ಬರಿಯಬೇಕೆಂಬ ಸಾಧಾರಣ ನಿಯಮವನ್ನು ವಿದ್ಯಾರ್ಥಿಗಳ ಬಾಯಿಂದ ಹೊರಡಿಸಿ, ಬಳಿಕ ತಾನು ಸ್ಪಷ್ಟವಾಗಿ ಸಂಖ್ಯಾ ಬರಿಯುವ ಕ್ರಮವನ್ನು ಹೇಳಬೇಕು. ಅದು ಹೇಗಂದರೆ,—ಮೊದಲು ಯಾವ ಹೆಚ್ಚಿನ ಸ್ಥಾನದ ಎಷ್ಟು ಸಂಖ್ಯೆಯನ್ನು ಹೇಳುವರೋ ಆ ಅಂಕೆಯನ್ನು ಮೊದಲು ಬರಿದು ಆ ಸ್ಥಾನಗಳು ಮುಗಿಯುವವರೆಗೆ ಅಂಕೆ ಸಹಿತವಾಗಿ ಹಿಡಿದು ಮುಂದೆ ಪೂಜೆಗಳನ್ನು ಕೊಡಬೇಕು. ಬಳಿಕ ಯಾವ ಯಾವ ಸ್ಥಾನಗಳ ಸಂಖ್ಯೆಗಳನ್ನು ಎಷ್ಟೆಷ್ಟು ಹೇಳುವರೋ ಆಯಾ ಸ್ಥಾನಗಳನ್ನು ಬಲಗಡೆಯಿಂದ ಎಣಿಸಿ ಅಷ್ಟಷ್ಟು ಅಂಕೆಗಳನ್ನು ಹಾಕುತ್ತ ಸಂಖ್ಯೆಯನ್ನು ಮುಗಿಸಬೇಕು.)

ಮುಂದಿನ ಸಂಖ್ಯೆಗಳನ್ನು ಮೇಲಿನ ಕ್ರಮದಂತೆ ಹೇಳುತ್ತಾ ಕೇಳುತ್ತಾ ಬರಿಸುತ್ತಾ ಸಾಗಿದರೆ, ಸಂಖ್ಯೆಯು ಚನ್ನಾಗಿ ತಿಳಿಯುವದೆಂದು ನನ್ನ ನಂಬಿಗೆಯುಂಟು.

ಉಳಿದ ವಿಷಯಗಳನ್ನು ಕಲಿಸುವ ಕ್ರಮಗಳನ್ನು ಅನುಕೂಲತೆಯ ಮೇರೆಗೆ ಗೊತ್ತು ಪಡಿಸುವೆನು. ಪತ್ರವಿಸ್ತಾರಕ್ಕೆ ದಯವಾಡಿ ಕ್ಷಮಿಸಬೇಕು.

ಕನ್ನಡಶಾಲೆ ಬೆಟಸೂರ,
ತಾ॥ ಪರಸಗಡ.
ತಾ॥ ೦೯।೬।೧೯೫.

ತಮ್ಮ ಶಿಷ್ಯ,
ಭೀಮಾಜಿ ಲಕ್ಷ್ಮಣ ಕುಲಕರ್ಣಿ
ಜಿಂಜಣಿ.

DHARWAR TRAINING COLLEGE CERTIFICATE EXAMINATION.—1895.

ಕಾಲೇಜಿನ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು.

ಶಿಕ್ಷಣಪದ್ಧತಿ—೧ ನೇ ವರ್ಷ.

೧ ತಿದ್ದುವಿಕೆ ಅಂದರೇನು? ಅದರಿಂದ ವಿದ್ಯಾರ್ಥಿಗಳಲ್ಲಿ ಯಾವ ಗುಣಗಳು ಹುಟ್ಟತಕ್ಕದ್ದು? ಅದನ್ನು ನೆರವೇರಿಸುವ ಸಾಧನಗಳಲ್ಲಿ ಯಾವದು ಮೇಲಾದದ್ದು? ಯಾಕೆ?

೨. ವಿದ್ಯಾರ್ಥಿಗಳ ಒಲವುಗಳನ್ನು ಬರೆದು ಕುತೂಹಲವನ್ನು ಹ್ಯಾಗೆ ಕೈಕೊಳ್ಳತಕ್ಕದ್ದು ವಿವರಿಸಿರಿ.

೩. ವ್ಯಾಖ್ಯಾನ ಪದ್ಧತಿಯ ಗುಣದೋಷಗಳನ್ನು ವಿವರಿಸಿರಿ

೪. "ಗೊತ್ತಿದ್ದದ್ದರಿಂದ ಗೊತ್ತಿಲ್ಲದ್ದಕ್ಕೆ ಸಾಗಬೇಕು" ಇದರ ಮರ್ಮವೇನು? ಇದರ ಪ್ರಯೋಜನವೇನು?

೫. ವಿದ್ಯಾರ್ಥಿಗಳ ಉತ್ತರಗಳನ್ನು ಕೈಕೊಂಡು ಶಿಕ್ಷಣ ಸಲಿಸುವ ಸಾಮರ್ಥ್ಯವೇ ಶಿಕ್ಷಕನ ಯೋಗ್ಯತೆಯು ಕುರುಹಾಗಿರುತ್ತದೆ. ಈ ಮಾತನ್ನು ಉದಾಹರಣದಿಂದ ಸ್ಥಾಪಿಸಿರಿ.

೬. "ವರ್ಗ ಕಲಿಸುವಾಗ ಶಿಕ್ಷಕನು ಬೇರೆ ಕೆಲಸದಲ್ಲಿ ಮನಸ್ಸು ಹಾಕ ಕೂಡದು" ಈ ನಿಯಮವನ್ನು ಮುರಿಯುವದರಿಂದ ಆಗುವ ನಷ್ಟಗಳನ್ನು ಹೇಳಿರಿ.

೭. ಉತ್ತಮ ವಾಚನದ ಲಕ್ಷಣಗಳನ್ನು ಹೇಳಿರಿ ವಿದ್ಯಾರ್ಥಿಗಳಿಗೆ ಉತ್ತಮ ರೀತಿಯಿಂದ ಓದಲಿಕ್ಕೆ ಬರಬೇಕಾದರೆ ಯಾವ ಉಪಾಯಗಳನ್ನು ಯೋಚಿಸುವಿರಿ?

೮. ಶಿಕ್ಷಕನ ಕೆಲಸವನ್ನು ಪರೀಕ್ಷಿಸುವ ಸಂಬಂಧದ ಮುಖ್ಯ ಭಾಗಗಳು ಯಾವವು? ಒಂದು ಭಾಗದ ಅವಾಂತರ ನಿಯಮಗಳನ್ನು ಬರೆಯಿರಿ.

೯. ವರ್ಗೀಕರಣದ ತತ್ವಗಳನ್ನು ಮೇಳಾಪತ್ರಕದ ನಿಯಮಗಳನ್ನು ಬರೆಯಿರಿ.

೧೦. ಒಬ್ಬ ಹುಡುಗನು ನಿನ್ನ ಸಾಲೆಗೆ ಬಂದು ೬ ವರ್ಷ ನಿನ್ನಲ್ಲಿ ಕಲಿತು ಸಾಲೆಯನ್ನು ಬಿಡುತ್ತಾನೆ ಇವನ ಸಂಬಂಧದ ಯಾವ ಯಾವ ಸಂಗತಿಗಳು ನಿನಗೆ ಎಲ್ಲೆಲ್ಲಿ (ಯಾವ ಯಾವ ನಮೂನೆಗಳಲ್ಲಿ) ತಿಳಿಯುವವು?

ಅವಕ ಬಾರನಿಸಿಯ ನಮೂನೆಯನ್ನೂ ನಿಯಮಗಳನ್ನೂ ಬರೆಯಿರಿ.

ವರ್ಗಣಿ ವಸೂಲು.

ಧಾರವಾಡ ಜಿಲ್ಲೆ.

	ರೂ. ಆ. ಪೈ.
ರಾ. ಸಾ. ಡಿ. ಎ. ಇ. ಜಿಲ್ಲಾ ಧಾರವಾಡ ಇವರಿಂದ ಲೋ. ಬೋ. ಸಾಲಿಗಳ ಬಾ॥ ಅಕ್ಟೋಬರ ೧೯೯೫ರ ಬಗ್ಗೆ.	೫೫ ೦ ೬
ಸದರಿಯವರಿಂದ ಧಾರವಾಡ ಮತ್ತು ಹುಬ್ಬಳ್ಳಿ ಮುನಸಿಪಾಲಟಿ ಸಾಲೆಗಳ ಹೊರ್ತು ಇತರ ಮ್ಯು. ಸಾಲಿಗಳ ಬಾ॥ ಅಕ್ಟೋಬರ ೧೯೯೫ರ ಬಗ್ಗೆ.	೧ ೧೧
ರಾ. ರಾ. ಸೇಕಂಡ ಅ. ಡಿ. ಎ. ಇ. ಜಿಲ್ಲಾ ಧಾರವಾಡ ಇವರಿಂದ ೧೯೯೫-೯೬ ಎರಡು ಸಾಲುಗಳ ಬಗ್ಗೆ.	೧ ೧೪ ೦
ರಾ. ರಾ. ಸ್ಕೂಲ ಮಾಸ್ತರ ಧಾರವಾಡ ಇವರಿಂದ ಮ್ಯು. ಶಾಲೆಗಳ ಬಾ॥ ೧೯೯೫ರ ಏಪ್ರಿಲದಿಂದ ಸಪ್ಟಂಬರ ೯೬ ತಿಂಗಳ ಬಗ್ಗೆ.	೫೧ ೦ ೦

ಬೆಳಗಾವಿ ಜಿಲ್ಲೆ.

ರಾ. ರಾ. ಸ್ಕೂಲಮಾಸ್ತರ ಸವದತ್ತಿ ಇವರಿಂದ ೨ ಸಾಲಿಗಳ ಬಗ್ಗೆ ೯೫ ಮತ್ತು ೯೬ ಸಾಲುಗಳ ಬಾ॥	೪ ೧೦ ೦

ಕೆರುಕುಳ.

ರಾ. ರಾ. ನಾರ್ಗುರ ಇವರ ಕಡಿಂದ ೯೫ನೇ ಸಾಲಿನ ಬಗ್ಗೆ.	೦ ೧೦ ೪

ಇದರೊಳಗೇನಾದರೂ ತಪ್ಪು ಇದ್ದರೆ ಅದನ್ನು ದಯವಾಡಿ ತಿಳುಹಿಸಬೇಕು.

ಪ್ರಕಟನೆ.

ಇನ್ನು ಸ್ವಲ್ಪು ದಿವಸದಲ್ಲಿ ೯೫ನೇ ಸಾಲು ಮುಗಿದು ೯೬ನೇ ಸಾಲು ಪ್ರಾರಂಭವಾಗುವದರಿಂದ ನಮ್ಮ ಪತ್ರಿಕೆಯನ್ನು ತರಿಸತಕ್ಕವರಲ್ಲಿ ಯಾರಿಗಾದರೂ ೯೬ನೇ ಸಾಲಿನ ಪತ್ರಿಕೆಗಳು ಬೇಡಾಗಿದ್ದರೆ ಇದೇ ೯೫ನೇ ಸಾಲಿನ ದಿಶಂಬರ ೩೦ನೇ ತಾರೀಖಿನ ಒಳಗಾಗಿ ಅವರು ನಮಗೆ ತಿಳಿಸಬೇಕು.

ಧಾರವಾಡ
ತಾ|| ೨೦|೧೧|೯೫.

RAOJI B. KARANDIKAR.
ವ್ಯವಸ್ಥಾಪಕ, ಕನ್ನಡ ವಾಲಾಪತ್ರಿಕೆ.

ಮಹಾಸುಗಂಧ ಕೇಶವರ್ಧಕ ತೈಲ.

ಮಾತ್ರದಲ್ಲಿ ಯುವಜಾವತಿನ ಕೂದಲುಗಳಿಗೆ ಹಚ್ಚುವದ
ನಿಗೆ ತಂಪು, ಸ್ಮರಣಶಕ್ತಿ ಹೆಚ್ಚಾಗುವದು. ನೇತ್ರಗಳು
ನವವು, ವಿದ್ಯಾರ್ಥಿನ ಮತ್ತು ಹೆಣ್ಣು ಮಕ್ಕಳಿಗೆ ಅತ್ಯಂತ
ಕ್ರಾಮು— ೫ತೊಲಿ ಸೀಸೆಗೆ ಐದು ಆಣೆ. ಟಪಾಲ

ರಘುನಾಥರಾವ ಕುಲಕರ್ಣಿ,
ಪ್ರೋಪ್ರ ಹಿಪ್ಪರಗಿ (ಬಿಜಾಪೂರ)

ಶಾಲಾಪತ್ರಕದ ವರ್ಗಣಿ ಬಂದದ್ದು.

ಮಾರ್ಚ ೧೯೧೫.

(ಕಳೆದ ತಿಂಗಳ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಸಿಸ್ಟಂಟ ಡಿ|| ಎ|| ಇನಸ್ಪೇಕ್ಟರ ಜಿಲ್ಲಾ ಕಾರವಾರ ಇವರ ಕಡೆಯಿಂದ ೧೯೧೫ರ ಬಗ್ಗೆ	೧ - ೮ - ೦
ಸಿಸ್ಟಂಟ ಡಿ|| ಎ|| ಇನಸ್ಪೆಕ್ಟರ ಜಿಲ್ಲಾ ಬೆಳಗಾಂವ ಇವರ ಕಡೆಯಿಂದ ೧೯೧೫ರ ಬಗ್ಗೆ	೧ - ೮ - ೦
ಸಿಸ್ಟಂಟ ಡಿ|| ಎ|| ಇನಸ್ಪೇಕ್ಟರ ಜಿಲ್ಲಾ ಧಾರವಾಡ ಇವರ ಕಡೆಯಿಂದ ೧೯೧೫ರ ಬಗ್ಗೆ	೧ - ೮ - ೦
ಕ್ಟರ ಜನರಲ್ ಮೈಸೂರ ಇವರ ಕಡೆಯಿಂದ ೧೯೧೫ರ ಬಗ್ಗೆ	೧ - ೮ - ೦
|| ಇನಸ್ಪೆಕ್ಟರ ಜಿಲ್ಲಾ ಬೆಳಗಾವ ಇವರ ಕಡೆಯಿಂದ ೧೯೧೫ರ ಬಗ್ಗೆ	೧ - ೮ - ೦
ಇನಸ್ಪೇಕ್ಟರ ಜಿಲ್ಲಾ ಕಾರವಾರ ಇವರ ಕಡೆಯಿಂದ ೧೯೧೫ನೇ ಫೇಬ್ರುವರಿ ತಿಂಗಳ ಬಗ್ಗೆ	೫೦ - ೮ - ೦

ಎಪ್ರೆಲ ೧೯೧೫.

|| ಇನಸ್ಪೆಕ್ಟರ ವಿಜಾಪುರ ಇವರ ಕಡೆಯಿಂದ ೧೯೧೫ನೇ ಮಾರ್ಚ ತಿಂಗಳ ಬಗ್ಗೆ	೫೦ - ೮ - ೦
ಸದರ ಬೆಳಗಾವ ಸದರ	೨೮ - ೬ - ೦

ARS. 15. APP. 90

సంపుట 1896, 1897, 1898

బళ్ళ దుష్ప్రకటనల్లేని కారణ

మైన ప్రేక్షణీయములు సాధ్యమాగుట్ల